



“ಕರ್ನಾಟಕದ ಶಿಲ್ಪಕಲಾ ಪರಂಪರೆಗೆ ಮೈಸೂರು ರಾಜ ಮನೆತನದ ಕೊಡುಗೆ”

2017-18



ಫೆಲೋಷಿಪ್ ಮಾರ್ಗದರ್ಶಕರು
ಡಾ. ದೇವರಕೊಂಡಾರೆಡ್ಡಿ

ಫೆಲೋಷಿಪ್ ಅಭ್ಯರ್ಥಿ
ಗುರುಪ್ರಸಾದ್. ಜಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಮೊದಲನೆ ಮಹಡಿ, ಕನ್ನಡ ಭವನ,
ಜಯಚಾಮರಾಜೇಂದ್ರ ಒಡೆಯರ್ ರಸ್ತೆ, ಬೆಂಗಳೂರು -560002

“ಕರ್ನಾಟಕದ ಶಿಲ್ಪಕಲಾ ಪರಂಪರೆಗೆ ಮೈಸೂರು ರಾಜ ಮನೆತನದ ಕೊಡುಗೆ”

2017–18ನೇ ಸಾಲಿನ ಫೆಲೋಷಿಪ್ ಪ್ರಬಂಧ

ಫೆಲೋಷಿಪ್ ಮಾರ್ಗದರ್ಶಕರು

ಡಾ. ದೇವರಕೊಂಡಾರೆಡ್ಡಿ

ಫೆಲೋಷಿಪ್ ಅಭ್ಯರ್ಥಿ

ಗುರುಪ್ರಸಾದ್. ಜಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಮೊದಲನೆ ಮಹಡಿ, ಕನ್ನಡ ಭವನ,

ಶ್ರೀ ಜಯಚಾಮರಾಜ ಒಡೆಯರ್ ರಸ್ತೆ, ಬೆಂಗಳೂರು -560002

ಇಂದ,
ಶ್ರೀ. ಗುರುಪ್ರಸಾದ್. ಜಿ
ವಿಳಾಸ: #113, ಸರ್ಕಾರಿ ಶಾಲೆ ಹಿಂಭಾಗ
ಹೆಣ್ಣೂರು, ಕಲ್ಯಾಣ ನಗರ ಅಂಚೆ
ಬೆಂಗಳೂರು – 560043, ಮೊ. 9483208207
ಇಮೇಲ್: gurupg84@gmail.com

ಇವರಿಗೆ,

ಮಾನ್ಯ, ರಿಜಿಸ್ಟ್ರಾರ್ ಅವರಿಗೆ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಜೆ.ಸಿ. ರಸ್ತೆ, ಬೆಂಗಳೂರು –560002

ಮಾನ್ಯರೆ,

ವಿಷಯ: 2017–18ನೇ ಸಾಲಿನ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಯೋಜನೆಯ ಫೆಲೋಷಿಪ್‌ನ ಪ್ರಬಂಧ ಸಲ್ಲಿಸುತ್ತಿರುವ ಬಗ್ಗೆ.

ಸದರಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಫೆಲೋಷಿಪ್ ಅಧ್ಯಯನವನ್ನು ಡಾ. ದೇವರಕೊಂಡಾರೆಡ್ಡಿ ಇವರ ಮಾರ್ಗದರ್ಶನದಲ್ಲಿ **"ಕರ್ನಾಟಕದ ಶಿಲ್ಪಕಲಾ ಪರಂಪರೆಗೆ ಮೈಸೂರು ರಾಜಮನೆತನದ ಕೊಡುಗೆ"** ಶೀರ್ಷಿಕೆಯ ಅಧ್ಯಯನದ ಅಂತಿಮ ಪ್ರಬಂಧವನ್ನು **ಮಾರ್ಗದರ್ಶಕರಿಂದ ಅನುಮೋದನೆಯೊಂದಿಗೆ ಸಲ್ಲಿಸಲಾಗಿದೆ.**

ಮುಂದಿನ ಕ್ರಮಕ್ಕಾಗಿ ಕೋರಲಾಗಿದೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ,

(ಗುರುಪ್ರಸಾದ್.ಜಿ)
ಫೆಲೋಷಿಪ್ ಅಭ್ಯರ್ಥಿ

ಡಾ. ದೇವರಕೊಂಡಾರೆಡ್ಡಿ
ವಿಶ್ರಾಂತ ಪ್ರಾಧ್ಯಾಪಕರು ಹಾಗೂ ಇತಿಹಾಸ ತಜ್ಞರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಫೆಲೋಷಿಪ್ ಅಭ್ಯರ್ಥಿ
ಮೊಬೈಲ್: 9449522462

ಇವರಿಗೆ,

ಮಾನ್ಯ, ರಿಜಿಸ್ಟ್ರಾರ್ ಅವರಿಗೆ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಜೆ.ಸಿ. ರಸ್ತೆ, ಬೆಂಗಳೂರು –560002

ಮಾನ್ಯರೆ,

ವಿಷಯ: ಫೆಲೋಷಿಪ್‌ನ ಪ್ರಬಂಧ ಸಲ್ಲಿಕೆ ಬಗ್ಗೆ.

ಸದರಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಫೆಲೋಷಿಪ್ ಅಧ್ಯಯನವನ್ನು ಡಾ. ದೇವರಕೊಂಡಾರೆಡ್ಡಿ ಆದ ನನ್ನ ಮಾರ್ಗದರ್ಶನದಲ್ಲಿ ಶ್ರೀ ಗುರುಪ್ರಾಸಾದ. ಜಿ ಫೆಲೋಷಿಪ್ ಅಭ್ಯರ್ಥಿಯ **"ಕರ್ನಾಟಕದ ಶಿಲ್ಪಕಲಾ ಪರಂಪರೆಗೆ ಮೈಸೂರು ರಾಜಮನೆತನದ ಕೊಡುಗೆ"** ಶೀರ್ಷಿಕೆಯ ಅಧ್ಯಯನದ ಅಂತಿಮ ಪ್ರಬಂಧವನ್ನು ಅಂತಿಮ ತಿದ್ದುಪಡಿ ಕಾರ್ಯಗಳೊಂದಿಗೆ ಪೂರ್ಣಗೊಳಿಸಿ, ಸಲ್ಲಿಸುತ್ತಿದ್ದು, ಪ್ರಕಟಣೆ ಸಂಧರ್ಭದಲ್ಲಿ ಅವಶ್ಯವೆನಿಸಿದಲ್ಲಿ ಯವುದಾದರೂ ಅಂಶಗಳನ್ನು ಸರಿಪಡಿಸಲು ಸೂಚಿಸಬಹುದಾಗಿದ್ದು. ಮುಂದಿನ ಕ್ರಮಕ್ಕಾಗಿ ಕೋರಲಾಗಿದೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ,

(ಡಾ. ದೇವರಕೊಂಡಾರೆಡ್ಡಿ)
ಫೆಲೋಷಿಪ್ ಮಾರ್ಗದರ್ಶಿ

"ಕರ್ನಾಟಕದ ಶಿಲ್ಪಕಲಾ ಪರಂಪರೆಗೆ ಮೈಸೂರು ರಾಜಮನೆತನದ ಕೊಡುಗೆ"

ಪರಿವಿಡಿ:

ಪೀಠಿಕೆ:

ಅಧ್ಯಾಯ:– 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಅಧ್ಯಾಯ:– 2

ಮೈಸೂರು ಒಡೆಯರ ರಾಜಮನೆತನದ ಇತಿಹಾಸ

ಅಧ್ಯಾಯ:– 3

ಮೈಸೂರು ಅರಮನೆ ಮತ್ತು ಕೋಟೆ

ಅಧ್ಯಾಯ:– 4

ಮೈಸೂರು ಒಡೆಯರ ಕಾಲದಲ್ಲಿ ದೇವಾಲಯಗಳು
ಮತ್ತು ಶಿಲ್ಪಗಳು

ಅಧ್ಯಾಯ:– 5

ಸಮಾರೋಪ

ಪೀಠಿಕೆ:

ಭೂಮಿಯಲ್ಲಿ ಬದುಕಿನ ಹೋರಾಟವನ್ನೇ ನಡೆಸುತ್ತಿರುವ ಮಾನವನ 'ನಿತ್ಯದ ಬದುಕು ಹಸನಾಗಿ ನಡೆಯುವಂತೆ ಒಂದು ಸೂತ್ರದಲ್ಲಿ ಯಾವುದು ಬಂಧಿಸಿದೆಯೋ ಅದು ಧರ್ಮ. ಈ ಧರ್ಮಪ್ರಜ್ಞೆಯ ಆಚಾರ-ವಿಚಾರಗಳು ನೂರಾರು ಸಂಪ್ರದಾಯಗಳಿಗೆ, ನಂಬಿಕೆಗಳಿಗೆ, ಮೌಲ್ಯಗಳಿಗೆ ಕಾರಣವಾಗಿ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ ಮುಂತಾದ ಕಲೆಗಳು ಹುಟ್ಟಿ ವಿಕಾಸಗೊಂಡವು. ಈ ದೃಷ್ಟಿಯಿಂದ, ಮನುಷ್ಯನ ಕ್ರಿಯಾಶೀಲ ಮನಸ್ಸು ಬದುಕನ್ನು ಸುಂದರವಾಗಿಸಲು, ಜಡದಿಂದ ಚೈತನ್ಯಕ್ಕೆ ಸಾಗುವಂತೆ ಮಾಡಲು ಪಟ್ಟ ಪರಿಶ್ರಮವೇ ಕಲೆಗಳ ಹುಟ್ಟಿಗೆ ಕಾರಣವಾಗಿದೆಯೆನಬೇಕು, ಇಂಥ ಕಲೆಗಳ ಬೆಳವಣಿಗೆ, ವಿಕಾಸಗಳೇ ಸಂಸ್ಕೃತಿಯ ವೈಭವವನ್ನು ಸೂಚಿಸುತ್ತದೆ'.(ಡಾ.ಎಸ್.ಸಿ. ಪಾಟೀಲ. ಪುಟ-3, ಕರ್ನಾಟಕದ ಜನಪದ ಚಿತ್ರಕಲೆ, 1993)

ಕರ್ನಾಟಕದ ಶಿಲ್ಪಕಲೆಯು ಗ್ರಾಮೀಣರ ಮುಖಾಂತರ, ಗಿರಿಜನ, ಅಲೆಮಾರಿ ಮತ್ತು ಬುಡಕಟ್ಟು ಜನರ ಸಾಂಸ್ಕೃತಿಕ ಶ್ರೀಮಂತ ಪರಂಪರೆಯಿಂದ ಅಸ್ತಿತ್ವವನ್ನು ಪಡೆದುಕೊಂಡಿರುವುದು ವಾಸ್ತವವಾಗಿದೆ. ಜನಪದರ ಗರ್ಭದಿಂದ ತಲೆತಲಾಂತರಗಳಿಂದ ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಪೂರ್ವಿಕರಿಂದ ಮುಂದಿನಪೀಳಿಗೆಯವರೆಗೆ ಬೆಳೆದು ಬಂದ ಶಿಲ್ಪಕಲೆಯ ಜನಪದ ಶೈಲಿಯು ಕಾಲಕ್ಕನುಗುಣವಾಗಿ ಕರಕುಶಲ ಮರುಪ್ರತಿ ಸಂಸ್ಕಾರಕ್ಕೆ ಒದಗಿಸಿಕೊಂಡ ಕಲಾಬದುಕಿನ ಸ್ಥಿತ್ಯಂತರಗಳ ಜೊತೆಗಿನ ಸಾಮಾಜಿಕ ನಡೆಯಡೆಗೆ ಸವೆಸಿಕೊಂಡ ದೀರ್ಘ ಪಯಣದ ಹಂತ ಹಂತಗಳ ಬದಲಾವಣೆಗಳನ್ನು ಸಮಗ್ರತೆಯಿಂದ ಗಮನಿಸಲಾಗಿದೆ.

ಅನಾದಿ ಕಾಲದಿಂದಲೂ ನಡೆದುಬಂದ ನಂಬಿಕೆಯ ಮೂಲ ದೈವಭಕ್ತಿ, ಭಯ, ಭೀತಿ, ಸಂಸ್ಕಾರ, ಗೌರವ, ಸಮುದಾಯದ ಗುರುತು, ಸಂಪ್ರದಾಯ ಹೀಗೆ ಪಾರಂಪರಿಕ ಆಚರಣೆಗಳ ಮುಖಾಂತರ

ಆದಿಮಾನವನಿಂದ ಸಮುದಾಯ ಜೀವಿಯ ವರೆಗೂ ಸಾಗಿಬಂದ ಹಂತ ಹಂತಗಳ ಬದುಕಿನ ವಿವಿಧ ಸ್ತರಗಳನ್ನು (ಚಿತ್ರ) ಗೀರುಚಿತ್ರ, ಶಿಲ್ಪ, ಭಾಷೆ, ಕುಣಿತ, ಸಂಗೀತ, ಆಹಾರ, ಉಡುಗೆ-ತೊಡುಗೆ, ಮದುವೆ, ತೊಟ್ಟಿಲು, ಸಮಾಧಿ, ದೆವ್ವ, ಪಿಶಾಚಿ, ಮುಖಂಡನಲ್ಲಿ ತೋರುವ ಗೌರವ, ಸಮುದಾಯದ ಸಂಕೇತ, ಆಯುಧಗಳು, ಆಭರಣಗಳು ಹೀಗೆ ಪ್ರತಿಹಂತಗಳಲ್ಲಿ ಕಂಡು ಕೊಂಡ ಆಕೃತಿಗಳ ರಚನೆಗಳು ಮಾನವ ಸಂಸ್ಕೃತಿಯನ್ನು ಎತ್ತರಕ್ಕೆ ಕೊಂಡೊಯ್ದಿವೆ.

ಸಾಂಸ್ಕೃತಿಕ ಕಲಾ ಪ್ರಪಂಚದಲ್ಲಿ ಲಲಿತ ಕಲೆಗಳಾದ ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನೃತ್ಯ ಇವುಗಳಲ್ಲಿಯೂ ಪ್ರತಿಯೊಂದು ಹಂತದಲ್ಲಿಯೂ ಆದ ಅಭಿವೃದ್ಧಿಯ ಪರಿವರ್ತನೆಗಳು ಇಂದಿನ ಸಮಕಾಲೀನ ಜಾಗತೀಕರಣದ ಸಂದರ್ಭದಲ್ಲಿಯೂ ಜನಪದ ಕಲಾಪ್ರಕಾರಗಳು ಎಲ್ಲಾ ನವೀನ ಕಲೆಗಳಿಗೆ ಭದ್ರಬುನಾದಿಯನ್ನು ಹಾಕಿಕೊಟ್ಟಿವೆ.

ಕರ್ನಾಟಕದ ಪ್ರತಿ ಜಿಲ್ಲೆಗಳಲ್ಲಿಯೂ ಆಯಾ ಪ್ರಾದೇಶಿಕ ವಿಭಿನ್ನತೆಗೆ ತಕ್ಕಂತೆ ವೈಶಿಷ್ಟ್ಯಪೂರ್ಣವಾದ ಜನರ ಭಾಷೆ, ಉಡುಗೆ-ತೊಡುಗೆ, ಆಚಾರ-ವಿಚಾರ, ಸಾಂಸ್ಕೃತಿಕ ಒಡಂಬಡಿಕೆಗಳು ಹಾಸುಹೊಕ್ಕಾಗಿರುವುದರಿಂದ ಇಲ್ಲಿಯ ಕಲಾ ಪ್ರಕಾರಗಳಲ್ಲಿಯೂ ವಿಶಿಷ್ಟತೆಯ ಹಲವಾರು ಶೈಲಿಗಳನ್ನು ಕಾಣುತ್ತೇವೆ. ಭೌಗೋಳಿಕ ರಚನೆಯ ವ್ಯತ್ಯಾಸ ವಾತಾವರಣದ ಏರುಪೇರುಗಳನ್ನು ಸ್ವಾಭಾವಿಕ ಪರಿಸರದೊಂದಿಗೆ ರೂಢಿಸಿಕೊಂಡಿರುವ ಸಾಂಸ್ಕೃತಿಕ ಜನಜೀವನ ವ್ಯವಸ್ಥೆಯೂ ಪ್ರತೀ ಜಿಲ್ಲೆಗಳಲ್ಲಿಯೂ ವಿಶೇಷತೆಗೆ ಒಳಗಾಗಿವೆ. ಆದರೆ ಕೊಡುಕೊಳುವಿಕೆಯಿಂದ ಪ್ರಾದೇಶಿಕ ವ್ಯತ್ಯಾಸಗಳೂ ಹಲವಾರು ಸಂದರ್ಭಗಳಲ್ಲಿ ಸಮ್ಮಿಶ್ರ ಬದುಕಿಗೆ ಅವಕಾಶ ಮಾಡಿಕೊಟ್ಟಿವೆ.

ಕರ್ನಾಟಕದ (ಸಂದರ್ಭದಲ್ಲಿ) ಭೂಗೋಳಿಕ ವಿಂಗಡಣೆಯಲ್ಲಿ ಉತ್ತರ ಕರ್ನಾಟಕ, ಮುಂಬೈ ಹಾಗೂ ಹೈದ್ರಾಬಾದ್ ಕರ್ನಾಟಕ, ಕರಾವಳಿ ಕರ್ನಾಟಕ, ದಕ್ಷಿಣ ಕರ್ನಾಟಕ ಹೀಗೆ ಪ್ರಾಕೃತಿಕವಾಗಿ ಪ್ರತ್ಯೇಕತೆಯನ್ನು ಕಂಡರೂ ಕನ್ನಡ ನಾಡಿನ ಸಾಂಸ್ಕೃತಿಕ ವಿಚಾರದಲ್ಲಿ ಸಮಗ್ರತೆಯನ್ನು ಕಾಪಾಡಿಕೊಂಡಿದೆ.

ಪ್ರಸ್ತುತ ಅಧ್ಯಯನಕ್ಕೆ ಮೈಸೂರು ಕರ್ನಾಟಕದ ಪ್ರದೇಶವನ್ನು ಆಯ್ದುಕೊಂಡು ಕ್ಷೇತ್ರಕಾರ್ಯವನ್ನು ಮಾಡಲಾಗಿದ್ದು, ಹಲವಾರು ಸಾಂಸ್ಕೃತಿಕ ಏಕಪ್ರಕಾರಗಳನ್ನು ಇತರೆಡೆಯಲ್ಲಿಯೂ ಹತ್ತಿರ ಸಂಬಂಧ ಪ್ರದೇಶವಾದ ಕಲುಬುರಗಿ ಮತ್ತಿತರ ಪ್ರದೇಶಗಳ ಶಿಲ್ಪ ಸಂಸ್ಕೃತಿಯನ್ನು ಅಧ್ಯಯನಕ್ಕೆ ಅಗತ್ಯಕ್ಕನುಸಾರವಾಗಿ ಬಳಸಿಕೊಳ್ಳಲಾಗಿದೆ.

ಸಾಂಸ್ಕೃತಿಕ ಕ್ಷೇತ್ರವನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳುವಾಗ ಧಾರ್ಮಿಕತೆಯು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಹಲವಾರು ಧರ್ಮಗಳ ಆಳ್ವಿಕೆಯನ್ನು ಕಂಡ ಭಾರತ ದೇಶದ ಸಾಂಸ್ಕೃತಿಕ ರಾಜ್ಯವಾದ ಕರ್ನಾಟಕದಲ್ಲಿ ಇದರ ಪ್ರಭಾವವು ಕಂಡುಬಂದಿರುವುದು ಐತಿಹಾಸಿಕ ಹಿನ್ನೆಲೆಯು ಕಾರಣವಾಗಿದೆ. ಧರ್ಮದಷ್ಟೇ ಪ್ರಮುಖ ಪಾತ್ರವನ್ನು ಭಾಷೆಗಳ ವಿಭಿನ್ನತೆಯು ಪಡೆದುಕೊಂಡಿದೆ.

ಕಲೆ ಎಂಬುದಕ್ಕೆ ವಿಸ್ತಾರವಾದ ವಿವರಣೆ ಇಲ್ಲಿ ಇಲ್ಲ, ಇದನ್ನು ಸರಳವಾಗಿ ಹೇಳಬಹುದಾದರೆ ಕಲೆಯೆನ್ನುವುದು ಮಾನವನು ಅನುಭವಗಳನ್ನು ಅಭಿವ್ಯಕ್ತ ಪಡಿಸುವುದಕ್ಕೆ ಆರಿಸಿಕೊಂಡ ವಿವಿಧ ಆಕಾರ, ಸ್ವರೂಪ, ಮತ್ತು ಮಾಧ್ಯಮಗಳ ಕಲೆಯೆಂದು ಕರೆಯಬಹುದಾಗಿದೆ. ಇದು ಒಂದು ಪ್ರಾತ್ಯಕ್ಷಿಕ ಪ್ರದರ್ಶನವಾಗಿ ಮನವನ ಬುದ್ದಿಶಕ್ತಿ, ಕೌಶಲ್ಯತೆಯನ್ನು ಅಭಿನಯಿಸುವ ರೀತಿಯ ಕಲೆಯಾಗಿದೆ. ಕಲೆ ಎನ್ನುವುದು ಮಾನವನ ಸಮಾಜದಲ್ಲಿ ತುಂಬಿಕೊಂಡಿರುವ ಪ್ರಕಾರವಾಗಿದೆ. 'ಬರ್ತ್ರುಹರಿ' ಎಂಬ ಖ್ಯಾತ ಭಾರತೀಯ ವಿದ್ವಾಂಸಕರ ಪ್ರಕಾರ ಕಲೆಯೆನ್ನುವುದು ಪ್ರಾಣಿ ಮತ್ತು ಮನುಷ್ಯನ ವಿಭಿನ್ನತೆಯನ್ನು ತೋರಿಸುತ್ತದೆ ಎಂದಿದ್ದಾನೆ.

ಪ್ರಾರಂಭದ ಆದಿ ಮಾನವನ ಕಾಲದಿಂದಲೂ ಮಾನವನು ತನ್ನ ಪ್ರಾವೀಣ್ಯತೆಯ ಪ್ರವೃತ್ತಿಯನ್ನು, ಇಚ್ಚೆಯನ್ನು ಕಲೆಯ ಪರವಾಗಿ, ಕಲೆಯಲ್ಲಿ ಬಲವನ್ನು ಮೂಡಿಸಿಕೊಂಡು ಬಂದಿದ್ದಾನೆ. ಇದನ್ನು ಇಂದಿಗೂ ನೋಡಬಹುದಾದ ಗುಹೆಗಳ ಚಿತ್ರಕಥೆ ಮತ್ತು ವೀನಸ್ ಆಫ್ ಡ್ಯೂ ಸೆಲ್ಡರ್ಪಗಳ ಪ್ರಗತಿ ಇತಿಹಾಸದ ಚಟುವಟಿಕೆಗಳಿಗೆ ಸಾಕ್ಷಿಗಳಾಗಿವೆ.

ಕಲೆಯು ಮಾನವನ ಉನ್ನತಿಯ ಬುದ್ಧಿ ಕೌಶಲ್ಯಕ್ಕೆ ತಕ್ಕಂತೆಯೇ ಜೊತೆಯಲ್ಲಿಯೇ ಬೆಳವಣಿಗೆಯನ್ನು ಹೊಂದಿದೆ. ಪ್ರತಿಯೊಂದು ದೇಶವು ಕೂಡ ತನ್ನದೇ ಆದ ಅದ್ವಿತೀಯ ವೈಶಿಷ್ಟಪೂರ್ಣ ಕಲ ಪ್ರಕಾರಗಳನ್ನು ಹೊಂದಿರುತ್ತದೆ. ಈ ರೀತಿಯಾಗಿ ನಾವು ಆಫ್ರಿಕಾ ಕಲೆ, ಫ್ರೆಂಚ್ ಕಲೆ ಭಾರತೀಯ ಕಲೆ ಮುಂತಾದವುಗಳನ್ನು ಹೊಂದಿದ್ದೇವೆ. ಭಾರತೀಯ ನಾಗರೀಕತೆಯು ಬಹಳ ಪ್ರಾಚೀನವಾದದ್ದು ಮತ್ತು ಈ ಸಂಸ್ಕೃತಿಗೆ ಅಪಾರವಾದ ಕೊಡುಗೆಯನ್ನು ನೀಡಿರುವಂತಹುದಾಗಿದೆ. ನಮ್ಮ ಪೂರ್ವ ಇತಿಹಾಸವು ಸಾಹಿತ್ಯ, ನಾಟಕ, ನೃತ್ಯ, ಚಿತ್ರಕಲೆ, ಶಿಲ್ಪಕಲೆ ಮುಂತಾದವುಗಳಿಂದ ತುಂಬಿರುವಂತಹುದಾಗಿದೆ. ಆದಿ ಕಾಲದ ಸಾಹಿತ್ಯ ಮತ್ತು ಜನಪದ ಕ್ಷೇತ್ರವು ರಾಷ್ಟ್ರೀಯ ಸಾಂಸ್ಕೃತಿಕ ಸಾಧನೆಗಳ ಒಂದು ಭಾಗವಾಗಿ ಮುಂದಿನ ಭವಿಷ್ಯದ ಭದ್ರವಾದ ಅಭಿವೃದ್ಧಿಯ ತಳಹದಿಯಾಗಿದೆ.

ಪ್ರಾಪಂಚಿಕ ಅಭಿವೃದ್ಧಿಯು ಕೇವಲ ಒಂದೇ ದಿನದಲ್ಲಿ, ವರ್ಷದಲ್ಲಿ ಆದದ್ದಲ್ಲ, ಬದಲಾವಣೆ ಮತು ಮಾನವನ ಪರಿವರ್ತನೆಗೆ ಸಾವಿರಾರು ವರ್ಷಗಳೇ ಹಿಡಿದಿವೆ. ನಾಗರೀಕತೆಯನ್ನು ಗ್ರೀಕ್, ಮಸೆಪೋಟೊಮಿಯ, ರೋಮ್, ಸಿಂಧೂ ಕಣಿವೆ ಹೀಗೆ ಕಾಲಾನಂತರದಲ್ಲಿ ಭಾರತದಲ್ಲಿ ಆದ ಅಮೋಘ ಬದಲಾವಣೆಗಳಲ್ಲಿ ರಾಜರ ಆಳ್ವಿಕೆಗಳಲ್ಲಿ ಅನೇಕ ಸಂಸ್ಥಾನಗಳಲ್ಲಿ ಮೈಸೂರು ಕೂಡ ಒಂದಾಗಿದ್ದು, ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿ ಬೆಳೆಸುವಲ್ಲಿ ರಾಜ ಒಡೆಯರಿಂದ ಆರಂಭವಾದ ಮಹತ್ತರ ಕಾರ್ಯ ಇಂದಿಗೂ ಕೂಡ ಅಜಾರಾಮರವಾಗಿರುವುದಕ್ಕೆ ಮೂಲ ಪ್ರೇರಣೆಯಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಸೀಮಿತ ಕಾಲಮಿತಿಯಿದ್ದ ಕಾರಣ ಕ್ಷೇತ್ರಕಾರ್ಯದೊಂದಿಗೆ ಮತ್ತು ಈಗಾಗಲೇ ಪ್ರಕಟಿತ ಗ್ರಂಥಗಳ ಅವಲೋಕನದಿಂದ ಪ್ರಸ್ತುತ ಫೆಲೋಷಿಪ್ ಅಧ್ಯಯನವನ್ನು ಪೂರ್ಣಗೊಳಿಸಲಾಗಿದೆ.

ಅಧ್ಯಾಯ: – 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಅಧ್ಯಾಯ: – 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಆದಿಮ ಕಾಲದ ಆದಿ ಮಾನವನು ನೈಸರ್ಗಿಕವಾಗಿ ದೊರೆತ ಶಿಲೆ ಹಾಗೂ ಮರದ ತುಂಡುಗಳನ್ನು ಹಾಗೆಯೇ ಉಪಯೋಗಿಸಿ ಮಣ್ಣು–ಮರಗಳಲ್ಲಿ ತನಗೆ ತೋಚಿದ ಹಾಗೆ ರೂಪ–ಆಕಾರಗಳನ್ನು ತಯಾರಿಸಿ ಉಪಯೋಗಿಸಿರಬಹುದಾಗಿದ್ದು, ಉತ್ಖನನದಲ್ಲಿ ಲಭ್ಯಗೊಂಡಿರುವ ಈ ಬಗೆಯ ಶಿಲ್ಪಗಳನ್ನು ಆಟಿಕೆಗಳೆಂದೂ, ಪೂಜಾ ಅಥವಾ ಮಾಂತ್ರಿಕ ಆಚರಣೆಯ ಶಿಲ್ಪಗಳೆಂದೂ ಗುರುತಿಸಲಾಗಿದೆ. ಇಂದಿಗೂ ಈ ರೀತಿ ಮಣ್ಣಿನಲ್ಲಿ ಹಲವಾರು ಮೂರ್ತಿಗಳನ್ನು ಮಾಡಿ ನಿಶ್ಚಿತ ಜಾಗದಲ್ಲಿ ಅರ್ಪಿಸುವ 'ಹರಕೆಯ ಶಿಲ್ಪಗಳು'ಗಳನ್ನು ಕೊಡಗು ಸರಯೂ ಗ್ರಾಮ ಹಾಗೂ ಕರ್ನಾಟಕದಾದ್ಯಂತ ಕಾಣುತ್ತೇವೆ. ನಂತರದಲ್ಲಿನ ಇತಿಹಾಸದ ಆರಂಭ ಕಾಲಕ್ಕೆ ಭಾರತೀಯ ಶಿಲ್ಪಗಳು ಯಾವ ರೀತಿ ಇದ್ದವೆಂಬುದು ಇನ್ನು ಖಚಿತವಾಗಿಲ್ಲದಿದ್ದರೂ ವೈಧಿಕ ಸಾಹಿತ್ಯದಲ್ಲಿ ಮೂರ್ತಿ ನಿರ್ಮಾಣದ ಬಗ್ಗೆ ಶಿಲ್ಪದ ಅಸ್ತಿತ್ವ ಇದ್ದ ಬಗ್ಗೆ ಆಧಾರಗಳು ದೊರೆಯುತ್ತವೆ.

ಬೌದ್ಧ ಹಾಗೂ ಜೈನ ಧರ್ಮದ ಕಾಲದಲ್ಲಿ ಅವರ ಧಾರ್ಮಿಕ ಶಿಲ್ಪಗಳು ವಿಫುಲವಾಗಿ ದೊರೆಯುತ್ತವೆ. ಬೌದ್ಧರ ಮೊದಲು ಕಾಲದ ಶಿಲ್ಪಗಳು ಗ್ರೀಕ್, ರೋಮ್ ದೇಶಗಳ ಶಿಲ್ಪಗಳಿಂದ ದಟ್ಟವಾಗಿ ಪ್ರಭಾವಿತರಾಗಿರುವುದರಿಂದ ಆ ಮೊದಲು ಭಾರತದಲ್ಲಿ ಶಿಲ್ಪಗಳು ಇದ್ದಿರಲಾರವೆಂಬ ಅಭಿಪ್ರಾಯವಿದೆ. ಈ ಮೊದಲೋ ಅಥವಾ ಇದೇ ಕಾಲದಲ್ಲೊ. ವೈದಿಕ ಧರ್ಮವೂ ಮೂರ್ತಿ ಶಿಲ್ಪವನ್ನು ವಿಗ್ರಹಾರಾಧನೆಯ ರೂಪದಲ್ಲಿ ಅಂಗೀಕರಿಸಿದಲ್ಲದೆ ಆಗಮ ಹಾಗೂ ಶಾಸ್ತ್ರ ಗ್ರಂಥಗಳನ್ನು ರಚಿಸಿತು. ಮೂರ್ತಿಗಳಿಗೆ ಆಕಾರ, ವಸ್ತ್ರಾಭರಣ, ನಿಲವು, ಆಯುಧ ಸಂಕೇತ ವಿಶೇಷಕಾರಗಳು, ವಾಹನ ಇತ್ಯಾದಿಗಳನ್ನು ನೀಡಿ ಖಚಿತಗೊಳಿಸಿತು. (ಪುಟ, 6, ಅ.ಲ. ನರಸಿಂಹನ್, ಎನ್. ಮರಿಸಾಮಾಚಾರ, ಸಂಪಾದಕೀಯ, ಶಿಲ್ಪಕಲಾ ಪ್ರಪಂಚ, ಪ್ರ: ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು–2, 1994)

ಕರ್ನಾಟಕದ ಮೈಸೂರು ಶಿಲ್ಪ ಇತಿಹಾಸದ ವಿಸ್ತಾರಣಾ ಕಾಲದಲ್ಲಿ ಶೈವ ಹಾಗೂ ವೈದಿಕದೊಂದಿಗೆ ಭೌದ್ಧ, ಜೈನ ಧರ್ಮಗಳೂ ಸೇರಿ ಶಿಲ್ಪಗಳಿಂದ ಕೂಡಿದ ವಾಸ್ತು ಶಿಲ್ಪಗಳನ್ನು ರಾಜರು, ಸಾಮಾನ್ಯರು ರಚಿಸಿರುವುದು ಕಂಡು ಬರುತ್ತದೆ. ಪ್ರಕೃತಿಯಲ್ಲಿ ದೊರೆಯುವ ಶಿಲೆ, ಲೋಹ ಇತ್ಯಾದಿಗಳನ್ನು ಅನುಸರಿಸಿ ಶಿಲ್ಪ ಕಾಲ ಕಾಲಕ್ಕೆ ಶಿಲ್ಪಗಳನ್ನು ರೂಪಿಸಿದ್ದು, ಮಾಧ್ಯಮವನ್ನು ಅನುಸರಿಸಿ ಅಲ್ಪ ಸ್ವಲ್ಪ ಬದಲಾವನೆಗಳು ಕಂಡು ಬಂದರೂ ಒಂದು ಅವಿಚ್ಛಿನ್ನವಾದ ಸಂಪ್ರದಾಯ ಭಾರತೀಯ ಶಿಲ್ಪಗಳಲ್ಲಿ ಹರಿದು ಬಂದಿರುವುದು ನಿಚ್ಚಳವಾಗಿ ನೋಡಬಹುದು. ಶೈಲಿ ಹಾಗೂ ಮಾಧ್ಯಮದ ಬದಲಾವಣೆ ಅರಸು ಮನೆತನಗಳಿಗೆ ಹಾಗೂ ಪ್ರದೇಸಗಳಿಗೆ ಹೊಂದಿಕೊಂಡಿರುವುದು ಕುತೂಹಲಕಾರಿಯಾದ ಸಂಗತಿಯಾಗಿದೆ. [ಪುಟ, 6, ಶಿಲ್ಪಕಲಾ ಪ್ರಪಂಚ]

ಪ್ರಸ್ತುತ ಅಧ್ಯಯನದಲ್ಲಿ ವಿಷಯಕ್ಕೆ ಸಂಭಂದಿಸಿದಂತೆ ಹಲವಾರು ಶಿಲ್ಪಗಳನ್ನು ಅವುಗಳ ವೈವಿಧ್ಯತೆ, ಅವುಗಳ ಆಚಾರ-ವಿಚಾರ, ಕಾಲಗಳನ್ನು ಅನುಸರಿಸಿ ಅಧ್ಯಯನ ಮಾಡಲಾಗಿರುತ್ತದೆ. ಅಂತೆಯೇ ಇಲ್ಲಿ ಕಂಡು ಬಂದಿರುವ ಆ ಶಿಲ್ಪಗಳ ಶೈಲಿಗಳಲ್ಲಿ ಆಯಾ ಕಾಲಕ್ಕೆ ತಕ್ಕಂತೆ ಶಿಲ್ಪಿಯು ಶಿಲ್ಪಗಳಲ್ಲಿಯ ಕೆಲವು ಪ್ರಮುಖವಾದ ಧಾರ್ಮಿಕ ಅಂಶಗಳ ಜೊತೆಗೆ ತನಗರಿವಿಲ್ಲದೆಯೇ ಸಮಕಾಲೀನವಾದ ಹಲವಾರು ಸಂಗತಿಗಳನ್ನು ಅದರೊಟ್ಟಿಗೆ ಶಿಲ್ಪೀಕರಿಸಿರುದನ್ನು ಗಮನಿಸಿ ಅವುಗಳ ವಿಶೇಷತೆಗಳನ್ನು ಬಳಸಿಕೊಂಡು ವಸ್ತ್ರಾಭರಣಗಳಲ್ಲಿನ ವಿಶೇಷತೆ, ದೈನಂದಿನ ಬಳಕೆಯ ವಸ್ತು ವಿಶೇಷತೆ, ಹಾಗೂ ಅಯಾ ಕಾಲದ ದಾಖಲಾರ್ಹ ಮಾಹಿತಿಗಳು ಕೂಡ ಲಭ್ಯಗೊಂಡಿರುವುದನ್ನು ಸಂಶೋಧನಾ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಶಿಲ್ಪದ ರಚನೆ ನಾಲ್ಕು ಬಗೆಯಲ್ಲಿ ಆಗುತ್ತವೆ:

1) ಕೆತ್ತಿ ತೆಗೆಯುವುದು.

2) ಮೆತ್ತಿ ರೂಪಿಸುವುದು.

3) ಎರಕಹೊಯ್ಯುವುದು ಹಾಗೂ

4) ಹಲವಾರು ವಸ್ತುಗಳನ್ನು ಜೋಡಿಸಿ ಅಂಟಿಸುವುದು.

ಈ ಕ್ರಿಯೆಗಳಿಗೆ ಸರಿ ಸುಮಾರು ಎಲ್ಲಾ ಶಿಲೆಗಳು, ಧಾತುಗಳು, ದಂತ, ಮರ-ಮುಟ್ಟುಗಳು ಉಪಯುಕ್ತವಾಗಿವೆ. ಈಚೆಗೆ ಪ್ಲಾಸ್ಟಿಕ್, ಫೈಬರ್‌ಗ್ಲಾಸ್, ಥರ್ಮೋಕೋಲ್ ಇತ್ಯಾದಿ ಆಧುನಿಕ ಶೋಧಗಳು ವ್ಯಾಪಕವಾಗಿ ಬಳಕೆಯಾಗುತ್ತಿವೆ. ಈ ರೀತಿ ವಿವಿಧ ಮಾಧ್ಯಮಗಳ ಬಳಕೆ ಸಾಧ್ಯತೆ ಕುರಿತು ಈ ಸಂಶೋಧನ ಅಧ್ಯಯದಲ್ಲಿ ವಿವರಿಸಲಾಗಿದೆ. [ಪುಟ,7 ಅದೇ]

ಈ ಅಧ್ಯಯನದಲ್ಲಿ 'ಸಾಂಪ್ರದಾಯಿಕ ಶಿಲ್ಪಗಳದ್ದೇ ಒಂದು ಪ್ರತ್ಯೇಕ ಪ್ರಪಂಚ ಅವುಗಳ ವೈವಿಧ್ಯತೆ, ಮಾಧ್ಯಮ ತಯಾರಿಕೆ, ಬಳಕೆ, ಆರಾಧನೆ ವಿಧಿ ಕ್ರಿಯೆ ಹಾಗೂ ಅಂತಿಮವಾಗಿ ವಿಸರ್ಜನೆ ಎಲ್ಲವೂ ಕಲಾತ್ಮಕವಾದ ಅಭಿವ್ಯಕ್ತಿಯಿಂದ ಕೂಡಿರುತ್ತವೆ. ಪ್ರಯೋಜನದೊಂದಿಗೆ ಕಲೆಯೂ ಅನಿರ್ಭಂದಿತವಾಗಿ ಬಳಕೆಯಾಗುವುದು ಸಾಂಪ್ರದಾಯಿಕ ಚೌಕಟ್ಟಿನ ಹಿನ್ನಲೆಯಲ್ಲಿಯೇ' ಎಂದರೆ ಅತಿಶಯೋಕ್ತಿಯಾಗಲಾರದು, ಆಧುನಿಕ ಕಲೆಯಲ್ಲಿ ಕಂಡು ಬರುವ ಮುಕ್ತ ಕಸುಬುಗಾರಿಕೆಗೆ ಪ್ರೇರಣೆ ಜನಪದ ಚಿತ್ರ ಶಿಲ್ಪಗಳೇ ಆಗಿವೆ. ಕರ್ನಾಟಕದ (ವಿಶೇಷವಾಗಿ ಉತ್ತರ ಕರ್ನಾಟಕ) ಹಬ್ಬ ಹರಿದಿನಗಳಲ್ಲಿ ರೂಪು ತಳೆಯುವ ಜನಪದ ಶಿಲ್ಪಗಳ ಕುರಿತ (ವಿವರವಾದ) ಆಯ್ದ ವಿವರಗಳ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ.

ಪ್ರಸ್ತುತ ಈ ಫೆಲೋಷಿಪ್ ಪ್ರಬಂಧದ ಅಧ್ಯಯನವು ಒಟ್ಟು ಐದು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. ಶಿಲ್ಪಕಲಾವಿದರ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದುಕೊಂಡು ಬಂದಿರುವ ಮೈಸೂರು ಶಿಲ್ಪಕಲೆಗಳು ಕರ್ನಾಟಕ ಪ್ರದೇಶದ ಜನಾಂಗದ ಸಾಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರಗಳಾಗಿವೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಬದುಕಿಸಿಕೊಂಡು ಬಂದ ಹಿರಿಮೆ ಇವುಗಳಿಗಿದೆ.

"ಮಾನವನ ಮೂಲ ಸಂವೇದನೆಗಳಿಗೆ ಬಹಳ ಹತ್ತಿರವಾದ ಕಲೆಗಳಲ್ಲಿ ಶಿಲ್ಪಕಲೆಗಳಿಗೆ ಅತ್ಯಂತ ಪ್ರಧಾನವಾದ ಸ್ಥಾನವಿದೆ. ಒಬ್ಬ ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ಅಭೂತಪೂರ್ವವಾಗಿದೆ. ಈ ಶಿಲ್ಪಕಲೆಗಳು ವ್ಯಕ್ತಿ ತನ್ನ ಅನುಭವ, ಆಚಾರಗಳಿಗೆ ಜೀವ ಕೊಟ್ಟದ್ದು, ಜೀವಂತಿಕೆಯನ್ನು ತುಂಬಿದ್ದು,

ಇಂತಹ ಕಲೆಗಳ ಮೂಲಕ ಜನಪದರ ಅನುಭವ ಕಲಾಪರಂಪರೆ, ಹೃದಯ ಶ್ರೀಮಂತಿಕೆ, ಸಂಸ್ಕಾರವಂತಿಕೆಗಳು ಈ ಶಿಲ್ಪಕಲೆಯಲ್ಲಿ ಅರಳಿ ನಿಂತಿರುವುದನ್ನು ಕಾಣುತ್ತೇವೆ.

ಕೆಲವು ಶಿಲ್ಪಗಳು ಸಾಮಾನ್ಯವಾಗಿ ಆಯಾ ಪ್ರದೇಶಕ್ಕೆ ಸೀಮಿತ ಹಾಗೂ ವಿಶಿಷ್ಟವೆನಿಸುವಂತೆ ಕಂಡುಬರುತ್ತವೆ. ಅವು ಆಯಾ ಪ್ರದೇಶದ ಜನಾಂಗಿಕ ಧಾರ್ಮಿಕ ಹಿನ್ನೆಲೆಯನ್ನು, ಭೌಗೋಳಿಕ ಪರಿಸರವನ್ನು ಅವಲಂಬಿಸಿ ರೂಪು ಪಡೆದಂತೆ ತೋರುತ್ತದೆ. ಹೀಗೆ ಮೈಸೂರು ಶಿಲ್ಪಕಲೆಯ ಅಧ್ಯಯನದ ವಿಧಾನ, ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶಗಳನ್ನು ಸಾಂಸ್ಕೃತಿಕ ಪರಿಚಯದೊಂದಿಗೆ ಈ ಮೊದಲನೆಯ ಅಧ್ಯಾಯ ಒಳಗೊಂಡಿದೆ.

ಮೈಸೂರು ಶಿಲ್ಪಕಲೆಗಳ 'ಉಗಮ ಮತ್ತು ವಿಕಾಸಗಳನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ. ಕಲೆಯ ರೂಪನಿಷ್ಪತ್ತಿ, ಕಲೆಯನ್ನು ಅರ್ಥೈಸುವಿಕೆ. ಪ್ರಾಚೀನ ಕಾಲದಲ್ಲಿ ಕಲೆ ಮತ್ತು ವಿದ್ಯೆಗಳು ಸಮಾನಾರ್ಥದಲ್ಲಿ ಬಳಕೆಗೊಂಡ ಬಗೆ, ಅರವತ್ನಾಲ್ಕು ಕಲೆಗಳು, ಅವುಗಳಲ್ಲಿ ಚಿತ್ರಕಲೆ, ಶಿಲ್ಪಕಲೆ, ಲಲಿತಕಲೆ ಮತ್ತು ಕುಶಲ ಕಲೆಗಳ ಅರ್ಥ ಸ್ವರೂಪ, ಲಲಿತ ಕಲೆಗಳಲ್ಲಿ ಒಂದಾದ ಚಿತ್ರಕಲೆ – ಅದು ಸರ್ವ ಕಲೆಗಳಿಗೆ ಆಧಾರಭೂತವಾದ ಮತ್ತು ಶ್ರೇಷ್ಠವಾದ ಕಲೆ ಎಂಬುದರ ಕುರಿತಾಗಿರುವ ಪ್ರಾಚೀನ ಉಲ್ಲೇಖಗಳ ವಿವೇಚನೆಯನ್ನು'(ಡಾ.ಎಸ್.ಸಿ. ಪಾಟೀಲ, ಪುಟ–6, **ಕರ್ನಾಟಕದ ಜನಪದ ಚಿತ್ರಕಲೆ) ಇಲ್ಲಿ ಮಾಡಲಾಗಿದೆ.**

ಶಿಷ್ಟಪದ ಶಿಲ್ಪಕಲೆ ಮತ್ತು ಜನಪದ ಶಿಲ್ಪಕಲೆಯ ಸ್ವರೂಪ, ಲಕ್ಷಣ, ಇವುಗಳ ಪರಿಸ್ಪರ ಸಂಬಂಧ ವಿವರಣೆಯೊಂದಿಗೆ ಮೈಸೂರು ಶಿಲ್ಪಕಲೆಯ ಮುಂದುವರೆದ ರೂಪವಾಗಿ ಶಿಷ್ಟಪದ ಶಿಲ್ಪಕಲೆಯ ಬೆಳವಣಿಗೆ ಹಾಗೂ ಶಿಷ್ಟ ಶಿಲ್ಪಕಲೆಯ ಸುಧಾರಿತ, ನೂತನ ಶೈಲಿಗಳಿಗೆ ಹೇಗೆ ಸಂಪ್ರದಾಯಿಕ ಶೈಲಿ ಶಿಲ್ಪ ಮೂಲವೋ ಹಾಗೆಯೇ ಸಾಂಪ್ರದಾಯಿಕ ಶಿಲ್ಪಕಲೆಗೆ ಗಂಗರು, ಚಾಲುಕ್ಯರು, ಹೊಯ್ಸಳರು, ಚೋಳರು, ವಿಜಯನಗರದ ಅರಸರು ಮೈಸೂರು ಶಿಲ್ಪ ಶೈಲಿಯೂ ಮೂಲವೆಂಬುದನ್ನು ಇಲ್ಲಿ ವಿವರಿಸಲಾಗಿದೆ.

ಈ ಎರಡನೆಯ ಅಧ್ಯಾಯದಲ್ಲಿ ಮೈಸೂರು ಒಡೆಯರ ರಾಜಮನೆತನದ ಇತಿಹಾಸ ಕುರಿತಾಗಿದ್ದು, ರಾಜಮನೆತನದ ಶಿಲ್ಪಗಳ ಕೊಡುಗೆಗಳನ್ನು ಸಾಂಸ್ಕೃತಿಕ ಸಮಾಜದ ಕಟ್ಟುವಿಕೆಯ ಅವಶ್ಯಕತೆಯನ್ನು ಹೇಳುತ್ತ, ಪ್ರಸ್ತುತ ಅಧ್ಯಯನದಲ್ಲಿ ಮಾಡಿಕೊಂಡ ವರ್ಗೀಕರಣವನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮೈಸೂರು ಅರಮನೆ ಮತ್ತು ಕೋಟೆಯ ಶಿಲ್ಪಗಳ ನಿರ್ಮಾಣದ ಶೈಲಿ ಮತ್ತು ಅವುಗಳ ವಿಧಾನ, ಹಂತ ಹಂತದ ವಿವರಣೆಗಳೊಂದಿಗೆ ಮಾಧ್ಯಮದ ವೈಶಿಷ್ಟ್ಯಗಳು ಹಾಗೂ ಸಂಪ್ರದಾಯಿಕ ಮತ್ತು ಇತರೆ ಎರಕದ ಶೈಲಿಗಳ ಬಗ್ಗೆ ಮೂರ್ತಿ ನಿರ್ಮಾಣದ ವೈವಿಧ್ಯತೆಗಳ ಚರ್ಚಿಸಲಾಗಿದೆ.

ಈ ಅಧ್ಯಾಯವು ಮೈಸೂರು ಗಾರೆ, ಶಿಲ್ಪ, ಲೋಹ ಶೈಲಿ ಶಿಲ್ಪಗಳ ಒಟ್ಟಾರೆ ಅಧ್ಯಯನದಲ್ಲಿ ಪ್ರಮುಖ ಅಧ್ಯಾಯವಾಗಿದ್ದು, ಮೈಸೂರು ಪ್ರದೇಶ ಕೇಂದ್ರಿತವಾದ ಶಿಲ್ಪಕಲಾವಿದರ ಪ್ರಾಮುಖ್ಯತೆಗೆ ಒತ್ತನ್ನು ಇಲ್ಲಿ ನೀಡಲಾಗಿದೆ.

ನಾಲ್ಕನೆಯ ಅಧ್ಯಾಯವು ಮೈಸೂರು ಒಡೆಯರ ಕಾಲದಲ್ಲಿ ದೇವಾಲಯಗಳೂ ಮತ್ತು ಶಿಲ್ಪಗಳು ಆಗಿದ್ದು, ಅಂದಿನ ಶಿಲ್ಪಗಳಲ್ಲಿ ಧಾರ್ಮಿಕ ಶಿಲ್ಪಗಳನ್ನು ಕುರಿತಾದುದಾಗಿದ್ದು, ಧಾರ್ಮಿಕ ಹಿನ್ನೆಲೆಯ ದೈವೀ ಪರಿಕಲ್ಪನೆಯಲ್ಲಿ ಮತ್ತು ಆರಾಧನಾ ಸಂದರ್ಭಗಳಲ್ಲಿ ಮೈಸೂರು ಲೋಹ ಶಿಲ್ಪಕಲೆ ಬೆಳೆದು ಬಂದಂತಹುದರ ಬಗೆಗೆ ವಿವೇಚನೆ ಇಲ್ಲದೆ. ಜನಪದರು ದೇವರ ಬಗೆಗೆ ಮಾಡಿದ ಆಚರಣೆಗಳು, ಆರಾಧನೆಗಳು, ಸಂಪ್ರದಾಯಗಳು ಗಾರೆ, ಶಿಲೆ, ಲೋಹ ಶಿಲ್ಪಗಳಿಗೆ ಪ್ರೇರಕವಾಗಿವೆ. ಒಂದು ರೀತಿಯಲ್ಲಿ ಶರಣ ಸಂಸ್ಕಾರಕ್ಕೆ ಮೂಲ ಸ್ವರೂಪಗಳನ್ನು ಈ ಮೈಸೂರು ಶೈಲಿ ಶಿಲ್ಪಗಳು ಕೊಡುಗೆಯಾಗಿ ನೀಡಿರುವುದಕ್ಕೆ ಸಾಕ್ಷಿಗಳು ಇಲ್ಲವೆ. ದೇವರ ವಿಗ್ರಹಗಳು, ಮೂರ್ತಿಗಳು, ಪ್ರಭಾವಳಿಗಳು, ದೇವಾಲಯ, ಮಠ-ಮಾನ್ಯಗಳು, ಅರಮನೆ, ಗುರುಮನೆಗಳಲ್ಲಿ ಬಳಕೆಯಾದಂತಹ ಪೂಜಾ ಸಾಮಗ್ರಿಗಳು, ನಂದಿಕೋಲುಗಳು, ನಂದಿಕುಣಿತ ಪರಿಕರಗಳು, ಅಲಂಕಾರಿಕ ಆಭರಣಗಳು, ಶಿವಶರಣರ ವಿಗ್ರಹಗಳು, ಮೈಸೂರು ಶೈಲಿಯಲ್ಲಿ ಧರ್ಮ ಮೂಲವಾಗಿ ರಚನೆಗೊಂಡಿರುವಂತಹುಗಳನ್ನು ಅಧ್ಯಯನಕ್ಕೆ

ಒಳಪಡಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ಹರದನಹಳ್ಳಿಯ ಶ್ರೀಗೋಪಾಲಸ್ವಾಮಿಯ ದೇವಾಲಯ ನಂತರ ಅನೇಕ ಸ್ಥಳಗಳು ಅದರ ಪ್ರಭಾವಕ್ಕೆ ಒಳಗಾಗಿದ್ದವು. ಅಂತಹುಗಳ ಪೈಕಿ ಕರ್ನಾಟಕ ತಮಿಳುನಾಡಿನ ಗಡಿ ಭಾಗವಾಗಿದ್ದ ಹರದನಹಳ್ಳಿಯು ಒಂದು ವ್ಯಾಪಾರದ ಕೇಂದ್ರದ ಮಧ್ಯದಲ್ಲಿ ಈ ಪ್ರದೇಶ ಸೇರಿಕೊಂಡಿದೆ. ಇದರ ಪ್ರಭಾವದಿಂದ ಮೂಡಿಬಂದಂತಹ ಶಿಲ್ಪಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಐದನೆಯ ಅಧ್ಯಾಯವು ಸಮಾರೋಪವಾಗಿದ್ದು, ಮೈಸೂರು ಶಿಲ್ಪಗಳಲ್ಲಿ ಧಾರ್ಮಿಕ ಪ್ರೇರಣೆಯ ಶಿಲ್ಪಗಳು ಮೂಲಕ ಅರಸರ ಸೌಂದರ್ಯಮೂಲ ಅಭಿವ್ಯಕ್ತಿಯ ಸಾಧನವಾಗಿ ಜಾನಪದ ಶಿಲ್ಪ ಶೈಲಿಯಾದ ಈ ಮೈಸೂರು ಶಿಲ್ಪಕಲೆ ಬಂದುದನ್ನು ವಿವರಿಸುತ್ತಾ, ಇದರಲ್ಲಿ ಪ್ರಯೋಜನಮೂಲ ಮತ್ತು ಮನರಂಜನೆಮೂಲ ಶಿಲ್ಪಗಳೆಂಬ ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಪ್ರಯೋಜನಮೂಲ ಲೋಹ ಶಿಲ್ಪಗಳು ಗೋಡೆಯ ಮೇಲೆ ತೂಗು ಹಾಕುವ ಶಿಲ್ಪಗಳು, ಗೃಹಾಲಂಕರಣದ ಶಿಲ್ಪವಿನ್ಯಾಸಗಳು, ಗೊಂಬೆಗಳು, ಅಡಿಕೆ ಕತ್ತರಿಗಳು, ಕಪಾಟುಗಳ ವಿನ್ಯಾಸಗಳು ಇತ್ಯಾದಿಗಳನ್ನು ಇಲ್ಲಿ ಐದನೆ ಅಧ್ಯಾಯಕ್ಕೆ ಒಳಪಡಿಸಲಾಗಿದೆ.

ಈ ಅಧ್ಯಾಯದಲ್ಲಿ ಬೆಳೆದುಬಂದಂತಹ ಈ ಮೈಸೂರು ಶಿಲ್ಪಕಲೆಯನ್ನು ವೃತ್ತಿಮೂಲ ಜನಪದ ಶಿಲ್ಪಕಲೆಯ ಪ್ರಕಾರದಲ್ಲಿ ಮತ್ತು ಇವುಗಳಿಂದ ಪ್ರೇರಣೆಗೊಂಡು ಸುಧಾರಿತ ಲೋಹ ಶಿಲ್ಪ ಶೈಲಿಗಳ ಉಗಮಕ್ಕೆ ಮೈಸೂರು ಶೈಲಿಯ ಕೊಡುಗೆ ಹಾಗೂ ಸಮಕಾಲೀನ ಶಿಲ್ಪಕಲಾವಿದರು ಬೆಳೆಸುತ್ತಿರುವ ಪರಿಯನ್ನು, ಇಂದಿನ ಯುವ ಪೀಳಿಗೆಯವರು ಇದರ ಪ್ರಭಾವಕ್ಕೆ ಒಳಗಾಗಿರುವ ಬಗೆಯನ್ನು ವೃತ್ತಿನಿರತರ ಸಾಧಕ ಭಾಧಕಗಳನ್ನು, ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಲಾಗಿದ್ದು, ಸಂಕ್ಷಿಪ್ತ ಸಮಾಲೋಚನೆ ಹಾಗೂ ಪ್ರಸ್ತು ಅಧ್ಯಯನದಿಂದ ಹೊರಬಂದ ಪ್ರಮುಖ ಸಂಗತಿಗಳ ಸಮೀಕ್ಷೆಯೂ ಆರನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಪ್ರಸ್ತುತ ಪ್ರಬಂಧದ ಅಧ್ಯಯನಕ್ಕಾಗಿ, ಕರ್ನಾಟಕದ ಹಳೇ ಮೈಸೂರು ರಾಜ್ಯದ ಜಿಲ್ಲೆಗಳ ಹಲವಾರು ಗ್ರಾಮಗಳಲ್ಲಿ ಕ್ಷೇತ್ರಕಾರ್ಯವನ್ನು ನಡೆಸಲಾಗಿದೆ. ಅಲ್ಲದೆ ಸೀಮಿತ ವ್ಯಾಪ್ತಿಯನ್ನು ಮೀರಿ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿರುವ ಸಂಗ್ರಹಗಳನ್ನು ಪೂರಕವಾಗಿ, ತೌಲನಿಕವಾಗಿಯೂ ಇಲ್ಲಿ ಬಳಸಿಕೊಳ್ಳಲಾಗಿದೆ. ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಮೈಸೂರು ಲೋಹ ಶಿಲ್ಪಗಳ ಸಂಗ್ರಹ ಮತ್ತು ಸಂಪ್ರದಾಯಿಕ ಲೋಹ ಎರಕದ ಇತರೆ ಶೈಲಿ ಶಿಲ್ಪಗಳ ತಯಾರಿಕೆಯ ಬಗ್ಗೆ ಅಧ್ಯಯನ ನಡೆಸಲಾಗಿದೆ.

ಅಧ್ಯಯನದ ವಿಧಾನ:

ಈ ಪ್ರಬಂಧದ ರಚನೆಗೆ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

1. ಮೂಲ ಆಕರ ಸಾಮಾಗ್ರಿ (Primary Resourses)
2. ಆನುಷಂಗಿಕ ಆಕರ ಸಾಮಾಗ್ರಿ (Secondary Resources)

   ಈ ಎರಡೂ ಮೂಲದಿಂದ ಇಲ್ಲಿ ವಿಷಯ ಸಂಗ್ರಹ ಮಾಡಲಾಗಿದೆ. ಕ್ಷೇತ್ರ ಕಾರ್ಯದ ಮೂಲಕ ಹೆಚ್ಚು ಒತ್ತನ್ನು ನೀಡಿ ಸಂಶೋಧನೆ ಕೈಗೊಳ್ಳಲಾಗಿದೆ.

1. ಮೂಲ ಆಕರ ಸಾಮಾಗ್ರಿ:

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದುದು ಕ್ಷೇತ್ರಕಾರ್ಯ(Field Work) ಈ

ಕ್ಷೇತ್ರಕಾರ್ಯ

ಅ) ಸಂದರ್ಶನ

ಆ) ಸಂಭಾಷಣೆ

ಇ) ಧ್ವನಿ ಮುದ್ರಣ

ಈ) ಛಾಯಾ ಚಿತ್ರಣ

ಉ) ಶಿಲ್ಪಗಳ ಪ್ರತಿ ಮಾಡುವಿಕೆ

ಊ) ಸಂಗ್ರಹಿತ ವಿಷಯದ ಪಟ್ಟಿಕೆಗಳನ್ನು ಸಿದ್ಧಪಡಿಸುವಿಕೆ ಹೀಗೆ ವಿವಿಧ ಸ್ವರೂಪದಲ್ಲಿರುತ್ತದೆ.

ಅ) ಸಂದರ್ಶನ: ಮೈಸೂರು ಶೈಲಿ ಹತ್ತಿರದ ಗ್ರಾಮಗಳು ಮತ್ತು ಮೈಸೂರು ಮತ್ತು ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳ ಅಧ್ಯಯನದ ಕ್ಷೇತ್ರಗಳನ್ನು ಜೊತೆಗೆ ಜಿಲ್ಲಾವಾರು ಸಂಗ್ರಹಗಳಲ್ಲಿರುವ ಲೋಹ ಶಿಲ್ಪಗಳ ಬಗ್ಗೆ ಮಾಹಿತಿ ಲಭ್ಯತೆ ಇರುವ ಸ್ಥಳಗಳಿಗೆ ಭೇಟಿ ನೀಡಲಾಯಿತು. ಶಿಲ್ಪ ಕಲಾವಿದರು, ಅವುಗಳನ್ನು ಕೊಂಡು ಸಂಗ್ರಹಿಸಿದವರು, ಆಚರಣೆಗಳಲ್ಲಿ ಬಳಸಿಕೊಳ್ಳುತ್ತಿರುವವರನ್ನು ಸಂದರ್ಶನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ವಿಶಿಷ್ಟ ವಿಧಿ-ವಿಧಾನಗಳನ್ನು ಮುಖತಃ ಅರಿಯುವ ಸಲುವಾಗಿ ಆಚರಣೆಗೆ ಸೀಮಿತಗೊಂಡ ದಿನಗಳಂದೇ ಸಂದರ್ಶಿಸಬೇಕಾಗುತ್ತಿತ್ತು. ಜನಪದರ ಆಚರಣೆಗಳು ಕೆಲವು ಸಂದರ್ಭಗಳಲ್ಲಿ ಮಾತ್ರ ಏರ್ಪಡುತ್ತಿದ್ದುದರಿಂದ ಅವುಗಳ ವೈವಿಧ್ಯತೆಗಳನ್ನು ಅರಿಯುವುದು ಬಹಳ ಮುಖ್ಯವೆನಿಸುತ್ತಿತ್ತು. ಈ ಆಚರಣೆಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿರುವುದರ ಬಗ್ಗೆ ಸಂದರ್ಶನದ ಮೂಲಕ ವ್ಯಕ್ತವಾಗುತ್ತದೆ. ಹೀಗಾಗಿ ಶಿಲ್ಪಗಳ ಅಧ್ಯಯನಕ್ಕೆ ಸಂದರ್ಶನ ಅನಿವಾರ್ಯ ಮತ್ತು ಅವಶ್ಯಕವಾಗಿರುತ್ತದೆ.

ಆ) **ಸಂಭಾಷಣೆ:** ಸಂಪ್ರದಾಯಿಕ ಮತ್ತು ಜಾನಪದ ಪ್ರಕಾರವಾದ ಮೈಸೂರು ಶಿಲ್ಪಗಳ ಬಗ್ಗೆ ಮೌಖಿಕ ಮತ್ತು ಪ್ರಯೋಗಿಕವಾದದ್ದು, ಶಿಲ್ಪಗಳ ಹಿಂದಿರುವ ಜನಪದ ಶಿಲ್ಪಕಾರರ ಬದುಕು ಎಂತಹುದೆಂಬುದನ್ನು ಸಂದರ್ಶಿಸಿದ ಗ್ರಾಮೀಣರಿಂದ ತಿಳಿದುಕೊಳ್ಳಬೇಕಾಯಿತು. ಕಥೆ, ಐತಿಹ್ಯ, ಹಾಡುಗಳನ್ನು ಹೇಳುವ ಜನರನ್ನು ಮಾತಿಗೆ ಎಳೆದು, ಅಧ್ಯಯನದ ವಿಷಯವನ್ನು ಅವರ ಮನಸ್ಸಿಗೆ ಮುಟ್ಟಿಸಿ, ಚರ್ಚೆಯ ಮೂಲಕ ವಿಷಯ ಸಂಗ್ರಹಿಸಿಕೊಳ್ಳಲಾಯಿತು.

ಇ) ಧ್ವನಿಮುದ್ರಣ: ಮೈಸೂರು ಲೋಹ ಶಿಲ್ಪಕಲೆಯನ್ನು ಸಂಪ್ರದಾಯಗಳಿಂದ ಹೊರತುಪಡಿಸುವುದು ಸುಲಭದ ಕೆಲಸವಲ್ಲ. ಗ್ರಾಮೀಣರ ಶಿಲ್ಪ ವಿನ್ಯಾಸ ಯಾವುದೇ ಸ್ವರೂಪದ್ದೇ ಆದರೂ, ಅದರ ಬಗ್ಗೆ ಅವರ ಕಲ್ಪನೆಗಳ ಬಗ್ಗೆ ನೇರ ಸಂದರ್ಶನವೇರ್ಪಟ್ಟಾಗ ಮಾತ್ರ ಅವುಗಳ ಮಾಹಿತಿ ಲಭ್ಯವಾಗುತ್ತದೆ. ಅವರು ನೀಡುವ ಮಾಹಿತಿಗಳು ನೆನಪಿನ ಶಕ್ತಿಯ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಹೇಳಿದ್ದನ್ನು ಮತ್ತೆ ನಿನಪಿಸಿಕೊಳ್ಳುವುದು ಕಷ್ಟಕರ. ಕೆಲವು ತಾಂತ್ರಿಕ ಶಬ್ಧಗಳು ಉಚ್ಚಾರಣೆಗೆ ಕ್ಲಿಷ್ಟಕರವಾಗಿರುತ್ತವೆ ಅಂತಹುಗಳನ್ನು ಕೂಡ ಧ್ವನಿಗಳ ನೇರ ಮುದಿಸಿಕೊಂಡು, ನಂತರ ಅವುಗಳನ್ನು ಬರಹಕ್ಕೆ ತಂದು, **ಸಂಗ್ರಹಿಸಿಕೊಳ್ಳಲಾಗಿದೆ.**

ಈ) ಛಾಯಾಚಿತ್ರಣ: ಕಥೆ, ಧ್ವನಿ, ನಿರೂಪಣೆಗಳನ್ನು ಧ್ವನಿ ಮುದ್ರಿಸಿಕೊಂಡಂತೆ ಅವಶ್ಯಕವೆನಿಸಿದ ಚಿತ್ರಗಳನ್ನು ಛಾಯಚಿತ್ರಣದಲ್ಲಿ ಲೋಹ ಶಿಲ್ಪಗಳನ್ನು ಸೆರೆಹಿಡಿಯಬೇಕಾದದು ಬಹಳ ಮುಖ್ಯವೆನಿಸಿತು. ದೃಶ್ಯ ಪ್ರಕಾರಗಳನ್ನು ಛಾಯ ಚಿತ್ರಗಳ ಮೂಲಕ ವಿವರಿಸಲು, ಪರಿಚಯಿಸಲು ಉತ್ತಮವಾದ ಮಾರ್ಗವೆನಿಸುತ್ತದೆ. ಅದರಂತೆ ಹಲವಾರು ಶಿಲ್ಪಗಳನ್ನು ನೇರವಾಗಿ ವೀಕ್ಷಿಸಿ, ಕೆಲವನ್ನು ಸಂಗ್ರಹಕಾರರಲ್ಲಿದ್ದಂತಹುಗಳನ್ನು ಪುನರ್‌ಛಾಯಚಿತ್ರದ ಮೂಲಕ ಸೆರೆಹಿಡಿದು ಸಂಗ್ರಹಿಸಿಕೊಳ್ಳಾಯಿತು. ಮನೆ, ಮಠ, ದೇವಾಲಯ, ಸಂಗ್ರಹಾಲಯಗಳಲ್ಲಿ ಸಂಗ್ರಹಿಸಿದ್ದ ಹಲವಾರು ಲೋಹಶಿಲ್ಪಗಳನ್ನು ನೇರವಾಗಿ ಮತ್ತು ಮುದ್ರಿತ ಪುಸ್ತಕಗಳಲ್ಲಿ ಲಭ್ಯವಾದ ಛಾಯಚಿತ್ರಗಳನ್ನು ಚಿತ್ರಿಸಿಕೊಳ್ಳಲಾಗಿದೆ.

ಉ) ಶಿಲ್ಪಗಳ ಪ್ರತಿ ಮಾಡುವಿಕೆ: ಲೋಹ ಶಿಲ್ಪಗಳ ಅಧ್ಯಯನದ ಸಂದರ್ಭದಲ್ಲಿ ಸಂಚರಿಸುವ ಕಡೆಗಳಲ್ಲಿ ಛಾಯಚಿತ್ರಗಳನ್ನು ತೆಗೆಯಲು ಸಾಧ್ಯವಿಲ್ಲದಿದ್ದಾಗ, ಕ್ಯಾಮಾರದಲ್ಲಿ ಬ್ಯಾಟರಿ ಛಾರ್ಜ್ ಮುಗಿದಾಗ ಅಂತಹ ಸಂದರ್ಭದಲ್ಲಿ ಅಥವಾ ಮತ್ಯಾವುದೋ ತಾಂತ್ರಿಕ ಬೆಳಕಿನ ದೋಷವಿದ್ದಾಗ ಲೋಹ ಶಿಲ್ಪಗಳನ್ನು ಚಿತ್ರ ಬಿಡಿಸುವುದರ ಮೂಲಕ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಊ) ಸಂಗ್ರಹಿತ ವಿಷಯ ಪಟ್ಟಿಕೆಗಳನ್ನು ಸಿದ್ಧಪಡಿಸುವಿಕೆ: ಕ್ಷೇತ್ರಕಾರ್ಯದ ಅನುಭವವೇದ್ಯ, ಶಿಲ್ಪವಿನ್ಯಾಸ ವೇದ್ಯ ವಿವರಗಳನ್ನು ಅಭ್ಯಾಸಕ್ಕೆ - ಬರವಣಿಗೆಗೆ ಅನುಕೂಲವಾಗುವಂತೆ ಪಟ್ಟಿಕೆಗಳನ್ನು ಟಿಪ್ಪಣಿ ಮಾಡಿಕೊಂಡು, ಪ್ರಬಂಧಕ್ಕೆ ಅವಶ್ಯವಾದ ವಿಷಯಗಳನ್ನು ಸಂಗ್ರಹ ಮಾಡಿಕೊಳ್ಳಲಾಗಿದೆ.

2. ಆನುಷಂಗಿಕ ಆಕರ ಸಾಮಾಗ್ರಿ: ಪ್ರಕಟಿತ-ಅಪ್ರಕಟಿತ ಸಾಹಿತ್ಯ ಕೃತಿಗಳು, ಶಾಸನ ಸಂಪುಟಗಳು, ಪಿಹೆಚ್.ಡಿ. ಮಹಾಪ್ರಬಂಧಗಳು, ಪ್ರವಾಸಿಬರಹಗಳು, ಹಸ್ತಪ್ರತಿಗಳು (ಉದ್ಧರಣೆಯ ಪಟಲಗಳು), ನಿಘಂಟು ವಿಶ್ವಕೋಶ, ಗ್ಯಾಝೆಟಿಯರ್‌ಗಳು, ದೇಶಿಭಾಷೆಗೆ ಅನುವಾದಿಸಿದ ಅನುವಾದ ಗ್ರಂಥಗಳು ಇವೆಲ್ಲ ಲೋಹ ಶಿಲ್ಪಗಳ ಅಧ್ಯಯನಕ್ಕೆ ಆನುಷಂಗಿಕ ಆಕರ ಸಾಮಗ್ರಿಯಾಗಿವೆ.

ಫೆಲೋಷಿಪ್‌ನ ಪ್ರಸ್ತುತ ಅಧ್ಯಯನದ ವಿಷಯ ಸಂಗ್ರಹಕ್ಕೆ ಕ್ಷೇತ್ರಕಾರ್ಯದ ಸಮಗ್ರ ಮಾಹಿತಿಗಳನ್ನು ಪಟ್ಟಿಕೆಗಳಲ್ಲಿ ಸಂಗ್ರಹಿಸಕೊಂಡಂತೆ ಆನುಷಂಗಿಕ ವಿವರಗಳನ್ನು ಒಂದೊಂದು ವಿಷಯಕ್ಕೊಂದರಂತೆ, ಹಾಗೆಯೇ ಜಿಲ್ಲಾವಾರು ಮಾಹಿತಿ ದೊರೆಯುವಂತೆ, ಬೇರೆ ಬೇರೆ ಉಪಪಟ್ಟಿಕೆಗಳಲ್ಲಿ ಟಿಪ್ಪಣಿಸಿಕೊಂಡು ಈ ಮಹಾಪ್ರಬಂಧವನ್ನು ಸಿದ್ಧಪಡಿಸಿಕೊಳ್ಳಲಾಗಿದೆ.

ಆಧುನಿಕ ಶಿಲ್ಪಗಳು ಕಳೆದ ಶತಮಾನದ ಮಧ್ಯಭಾಗದಲ್ಲಿ ಪಾಶ್ಚಾತ್ಯ ದೇಶದಲ್ಲಿ ಚಿತ್ರಕಲೆಯಲ್ಲಿ ಮಹತ್ತರ ಬದಲಾವಣೆಗಳು ಉಂಟಾಗಿ, 'ಕಲೆಗಾಗಿ ಕಲೆ' ಎಂಬ ಸಿದ್ಧಾಂತವನ್ನು ಅಂಗೀಕರಿಸಿ ಚಿತ್ರಕಲೆಯನ್ನು ಕೇವಲ ದೃಶ್ಯ ಮಾಧ್ಯಮವನ್ನಾಗಿಸುವ ಕ್ರಿಯೆ ಆರಂಭವಾಯಿತಾದರೂ ಶಿಲ್ಪದಲ್ಲಿ ಈ ಕ್ರಿಯೆ ಒಂದು ಘನ ಆಕಾರ (ಮಾಸ್) ಅದರ ಹೊರ ಹಾಗೂ ಒಳ ಅಂಚುಗಳು; ಮಾಧ್ಯಮಕ್ಕೆ ತಕ್ಕಂತೆ ಮೈವಳಿಕೆ, ರಚನೆಯ ನಂತರ ಇರಿಸುವ ಜಾಗ ಇತ್ಯಾದಿ ಹಲವಾರು ಪ್ರಾಮುಖ್ಯತೆಯನ್ನು ಪಡೆದವು. [ಪುಟ, 9, ಅದೇ]

ಶಿಲ್ಪವು ಅತ್ಯಂತ ಪ್ರಾಚೀನವಾದ ಶಬ್ದ, ಆದರೆ ಅದನ್ನು ವಿಭಿನ್ನ ಯುಗಗಳಲ್ಲಿ ವಿಭಿನ್ನವಾಗಿ ಅರ್ಥೈಸಲಾಗಿದೆ. ಶಿಲ್ಪ ಮತ್ತು ಕಲೆಯ ಪ್ರಾಚೀನತೆಯು ವೈದಿಕ ಯುಗದಷ್ಟು ಹಳೆಯದು. ವೈದಿಕಯುಗದ ಈ ಶಿಲ್ಪಕಲಾ ವಿಧಾನವು ಈ ಭೂಮಿಯ ಮೇಲೆ ಅಸ್ತಿತ್ವದಲ್ಲಿತ್ತು. ಆದರೆ ಅನಂತರ ಬೇರೆ

ವಿಷಯಗಳಂತೆಯೇ ಅದನ್ನು ಧರ್ಮ, ಅಧ್ಯಾತ್ಮ ಮತ್ತು ಶಾಸ್ತ್ರಗಳ ಬಂಧನದಲ್ಲಿ ಸಿಲುಕಿಸಿ, ಅದರ ಪ್ರಗತಿಯಲ್ಲಿ ತಡೆಯುಂಟು ಮಾಡಲಾಯಿತು. ವೈಥಿಕ ಯುಗದ ನಂತರ ಬ್ರಾಹ್ಮಣ ಯುಗದಲ್ಲಿ ಶಿಲ್ಪ ಶಬ್ಧವನ್ನು ನೃತ್ಯ, ಗೀತೆ ಮತ್ತು ವಾದ್ಯದ ಅರ್ಥದಲ್ಲಿ ಬಳಸಲಾಗುತ್ತಿತ್ತು. ಹೇಗೆಂದರೆ "ತ್ರಿವಿಧೊ ಶಿಲ್ಪಂ, ನೃತ್ಯಂ ಗೀತಂ–ವಾದಿತ್ರಮಿತಿ" (ಕೌಷೇಕರ್ಕಿ). ಈನೃತ್ಯ, ಗೀತೆ ಮತ್ತು ವಾದ್ಯಗಳನ್ನು, ಲಲಿತ ಕಲೆಗಳೆಂದು ಪರಿಗಣಿಸಲಾಯಿತು. 'ರಾಮಾಯಣ'ದಲ್ಲಿ ಶಿಲ್ಪ ಮತ್ತು ಕಲೆ ಈ ಎರಡೂ ಶಬ್ದಗಳನ್ನು ವಿಭಿನ್ನ ಅರ್ಥಗಳಲ್ಲಿ ಉಪಯೋಗಿಸಲಾಗಿದೆ. (ಲೇಖನ ಶಿಲ್ಪ ಮತ್ತು ವಿಶ್ವಕರ್ಮ– ಎನ್. ಮರಿಶಾಮಾಚಾರ್, ಶಿಲ್ಪಕಲಾ ಪ್ರಪಂಚ, ಪ್ರ. ಕ. ಲ. ಕ. ಅ. ಬೆಂ.).

ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ, ತಕ್ಷಕ ಎನ್ನುವ ವಿಭಾಗವನ್ನು ಶಿಲ್ಪಗಳಲ್ಲಿ ಮಾಡಿಕೊಳ್ಳಬಹುದು, ಅವರವರ ಸಾಮರ್ಥ್ಯ, ವೈಸಿಷ್ಟ್ಯ, ಕೌಶಲಗಲನ್ನನುಸರಿಸಿ ಈ ತಾರತಮ್ಯ ಏರ್ಪಡುತ್ತದೆ. ಶಿಲ್ಪದ ಕೆಲಸ ಆಗಬೇಕಾದಾಗ, ಎಲ್ಲರಿಗೂ ಮಾರ್ಗದರ್ಶನ ಮಾಡಿ ಎಲ್ಲರ ಮೇಲ್ವಿಚಾರಣೆ ನೋಡಿಕೊಳ್ಳುವವ ಸ್ಥಪತಿ, ಅಳತೆಗಲನ್ನು ನಿರ್ಧರಿಸಿ, ಚಿತ್ರವನ್ನು ಬರೆದು ಉಳಿದಿಬ್ಬರಿಗೆ ಮಾರ್ಗದರ್ಶನ ಮಾಡುವವ ಸೂತ, ಗ್ರಾಹಿ, ಸೂತ್ರಗ್ರಾಹಿಯನ್ನು 'ರೇಖಾಜ್ಞ' ನೆಂದು ಕರೆದಿದ್ದಾರೆ.

ಒಂದು ದೇಶದ ಇತಿಹಾಸವನ್ನು ಅಧ್ಯಯನ ಮಾಡುವಲ್ಲಿ, ದೇಶದ ಇಡೀ ಇತಿಹಾಸವನ್ನು ಒಬ್ಬ ವ್ಯಕ್ತಿ ಸಮಗ್ರವಾಗಿ, ವಿವರವಾಗಿ ಅಧ್ಯಯನ ಮಾಡುವುದು ಅಸಾಧ್ಯವಾಗಿರುವುದರಿಮದ ಆ ದೇಶದ ಇತಿಹಾಸವನ್ನು ಹಲವಾರು ಘಟ್ಟಗಳನ್ನಾಗಿ ವಿಂಗಡಿಸಿ ಕೆಲವಾರು ಹಂತಗಳಲ್ಲಿ, ಹತ್ತು ಹಲವಾರು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಣೆ ಮಾಡಲಾಗುತ್ತದೆ. ಈ ಎಲ್ಲಾ ರೀತಿಯ ಅಧ್ಯಯನಗಳನ್ನು ಸಮಗ್ರವಾಗಿ ಪರಿಶೀಲಸಿ ತುಲನಾತ್ಮಕವಾಗಿ ವಿವೇಚನೆ ಮಾಡಿದ ಇತಿಹಾಸವನ್ನು ಬರೆಯಬೇಕಾಗುತ್ತದೆ. (ಪುಟ 1, ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ: ಡಾ. ದೇವರ ಕೊಂಡಾರೆಡ್ಡಿ)

ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಅಧ್ಯಯನವನ್ನು ಕುರಿತು ಹೇಳುವುದಾದರೆ ವಸ್ತು ಮತ್ತು ಮೂರ್ತಿ ಶಿಲ್ಪಗಳ ಬದಲಾವಣಾ ಘಟ್ಟಗಳನ್ನು ಆಯಾಕಾಲದ ರಾಜವಂಶಗಳ ಹೆಸರಿನೊಂದಿಗೆ ಸಮೀಕರಿಸಲಾಗುತ್ತಿದೆ. ಈ ರೀತಿ ವಿಭಾಗಿಸುವಲ್ಲಿ ಮತ್ತು ಗುರುತಿಸುವಲ್ಲಿ ಔಚಿತ್ಯವೂ ಇದೆ.

ಆಶ್ರಯದಾತರು ಇಲ್ಲದೆ ಯಾವದೇ ಕಲೆ ಪ್ರವರ್ಧಮಾನಕ್ಕೆ ಬರವುದಿಲ್ಲ. ಪ್ರಾಚೀನ ಭಾರತದಲ್ಲಿ ಬಹುಪಾಲು ಎಲ್ಲಾ ಕಲಾ ಪ್ರಕಾರಗಳು ಹುಟ್ಟಿದ್ದು ಬೆಳೆದದ್ದು ರಾಜಾಶ್ರಯದಲ್ಲಿಯೇ. ಆಯಾ ರಾಜಮನೆತನಗಳ ಏಳುಬೀಳುಗಳ ಪ್ರಭಾವವು ಕಲಾ ಪ್ರಕಾರಗಳ ಮೇಲೂ ಆಗಿರುವುದು ಸ್ಪಷ್ಟವಾಗಿ ಗಮನಿಸಬಹುದಾದ **ಅಂಶವೇ ಆಗಿದೆ. ಆ ಕಲಾ ಪ್ರಕಾರಗಳ ಏಳುಬೀಳು ಮತ್ತು ಸ್ಥಿತಿಗತಿಗಳನ್ನು ಬಿಂಬಿಸುತ್ತವೆ. ಕೆಲವರು** ಖಾಸಗಿಯಾಗಿ ಕಲಾ ಪ್ರಕಾರಗಳಿಗೆ ಸಾಂಸ್ಕೃತಿಕ ಅಂಶಗಳಿಗೆ ನೆರವಾಗಿರುತ್ತಾರೆ. ಆದರ ಈ ಎಲ್ಲಾ ನೆರವು ಕಲಾವಿದರ ಕಲಾಕೃತಿಗಳ ಸಾಸಕೃತಿಕ ಅಂಶಗಳ ಸಂಖ್ಯೆಯನ್ನು ಹೆಚ್ಚಿಸಿರುತ್ತವೆಯೇ ಹೊರತು ಕಲಾ ಪ್ರಕಾರಗಳ ಒಲವುಗಳನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿರಲಿಲ್ಲ ಒಂದು ರಾಜ್ಯದ ನಿರ್ದಿಷ್ಟ ಕಲಾದ ಸಮೃದ್ಧಿ, ಸ್ಥಿರತೆ, ಅರಸನಾದವನ ಕಲಾಭಿರುಚಿ, ಧರ್ಮಉದ್ಧಿ ಇವುಗಳೂ ಆ ಕಾಲದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುತ್ತದೆ. (ಪುಟ 2, ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ; ಡಾ. ದೇವರ ಕೊಂಡಾರೆಡ್ಡಿ)

ದೊರೆತ ಇತಿಹಾಸ ಮೂಲಗಳಿಂದ ಕರ್ನಾಟಕವನ್ನು ಆಳಿದ ಪ್ರಮುಖ ರಾಜಮನೆತನಗಳೆಂದರೆ:

1. ಕದಂಬರು
2. ಗಂಗರು
3. ಚಾಲುಕ್ಯರು
4. ರಾಷ್ಟ್ರಕೂಟರು
5. ಕಲ್ಯಾಣಿಯ ಚಾಲುಕ್ಯರು
6. ವೆಂಗಿಯ(ಪೂರ್ವ)ಚಾಲುಕ್ಯರು
7. ಹೊಯ್ಸಳರು
8. ವಿಜಯನಗರದ ಅರಸರು
9. ಬಹಮನಿ ಸುಲ್ತಾನರು

10. ಬಿಜಾಪುರದ ಬಹಮನಿ ಸುಲ್ತಾನರು

11. ಮೈಸೂರು ಅರಸರು (ಕೆಲವು ವರ್ಷ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಹಾಗೂ ಬ್ರಿಟಿಷರು)

ಅಧ್ಯಾಯ – 2

ಮೈಸೂರು ಒಡೆಯರ ರಾಜಮನೆತನದ ಇತಿಹಾಸ

ಅಧ್ಯಾಯ – 2

ಮೈಸೂರು ಒಡೆಯರ ರಾಜಮನೆತನದ ಇತಿಹಾಸ

ಮೈಸೂರು ಸಂಸ್ಥಾನ: (1399–1947)

ದಕ್ಷಿಣ ಭಾರತದಲ್ಲಿ ಬಹಳವರ್ಷಗಳವರೆಗೆ ಆಳ್ವಿಕೆ ನಡೆಸಿದ ಒಂದು ಸಾಮ್ರಾಜ್ಯ ಎಂದರೆ ಅದು ಮೈಸೂರು ಸಂಸ್ಥಾನವಾಗಿದೆ.

1399ರಲ್ಲಿ ಯದುರಾಯರಿಂದ ಸ್ಥಾಪಿಸಲಾದ ಈ ಸಂಸ್ಥಾನ, ಒಡೆಯರ್ ರಾಜಮನೆತನದಿಮದ ಆಳಲ್ಪಟ್ಟಿತು. 1565ರವರೆಗೆ ವಿಯನಗರ ಸಾಮ್ರಾಜ್ಯದ ಸಾಮಂತ ರಾಜ್ಯವಾಗಿದ್ದು, ಮುಂದೆ ಸ್ವತಂತ್ರ ರಾಜ್ಯವಾಯಿತು. 1965ರ ನಂತರ ವಿಜಯನಗರ ಸಾಮ್ರಾಜ್ಯದ ಅಳಿವಿನ ಜೊತೆಯಲ್ಲಿ ಮೈಸೂರು ಸಂಸ್ಥಾನವು ಸ್ವತಂತ್ರ ಸಂಸ್ಥಾನವಾಯಿತು.

1. **ಯದುರಾಯ** (1399–1423)
2. **ಬೆಟ್ಟದ ಚಾಮರಾಜ ಒಡೆಯರು** (1423–1459)
3. **ತಿಮ್ಮರಾಜ ಒಡೆಯರು** (1459–1478)
4. **ಹಿರಿಯ ಚಾಮರಾಜ ಒಡೆಯರು** (1478–1513)
5. **ಹಿರಿಯ ಬೆಟ್ಟದ ಚಾಮರಾಜ ಒಡೆಯರು** (1513–1553)
6. **ತಿಮ್ಮರಾಜ ಒಡೆಯರು**
7. **ಬೋಳ ಚಾಮರಾಜ ಒಡೆಯರು**
8. **ಬೆಟ್ಟದ ಚಾಮರಾಜ ಒಡೆಯರು** (ಈ ಮೂವರು 1553–1578)
9. **ರಾಜ ಒಡೆಯರು** (1578–1618) ನಲ್ವತ್ತು ವರ್ಷಗಳ ದೀರ್ಘಕಾಲದ ಆಳ್ವಿಕೆ
10. **ಚಾಮರಾಜ ಒಡೆಯರು** (1617–1637)

11. **ಎರಡನೆಯ ರಾಜ ಒಡೆಯರು** (1637-1638) ಕೇವಲ 1 ವರ್ಷದ ಆಳ್ವಿಕೆ

12. **ರಣಧೀರ ಕಂಠೀರವ ನರಸರಾಜ ಒಡೆಯರು** (1638-1659)

13. **ದೊಡ್ಡದೇವರಾಜ ಒಡೆಯರು** (1659-1673)

14. **ಚಿಕ್ಕದೇವರಾಜ ಒಡೆಯರು** (1673-1704)

15. **ಚಿಕ್ಕದೇವರಾಜ ಒಡೆಯರ ಮೂಕ ಮಗ** (1704-1714)ತಾಯಿ, ಮಂತ್ರಿಗಳ ಸಹಕಾರದೊಂದಿಗೆ

16. **ದೊಡ್ಡ ಕೃಷ್ಣರಾಜ ಒಡೆಯರು** (1714-1734)

17. **ಅಂಕನಹಳ್ಳಿ ಚಾಮರಜ ಒಡೆಯರು**

18. **ಇಮ್ಮಡಿ ಕೃಷ್ಣರಾಜ ಒಡೆಯರು** (ಇಬ್ಬರು ದತ್ತು ಪುತ್ರರು, 1766ರವರೆಗೆ ಅಂದಿನ ಆಡಳಿತ ಮಂತ್ರಿಗಳ ಕುತಂತ್ರಕ್ಕೊಳಪಟ್ಟಿದ್ದು ವಿವರಗಳು ಕಡಿಮೆ)

19. **ನಂಜರಾಜ ಒಡೆಯರು** (1766-70)

20. **ಬೆಟ್ಟದ ಚಾಮರಾಜ ಒಡೆಯರು** (1770-1776)

21. **ಖಾಸ ಚಾಮರಾಜ ಒಡೆಯರು** (1776-1796) ಮೈಸೂರು ಸಂಸ್ಥಾನ ಬ್ರಿಟಿಷರ ಅಧೀನದಲ್ಲಿದ್ದಾಗ..

22. **ಮುಮ್ಮಡಿ ಕೃಷ್ಣರಾಜ ಒಡೆಯರು** (1799ರಲ್ಲಿ ಪಟ್ಟಕ್ಕೆ ಬಂದಾಗ ಕೇವಲ 5 ವರ್ಷದವರು)ಅವರು ಸ್ವತಂತ್ರವಾಗಿ ಆಡಳಿತ ನಿರ್ವಹಿಸಿದ್ದು 1810ರಿಂದ ಬ್ರಿಟಿಷರ ತಂತ್ರದಿಂದ ಮುಮ್ಮಡಿ ಕೃಷ್ಣರಾಜ ಒಡೆಯರು ಆಡಳಿತವನ್ನು ಬ್ರಿಟಿಷ್ ಕಮಿಷನರಿಗೆ (1810-1881) ಬಿಟ್ಟುಕೊಡಲಾಯಿತು.

21. **ಚಾಮರಾಜ ಒಡೆಯರು** (1881-1902)

22. **ನಾಲ್ವಡಿ ಕೃಷ್ಣರಾಜ ಒಡೆಯರು** (1902-1940)

23. **ಜಯಚಾಮರಾಜ ಒಡೆಯರು** (1940ರಿಂದ ಪ್ರಜಾತಂತ್ರ ಸ್ಥಾಪನೆಯಾಗುವವರೆಗೆ, ನಂತರವೂ ರಾಜ ಪ್ರಮುಖರಾಗಿ, ರಾಜ್ಯಪಾಲರಾಗಿ ನಾಡಿಗೆ ಸೇವೆ ಸಲ್ಲಿಸಿದರು. ಮದರಾಸು ರಾಜ್ಯದ ರಾಜ್ಯಪಾಲಾಗಿ ನಿವೃತ್ತರಾದರು.. ನಂಜರಾಜ ಒಡೆಯರ ಕಾಲಕ್ಕೆ ಹೈದರಾಲಿಯು ಪ್ರಬಲನಾಗಿ ಮೈಸೂರು ಸಂಸ್ಥಾನದ ಆಡಳಿತವನ್ನು ಕೈಗೆ ತೆಗೆದುಕೊಂಡನು. 1782ರಲ್ಲಿ ಅವನು ಮರಣ ಹೊಂದಿದನು. ನಂತರ ಅವನ ಮಗ ಟಿಪ್ಪು ಸುಲ್ತಾನನು ಸಂಸ್ಥಾನದ ಸವಾಧಿಕಾರಿಯಾಗಿ ಆಡಳಿತ ನಡೆಸುತ್ತಿದ್ದುದರಿಂದ, ನಂಜರಾಜರು, ಬೆಟ್ಟದ ಚಾಮರಾಜರು, ಖಾಸಾ ಚಾಮರಾಜರು ಕೇವಲ ಹೆಸರಿಗೆ ಮಾತ್ರ ರಾಜರಾಗಿದ್ದರು..

ಸಂಶೋಧನೆಗಳಲ್ಲಿ ಕಂಡುಬರುವ ಅಧ್ಯಯನಗಳ ಸಮೀಕರಣಗಳ ಮೇಲೆ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತದೆ. ಸತ್ಯ ಮತ್ತು ವಸ್ತುನಿಷ್ಟವಾದ ಅಂಶಗಳನ್ನು ಓರೆಗಚ್ಚಿ ನೋಡಿದಾಗ ಅವುಗಳ ಪ್ರಾಮುಖ್ಯತೆಗಳಿಗೆ ಒತ್ತು ನೀಡುವುದರೊಂದಿಗೆ ಮತ್ತು ಫಲಿತಾಂಶಗಳನ್ನು ಆಧರಿಸಿ ನಿರ್ಣಯಗಳನ್ನು ಒಪ್ಪಲಾಗುತ್ತದೆ.

ಮೈಸೂರು ಒಡೆಯರ ಕಾಲದ ಶಿಲ್ಪಕಲೆಯ ಇತಿಹಾಸವನ್ನು ಅಧ್ಯಯನವನ್ನು ಪ್ರಮುಖವಾಗಿ ಮೂರು ಹಂತಗಳಲ್ಲಿ ವಿಂಗಡಿಸಿಕೊಂಡು ಸಂಶೋಧನೆಗೆ ಅಳವಡಿಸಿಕೊಳ್ಳಲು ಅವಶ್ಯಕತೆ ಇರುವುದು ಸೂಕ್ತವೆನಿಸುತ್ತದೆ. ಅವುಗಳೆಂದರೆ..

1. ಮೈಸೂರ ರಾಜ್ಯವನ್ನು ಆಳಿದ ರಾಜವಂಶಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ಇತಿಹಾಸ
2. ಕಾಲವನ್ನು ಆಧಾರವಾಗಿಟ್ಟುಕೊಂಡು ರಚಿತವಾದ ಇತಿಹಾಸ
3. ಸಾಂಸ್ಕೃತಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ಇತಿಹಾಸ.

ಕರ್ನಾಟಕ ಕಲಾ ಪ್ರಪಂಚಕ್ಕೆ ಮೈಸೂರು ಅರಸರ ಕೊಡುಗೆಗಳು ಬಹಳ ಅಪಾರವಾದುದ್ದು..

ಸಾಹಿತ್ಯ, ಚಿತ್ರಕಲೆ, ಶಿಲ್ಪಕಲೆ ಮತ್ತು ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಗಳಲ್ಲಿ ಗುರತರವಾದ ಕೊಡುಗೆಯನ್ನು ಮೈಸೂರು ಅರಸರು ನೀಡಿರುವುದಕ್ಕೆ ಇಂದಿಗೂ ಅವರ ಹೆಸರು ಅಜರಾಮರವಾಗಿ ಉಳಿದುಕೊಂಡಿದೆ.

ವಿಜಯನಗರದ ಸಾಮಂತ ಅರಸರಾಗಿ ಅಸ್ತಿತ್ವವನ್ನು ಕಂಡುಕೊಂಡು ಇವರು ವಿಜಯನಗರದ ಅರಸರ ಅಂತ್ಯಗೊಂಡ ನಂತರ ಮೈಸೂರು ಅರಸರ ಸ್ವತಂತ್ರ ಆಳ್ವಿಕೆಯನ್ನು ನಡೆಸಿದರು.

ಪ್ರಪಂಚದ ರಾಜಮನೆತನದ ಇತಿಹಾಸದಲ್ಲಿ ಭಾರತೀಯರ ಹೆಮ್ಮೆಯ ಮೈಸೂರು ಒಡೆಯರ ಆಳ್ವಿಕೆಗೆ ಮಹತ್ತರವಾದ ಸ್ಥಾನವಿದೆ. ಹಾಗೆಯೇ ಸಾಂಸ್ಕೃತಿಕ ಮತ್ತು ಕಲಾ ಇತಿಹಾಸದಲ್ಲಿ ಮೈಸೂರು ಕಾಲದ ಕಲೆಗೆ ಒಂದು ವಿಶಿಷ್ಟ ಸ್ಥಾನವಿದೆ. ಆ ಕಾಲಘಟ್ಟದಲ್ಲಿನ ಅಪರಿಮಿತವಾದ ಕಲಾಚಟುವಟಿಕೆಗಳು ಮೈಸೂರು ಕಲೆಯ ವಿವಿಧ ಹಂತಗಳನ್ನು ಕ್ರೋಢೀಕರಿಸಲಾಗಿದೆ.

ಗಂಗ, ಕದಂಬ, ಚಾಲುಕ್ಯ, ವಿಜಯನಗರ, ಹೊಯ್ಸಳ ಕಲಾಶೈಲಿಯ ಮತ್ತು ವಾಸ್ತುಶೈಲಿಯ ಮೂಲಕ ಅವುಗಳ ಪ್ರಭಾವ ಮತ್ತು ಹಿನ್ನಲೆಯಿಂದ ಆರಂಭಗೊಂಡ ಹಾಗೂ ಆಯಾ ಕಾಲಘಟ್ಟದ ಮೊಗಲ್ ಹಾಗೂ ಇಸ್ಲಾಮಿಕ್ ಕಲಾಶೈಲಿಗಳನ್ನು ಅವಶ್ಯಕತೆಗನುಗುಣವಾಗಿ ಅನುಸರಿಸಿ ಉಪಯೋಗಿಸಿಕೊಂಡು ವಿಜಯನಗರದ ಮುಂದುವರೆದ ಪುನರುಜ್ಜೀವನದ ಮೈಸೂರು ಕಲೆಯೇ ಎನ್ನುವಂತಹ ವೈಶಿಷ್ಯತೆಗಳಿಂದ ಕೂಡಿದ ವಿಶೇಷ ಕಲಾ ಮಾರ್ಗವನ್ನು ಹೊಂದಿದಂತಹ ಕಲಾಶೈಲಿಯನ್ನು

"ಮೈಸೂರು ಶೈಲಿ" ಎಂಬುದಾಗಿ ಐತಿಹಾಸಿಕವಾಗಿ ಮುಂದುವರೆದುಕೊಂಡು ಬಂದಿದೆ.

ಮೈಸೂರಿನ ಅರಸರು ವಿಜಯನಗರದ ಸಾಮಂತ ಅರಸರಾಗಿದ್ದರೂ ಕೂಡ, ಅವರದೇ ಆದ ಸ್ವಾಯತ್ತ ಸಂಸ್ಥಾನವನ್ನಾಗಿ ಮಾಡಿಕೊಂಡು ಮುಂದುವರೆದಿದ್ದರು. ಮೈಸೂರು ಅರಸರ ಕಾಲದಲ್ಲಿ ಅವರ ರಾಜ್ಯಭಾರದ ವ್ಯಾಪ್ತಿಯಷ್ಟು ಉದ್ದಲಕ್ಕೂ ತಮ್ಮದೇ ಆದ ವಿಶಿಷ್ಟವಾದ ಕಲಾ ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಯುತ್ತಿರುವ ಹಾಗೆ ನೋಡಿಕೊಂಡಿದ್ದರು. ಯದುವಂಶದ ರಾಜರು

ಮಾತ್ರ ಮೈಸೂರು ರಾಜ ಮನೆತನವನ್ನು ಆಳಿದ್ದರೂ, ಕೆಲಕಾಲ ಹೈದರಾಲಿ, ಟಿಪ್ಪುಸುಲ್ತಾನ್ ಮತ್ತು ಬ್ರಿಟಿಷ್ ಕಮೀಷನರುಗಳ ಆಳ್ವಿಕೆಯನ್ನು ಮೈಸೂರು ರಾಜ್ಯ ಕಂಡಿದೆ.

ಅಧ್ಯಾಯ – 3

ಮೈಸೂರು ಅರಮನೆ ಮತ್ತು ಕೋಟೆ

ಅಧ್ಯಾಯ – 3

ಮೈಸೂರು ಅರಮನೆ ಮತ್ತು ಕೋಟೆ

ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿಗರ ಸ್ವರ್ಗವೆನ್ನಿಸಿಕೊಂಡಿರುವ, ಉದ್ಯಾನನಗರಿಯಾಗಿರುವ ಮೈಸೂರಿಗೆ ಚಾಮುಂಡಿಬೆಟ್ಟದ ರೂಪದಲ್ಲಿ ನೈಸರ್ಗಿಕವಾದ ಹಾಗೂ ಕಲಾತ್ಮಕವಾದ ಹಿನ್ನಲೆಯಿದ. ಈ ಬೆಟ್ಟದಲ್ಲಿಯೇ ಮೈಸೂರಿನ ಹಾಗೂ ಅದರ ರಾಜ ಮನೆತನದ ಅಧಿಷ್ಠಾತ್ರಿ ದೇವತೆ ಚಾಮುಂಡೇಶ್ವರಿ ನೆಲೆಸಿದ್ದಾಳೆ. ಈ ನಗರ ತನ್ನ ಪ್ರಾಚೀನ ಪರಂಪರೆಯನ್ನು ಅಲ್ಲಿಂದಲೇ ಪಡೆದುಕೊಂಡಿದೆ. ಬೌದ್ಧ ಧರ್ಮ ಪ್ರಸಾರಕ್ಕಾಗಿ ಅಶೋಕನು ಮಹಿಷ ಮಂಡಲಕ್ಕೆ ಬೌದ್ಧ ಧರ್ಮಪ್ರಚಾರಕನಾದ ಮಹಾದೇವನನ್ನು ಕಳುಹಿಸಿದುದಾಗಿ ಬೌದ್ಧ ಧರ್ಮ ಗ್ರಂಥಗಳಾದ ಮಹಾವಂಶ ಮತ್ತು ದೀಪವಂಶಗಳಲ್ಲಿ ಸೂಚಿಸಲಾಗಿದೆ. ಮಹಿಷ ಮಂಡಲವೇ ಮಹಿಷಾಸುರನ ನಗರವಾದ "ಮಹಿಷೂರು"ಅಂದರೆ ದುರ್ಗೆಯು ಮಹಿಷಾಸುರನನ್ನು ಸಂಹರಿಸಿ, ಚಾಮುಂಡಿಯ ರೂಪದಲ್ಲಿ ಬೆಟ್ಟದ ಮೇಲೆ ನೆಲೆಗೊಂಡ ಸ್ಥಾನ ಎಂದು ಗುರುತಿಸಲಾಗಿದೆ.

ಚಾಮುಂಡಿ ಬೆಟ್ಟದ ಮೇಲೆ ಇರುವ ಮಹಾಬಲೇಶ್ವರ ದೇವಸ್ಥಾನ ಈನಗರದಲ್ಲಿ ಅತ್ಯಂತ ಪ್ರಾಚೀನ ದೇವಾಲಯ. ಮಹಾಬಲೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ಕ್ರಿ.ಶ.೯೫೦ರ ಒಂದು ಶಾಸನ ಇದೆ. ಇದರ ಪ್ರಕಾರ ಈ ಪವಿತ್ರ ತಾಣವು "ಮೊಬ್ಬೆಲ ತೀರ್ಥ" ಎಂಬ ಹೆಸರಿನಿಂದ ಪರಿಚಿತವಾಗಿತ್ತು. ಇದು ಪ್ರಾಯಶಃ ಮಹಾಬಲ ತೀರ್ಥದ ಅಪಭ್ರಂಶ ರೂಪ. ಖ್ಯಾತ ಹೊಯ್ಸಳ ದೊರೆ ವಿಷ್ಣುವರ್ಧನನು ಮಹಾಬಲ ತೀರ್ಥಕ್ಕೆ ಮಾಡಿದ ದಾನಗಳ ಬಗ್ಗೆ ಇದೇ ದೇವಸ್ಥಾನದಲ್ಲಿರುವ ಕ್ರಿ.ಶ.1128ರ ಶಾಸನದಿಂದ ತಿಳಿದುಬರುತ್ತದೆ.

ಪ್ರಸಿದ್ಧವಾದ ಮತ್ತೊಂದು ದೇವಸ್ಥಾನವೆಂದರೆ ಮೈಸೂರು ನಗರದ ದೊಡ್ಡಕೆರೆಯ ದಡದಲ್ಲಿರುವ ಕೋಡಿ ಭೈರವೇಶ್ವರ ದೇವಸ್ಥಾನ. ಈ ಗುಡಿಗೂ ಮೈಸೂರು ಒಡೆಯರ ಅರಸು ಮನೆತನದ ಸಂಸ್ಥಾಪನೆಗೂ ನಿಕಟವಾದಸಂಬಂಧವಿದೆ. ಪರಿಂಪರೆಯ ಪ್ರಕಾರ ಕ್ರಿ.ಶ. 1399ರಲ್ಲಿ ಯದುರಾಯ ಮತ್ತು

ಕೃಷ್ಣರಾಯ ಎಂಬ ಇಬ್ಬರು ಸೋದರರು ವಿಜಯ ಮತ್ತು ಕೃಷ್ಣ ಎಂದೂ ಪ್ರಖ್ಯಾತರಾಗಿದ್ದಾರೆ. ಇವರು ಮೇಲುಕೋಟೆಯ ನಾರಾಯಣಸ್ವಾಮಿಯನ್ನು ಪೂಜಿಸಲು ಗುಜರಾತಿನ ದ್ವಾರಕೆಯಿಂದ ವಿಜಯನಗರದ ಮಾರ್ಗವಾಗಿ ಬಂದರು ಮಹಿಷೂರಿನ(ಮೈಸೂರಿನ) ಸೌಂದರ್ಯದಿಂದ, ಮೋಹಿತರಾದ ಅವರು ಇದನ್ನೇ ತಮ್ಮ ಬೀಡನ್ನಾಗಿ ಮಾಡಿಕೊಂಡರು. ಓರ್ವ ಜಂಗಮನ ಆಗಮನಕ್ಕಾಗಿ ಕಾಯಬೇಕೆಂದು ಆ ರಾತ್ರಿಯನ್ನು ಕೋಡಿ ಭೈರವೇಶ್ವರನ ದೇವಸ್ಥಾನದಲ್ಲಿ ಕಳೆಯಬೇಕೆಂದೂ ಅವರಿಗೆ ಕನಸಿನಲ್ಲಿ ಸೂಚನೆ ದೊರಕಿತು.ಮೈಸೂರಿನ ಸಣ್ಣ ಪ್ರಾಂತ್ಯದ ಅರಸಿಯಾಗಿದ್ದ ದೇವರಾಜಮ್ಮಣ್ಣಿಯವರು ಕಷ್ಟದ ಮತ್ತು ಬಿಕ್ಕಟ್ಟಿನ ಸನ್ನಿವೇಶದಲ್ಲಿ ಸಿಲುಕಿಕೊಂಡಿದ್ದ ಬಗ್ಗೆ ಮುಂಜಾವಿನ ಸಮಯದಲ್ಲಿ ಸಂಭಾಷಣೆಯೊಂದು ಅವರ ಕಿವಿಗೆ ಬಿತ್ತು. ಆ ಹೊತ್ತಿಗೆ ದೊರೆ ಚಾಮರಾಜ ಕಾಲವಾಗಿದ್ದರು. ಕಾರುಗಳ್ಳಿಯ ದಳವಾಯಿಯಾದ ಮಾರನಾಯಕ ತಾನು ರಾಜನಾಗುವುದಕ್ಕೆ ಅನುಕೂಲವಾಗುವಂತೆ ತಮ್ಮ ಮಗಳನ್ನು ವಿವಾಹ ಮಾಡಿಕೊಡಬೇಕೆಂದು ಚಾಮರಾಜರ ರಾಣಿಯನ್ನು ಪೀಡಿಸುತ್ತಿದ್ದ. ಕುಲ ಪುರೋಹಿತರನ್ನು ಕೋಡಿ ಭೈರವೇಶ್ವರ ದೇವಸ್ಥಾನಕ್ಕೆ ಕಳುಹಿಸಬೇಕೆಂದು ರಾಣಿಗೆ ಆಕೆಯ ಮನೆ ದೇವತೆ ಕನಸಿನಲ್ಲಿ ಸೂಚಿಸಿದಳು. ಪುರೋಹಿತರು ಅಮೆನಯ ಪರಿಸ್ಥಿತಿಯ ಬಗ್ಗೆ ಆ ಸೋದರರಿಗೆ ಮನದಟ್ಟು ಮಾಡಿಕೊಟ್ಟರು. ವಿವಾಹದ ಸಮಾರಂಭದಲ್ಲಿ ಪಾಲ್ಗೊಳ್ಳುವ ನೆಪದಲ್ಲಿ ರಾಣಿ ಮೈಸೂರಿನಿಂದ 25 ಕಿ.ಮೀ ದೂರವಿರುವ ಹದಿನಾರು ಎಂಬ ಸಣ್ಣ ಗ್ರಾಮಕ್ಕೆ ಪುರೋಹಿತರ ಜೊತೆಯಲ್ಲಿ ತೆರಳಿದಳು. ಅಲ್ಲಿ ಮಾರನಾಯಕನನ್ನು , ಆತನ ಅನುಚರರನ್ನು ಕೊಂದು ಹಾಕಲಾಯಿತು. ರಾಜಕುಮಾರಿ ದೇವರಾಜಮ್ಮಣ್ಣಿಯನ್ನು ಯದುರಾಜನಿಗೆ ವಿವಾಹ ಮಾಡಿಕೊಡಲಾಯಿತು. ಈ ರೀತಿಯಲ್ಲಿ ಯದುರಾಜನೇ ಮೈಸೂರು ಅರಸು ಮನೆತನದ ಸಂಸ್ಥಾಪಕನಾದ.

ಮೈಸೂರಿನ ಅರಸು ಮನೆತನ:

ಕ್ರಿ.ಶ. 1399ರಲ್ಲಿ ಯದುರಾಯನಿಂದ ನೆಲೆಗೊಂಡ ಮೈಸೂರಿನ ಅರಸು ಮನೆತನದಲ್ಲಿ ಈವರೆಗೆ 25ದೊರೆಗಳು ಆಗಿ ಹೋಗಿದ್ದಾರೆ. ಕ್ರಿ.ಶ. 1578ರಲ್ಲಿ ರಾಜ ಒಡೆಯರು ಪ್ರಾಬಲ್ಯಕ್ಕೆ ಬರುವವರೆವಿಗೂ

ಮೈಸೂರು ರಾಜ್ಯ ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿದ್ದ ಸಣ್ಣ ಸಾಮಂತ ರಾಜ್ಯವಾಗಿಯೇ ಇದ್ದಿತ್ತು. ಕ್ರಿ.ಶ. 1565ರಲ್ಲಿ ವಿಜಯನಗರದ ಪತನವಾಗುತ್ತಿದ್ದಂತೆಯೇ ಮೈಸೂರಿನ ಒಡೆಯರು ವಿಜಯನಗರದ ಪರಂಪರೆ ಸಂಪ್ರದಾಯಗಳನ್ನು ಉತ್ತರಾಧಿಕಾರದ ರೂಪದಲ್ಲಿ ಪಡೆದರು ಮತ್ತು ಅವನ್ನು ಮುಂದುವರೆಸಿಕೊಂಡು ಬಂದರು. ಕ್ರಿ.ಶ. 1610ರಲ್ಲಿ ರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ವೈಭವ ವಿಜೃಂಭಣೆಗಳೊಡನೆ ಸಿಂಹಾಸನರೋಹಣ ಮಾಡಿದರು. ಆಗ ಶ್ರೀರಂಗಪಟ್ಟಣ ಮೈಸೂರಿನ ರಾಜಧಾನಿಯಾಗಿತ್ತು. ಅವರೇ ದಸರಾ ಉತ್ಸವಗಳನ್ನು ಪ್ರಾರಂಭಿಸಿದರು. ಅದನ್ನು ಇಂದಿಗೂ ಸಕಲ ವೈಭವಗಳಿಂದ ಆಚರಿಸಲಾಗುತ್ತಿದೆ. ರಾಜ ಒಡೆಯರ ಅನಂತರ ಮೈಸೂರಿನ ಸಾಂಸ್ಕೃತಿಕ ಪರಂಪರೆಗೆ ಕೊಡುಗೆಯಿತ್ತ ಅತ್ಯಂತ ಪ್ರಸಿದ್ಧರಾದ ದೊರೆಗಳು ಎಂದರೆ:

ರಣಧೀರ ಕಂಠೀರವ ನರಸರಾಜ ಒಡೆಯರು (ಕ್ರಿ.ಶ. 1638-1659)

ಚಿಕ್ಕ ದೇವರಾಜ ಒಡೆಯರು (ಕ್ರಿ.ಶ.1673-1704)

ಮುಮ್ಮಡಿ ಕೃಷ್ಣರಾಜ ಒಡೆಯರು (ಕ್ರಿ.ಶ. 1799-1868)

ನಾಲ್ವಡಿ ಕೃಷ್ಣರಾಜ ಒಡೆಯರು (ಕ್ರಿ.ಶ. 1902-1940) ಮತ್ತು

ಶ್ರೀ ಜಯಚಾಮರಾಜೇಂದ್ರ ಒಡೆಯರು (1940ರಿಂದ ಭಾರತ ಗಣರಾಜ್ಯ ಸ್ಥಾಪನೆಯಾಗುವವರೆಗೆ)

1761ರಿಂದ 1799ರವರೆಗಿನ ಅವಧಿಯಲ್ಲಿ ಒಡೆಯರ ಅನುವಂಶಿಕ ಆಳ್ವಿಕೆಯಲ್ಲಿ ವಿಚ್ಛಿತ್ತಿಯುಂಟಾಗಿತ್ತು. ಈ ಅವಧಿಯಲ್ಲಿ ವಾಸ್ತವವಾಗಿ ಹೈದರಾಲಿ ಮತ್ತು ಅವನ ಸುವಿಖ್ಯಾತ ಪುತ್ರ ಟಿಪ್ಪು ಸುಲ್ತಾನ ರಾಜ್ಯದ ಆಳ್ವಿಕೆಗಾರರಾಗಿದ್ದರು. 1799ರಲ್ಲಿ ಬ್ರಿಟಿಷರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡಾಗ ಟಿಪ್ಪುವಿನ ಪತನವಾಯಿತು. ಐದು ವರ್ಷ ವಯಸ್ಸಿನ ರಾಜಕುಮಾರ ಮುಮ್ಮಡಿ ಕೃಷ್ಣರಾಜ ಒಡೆಯರನ್ನು 1799ರಲ್ಲಿ ಅವರ ಪೂರ್ವಜರ ಸಿಂಹಾಸನಕ್ಕ ಒಡೆಯರನ್ನಾಗಿ ಸಂಸ್ಥಾಪಿಸಲಾಯಿತು.

ಮೈಸೂರು ಅರಮನೆ – ಅದರ ಇತಿಹಾಸ ಮತ್ತು ವಾಸ್ತುಶಿಲ್ಪ ಹಳೆಯ ಅರಮನೆ

ಹದಿನಾಲ್ಕನೇ ಶತಮಾನದಲ್ಲಿ ರಾಜರು ಮೈಸೂರಿನಲ್ಲಿ ಒಂದು ಅರಮನೆಯಲ್ಲಿ ವಾಸಿಸುತ್ತ ಇದ್ದರು ಎಂದು ಶ್ರೀ ಮನ್ಮಹಾರಾಜರ ವಂಶಾವಳಿ(ಅನಾಲ್ಸ್ ಆಫ್ ದಿ ಮೈಸೂರ್ ರಾಯಲ್ ಫ್ಯಾಮಿಲಿ) ನಮಗೆ ತಿಳಿಸುತ್ತದೆ. ಆದರೆ ಸಿಡಿಲು ಬಡಿದು ಅದು ನಾಶಗೊಂಡ ಮೇಲೆ, ರಣದೀರ ಕಂಠೀರವ ನರಸರಾಜ ಒಡೆಯರು ಕ್ರಿ.ಶ. 1638 ಸುಮಾರಿನಲ್ಲಿ ಅದರ ಪುನರ್ ನಿರ್ಮಾಣ ಮಾಡಿದರು. ಮೈಸೂರು ಅರಮನೆಯ ಬಗ್ಗೆ ಮೊತ್ತ ಮೊದಲ ಖಚಿತವಾದ ಉಲ್ಲೇಖ ನಮಗೆ ಲಭಿಸುವುದು ಇಲ್ಲಿಯೇ. ಸೌಂದರ್ಯ ವಿಲಾಸ, ನಾಮ ತೀರ್ಥ ಮತ್ತು ಇತರ ತೊಟ್ಟಿಗಳನ್ನು ಪುನರ್ ನಿರ್ಮಿಸಿದ ಹಾಗೂ ಪುನರ್ ನಿರ್ಮಿತ ಅರಮನೆಯ ಸುತ್ತ ಹನ್ನೊಂದು ಫಿರಂಗಿಗಳನ್ನು ಇರಿಸಿದ(ಇವುಗಳ ಪ್ರತಿಯೊಂದಕ್ಕೂ ಪ್ರತ್ಯೇಕವಾದ ಹೆಸರಿತ್ತು)ಕೀರ್ತಿಗೆ ಅವರು ಪಾತ್ರರಾಗಿದ್ದಾರೆ. ಅವುಗಳ ಪೈಕಿ ಮುಖ್ಯವಾದವುಗಳ ಹೆಸರು ಹೀಗಿವೆ. ರಾಮಚಂದ್ರ, ಮುದ್ದುಕೃಷ್ಣ ಮತ್ತು ಸಿಂಹ.

ಪ್ರಧಾನಿ ಹೈದರಾಲಿ ಕ್ರಿ.ಶ. 1760ರಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರನ್ನು ರಾಜಧಾನಿ ಮೈಸೂರಿಗೆ ಹಾಗೂ ಅರಮನೆಗೆ ಭೇಟಿ ನೀಡುವಂತೆ ಆಹ್ವಾನಿಸಿದ. ನಜರ್‌ಬಾದ್ ಎಂಬ ಹೆಸರಿನಲ್ಲಿ ಹೊಸ ನಗರವನ್ನು ಕಟ್ಟಿಸುವ ಸಲುವಾಗಿ 1793ರಲ್ಲಿ ಟೀಪೂ ಸುಲ್ತಾನನು ದೇವಸ್ಥಾನಗಳನ್ನು ಹೊರತು ಪಡಿಸಿ ಅರಮನೆಯೂ ಸೇರಿದಂತೆ ಎಲ್ಲ ಹಳೆಯ ಹಾಗೂ ಶಿಥಿಲಗೊಂಡಿದ್ದ ಕಟ್ಟಡಗಳನ್ನು ತೆಗೆಸಿ ಹಾಕಿದನು ಎನ್ನಲಾಗಿದೆ. 1799ರಲ್ಲಿ ಕೂಡ ಅರಮನೆ ಎಂಬ ಹೆಸರಿಗೆ ತಕ್ಕುದಾದ ಭವನ ಮೈಸೂರಿನಲ್ಲಿ ಇದ್ದಂತೆ ಕಾಣುವುದಿಲ್ಲ. ಏಕೆಂದರೆ 1799ರಲ್ಲಿ ಯುವರಾಜರ ಪಟ್ಟಾಭಿಷೇಕ ಸಮಾರಂಭಕ್ಕೆ ಸೂಕ್ತವಾದ ಕಟ್ಟಡವಿರಲಿಲ್ಲ ಹೀಗಾಗಿ ನಜರ್‌ಬಾದಿನಲ್ಲಿ ನಿರ್ಮಿಸಲಾದ ಚಪ್ಪರವೊಂದರಲ್ಲಲಿ ಆ ಸಮಾರಂಭವನ್ನು ನಡೆಸಬೇಕಾಯಿತು ಎಂದು ಡ್ಯೂಕ್ ಆಫ್ ವೆಲ್ಲಿಂಗಟನ್ ಸ್ಪಷ್ಟವಾಗಿ ಹೇಳಿದ್ದಾನೆ. 1801ರ ಮೇ 26ರಂದು ಡ್ಯೂಕನು ಅಗ ಕರ್ನಲ್ ಆರ್ಥರ್ ವೆಲ್ಲೆಸ್ಲಿ ತನ್ನ ಸೋದರ ಹೆನ್ರಿಗೆ ಬರೆದ ಪತ್ರದಲ್ಲಿ ಈ ರೀತಿ ತಿಳಿಸಿದ್ದಾನೆ. "ಹಳೆಯ ಮೈಸೂರಿನಲ್ಲಿ ಇದ್ದ ಹಳೆಯ ಅರಮನೆಯನ್ನು ಅದು ಯಾವ ರೀತಿಯಿತ್ತೋ ಹಾಗೆಯೇ ಪುನರ್ ನಿರ್ಮಿಸಲಾಗಿದ್ದು ರಾಜಮನೆತನದವರು ಅಲ್ಲಗೆ ಹೋಗಿದ್ದಾರೆ. ಅದನ್ನು ಹಳೆಯ ಬುನಾದಿಯ ಮೇಲೆಯೇ ನಿಮಿಸಲಾಗಿದೆ ಎಂದು ನಂಬಿದ್ದೇನೆ. ಈ ಸರ್ಕಾರ ಸ್ಥಾಪನೆಗೊಂಡಾಗ ಅವರು ಎಷ್ಟು ಸಂತೋಷದಿಂದ ಇರಬೇಕು ಎಂದು

ಬಯಸಿದ್ದೇವೋ ಅಷ್ಟೇ ಸಂತೋಷದಿಂದ ಅವರು ಇದ್ದಂತೆ ತೋರುತ್ತದೆ. ಮೈಸೂರು ವಿಶಾಲವಾದ ಮತ್ತು ಸುಂದರ ಪಟ್ಟ ಆಗುತ್ತಿದು ಅದು ನಿವಾಸಿಗಳಿಂದ ತುಂಬಿ ತುಳುಕುತ್ತಿದೆ" 1803ರಲ್ಲಿ ಲಾರ್ಡ್‌ವೆಲ್ಲೆಸ್ಲಿಯು ಮೈಸೂರಿಗೆ ಭೇಟಿನೀಡಿದ ಹಾಗೂ ಅರಮೆನ ಚಿಕ್ಕದೂ ಚೊಕ್ಕವಾದುದೂ ಮತ್ತು ಅಪೂರ್ಣವಾಗಿರುವುದೂ ಆಗಿದೆ ಎಂದು ವಿವರಿಸಿದ್ದ. ಅಂದವಾದ ಪ್ರವೇಶದ್ವಾರ ಇದೆ ಎಂಬುದಾಗಿಯೂ ಅವನು ಹೇಳಿದ್ದಾನೆ. ಸುಮಾರು ಎರಡು ವರ್ಷಗಳ ಅವಧಿಯಲ್ಲಿ ಆತುರಾತುವಾಗಿ ಕಟ್ಟಲಾದ ಅರಮನೆ19ನೆಯ ಶತಮಾನದ ಅಂತ್ಯದ ವೇಳೆಗೆ ದುಃಸ್ಥಿತಿಯಲ್ಲಿದ್ದಂತೆ ತೋರುತ್ತದೆ ಮತ್ತು ಇದಕ್ಕೆ ಸೇರಿದಂತಿದ್ದ ಅನೇಕ ವಠಾರಗಳು ಮುರಿದು ಬೀಳುತ್ತಿದ್ದವು. ಇದೂ ಸಾಲದೆಂಬಂತೆ ಅಗ್ನಿ ಅನಾಹುತವೂ ಉಂಟಾಯಿತು. 1897ರಲ್ಲಿ ರಾಜಕುಮಾರಿ ಜಯಲಕ್ಷಮ್ಮಣ್ಣಿಯವರ ವಿವಾಹದ ಸಂದರ್ಭದಲ್ಲಿ ವಿವಾಹದ ಆಚರಣೆಗಲ ಕೊನೆಯ ಹೊತ್ತಿಗೆ, ಆ ಮರದ ಅರಮನೆಯ ಬಹುಬಾಗ ಬೆಂಕಿಯಿಂದ ನಾಶವಾಗಿ ಹೋಯಿತು. ನಮ್ಮ ಅದೃಷ್ಟವೆಂದರೆ ಜಾನ್ ಬುರ್ಡ್‌ವುಡ್ ಎಂಬಾತ ಈ ಮರದ ಅರಮನೆಯ ಛಾಯಾಚಿತ್ರವನ್ನು ತೆಗೆದಿದ್ದುದು. ಈತ ಮೈಸೂರು ಸೇನೆಯಲ್ಲಿ ಲ್ಯಾನ್ಸರ್ (ಅಶ್ವ ರೋಹಿ) ಆಗಿದ್ದು ಮುಂದೆ ಭಾರತೀಯ ಸೇನೆಯ ಪ್ರಧಾನ ದಂಡನಾಯಕನಾದ ಮತ್ತು ಮುಂದೆ ಕೇಂಬ್ರಿಜ್‌ನ ಮಾಸ್ಟರ್ ಆಪ್ ಪೀಟರ್ ಹೌಸ್ ಆದ. ಈತ ಮಹಾರಾಜರಿಗೆ 1929ರಲ್ಲಿ ಆ ಛಾಯಚಿತ್ರವನನು ಬಳುವಳಿಯಾಗಿ ನೀಡಿದ.

ಮೈಸೂರು ಗೆಜೆಟಿಯರ್‌ನ ಸಂಪಾದಕರು 1897ರ ಫೆಬ್ರುವರಿಯಲ್ಲಿ ನಡೆದ ಆ ಭೀಕರ ಅಗ್ನಿ ಅನಾಹುತಕ್ಕೆ ಮೊದಲು ಇದ್ದಂಥ ಆ ಮರದ ಅರಮನೆಯ ಸುಂದರವಾದ ವರ್ಣನೆಯನ್ನು ನೀಡಿದ್ದಾನೆ. ಆ ವರ್ಣನೆ ಹೀಗಿದೆ "ಕೋಟೆಯಲ್ಲಿ ಪೂರ್ವಾಭಿಮುಖವಾಗಿ ಇರುವಂಥ ಮಹಾರಾಜರ ಅರಮನೆಯನ್ನು ಹಿಂದೂ ಶೈಲಿಯಲ್ಲಿ ನಿರ್ಮಿಸಲಾಗಿದೆ. ಬೇರೆ ಬೇರೆ ಕಾಲಗಳಲ್ಲಿ ಅರಮನೆಯ ಉದ್ಯೋಗದಲಿದ್ದ ಯುರೋಪಿನ ಕೆಲವು ಕಲಾವಿದರು ಕೆಲವು ವರ್ಣಚಿತ್ರಗಳನ್ನು ರಚಿಸಿದ್ದಾರೆ ಎಂಬುದನ್ನು ಬಿಟ್ಟರೆ ಯುರೋಪಿನ ಪ್ರಭಾವದ ಕುರುಹುಗಳು ಮಾತ್ರ ಕಡಿಮೆಯೇ, ಉಜ್ವರ ವರ್ಣಗಳನ್ನು ಲೇಪಿಸಿರುವ ಮತ್ತು ವಿಶೇಷವಾಗಿ ಕೆತ್ತನೆ ಮಾಡಲಾಗಿರುವ ಮರದ ನಾಲ್ಕು ಕಂಬಗಳ ಆಸರೆಯುಳ್ಳ ಮುಂಭಾಗದಲ್ಲಿ ಸೆಜ್ಜೆ ಅಥವಾ ದರ್ಬಾರು ಸಭಾಂಗಣವಿದೆ. ಮಹಾರಾಜರು ವಿಶೇಷ ಸಂದರ್ಭಗಳಲ್ಲಿ ಸಿಂಹಾಸನದ ಮೇಲೆ

ಕುಳಿತು ಜನರಿಗೆ ದರ್ಶನ ನೀಡುವ ಕೈಸಾಲೆಯೂ ಇದೆ. ಅದರ ಪ್ರಮುಖ ದ್ವಾರ ಸೆಜ್ಜೆ ಕೆಳಭಾಗದಲ್ಲಿರುವ ನಡುವಿನ ಓಣಿಗೆ ತೆರೆದುಕೊಳ್ಳುತ್ತದೆ. ಈ ಅಂಗಳದ ಪಶ್ಚಿಮ ಭಾಗದ ಪರ್ಶ್ವದಲ್ಲಿ ಮಹಿಳೆಯರ ವಾಸದ ಕೊಠಡಿಗಳಿಗೆ ಹೋಗುವ ದ್ವಾರವಿದೆ. ಇದು ಅರಮನೆಯ ಪಶ್ಚಿಮ ಆಯುಧ ಶಾಲೆ, ಗ್ರಂಥ ಭಂಡಾರ ಮೊದಲಾದ ವಿವಿಧ ಕಛೇರಿಗಳಿವೆ. ಮಹಾರಾಜರು ಇರುವ ವಿವಿಧ ಕೊಠಡಿಗಳು ದಕ್ಷಿಣ ಪಾರ್ಶ್ವದಲ್ಲಿ ಇವೆ. ಇವುಗಳ ಪೈಕಿ ಅಂಬಾ ವಿಲಾಸ ತುಂಬ ಆಸಕ್ತಿಯನ್ನು ತರಿಸುವಂಥದಾಗಿದೆ. ಇದು ಅರವತ್ತೈದು ಅಡಿ ಚದರ ಪ್ರದೇಶವನ್ನು ವ್ಯಾಪಿಸಿಕೊಂಡಿರುವ ಮತ್ತು ಮಧ್ಯದಲ್ಲಿ ಗೋಪುರಾಕಾರವಾಗಿರುವ (ಎತ್ತರದ ಚಾವಣಿ) ಹಾಗೂ ಹತ್ತು ಅಡಿ ಎತ್ತರವಾಗಿರುವ ಮಹಡಿಯ ಕೊಠಡಿಯಾಗಿದೆ. ಹಿಂದಿನ ರಾಜರು ಐರೋಪ್ಯ ಅತಿಥಿಗಳನ್ನು ಸ್ವಾಗತಿಸುತ್ತಿದ್ದುದು ಮತ್ತು ದೈನಂದಿನ ವ್ಯವಹಾರಗಳನ್ನು ನಡೆಸುತ್ತಿದ್ದದು ಈ ಸ್ಥಳದಲ್ಲಿಯೇ. ಅಲ್ಲಿ ರಾಜರ ಆಸನವನ್ನು ಬೇರೆಯವ ಆಸನಗಳಿಂದ ಪ್ರತ್ಯೇಕಿಸುವ ಸಲುವಾಗಿ ಮರದ ಕಟಕಟೆಯನ್ನು ನಿರ್ಮಿಸಲಾಗಿತ್ತು. ಪಕ್ಕದ ಗೋಡೆಗಳ ಮೇಲೆ ಚಿತ್ರಗಳನ್ನು ನೇತುಹಾಕಲಾಗಿತ್ತು. ಇವುಗಳಲ್ಲಿ ಮುಖ್ಯವಾಗಿದ್ದುವೆಂದರೆ ವಿವಿಧ ಕಾಲಘಟ್ಟಗಳಲ್ಲಿ ಮೈಸೂರಿನೊಡನೆ ಸಂಬಂಧಪಟ್ಟಿದ್ದ ಅಧಿಕಾರಿಗಳವು. ಇವನ್ನು ಮಹಾರಾಜರು ಯುರೋಪಿನ ತಮ್ಮ ಅತಿಥಿಗಳಿಗೆ ತೆರೆದು ತೋರಿಸುವ ಪರಿಪಾಠವಿದ್ದಿತು. ನೆಲವು ಸುಣ್ಣದ ಗಾರೆಯಾದಾಗಿತ್ತು. ಕಲಾತ್ಮಕವಾಗಿ ಕೆತ್ತನೆ ಮಾಡಲಾಗಿರುವ ದಂತದ ಅಥವಾ ಬೆಳ್ಳಿಯ ಅಲಂಕರಣಗಳನ್ನುಳ್ಳ ಬಾಗಿಲುಗಳನ್ನು ಹೊರತು ಪಡಿಸಿದರೆ ಭವ್ಯತೆ ಅಥವಾ ವೈಭವ ಪ್ರದರ್ಶನದ ಯಾವುದೇ ಪ್ರಯತ್ನ ನಡೆದಿರಲಿಲ್ಲ. ಈ ಕೈಸಾಲೆಲಯನ್ನು ಈಚೆಗೆ ಸಂಪೂರ್ಣವಾಗಿ ನವೀಕರಿಸಲಾಗಿದೆ ಮತ್ತು ಚಾವಣಿಯನ್ನು ಸುಂದರವಾದ ಕಬ್ಬಿಣದ ಸ್ತಂಭಗಳ ಮೇಲಿರಿಸಲಾಗಿದೆ. ರಾಜರ ಊಟದ ಮತ್ತು ಮಲಗುವ ಕೋಣೆಗಳು ಬಹುಮಟ್ಟಿಗೆ ಚಿಕ್ಕವೂ, ಒಂದಕ್ಕೊಂದು ಅಂಟಿಕೊಂಡಂತೆಯೂ ಇದ್ದು, ಅವೆಲ್ಲ ಅಂಬಾ ವಿಲಾಸದ ಕಡೆಗೆ ತೆರೆದುಕೊಂಡಿವೆ ಮತ್ತು ಅದರ ಹೊರಭಾಗದಲ್ಲಿ ಮಹಾರಾಜರು ಪೂಜಿಸುವ ಪಟ್ಟದ ಗೋವಿನ ಕೊಟ್ಟಿಗೆಯಾಗಿದೆ. ಅವರ ದೇವರ ಮನೆ ಪಕ್ಕದಲ್ಲಿಯೇ ಇದೆ. 1800ರಲ್ಲಿ ಅರಮನೆಯನ್ನು ಬಹುಮಟ್ಟಿಗೆ ಸಂಪೂರ್ಣವಾಗಿ ಹೊಸದಾಗಿಯೇ ನಿರ್ಮಿಸಲಾಗಿದ್ದರೂ, ಅದರ ದುರಸ್ತಿ ಸರಿಯಾಗಿರಲಿಲ್ಲ ಮತ್ತು ಅದಕ್ಕೆ ಸೇರಿದಂತಿದ್ದ ಅನೇಕ ವಾಸದ

ಮನೆಗಳು ಬೀಳುವ ಸ್ಥಿತಿಯಲ್ಲಿದ್ದವು. ಟೀಪೂ ಸುಲ್ತಾನ ಕೆಡವಿದ ಹಳೆಯ ಹಿಂದೂ ಅರಸು ಮನೆತನದ ಈ ಅರಮನೆಯ ಉಳಿದಿದ್ದ ಏಕೈಕ ಭಾಗವೆಂದರೆ ಒಳಭಾಗದಲ್ಲಿದ್ದ ಒಂದು ಕೊಠಡಿ. ಇದರ ಮಣ್ಣು ಗೋಡೆಗಳು ದಪ್ಪವಾಗಿಯೂ, ಭದ್ರವಾಗಿಯೂ ಇದ್ದವು. ಇದರ ಚಾವಣಿಗೆ ಅಲಂಕರಣ ಮಾಡಿದ್ದುದರಿಂದಾಗಿ ಇದು ವರ್ಣಾಲಂಕೃತ ಕೊಠಡಿ ಎಂದು ಪ್ರಸಿದ್ಧವಾಗಿತ್ತು. ಇದನ್ನು ಹಳೆಯ ಅರಮನೆಯ ಅತಿಥಿ ಸತ್ಕಾರದ ಕೋಣೆಯೆಂದು ಹೇಳಲಾಗುತ್ತಿತ್ತು. ಇದು ಅಂಥ ಆಡಂಬರದ ಕಟ್ಟಡವೇನು ಆಗಿರಲಿಲ್ಲ. ಬಹುಪಾಲು ಪೌರಸ್ತ್ಯ ರಾಜರ ಆಸ್ಥಾನಗಳಲ್ಲಿ ಇರುವಂತೆ ಇದನನು ಪ್ರತ್ಯೇಕಿಸುವ ಕ್ರಮವೇನೂ ಇರಲಿಲ್ಲ. ಬಯಲಿನ ಮುಂದಿನ ಭಗವನ್ನು ಬಿಟ್ಟರೆ ಅರಮನೆಯ ಸುತ್ತಮುತ್ತ ಅರಮನೆಗೆ ಹೊಂದಿಕೊಂಡಂತೆಯೇ ಕಡುಬಡವರ ನಿವಾಸಗಳು ಇದ್ದವು".

ಹೊಸ ಅರಮನೆ:

ಮೈಸೂರು ಅರಮನೆಯ ವೈಭವವನ್ನು ಪುನರ್ ಸ್ಥಾಪಿಸುವ ಸಲುವಾಗಿ ಆಗ ರಾಜ ಪ್ರತಿನಿಧಿಯಾಗಿದ್ದ ಮಹಾರಾಣಿ ವಾಣೀ ವಿಲಾಸ ಸನ್ನಿಧಾನ ಅವರು ಹಳೆಯ ಅರಮನೆಯ ಮಾದರಿಯಲ್ಲಿ ಮತ್ತು ಅದೇ ಆಸ್ತಿಭಾರದ ಮೇಲೆ ಹೊಸ ಅರಮನೆಯನ್ನು ಕಟ್ಟಿಸಲು ತೀರ್ಮಾನಿಸಿದರು. ಶಿಮ್ಲಾದ ವೈಸರೀಗಲ್ ಲಾಡ್ಜ್ ವಾಸ್ತುಶಿಲ್ಪಿ ಹಾಗೂ ಮದರಾಸು ಸರ್ಕಾರದ ಸಲಹೆಗಾರ ವಾಸ್ತು ಶಿಲ್ಪಿ ಶ್ರೀ ಹೆನ್ರಿ ಇರ್ವಿನ್ ಅವರ ವಾಸ್ತುಶಿಲ್ಪಿ ನಕಾಶೆಗಳನ್ನು ಅನುಮೋದಿಸಲಾಯಿತು. ಹಳೆಯ ಅರಮನೆಯು ಬೆಂಕಿಯ ಅನಾಹುತಕ್ಕೆ ಸಿಲುಕಿ ಸ್ವಲ್ಪ ಮಟ್ಟಿಗೆ ಸುಟ್ಟುಹೋಗಿತು. ಹಾಗೂ ನಾಶವಾಗಿಬಿಟ್ಟಿತು. ಆದ್ದರಿಂದ 1897ರ ಅಕ್ಟೋಬರ್‌ನಲ್ಲಿ ಮಹಾರಾಣಿಯವರು ಹೊಸ ಅರಮನೆಯ ನಿರ್ಮಾಣ ಕಾರ್ಯವನ್ನು ಉದ್ಘಾಟಿಸಿದರು. ಮೈಸೂರು ರಾಜ್ಯದ ಅರಮನೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಆಗಿದ್ದ ಶ್ರೀ ಬಿ.ಪಿ.ರಾಘವುಲು ನಾಯ್ದು. ಎ.ಸಿ.ಇ. ಅವರಿಗೆ ಕಟ್ಟಡ ನಿರ್ಮಾಣದ ಕಾರ್ಯಭಾರವನ್ನು ವಹಿಸಲಾಯಿತು. ಅವರು ಹೊಸ ಅರಮನೆಯಲಿ ಅಳವಡಿಸಬೇಕಾದ ವಾಸ್ತುಶಿಲ್ಪ ವಿನ್ಯಾಸದ ಬಗ್ಗೆ ಕಲ್ಕತ್ತ, ದೆಹಲಿ ಮತ್ತು ಮದ್ರಾಸುಗಳಲ್ಲಿ ವ್ಯಾಪಕವಾದ ಅಧ್ಯಯನ ನಡೆಸಿದರು. ಅವರ ಕಾರ್ಯಕುಶಲತೆಯ ಹಾಗೂ ಕಲಾವಿದರ ಸಾಮರ್ಥ್ಯದ

ಭವ್ಯ ಸ್ಮಾರಕವಾಗಿ ಇಂದಿಗೂ ಅದು ನಿಂತಿದೆ. ಹೊಸ ಪೇಟೆಗಲು ಮತ್ತು ಕಟ್ಟಡಗಳನ್ನು ನಿರ್ಮಿಸಿ ಮೈಸೂರನ್ನು ಅಭಿವೃದ್ಧಿಪಡಿಸುವ ಕಾರ್ಯಭಾರವೂ ಅವರದೇ ಆಗಿತ್ತು. 1900ರಲ್ಲಿ ನಿರ್ಮಿಸಿದ ಜಗನ್‌ಮೋಹನ ಅರಮನೆ, ವಿವಾಹ ಸಭಾಂಗಣ ನಿರ್ಮಾಣ ಕಾರ್ಯದ ಹೊಣೆಯೂ ಅಅವರದೇ ಆಗಿತ್ತು. ತಮ್ಮ ಎಂಜಿನಿಯರಿಂಗ ಕೌಶಲ್ಯಕ್ಕಾಗಿ ಅವರು ಅರಮನೆಯಿಮದ ಅನೇಕ ಪ್ರಶಸ್ತಿಗಳನ್ನು ಪಡೆಸರು. ಕಲಾತ್ಮಕ ಪ್ರದರ್ಶನ ಬೀರುವಿಗಾರಿ (ಷೋಕೇಸ್) 1908ರಲ್ಲಿ ಫ್ರಾಂಕೋ ಬ್ರಿಟಿಷ್ ವಸ್ತು ಪ್ರರ್ಶನದಲ್ಲಿ ಅವರು ಒಂದು ಪ್ರಶಸ್ತಿಯನ್ನು ಗಳಿಸಿದರು.

ಅರಮನೆಯ ನಿರ್ಮಾಣ ಕಾರ್ಯ 1912ರಲ್ಲಿ ಪೂರ್ಣಗೊಂಡಿತ್ತು. ಇದಕ್ಕೆ ಆದ ಒಟ್ಟು ವೆಚ್ಚ ರೂ.41,47,913. ಅರಮನೆಯ ನಿರ್ಮಾಣ ಕಾರ್ಯದಲ್ಲಿನ ಎರಡು ವಿಶೇಷ ಅಂಶಗಳು ಗಮನಾರ್ಹವಾಗಿದೆ. ನಿರ್ಮಾದಲ್ಲಿ ಸಾಧ್ಯವಿದ್ದಷ್ಟು ಮಟ್ಟಿಗೂ ಸ್ಥಳೀಯ ಸಾಮಾಗ್ರಿಗಳನ್ನೇ ಬಳಸಿರುವುದು ಮತ್ತು ಅಗ್ನಿ ನಿರೋಧಕ ವಿಧಾನಗಳನ್ನು ಅಳವಡಿಸಿ ಕೊಂಡಿರುವುದು. ಅಗ್ನಿ ನಿರೋಧಕ ವಿಧಾನದ ಅಳವಡಿಕಯಂತೂ ಹೊಸ ವಿನ್ಯಾಸದ ಅತ್ಯಗತ್ಯ ಅಂಶವೇ ಆಗಿತ್ತು.

ಮುಖ್ಯ ಕಟ್ಟಡ ಬೃಹದಾಕಾರದ ಬೂದು ಬಣ್ಣದ ಗ್ರಾನೈಟ್‌ನಿಂದ ನಿರ್ಮಿತವಾಗಿದ್ದು ಮೂರು ಮಹಡಿಗಳನ್ನು ಹೊಂದಿಗೆ ಇದರ ಮೇಲಿನ ಐದು ಅಂತಸ್ತಿನ ಗೋಪುರ ಎದ್ದುಕಾಣುವಂತದೆ. ಈ ಗೋಪುರ ಚಿನ್ನದ ಕವಚದಿಂದ ಅವೃತವಾಗಿದೆ. ನೆಲದಿಂದ ಹಿಡಿದು ತುದಿಯಲಿನಸ್ವರ್ಣಪತಾಕೆಯವರೆಗೆ ಈ ಗೋಪುರ 145 ಅಡಿ ಎತ್ತರವಾಗಿದೆ. ಮುಂಭಾಗದಲ್ಲಿ ಭವ್ಯವಾದ ಬೃಹತ್ತಾದ ಏಳು ಕಮಾನುಗಳು ಮತ್ತು ಮಧ್ಯ ಕಮಾನಿನ ಪಾರ್ಶ್ವಗಳಲ್ಲಿ ಎರಡು ಸಣ್ಣ ಕಮಾನುಗಳು ಇದ್ದು ಇವುಗಳಿಗೆ ಎತ್ತರವಾದ ಸ್ತಂಭಗಳು ಆಸರೆಯಾಗಿವೆ. ಮಧ್ಯದ ಕಮಾನುಗಳ ಮೇಲೆ ಪಾಗಾರವಾಗಿ ಗಜಲಕ್ಷ್ಮೀ ಶಿಲ್ಪವಿದೆ. ಹಳೆಯ ಅರಮನೆಯಂತೆಯೇ ಈ ಅರಮನೆಯನ್ನೂ ತೊಟ್ಟಿ ಎಂದು ಕರೆಲಾಗುವ ಅಂಗಳದ ಸುತ್ತ ನಿರ್ಮಿಸಲಾಗಿದೆ. ನೆಲ ಅಂತಸ್ತಿನಲ್ಲಿ ತೊಟ್ಟಿಯ ಪೂರ್ವಕ್ಕೆ ಭವ್ಯವಾದ ಆನೆ ಬಾಗಿಲು ಇದೆ. ಪಕ್ಕದಲ್ಲಿ ದಕ್ಷಿಣದಲ್ಲಿ ಸುಂದರವಾದ ಕಲ್ಯಾನ ಮಂಟಪವಿದೆ. ನೆಲ ಅಂತಸ್ತಿನಲ್ಲಿ ಪೂರ್ವಾಭಿಮುಖವಾಗಿ ಬೃಹತ್

ದರ್ಬಾರು ಸಭಾಂಗಣವಿದೆ. (ದಿವಾನ್- ಎ-ಆಮ್) ಇದು 47.25ಮೀ(155 ಅಡಿ) ಉದ್ದ ಮತ್ತು 12.80 ಮೀ(42 ಅಡಿ)ಅಗಲವಾಗಿದೆ. ಇದೇ ಅಂತಸ್ತಿನಲ್ಲಿ ಅಂಬಾ ವಿಲಾಸ (ದಿವಾನ್- ಎ-ಆಮ್) ಎಂಬ ಸುಂದರವಾದ ಅಲಂಕರಿಸಲಾದ ಖಾಸಗಿ ದರ್ಬಾರು ಸಭಾಂಗಣವಿದೆ. ಎರಡನೆಯ ಅಂತಸ್ತಿನಲ್ಲಿ ಎಲ್ಲಾ ಪಾರ್ಶ್ವಗಳಲ್ಲಿ ಹಲವು ಕೊಠಡಿಗಳು ಮತ್ತು ದೊಡ್ಡ ಹಜಾರ ಇದೆ. ಕಲ್ಯಾಣ ಮಂಟಪ ನೆಲ ಅಂತಸ್ತಿನಲ್ಲಿದೆ ಇದು ನೋಡಲು ತುಂಬ ಸುಂದರವಾಗಿದೆ. ಅಷ್ಟಭುಜಾಕೃತಿಯ ವರ್ಣಚಿತ್ತಾಲಂಕೃತ ತೊಟ್ಟಿಗೆ ವೈವಿಧ್ಯಮಯವಾದ ಬಣ್ಣದ ಗಾಜಿನ ಚಾವಣಿಯನ್ನು ಹೊದಿಸಲಾಗಿದೆ. ಬಣ್ಣದ ಅಲಂಕರಣಗಳ ವಿನ್ಯಾಸವನ್ನು ಮೈಸೂರಿನ ಕಲಾಕಾರರೇ ಮಾಡಿದ್ದರಾದರೂ ಇದರ ವಿನ್ಯಾಸವನ್ನು ರೂಪಿಸಿದವರು" ವಾಲ್ಟರ್ ಮ್ಯಾಕ್ ಫರ್ ಲೇನ್ ಸನಾರಸೆನ್ ಫೌಂಡ್ರಿ " ಎಂಬ ಗ್ಲಾಸ್ಗೋದಲ್ಲಿನ ಸುಪ್ರಸಿದ್ಧ ಸಂಸ್ಥೆ. ಗುಮ್ಮಟಕ್ಕೆ ಅಲ್ಲಲ್ಲಿ ಚೀಡು ಕಬ್ಬಿಣದ ಕಂಬಗಳ ಆಸರೆಯನ್ನು ಒದಗಿಸಲಾಗಿದೆ. ಬಣ್ಣದ ಗಾಜಿನ ಅಲಂಕರಣದಲಿನ ಹಾಗೂ ಮೋಸಾಯಿಕ್ ನೆಲದಲ್ಲಿನ ಮುಖ್ಯ ಆಕರ್ಷಣೆ ಎಂದರೆ ಅಲ್ಲಿ ಚಿತ್ರಿಸಲಾಗಿರುವ ನವಿಲು. ಹಾಗಾಗಿ ಇದನ್ನು ಮಯೂರ ಸಭಾಂಗಣ, ನವಿಲು ತೊಟ್ಟಿ ಎಂದೂ ಕರೆಯಲಾಗುತ್ತದೆ. ಪ್ರಮುಖ ಆಕರ್ಷಣೆಯಾದ ಬಣ್ಣದ ಗಾಜಿನ ಅಲಂಕರಣದ ಜೊತೆಗೆ ಈ ತೊಟ್ಟಿಯ ಗೋಡೆಗಳು ಸುಪ್ರಸಿದ್ಧ ಮೈಸೂರು ದಸರೆಯ ದೃಶ್ಯಗಳನ್ನು ತೋರಿಸುವ ವರ್ಣ ಚಿತ್ರಪಟ್ಟಿಕೆಗಳಿಂದ ಅಲಂಕೃತವಾಗಿವೆ.

ದಸರೆ ಅಥವಾ ನವರಾತ್ರಿ ಹಬ್ಬವನ್ನು ಮೊತ್ತ ಮೊದಲಿಗೆ ಬೃಹತ್ ಪ್ರಮಾಣದಲ್ಲಿ ಭವ್ಯವಾಗಿ ಆಚರಿಸಿದವರೆಂದರೆ ವಿಜಯನಗರದ ದೊರೆಗಳು, ಹಾಗೂ ಅವರು ಈ ಉತ್ಸವವನ್ನು ಆಚರಿಸಿದ್ದು ರಾಜಧಾನಿಯಾಗಿದ್ದ ಹಂಪಿಯಲ್ಲಿ. ವಿಜಯನಗರಕ್ಕೆ ಭೇಟಿ ನೀಡಿದ ಪೋರ್ಚುಗೀಸ್ ಪ್ರಜೆಯಾದ ಡೋಮಿಂಗೋ ಪೆಯಾಸ್, ಪರ್ಷಿಯಾದ ರಾಯಬಾರಿ ಅಬ್ದುಲ್ ರಜಾಕ್ ಮೊದಲಾದ ಸಮಕಾಲೀನ ವಿದೇಶಿ ಪ್ರವಾಸಿಗರ ವರದಿಗಳಲ್ಲಿ ಈ ಉತ್ಸವಗಲ ಕಣ್ಣಿಗೆ ಕಟ್ಟುವಂಥ ವರ್ಣನೆಗಳಿವೆ. ವಿಜಯನಗರ ಸಾಮ್ರಾಜ್ಯದ ಅವಸಾನದೊಂದಿಗೆ ವಿಜಯನಗರದ ಈ ಪರಂಪರೆಗಳನ್ನು ಉಳಿಸಿ ಬೆಳೆಸಿಕೊಂಡವರು ಕೆಳದಿ ಮತ್ತು ಇಕ್ಕೇರಿಯ ನಾಯಕರು ಹಾಗೂ ಮೈಸೂರಿನ ಒಡೆಯರು. ಅಲಂಕೃತ ಆನೆಯ ಮೇಲೆ ಚಿನ್ನದ ಅಂಬಾರಿಯಲ್ಲಿ ಕುಳಿತು ಸಾಗುವ ರಾಜರ ಜಂಬೂ ಸವಾರಿ ಎಂದು ಕರೆಯಲಾಗುವ ಸುಪ್ರಸಿದ್ಧ

ಮೆರವಣಿಗೆಯೊಡನೆ ಮುಕ್ತಾಯಗೊಳ್ಳುತ್ತಿದ್ದ ಹತ್ತು ದಿನಗಳ ಅವಧಿಯ ಈ ಭವ್ಯ ಉತ್ಸವಗಲ ಮೂಲಕ ಮೈಸೂರು ದೊರೆಗಳು ದಸರೆಯನ್ನು ಅಮರಗೊಳಿಸಿದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹದಲಿ ಹಾಗೂ ಅವರಿಂದ ನಿಯೋಜಿತರಾದ ಮೈಸೂರು ಕಲಾವಿದರು ಅರಮನೆಯ ಕಲ್ಯಾಣ ಮಂಟಪದಲ್ಲಿ ಗೋಡೆಗಳ ಮೇಲೆ ಅಳವಡಿಸಲಾಗಿರುವ ಕ್ಯಾನ್ವಾಸಿನ 26 ಪಟ್ಟಿಕೆಗಳಲ್ಲಿ ದಸರಾ ಮೆರವಣಿಗೆಯ ದೃಶ್ಯಗಳನ್ನು ಅಚ್ಚಳಿಯದಂತೆ ಚಿತ್ರಿಸಿದ್ದಾರೆ. ಹಾಗಾಗಿ ಕಲ್ಯಾಣ ಮಂಟಪವು ವಾಸ್ತುಶಿಲ್ಪ ಸೌಂದರ್ಯದ ದೃಷ್ಟಿಯಿಂದ ಮಾತ್ರವೇ ಅಲ್ಲದೆ ಚಿತ್ರಗಳ ಸುಂದರ ಚಿತ್ರಶಾಲೆಯೂ ಆಗಿದೆ.

ಸಾರ್ವಜನಿಕ ದರ್ಬಾರ್ ಸಭಾಂಗಣ ಬೃಹತ್ತಾದ ಕಂಬಗಳಿರುವ ಸಭಾಂಗಣವಾಗಿದ್ದು ಇದನ್ನು ಅದೇ ರೀತಿ ಸಂರಕ್ಷಿಸಿಕೊಂಡು ಬರಬೇಕಾಗಿದೆ. ಹಿಂಬಂದಿಯ ಗೊಡೆಗಳಲ್ಲಿ ರಾಜಾ ರವಿವರ್ಮರ ವರ್ಣಚಿತ್ರ (ರಾಮನು ಶಿವ ಧನಸ್ಸನ್ನು ಮುರಿಯುತ್ತಿರುವುದು) ಮತ್ತು ಸುಪ್ರಸಿದ್ಧರಾದ ಸ್ಥಳಿಯ ಕಲಾವಿದರೂ ಶಿಲ್ಪಿಗಳೂ ಆದ ಶ್ರೀ ಶಿಲ್ಪಿ ಸಿದ್ಧಲಿಂಗಸ್ವಾಮಿಗಳು ರಚಿಸಿರುವ ದೇವಯ ಅಷ್ಟರೂಪದ ಚಿತ್ರಗಳು ಅಂದರೆ ಕಾಳಿಕಾ, ನವದುರ್ಗ, ಮಹಿಷಮರ್ಧಿನಿ, ಸರಸ್ವತಿ, ಮಹಾಲಕ್ಷ್ಮೀ, ಭುವನೇಶ್ವರಿ, ಗಾಯತ್ರಿ ಹಾಗೂ ರಾಜ ರಾಜೇಶ್ವರಿ ವರ್ಣಚಿತ್ರಗಳು ಇವೆ. ಮಧ್ಯಮ ಪಟ್ಟಿಯಲ್ಲಿ, ಮತ್ತೊಬ್ಬ ಸುಪ್ರಸಿದ್ಧ ಕಲಾವಿದರಾದ ದಿವಂಗತ ಶ್ರೀ ವೈ. ನಾಗರಾಜು ಅವರು ರಚಿಸಿರುವ ಮೈಸೂರು ರಾಜವಂಶದ ಬೃಹದ್ ವರ್ಣ ಚಿತ್ರವಿದೆ. ಇವರು ಕಲ್ಯಾಣ ಮಂಟಪದಲ್ಲಿರನ ಕೆಲವು ವರ್ಣ ಚಿತ್ರ ಲಪಟ್ಟಿಕೆಗಳನ್ನು ರಚಿಸಿರುವರು. ಈ ಚಿತ್ರದ ಕುತೂಹಲಕಾರಿ ಅಂಶವೆಂದರೆ ಮೈಸೂರು ದೊರೆಗಳ ನಾಲ್ಕು ತಲೆ ಮಾರುಗಳವರನ್ನು ಇದರಲ್ಲಿ ಚಿತ್ರಿಸಿರುವುದು. ಅವರುಗಳೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಅವರ ತಮ್ಮ ಕಂಠೀರವ ನರಸರಾಜ ಒಡೆಯರು ಹಾಗೂ ಸುಂದರ ರಾಜಕುಮಾರ ಜಯಚಾಮರಾಜ ಒಡೆಯರು. ಜಯಚಾಮರಾಜ ಒಡೆಯರು ಮೈಸೂರು ರಾಜ್ಯ ಭಾರತದ ಒಕ್ಕೂಟವನ್ನು ಸೇರುವ ಮೊದಲು ಆಳಿದ ಕೊನೆಯ ದೊರೆಯೂ ಆಗಿದ್ದಾರೆ. ಈ ಎಲ್ಲ ವರ್ಣ

ಚಿತ್ರಗಳನನು ಸೂಕ್ಷ್ಮವಾಗಿ ಕೆತ್ತನೆ ಮಾಡಲಾದ ತೇಗದ ಮರದ ಚೌಕಟ್ಟುಗಳಲ್ಲಿ ಅಳವಡಿಸಲಾಗಿದ್ದು, ಸ್ವತಃ ಆ ಚೌಕಟ್ಟುಗಳೂ ಕಲಾಕೃತಿಗಳೇ ಆಗಿವೆ.

ಭವ್ಯವಾದ ಈ ದರ್ಬಾರು ಸಭಾಂಗಣವನ್ನು ಕಾನ್ಸ್ಟೆನ್ಸ್ ಇ. ಪಾರ್ಸನನ್ಸ್‌ರವರ ಈ ಮಾತುಗಳಲ್ಲಿ ಅತ್ಯುತ್ತಮವಾಗಿ ಹೀಗೆ ವರ್ಣಿಸಬಹುದಾಗಿದೆ. ಈ ಶ್ರೇಷ್ಠ ದರ್ಬಾರು ಸಭಾಂಗಣದ ಸೊಬಗು, ಬಲಸಿರುವ ವಸ್ತುಗಲ ವೈವಿಧ್ಯ ವರ್ಣೋಜ್ವಲತೆ ಮತ್ತು ಅಲಂರಕಣ ಸಮೃಧ್ಧಿ ಇವುಗಳನ್ನು ಕುರಿತಂತೆ ಮಾಡಬಹುದಾಗಿರುವ ಯಾವುದೇ ಸಂಕ್ಷಿಪ್ತ ನಿರೂಪಣೆ ಅವಕ್ಕೆ ನ್ಯಾಯವನ್ನು ದೊರಕಿಸಿ ಕೊಡಲಾರದು. ಗೋಡೆಗಳು ಚಾವಣಿಗಳೊಡನೆ, ಸ್ತಂಭಗಳು ದ್ವಾರಗಳೊಡನೆ ಮತ್ತು ಇವೆರಡು ಹಗಲು ಬೆಳಕಿನಲ್ಲಿ ಹಾಗೂ ಸಹಸ್ರ ಸಹಸ್ರ ಯಕ್ಷದೀಪಗಳಿಂದ ಪ್ರಜ್ವಲಿಸುವಾಗ, ಒಂದರೊಡನೆ ಒಂದರೊಡನೊಂದು ಪೈಪೋಟಿ ನಡೆಸುತ್ತವೆ. ಸಾವಿರದೊಂದು ರಾತ್ರಿಗಳು (ಅರೇಬಿಯನ್ ನೈಟ್ಸ್) ಕಥೆಯಲ್ಲಿನ ವೈಭವ ಮತ್ತು ಆಕರ್ಷಣೀಯ ಬಗ್ಗೆ ಪೌರಸ್ತ್ಯ ರಾಜಾಸ್ಥಾನದ ಭವ್ಯ ವಾತಾವರಣದ ಬಗ್ಗೆ ಕವಿಗಳು ಮತ್ತು ಕಲಾವಿದರು ಕಂಡ ಕಲ್ಪನೆಗಳನ್ನೆಲ್ಲ ಇದು ಒಮ್ಮೆಗೇ ನಮ್ಮ ಮುಂದೆ ಸಾಕಾರಗೊಳಿಸುತ್ತದೆ.

ಹಳೆಯ ಸಭಾಂಗಣದ ಮುಂಭಾಗದಲ್ಲಿ, ಪೂರ್ವದಿಕ್ಕಿನಲ್ಲಿ 1932ರಲ್ಲಿ ಈ ದರ್ಬಾರು ಸಭಾಂಗಣವನ್ನು ವಿಸ್ತರಿಸಲಾಯಿತು. ಅಲಂಕೃತವಾದ ಸ್ಥಂಭಗಳು ಆಧಾರವಿರುವ ಒಂಭತ್ತು ಕಮಾನುಗಳು ಮುಖ ಭಾಗದದಲ್ಲಿದ್ದು, ಮೊದಲ ಉಪ್ಪರಿಗೆಯಲ್ಲಿ ಸುಂದರವಾದ ಮೊಗಸಾಲೆ ಇದೆ. ಸಭಾಂಗಣದಲ್ಲಿ ನಡುನಡುವೆ ಯಾವುದೇ ಕಂಬಗಳು ಇಲ್ಲದಿರುವುದರಿಂದ ಸಿಂಹಾಸವನ್ನು ಮತ್ತು ದರ್ಬಾರು ಸಂದರ್ಭಗಳಲ್ಲಿನ ವಿವಿಧ ಕಾರ್ಯಕಲಾಪಗಳ ನೋಟವನ್ನು ಅಡೆತಡೆಯಿಲ್ಲದೆ ವಿಕ್ಷಸಬಹುದಾಗಿದೆ. ಮೊಗಸಾಲೆಯ ಮೇಲುಗಡೆ ಇರುವ ಕೊಠಡಿಗೆ ಕಲ್ನಾರು ಷೀಟುಗಲನ್ನು ಹಾಕಲಾಗಿತ್ತು. ಅದರ ಮೇಲೆ ವಿಷ್ಣುವಿನ ದಶಾವತರದ ವರ್ಣ ಚಿತ್ರಗಳನ್ನು ಬಿಡಲಾಗಿದೆ. ಚಾವಣಿಯ ಮಧ್ಯಭಾಗದ ಪಟ್ಟಿಕೆಯಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಸುತ್ತ ದ್ವಾದಶ ರಾಶಿ ಚಕ್ರಗಳನ್ನು ಚಿತ್ರಿಸಲಾಗಿದೆ. ಇವುಗಳನ್ನು ಚಿತ್ರಿಸಿದ ಕಲಾವಿದರು ಶಿಲ್ಪಿ ಸಿದ್ಧಲಿಂಗಸ್ವಾಮಿಗಳು.

ದರ್ಬಾರು ಸಭಾಂಗಣದ ಮುಂಭಾಗವನ್ನು ಎರಡು ಗೋಪುರಗಳನ್ನುಳ್ಳ ಪಾರ್ಶ್ವ ಕಕ್ಷೆಗಲ ಸೇರ್ಪಡೆಯ ಮೂಲಕ ಮತ್ತುಷ್ಟು ಉತ್ತಮಗೊಳಿಸಲಾಯಿತು. ಇವುಗಳನ್ನು ಕಲ್ಲಿನಲ್ಲಿ ಕಟ್ಟಲಾಗಿದೆ. ಉತ್ತರ ಮತ್ತು ದಕ್ಷಿಣ ಪಾರ್ಶ್ವದ ಮುಂಭಾಗದಲ್ಲಿ ಅಮೃತಶಿಲೆಯ ಎರಡು ಶಾಸನಗಳಲು ಇವೆ. ಅದರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿ ಹೊಸ ದರ್ಬಾರು ಸಭಾಂಗಣದ ನಿರ್ಮಾಣವನ್ನು ಕೈಗೊಂಡ ಇಂಜಿನಿಯರುಗಳ ಹೆಸರುಗಳನ್ನು ದಾಖಲಿಸಲಾಗಿದೆ.

ಅಂಬಾ ವಿಲಾಸ (ದಿವಾನ್- ಏ- ಖಾಸ್) ವರ್ಣಗಳ ಸುಸಂಗತ ಮೇಳದಿಂದ ಅತ್ಯಂತ ಜಾಜ್ವಲ್ಯಮಾನವಾಗಿ ಅಲಂಕೃತವಾಗಿರುವ ಸಭಾಂಗಣವಾಗಿದೆ. ಸೂಕ್ಷ್ಮವಾದ ಕಲೆಗಾರಿಕೆಯನ್ನು ಒಳಗೊಂಡಿರುವ ಇದರ ಸೌಂದರ್ಯವನ್ನು ಮೀರಿಸುವಂಥ ಬೇರೊಂದು ಸಭಾಂಗಣ ಈ ಅರಮನೆಯಲ್ಲಿ ಇಲ್ಲವೇ ಇಲ್ಲ. ಸ್ಥಂಭಗಳ ನಡುವಿನ ನೆಲದಲ್ಲಿ ಆಗ್ರಾ ಕಲೆಯ ವೈಶಿಷ್ಟ್ಯಗಳನ್ನು ಕಾಣಬಹುದಾಗಿದೆಯಾದರೂ ಇದನ್ನು ಪೂರ್ಣಗೊಳಿಸಿರುವವರು ಸ್ಥಳೀಯ ಕೆಲಸಗಾರರೇ. ತೇಗದ ಮರದ ಚಾವಣಿ ಕೂಡ ಭವ್ಯವಾಗಿದ್ದು, ಸ್ಥೂಲವಾದ ಮತ್ತು ಸಂಕೀರ್ಣವಾದ ವಿನ್ಯಾಸಕ ಕೆತ್ತನೆಗಳನ್ನು ಒಳಗೊಂಡಿದೆ. ದಂತದ 'ಇನ್‌ಲೇ'ಯಿಂದ ಕೂಡಿರುವ ಬೆಳ್ಳಿ, ತೇಗ ಮತ್ತು ಬೀಟೆ ಮರದ ಪ್ರತಿಯೊಂದು ಬಾಗಿಲೂ ವಿಷ್ಣುವಿನ ದಶಾವತಾರಗಳನ್ನು ಚಿತ್ರಿಸಿರುವ ಅಥವಾ ವಟಪತ್ರಶಾಯಿಯಾದ ಬಾಲಕೃಷ್ಣ ತನ್ನ ಕಾಲಿನ ಹೆಬ್ಬೆರಳನ್ನು ಚುಂಬಿಸುತ್ತಿರುವ ಹಾಗೂ ಇವೇ ಮೊದಲಾದ ಚಿತ್ತಾಕರ್ಷಕವಾದ ಅಂಕರಣದ ವಿನ್ಯಾಸಗಳನ್ನು ಒಳಗೊಂಡಿದೆ.

ಮಧ್ಯದ ಪಡಸಾಲೆ ತಾಂಡವಾಳದ ಸ್ಥಂಭಗಳ ಆಸರೆಯನ್ನು ಪಡೆದಿದ್ದು, ಸೂಕ್ಷ್ಮವಾದ ಚಿತ್ತಾರ ವಿನ್ಯಾಸಗಳಿಂದ ಕೂಡಿರುವ ಅಲಂಕೃತವಾದ, ಸುಂದರವಾದ ಬಣ್ಣದ ಗಾಜಿನ ಚಾವಣಿಯಿಂದ ಆವೃತವಾಗಿದೆ. ತಾಂಡವಾಳದ ಸ್ಥಂಭಗಳನು ಗ್ಲಾಸ್ಗೋದ ಸುಪ್ರಸಿದ್ಧ ಮ್ಯಾಕಫರ್‌ಲೇನ್ ಸಂಸ್ಥೆಯವರು ತಯಾರಿಸಿದರು. ಅಂವಾ ವಿಲಾಸದ ಅಲಂಕರಣ ಕಾರ್ಯವನ್ನು ಕರ್ನಾಟಕದ ಸುಪ್ರಸಿದ್ಧ ಕಲಾವಿದ ಶ್ರೀ ಕೆ. ವೆಂಕಟಪ್ಪ ಅವರಿಗೆ ವಹಿಸಲಾಯಿತು. ಈ ಕಾರ್ಯವನ್ನು ವಹಿಸಿಕೊಂಡಾಗ ದಿವಂಗತ ನಾಲ್ವಡಿ

ಕೃಷ್ಣರಾಜ ಒಡೆಯರು ಅವರಿಗೆ ಈ ರೀತಿ ಹೇಳಿದ್ದರು. "ನೀವು ನಿಮ್ಮ ಇಡೀ ಜೀವಮಾನವನ್ನು ಕುಶಲಕಲೆಗಳ ಅಧ್ಯಯನಕ್ಕಾಗಿ ಮುಡಿಪಾಗಿಟ್ಟಿದ್ದೀರಿ, ನಿಮ್ಮ ಜೀವಮಾನದ ಅವಧಿಯಲ್ಲಿಯೇ ನೀವೂ ಸುವಿಖ್ಯಾತರಾಗಿದ್ದೀರಿ, ನಮ್ಮ ಸಂಸ್ಥಾನಕ್ಕೆ ಅಪಾರ ಕೀರ್ತಿಯನ್ನು ಗಳಿಸಿಕೊಟ್ಟಿದ್ದೀರಿ ಅದನ್ನು ನಾವು ಕಲೆಯ ಮೂಲಕ ತೋರಿಸಿಕೊಡಬೇಕು ಎಂಬುದೇ ನಮ್ಮ ಮಹತ್ವಾಕಾಂಕ್ಷೆ ". ಸುಮಧುರ ವರ್ಣ ಸಂಯೋಜನೆಯನ್ನು ಕಲ್ಪಿಸಲು ವೆಂಕಟಪ್ಪನವರ ನೀಲಿ, ಹೊಂಬಣ್ಣ ಮತ್ತು ಕೆಂಪು ವರ್ಣಗಳು ಮೇಳೈಸಿರುವ ಈ ಸುಂದರವಾದ ಸಭಾಂಗಣದತ್ತ ಒಮ್ಮೆ ನೋಡಿದರೆ ಸಾಕು, ಈ ಮಹಾನ್ ಕಲಾಕಾರ ದಿವಂಗತ ಮಹಾರಾಜರ ನಿರೀಕ್ಷೆಯನ್ನು ಈಡೇರಿಸಿದ್ದಾರೆ ಎಂಬುದು ನಮಗೆ ಮನದಟ್ಟಾಗುತ್ತದೆ.

ಸೂಕ್ಷ್ಮಾಭಿರುಚಿಯ ಸುಂದರವಾದ ಈ ಸಭಾಂಗಣದಲ್ಲಿ ಮಹಾನ್ ಕಲಾವಿದ ಕೆ. ವೆಂಕಟಪ್ಪನವರು ರಚಿಸಿರುವ ಪ್ಲಾಸ್ಟರ್ ಆಫ್ ಪ್ಯಾರಿಸಿನ ಮೂರು ಅರೆಯುಬ್ಬು ಶಿಲ್ಪಗಳಿವೆ. ಇವನ್ನು ಕಿಟಕಿಗಲ ನಡುವೆ ದಕ್ಷಿಣದ ಗೋಡೆಗೆ ಸೇರಿಸಿಡಲಾಗಿದೆ. ಅವು ಹನುಮಂತನು ರಾಮದೇವರಿಂದ ಮುದ್ರಿಕೆ ಯುಂಗುರವನ್ನು ಸ್ವೀಕರಿಸುತ್ತಿರುವುದು (1930 ರಲ್ಲಿ ರಚಿಸಿದ್ದು), ಬುದ್ಧನು ಯಶೋದರೆ ಮತ್ತು ರಾಹುಲರಿಂದ ಭಿಕ್ಷೆ ಸ್ವಿಕರಿಸುತ್ತಿರುವುದು (1933-34 ರಲ್ಲಿ ರಚಿಸಿದ್ದು) ಮತ್ತು ಶಕುಂತಲೆ ಕಣ್ವ ಋಷಿಗಳಿಂದ ಬೀಳ್ಕೊಳ್ಳುತ್ತಿರುವುದು (1928 ರಲ್ಲಿ ರಚಿಸಿದ್ದು) ಅರಮನೆಗೆ ಭೂಷಣದಂತಿವೆ.

ಮೈಸೂರು ಅರಮನೆಯ ಪ್ರುಖ ಆಕರ್ಷಣೆಯೆಂದರೆ ಪರಂಪರಾಗತವಾಗಿ ಬಂದಿರುವ ಚಿನ್ನದ ಸಿಂಹಾಸನ

ಚಿನ್ನದ ಸಿಂಹಾಸನದಲ್ಲಿ ಆಸನ, ಸೋಪಾನ ಪಂಕ್ತಿ ಮತ್ತು ಚಿನ್ನದ ಕೊಡೆಗಳು ಇವೆ. ಕೊಡೆಯ ಯೊರ ಸುತ್ತಿನಲ್ಲಿ ಕೆತ್ತಲಾಗಿರುವ, ಅನುಷ್ಟುಪ್ ಛಂದಸ್ಸಿನಲ್ಲಿರುವ, 24 ಶ್ಲೋಕಗಳನ್ನು ಒಳಗೊಂಡ ಸಂಸ್ಕೃತ ಶಾಸನದ ಭಾಗವಾಗಿರುವ ಆಶೀರ್ವಾದ ಶ್ಲೋಕ ಈ ರೀತಿ ಇದೆ.

ಶ್ರೀ ಚಾಮುಣ್ಡಾಕೃಪಾಲ್ಲಬ್ಧಶಾಶ್ವತ್ಯೆಶ್ವರ್ಯಭಾಸ್ಕರ ।

ಕರ್ಣಾಟಕ ಪೃಥ್ವೀ ಸಾಮ್ರಾಜ್ಯ ರತ್ನ ಸಿಂಹಾಸನೇಶ್ವರ ॥

ಯಾದವಾನ್ವಯದುಗ್ಧಾಬ್ಧಿ ಶರದ್ರಾತ್ರಕುಸುಧಾರಕ

ಶ್ರೀ ಚಾಮರಾಜ ತನುಜ ಶ್ರೀ ಕೃಷ್ಣ ಧರಣೀಶ್ವರ ॥

ಕುಲ ಕ್ರಮಾಗತಂ ರಮ್ಯಂ ಭದ್ರಪೀಠಮುಪೇಯ ಷಃ

ಕೌತೂಹಲಾನಿ ಲೋಕಾನಂ ದೋಗ್ಧಿ ಛತ್ರಮಿದಂ ತವ ॥

ತದ್ವಶೋ ವಿಮಲೇಂದು ಶ್ರೀ ಜಾತಾಭಿಭವಶಂಕಿತಃ

ಏಷರಾಕುಸುಧಾಂಶು ಸ್ತ್ವಾಂ ಛತ್ರವ್ಯಾಜೇನ ಸೇವತೇ ॥

ತ್ವದಾಶ್ರಯಮಹಿಮ್ನಾ ಸೌನ್ಯಕೃತ್ಯ ತಪನತ್ವಿಷಂ

ಸದಾ ಕುವಲ ಯಾನಂದಮಾದತ್ತೇ ಛತ್ರಚಂದ್ರಮಾಃ ॥

ತಾತ್ಪರ್ಯ: ಚಾಮರಾಜರ ಪುತ್ರನಾದ ಭೂಮಂಡಲಾಧಿಪತಿಯಾದ ದೊರೆ ಕೃಷ್ಣನೇ, ನಿನಗೆ ದೇವಿ ಚಾಮುಂಡೇಶ್ವರಿಯ ಕೃಪೆಯಿದೆ. ನೀನು ಕರ್ನಾಟಕ ರತ್ನ ಸಿಂಹಾಸನಾಧೀಶ್ವರ ಯದುವಂಶದ ಕ್ಷೀರಸಾಗರಕ್ಕೆ ನಿನು ಚಂದ್ರನಾಗಿದ್ದೀಯೆ. ನಿಮ್ಮ ಖ್ಯಾತ ಪೂರ್ವಿಕರಿಂದ ಪಡೆದುಕೊಂಡ ಚಿನ್ನದ ಸಿಂಹಾನದ ಚಿನ್ನದ ಛತ್ರಿಯ ಇಡೀ ವಿಶ್ವದ ಕುತೂಹಲವನ್ನು ಕೆರಳಿಸುತ್ತದೆ.

ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಉದ್ದೇಶಿಸಲಾಗಿರುವ ಈ ಶಾಶನದ ಪ್ರಕಾರ ಈ ರತ್ನ ಖಚಿತ ಸಿಂಹಾಸನವು ಮೈಸೂರು ರಾಜವಂಶಕ್ಕೆ ರಾಜರ ತಲೆಮಾರುಗಳಿಂದ ಬಂದುದಾಗಿದೆ.

ಈ ವಿಶಿಷ್ಟ ಸಿಂಹಾಸನದ ಇತಿಹಾಸ ರೋಮಾಂಚಕವಾಗಿದೆ. ಒಂದು ಪರಂಪರೆ ಪ್ರಕಾರ ಈ ಸಿಂಹಾಸನ ಮಹಾಭಾರತ ಖ್ಯಾತಿಯ ಪಾಂಡವರಿಗೆ ಸೇರಿದುದಾಗಿದ್ದು, ಇದು ಹಸ್ತಿನಾಪುರದಲ್ಲಿದ್ದಿತು. ಕಂಪಿಲರಾಯನು ಇದನ್ನು ಹಸ್ತಿನಾಪುರದಿಂದ ಈಗ ಆಂಧ್ರಪ್ರದೇಶದಲ್ಲಿರುವ ಪೆನುಗೊಂಡಕ್ಕೆ ತಂದ ಅಲ್ಲಿ ಇದನ್ನು ಭೂಮಿಯೊಳಗೆ ಇಡಲಾಗಿತ್ತು.

ವಿಜಯನಗರ ದೊರೆಗಳ ರಾಜಗುರುಗಳಾಗಿದ್ದ ವಿದ್ಯಾರಣ್ಯರು ಅದನ್ನು ಎಲ್ಲಿ ಹೂಳಲಾಗಿದೆ ಎಂಬುದನ್ನು ಒಂದನೇ ಹರಿಹರನಿಗೆ ಕ್ರಿ.ಶ. 1336ರಲ್ಲಿ ತೋರಿಸಿಕೊಟ್ಟರು. ಒಂದನೇ ಹರಿಹರನು ವಿಜಯನಗರ ಸಾಮ್ರಾಜ್ಯ ಸಂಸ್ಥಾಪರ ಪೈಕಿ ಒಬ್ಬನಾಗಿದ್ದ. ಈತ ಅದನ್ನು ಶೋಧನೆ ಮಾಡಿ ಮತ್ತೆ ಪಡೆದುಕೊಂಡ. ಈ ಪವಿತ್ರ ಸಿಂಹಾಸನವನ್ನು ಸುಮಾರು ಒಂದೂವರೆ ಶತಮಾನಕ್ಕೂ ಹೆಚ್ಚಿನ ಕಾಲ ಆನೆಗೊಂದಿಯಲ್ಲಿದ್ದ ವಿಜಯನಗರದ ರಾಜರು ಉಪಯೋಗಿಸುತ್ತಿದ್ದರು. ಹದಿನೇಳನೆಯ ಶತಮಾನದ ಆದಿ ಭಾಗದಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರ ದೊರೆಗಳ ಮಾಂಡಲೀಕನು ಇದನ್ನು ಪಡೆದುಕೊಂಡ ಮತ್ತು ಇಲ್ಲಿಗೆ ತಂದ.

1609ರಲ್ಲಿ ಅಸ್ವಸ್ಥನಾಗಿದ್ದ ಅಧಿಪತಿ ಶ್ರೀರಂಗರಾಯನು ತಲಾಡಿಗೆ ಹೊರಟುಹೋಗುವ ಮೊದಲು ರಾಜ ಒಡೆಯರಿಗೆ ಸಿಂಹಾಸವನ್ನು ವಹಿಸಿಕೊಟ್ಟ. 1610ರಲ್ಲಿ ರಾಜ ಒಡೆಯರು ವೈಭವಾಡಂಬರಗಳೊಡನೆ ಈ ಸಿಂಹಾಸನವನ್ನು ಆರೋಹಣ ಮಾಡಿದರು ಮತ್ತು ದಸರಾ ಮಹೋತ್ಸವಗಳನ್ನು ಪ್ರಾರಂಭಿಸಿದರು. ತಮ್ಮ ವಂಶಜರು ಈ ಉತ್ಸವಗಳನ್ನು ನಿರಂತರವಾಗಿ ಮುಂದುವರೆಸಿಕೊಂಡು ಬರಬೇಕೆಂಬುದಾಗಿಯೂ ಗೊತ್ತು ಪಡಿಸಿದರು. ಈ ರಾಜ ಸಿಂಹಾಸನ 1699ರಲ್ಲಿ ಚಿಕ್ಕದೇವರಾಜ ಒಡೆಯರ ವಶದಲ್ಲಿದ್ದಿತು ಎಂಬುದನ್ನು ಶಾಸನಾಧಾರಗಳು ಸೂಚಿಸುತ್ತವೆ. ಇದು ಟೀಪೂ ಸುಲ್ತಾನನ ಕಾಲದವರವಿಗೆ ಈ ರಾಜವಂಶದ ಸ್ವಾಧೀನದಲ್ಲಿದ್ದಿತು ಎಂಬುದನ್ನು ಇತರ ಐತಿಹಾಸಿಕ ದಾಖಲೆಗಳು ಸೂಚಿಸುತ್ತವೆ.

ಮತ್ತೊಂದು ಪರಂಪರೆಯ ಪ್ರಕಾರ, ಈ ಸಿಂಹಾಸನ ಕ್ರಿ.ಶ. 1700ರಲ್ಲಿ ಚಿಕ್ಕ ದೇವರಾಜ ಒಡೆಯರಿಗೆ ಔರಂಗಜೇಬನು ನೀಡಿದ ಬಳುವಳಿ ಎನ್ನಲಾಗಿದೆ. ಔರಂಗಜೇಜನ ಆಸ್ಥಾನದಲ್ಲಿದ್ದ ಒಬ್ಬ ಆಸ್ಥಾನಿಕನೂ, ಚಿಕ್ಕ ದೇವರಾಜ ಒಡೆಯರ ಮಿತ್ರನೂ ಆಗಿದ್ದ ಖಾಸಿಮ ಖಾನನು ದೆಹಲಿಯಲ್ಲಿ ಕಾಲವಾದನು. ಮೈತ್ರಿ ಬೆಳೆಸುವ ಸಲುವಾಗಿ ಸಾಮ್ರಾಟನಲ್ಲಿಗೆ ಒಂದು ನಿಯೋಗ ಕಳುಹಿಸಲು ಚಿಕ್ಕ ದೇವರಾಜ ಒಡೆಯರು ನಿರ್ಧರಿಸಿದರು. 1699ರಲ್ಲಿ ಹೊರಟ ನಿಯೋಗ 1700ರಲ್ಲಿ ವಾಪಸ್ಸು ಮರಳಿ ಬಂದಿತು. ಔರಂಗಜೇಬನು ಜಗದೇವರಾಜ ಎಂಬ ಅಂಕಿತದೊಡಗೂಡಿದ ಮುದ್ರೆಯುಂಗುರವನ್ನು

ದಂತದ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಅನುಮತಿಯನ್ನು ಕಳುಹಿಸಿದ ಎನ್ನಲಾಗಿದೆ. ಆದರೆ, ಈ ಪರಂಪರೆಗೆ ಸಾಕಷ್ಟು ಐತಿಹಾಸಿಕ ಸಾಕ್ಷ್ಯಾಧಾರದ ಬೆಂಬಲವಿಲ್ಲ.

ಟಿಪ್ಪು ಸುಲ್ತಾನನ ಪತನಾನಂತರ, ಈ ಸಿಂಹಾಸನವನ್ನು ಶ್ರೀರಂಗಪಟ್ಟಣದಲ್ಲಿ ಸುಲ್ತಾನನ ಅರಮನೆಯ ಒಂದು ಕೊಠಡಿಯಿಂದ ಸ್ವಾಧೀನ ಪಡಿಸಿಕೊಳ್ಳಲಾಯಿತು. ಈ ರಾಜ ಸಿಂಹಾಸನವನ್ನು ಶೀಘ್ರವಾಗಿ ಜೀರ್ಣೋದ್ಧಾರಗೊಳಿಸಿ 1799ರಲ್ಲಿ ಬಾಲದೊರೆ ಮುಮ್ಮಡಿ ಕೃಷ್ಣರಾಜ ಒಡೆಯರ ಪಟ್ಟಾಭಿಷೇಕಕ್ಕೆ ಬಳಸಲಾಯಿತು. ಎಂಬುದಾಗಿ ತಿಳಿದು ಬರುತ್ತದೆ. ಅಂದಿನಿಂದ ಈ ರಾಜ ಸಿಂಹಾಸನ ಮೈಸೂರು ರಾಜ ಸಿಂಹಾಸನವಾಗಿ ಮೈಸೂರು ರಾಜ ಪರಿವಾರದವರಲ್ಲಿಯೇ ಉಳಿದಿದೆ.

ಈ ರಾಜ ಸಿಂಹಾಸವನ್ನು ಚಿನ್ನದ ಕಂಬಗಳು ಮತ್ತು ಮಾವಿನ ಎಲೆಗಳಿಂದ ಸಿಂಗರಿಸಿದೆ. ಪೀಠಕ್ಕೆ ಸಾಗುವ ಸೋಪಾನ ಪಂಕ್ತಿಯ ಕಟಾಂಜನವನ್ನು ಸ್ತ್ರೀ ಆಕೃತಿಗಳಿಂದ ಅಲಂಕರಿಸಿದೆ. ಚಿನ್ನದ ಛತ್ರಿಗೆ ತೋರಣಗಳಿವೆ. ಪೀಠವು ಕೂರ್ಮಾಸನವಾಗಿದೆ. ಸಿಂಹಾಸನದ ನಾಲ್ಕು ಪಾರ್ಶ್ವಗಳು ವ್ಯಾಳಗಳಿಂದ ಮತ್ತು ಲತೆಗಳಿಂದ ಅಲಂಕೃತವಾಗಿವೆ. ಪೂರ್ವದಲ್ಲಿ ಆನೆಗಳು, ದಕ್ಷಿಣದಲ್ಲಿ ಕುದುರೆ, ಪಶ್ಚಿಮದಲ್ಲಿ ಸೈನಿಕರು ಮತ್ತು ಉತ್ತರದಲ್ಲಿ ರಥಗಳು ರಾಜಸಿಂಹಾನವನ್ನು ಅಲಂಕರಿಸಿವೆ. ದಕ್ಷಿಣದಲ್ಲಿ ಬ್ರಹ್ಮ, ಉತ್ತರದಲ್ಲಿ ಮಹೇಶ್ವರ ಮತ್ತು ಮಧ್ಯದಲ್ಲಿ ವಿಷ್ಣು ಹೀಗೆ ತ್ರಿಮೂರ್ತಿಗಳೂ ಇರುವರು. ಮೂಲೆಗಳಲ್ಲಿ ವಿಜಯ ಮತ್ತು ನಾಲ್ಕು ಸಿಂಹಗಳು, ಕಾಲ್ಪನಿಕ ಶಾರ್ದೂಲಗಳೆರಡು, ಎರಡು ಅಶ್ವಗಳು ಮತ್ತು ಹಂಸಗಳು ಇವು ಹೀಗೆ ಇದರ ನಾಲ್ಕು ಮೂಲೆಗಳಲ್ಲೂ ಇವೆ. ಇದನ್ನು ನಾಗ ಅಪ್ಸರೆಯರು ಮತ್ತು ಅಷ್ಟ ದಿಕ್ಪಾಲಕರು ಸುಂದರಗೊಳಿಸಿರುವರು.

ಈ ಸಿಂಹಾಸನವು ಒಂದು ಸುಂದರ ಕಲಾಕೃತಿಯಾಗಿದೆ. 1940ರಲ್ಲಿ ಇದು ಸಣ್ಣಪುಟ್ಟ ಮಾರ್ಪಾಡುಗಳಿಗೆ ಒಳಗಾಗಿದೆಯಾದರೂ, ಮೂಲ ಕಲಾಕೃತಿ ಕಲಾತ್ಮಕ ಅಲಂಕರಣದ ಅಂಶಗಳನ್ನು ಉಳಿಸಿಕೊಂಡಿದೆ.

ಅರಮನೆಯ ಮುಂಭಾಗದಲ್ಲಿ ಇರುವ ವಿಶಾಲವಾದ ಬಯಲು ಮತ್ತು ಅಲ್ಲಿ ರೂಪಿಸಲಾಗುತ್ತಿರುವ ಉದ್ಯಾನವನ. ಅರಮನೆಯ ಇಡೀ ರಚನೆಗೆ ಆಕರ್ಷಕ ಮತ್ತು ಭವ್ಯತೆಯನ್ನುಂಟುಮಾಡಿದೆ. ಈ ಅರಮನೆ ಅದರ ದೀಪಾಲಂಕಾರಕ್ಕೆ ಪ್ರಸಿದ್ಧವಾಗಿದೆ. ಇಡೀ ಅರಮನೆಯ ಕಟ್ಟಡಕ್ಕೆ ಅದರ ಆಕೃತಿ ರೇಖೆಯನ್ನು ಅನುಸರಿಸಿ ಸಾಲುಸಾಲಾಗಿ ವಿದ್ಯುದ್ ಬಲ್ಬುಗಳನ್ನು ಹಾಕಲಾಗಿದೆ. ಅದನ್ನು ಹತ್ತಿಸಿದಾಗ ದೀಪಗಳದೇ ಅರಮನೆಯಂತೆ ಕಾಣುತ್ತದೆ. ಮೈಸೂರು ಅರಮನೆಯೊಂದಿಗೆ ಹೋಲಿಸಬಹುದಾದಂಥ ಇನ್ನೊಂದು ರಚನೆ ಪ್ರಪಂಚದಲ್ಲಿ ಬೇರೆ ಎಲ್ಲಿಯೂ ಇಲ್ಲ ಮತ್ತು ಅದು ವಿಶಿಷ್ಟವಾಗಿದೆ ಎಂದು ಅರಮನೆಗೆ ಭೇಟಿ ನೀಡುವವರು ಉದ್ಗರಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಮೈಸೂರು ಕೋಟೆ:

ಮೈಸೂರಿನ ಅರಮನೆಯ ಕೋಟೆಯು ಪಶ್ಚಿಮ ತುದಿಯಲ್ಲಿದೆ. ಕೋಟೆ ಬಹುಮಟ್ಟಿಗೆ ಚತುರ್ಭುಜಾಕೃತಿಯದಾಗಿದೆ. ಮೈಸೂರು ರಾಜ ಸಂತತಿಯ ಸಂಸ್ಥಾಪಕರಾದ ಯದುರಾಯರು ಮೈಸೂರು ಸಂಸ್ಥಾನದ ಆಡಳಿತ ಸೂತ್ರವನ್ನು ಸ್ವೀಕರಿಸಿದಾಗ, ಸಣ್ಣಮಣ್ಣಿನ ಕೋಟೆಯಿತ್ತು ಎನ್ನಲಾಗಿದೆ. ವಾಸ್ತವವಾಗಿ ಅದನ್ನು ಅನೇಕ ಸಲ ಮಾರ್ಪಾಡುಗೊಳಿಸಲಾಗಿದೆ, ವಿಸ್ತರಿಸಲಾಗಿದೆ ಮತ್ತು ಪುನರ್ ನಿರ್ಮಿಸಲಾಗಿದೆ. ಕೆಲವು ಆಧಾರಗಲ ಪ್ರಕಾರ, ಮೂರನೇ ಬೆಟ್ಟದ ಚಾಮರಾಜ ಒಡೆಯರ (1513–1552) **ಕಾಲದಲ್ಲಿ ಕೋಟೆಯನ್ನು ಕಟ್ಟಲಾಯಿತು ಮತ್ತು ಪುನರ್ ನಿರ್ಮಿಸಲಾಯಿತು ಕೋಟೆಯನ್ನು ಮೂಲತಃ** ಸುಮಾರು 1574ರಲ್ಲಿ ನಾಲ್ಕನೇ ಚಾಮರಾಜ ಒಡೆಯರು ಕಟ್ಟಿಸಿದರೆಂದು ಮತ್ತೆ ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಅವರು ತಮ್ಮ ರಾಜಧಾನಿಯನ್ನು ಹದಿನಾರಿನಿಂದ ಪುರಗೆರೆಗೆ ಸ್ಥಳಾಂತರಿಸಿದರು ಎನ್ನಲಾಗಿದೆ. ಆದರೆ ಟಿಪ್ಪುವು ನಜರ್‌ಬಾದಿನಲ್ಲಿ ಹೊಸ ನಗರವನ್ನು ಕಟ್ಟಬೇಕು ಎಂದು ಅಪೇಕ್ಷಿಸಿದಾಗ ಕೋಟೆಯಲ್ಲಿದ್ದ ಪ್ರಾಚೀನ ದೇವಸ್ಥಾನಗಳನ್ನು ಬಿಟ್ಟು ಅರಮನೆ ಮತ್ತು ಕೋಟೆಯನ್ನು ಕೆಡವಿಸಿಬಿಟ್ಟ. 1799ರಲ್ಲಿ ಟಿಪ್ಪುವಿನ ಪತನವಾದನಂತರ ಕೋಟೆ ಮತ್ತು ಅದರಲ್ಲಿದ್ದ ಅರಮನೆಯನ್ನು ಪುನರ್ ನಿರ್ಮಾಣ ಮಾಡಲಾಯಿತು.

ಅರಮನೆ ಕೋಟೆಯ ಬಗ್ಗೆ ಲ್ಯೂಯಿ ರೈಸ್ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಅದನ್ನೇ ಇಲ್ಲಿ ಉದ್ಧರಿಸುವುದು ಸೂಕ್ತವೆನಿಸುತ್ತದೆ.

"ಕೋಟೆಯು ಚೌಕಾಕಾರದ ತಳಕಟ್ಟಿನಿಮದ ಆಗಿದೆ. ಇದರ ಮೂರು ಪಾರ್ಶ್ವಗಳು ಸುಮಾರು 450 ಗಜಗಲ ಉದ್ದವಿರುವುದರಿಮದ ದಕ್ಷಿಣದ ಇನ್ನೊಂದು ಪಾರ್ಶ್ವ ಸ್ವಲ್ಪಮಟ್ಟಿಗೆ ಹೆಚ್ಚು ಉದ್ದವಾಗಿದೆ. ಉತ್ತರ, ದಕ್ಷಿಣ ಮತು ಪಶ್ಚಿಮಗಳಲ್ಲಿ ಮಹಾದ್ವಾರಗಳನ್ನು ಇಡಲಾಗಿದೆ. ಉತ್ತರ ಮತ್ತು ದಕ್ಷಿಣದಲ್ಲಿರುವ ಮಹಾದ್ವಾರಗಳು ಕೋಟೆಯ ಮುಂಗಟ್ಟಡಗಳಿಂದ ಸಂರಕ್ಷಿತವಾಗಿದೆ. ಸುತ್ತುವರಿದಿರುವ ದುರ್ಗಗಳ ಮಧ್ಯೆ ಅಲ್ಲಲ್ಲಿ ಕೂಡು ಗೋಡೆಗಳು ಇವೆ. ಆಗ್ನೇಯ ದಿಕ್ಕಿನಲ್ಲಿ ಫಿರಂಗಿ ಹೊಡೆಯಲು ಕಿಂಡಿಗಳಿರುವ ಕಿಂಡಿ ಕೋಣೆ ಮತ್ತು ಈಶಾನ್ಯ ಮೂಲೆಯಲ್ಲಿ ದಿಬ್ಬವಿರುವ ಬೆಂಗಾವಲು ನೆಲೆ ಇದೆಯಾದರೂ ರಕ್ಷಣೆಗಳು ಸುಯೋಜಿವಾಗಿಲ್ಲ ಮತ್ತು ಸಾಕಷ್ಟು ಪ್ರಮಾಣದಲ್ಲಿಯೂ ಇಲ್ಲ. ಎಲ್ಲ ಪರ್ಶ್ವಗಳಲ್ಲೂ ಕೋಟೆಗೆ ಅಂಟಿಕೊಂಡಂತೆ ಮನೆಗಳು ಇವೆ. ಕೋಟೆಯ ಸುತ್ತ ಕಂದಕ ಮತ್ತು ದೇವರಾಜ ಕೆರೆಯನ್ನು ನಂಜನಗೂಡಿನ ಹೆದ್ದಾರಿ ಬೇರ್ಪಡಿಸಿದೆ. ಕೋಟೆಯ ಒಳಭಾಗವು ಮನೆಗಳಿಂದ ಮುಖ್ಯವಾಗಿ ಅರಮನೆಯ ಭೃತ್ಯವರ್ಗದ ನಿವಾಸಿಗಳಿಂದ ಇಡಿಕಿರಿದಿದ್ದಿತು. ಅವೆಲ್ಲ ಈಗ ಬದಲಾವಣೆಗೊಂಡಿವೆ. ಕಂದಕವನ್ನು ಭರ್ತಿಮಾಡಲಾಗಿದೆ. ಅರಮನೆಯ ಸುತ್ತು ಅಲಂಕಾರಿಕ ಸಸ್ಯಗಳನ್ನು ಮತ್ತು ತೋಪುಗಳನ್ನು ಬೆಳೆಸಲಾಗಿದೆ ಮತ್ತು ಉದ್ಯಾನಗಳನ್ನು ರೂಪಿಸಲಾಗಿದೆ. ಒಳಭಾಗದಲ್ಲಿ ತುಂಬ ಇಡಿಕಿರಿದಿದ್ದ ಭಾಗಗಳನ್ನು ಖಾಲಿ ಮಾಡಿಸಲಾಗಿದೆ. ಮತ್ತು ಸಾಮಾನ್ಯ ಸುಧಾರಣೆಗಳನ್ನು ಮಾಡಲಾಗಿದೆ.

ಇಪ್ಪತ್ತನೆಯ ಶತಮಾನದ ಮೊದಲ ಪಾದದಲ್ಲಿ ಕೋಟೆಯ ಒಳಗಡೆ ಅನೇಕ ಮನೆಗಳು ಮತ್ತು ಕಿರಿದಾದ ರಸ್ತೆಗಳು ಇದ್ದವು. ಹಿತ್ತಾಳೆ ಮಾರುವವರ ಮತ್ತು ಹೂವಾಡಿಗರ ಬೀದಿಗಳು ತುಂಬ ಆಕರ್ಷಕವಾಗಿದ್ದವು. 1898ರಲ್ಲಿ ಪ್ಲೇಗ್ ತಲೆದೋರಿತು. ಇದರಿಂದ ಅಪಾರ ಸಂಖ್ಯೆಯಲ್ಲಿ ಜನರು ಸತ್ತರು. ಹಾಗಾಗಿ ಕೋಟೆಯ ಒಳಭಾಗ ನಿವಾಸಿಗಳಿಂದ ಮುಕ್ತವಾಯಿತು. ಇದರಿಂದ ಕೋಟೆಯ ಒಳಭಾಗದಲ್ಲಿ ವಿವಿಧ ದೇವಸ್ಥಾನಗಳಿರುವ ವಿಶಾಲವಾದ ಮೈದಾನ ಈ ಲಭ್ಯವಾಗಿದೆ.

ಇಂದು ಕೋಟೆಗೆ ಐದು ಪ್ರವೇಶ ದ್ವಾರಗಳಿವೆ. ಈ ಎಲ್ಲ ದ್ವಾರಗಳನ್ನು ಇಂಡೋಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿಸಲಾಗಿದೆ. ಜಯ ಮಾರ್ತಾಂಡ ಎಂಬ ಪೂರ್ವದಿಕ್ಕಿನ ಮಹಾದ್ವಾರ ಭವ್ಯವಾಗಿದೆ ಮತ್ತು ಪ್ರಭಾವ ಬೀರುವಂತಿದೆ. ಅದನ್ನು ಪುನರ್ಬಲಗೊಳಿಸಿ ಕಾಂಕ್ರಿಟಿನಿಂದ ನಿರ್ಮಿಸಲಾಗಿದೆ. ಮಧ್ಯದ ಕಮಾನು ದಾರಿ 60 ಅಡಿ ಎತ್ತರವಾಗಿದೆ. 45ಅಡಿ ವಿಸ್ತಾರವಾಗಿದೆ. ಉಳಿದ ಮಹಾದ್ವಾರಗಳು ಉತ್ತರದಲ್ಲಿ ಬಲರಾಮ ಜಯರಾಮ, ದಕ್ಷಿಣದಲ್ಲಿ ವರಾಹ ದ್ವಾರ ಎಂದು ಪ್ರಸಿದ್ಧವಾಗಿರುವ ದಕ್ಷಿಣ ಮಹಾದ್ವಾರದಿಂದ ಪ್ರವೇಶಿಸುತ್ತಾರೆ.

ಅರಮನೆಯ ಕೋಟೆಯ ಮುಂದಿನ ಇಡೀ ಬಯಲನ್ನು ಹಸಿರು ಹುಲ್ಲಿನ ಹಾಸುಗಳ ಸಮೇತ ಸುಂದರವಾದ ಉದ್ಯಾನವನವಾಗಿ ದಕ್ಷಿಣದಲ್ಲಿನ ಭಾಗವನ್ನು ಗುಲಾಬಿ ತೋಟವನ್ನಾಗಿ ಮತ್ತು ಹುಲ್ಲು ಹಾಸುಗಳನ್ನಾಗಿ ಹಾಗೂ ಉತ್ತರದಲ್ಲಿನ ಭಾಗವನ್ನು ಧ್ವಜೋದ್ಯಾನಗಳಾಗಿ ಅಭಿವೃದ್ಧಿಪಡಿಸಲಾಗಿದೆ. ಜಯಮಾರ್ತಾಂಡ ಮಹಾದ್ವಾರದ ಮುಖ್ಯಹಾದಿಯ ಇಕ್ಕೆಲಗಳಲ್ಲಿ ಬೃಹದ್ ಹುಲ್ಲು ಹಾಸುಗಳಲ್ಲಲಲಿ ವರ್ತುಲಾಕಾರದ ಎರಡು ಕಾರಂಜಿಗಳನನು ಕೂಡ ಅಳವಡಿಸಲಾಗಿದೆ.

ದರ್ಬಾರು ಸಭಾಂಗಣದ ಮುಂಭಾಗದಲ್ಲಿ ಕಾಂಕ್ರೀಟು ಹಾಕಿರುವ ಅರೆ ವೃತ್ತಾಕಾರದ ಪ್ರದೇಶವಿದೆ. ಇದನ್ನು ದಸರಾ ಉತ್ಸವಗಳ ಸಮಯದಲ್ಲಿ ಸಮೂಹ ವಾದ್ಯ(ಮಾಸ್ ಬ್ಯಾಂಡ್) ಕಾರ್ಯಕ್ರಮಗಳು ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಉಪಯೋಗಿಸಿಕೊಳ್ಳಲಾಗುವುದು. ಈ ಪ್ರದೇಶದ ಪೂರ್ವ, ದಕ್ಷಿಣ ಮತ್ತು ಉತ್ತರದ ಮುಖ್ಯ ಹಾದಿಗಳಲ್ಲಿ ಬೃಹತ್ ಕಂಚಿನ ಹುಲಿಗಳ ರೂಪದಲ್ಲಿ ಜೋಡಿಯಾಗಿ ಆರು ಕಲಾವಸ್ತುಗಳು ವಿಜೃಂಭಿಸುತ್ತಿವೆ. ಅವನ್ನು ಸೂಕ್ತವಾದ ಪೀಠಗಳ ಮೇಲೆ ಅಳವಡಿಸಲಾಗಿದೆ. ಇಂಥದೇ ಹುಲಿಗಳ ಮತ್ತೊಂದು ಜೋಡಿಯನ್ನು ಕಲ್ಯಾಣ ಮಂಟಪದ ಸಂಕೀರ್ಣದ ಉತ್ತರಕ್ಕಿರುವ ಅಂಗಳದಲ್ಲಿ ಮಹಡಿ ಮೆಟ್ಟಿಲುಗಳ ಎರಡೂ ಪಾರ್ಶ್ವಗಳಲ್ಲಿ ಕಲ್ಲಿನ ಪೀಠಗಳ ಮೇಲೆ ಇರಿಸಲಾಗಿದೆ. ಈ ಕಂಚಿನ ಎಂಟು ಹುಲಿಗಳನ್ನು ಬ್ರಿಟನ್ನಿನ ರಾಯಲ್ ಅಕಾಡೆಮಿ ಬ್ರಿಟಿಷ್ ಶಿಲ್ಪಿ ರಾಬರ್ಟ್ ವಿಲಿಯಂ ಕೋಲ್ಬನ್‌ರವರು ನಿರ್ಮಿಸಿದ್ದಾರೆ. ಇವನ್ನು ರಜತ ಮಹೋತ್ಸವ ಗಡಿಯಾರ ಸ್ತಂಭದ(ದೊಡ್ಡ

ಗಡಿಯಾರದ) ಎದುರಾಗಿ ಹಳೆಯ ಪ್ರತಿಮಾ ವೃತ್ತದಲ್ಲಿರುವ ಚಾಮರಾಜೇಂದ್ರ ಒಡೆಯರ ಅಮೃತ ಶಿಲಾ ಪ್ರತಿಮೆ ಬಳಿ ಪ್ರಮುಖ ಸ್ಥಾನಗಳಲ್ಲಿ ಇಡಬೇಕೆಂದು ಮೊದಲಿಗೆ ಉದ್ದೇಶಿಸಲಾಗಿತ್ತು. ಆದರೆ ಅವು ತಮ್ಮ ಹಂಗಾಮೀ ನೆಲೆಯಲ್ಲಿಯೇ ಖಾಯಂ ಆಗಿ ಉಳಿದುಕೊಂಡವು. 1909ರಲ್ಲಿ ರಾಬರ್ಟ್ ವಿಲಿಯಂ ಕೋಲ್ಟನ್ ಶಿಲಾ ಪ್ರತಿಮೆ ಮತ್ತು ಇತರ ಶಿಲ್ಪಗಳನ್ನು ನಿರ್ಮಿಸುವ ಸಲುವಾಗಿ ಅಧ್ಯಯನ ನಡೆಸಲು ಮೈಸೂರಿನಲ್ಲಿ ಮೂರು ತಿಂಗಳು ಕಳೆದಿದ್ದರು. ಕಂಚಿನ ಹುಲಿಗಳ ಪೈಕಿ ಒಂದರಲ್ಲಿ ಶಿಲ್ಪಿಯ ಸಹಿಯಿದೆ ಮತ್ತು 1909ರಲ್ಲಿ ಎಂಬ ಕಾಲವೂ ನಮೂದಿತವಾಗಿದೆ.

ಅರಮನೆ ಇಂದು:

ಮೈಸೂರು ಅರಮನೆಯಲ್ಲಿ ಮಹಾರಾಜರು ದರ್ಬಾರ್ ಮಾಡುವ, ದರ್ಬಾರ್ ಹಾಲ್ ಮತ್ತು ರಾಜ ವಂಶಸ್ಥರು ವಾಸ ಮಾಡುವ ವಾಸ ಗೃಹವೆಂದು ಪ್ರಮುಖವಾಗಿ ಎರಡು ವಿಭಾಗವಾಗಿ ಗುರುತಿಸಲಾಗಿದೆ.

ಪ್ರಸ್ತುತ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕುಟುಂಬ ವರ್ಗದವರು ಅರಮನೆಯ ಪಶ್ಚಿಮ ಭಾಗದ ಆವರಣದಲ್ಲಿ ವಾಸವಾಗಿದ್ದಾರೆ.

ಅರಮನೆಗೆ ಭೇಟಿ ನೀಡುವ ವ್ಯಕ್ತಿಗಳಿಗೆ ಕಾರು ಮಾರ್ಗವಾಗಿ ಗೊಂಬೆ ತೊಟ್ಟಿಗೆ ಪ್ರವೇಶ ಕಲ್ಪಿಸಲಾಗಿದೆ. ಕಾರು ಮಾರ್ಗದಲ್ಲಿ ಮದ್ದುಗುಂಡು ಪೆಟ್ಟಿಗೆಗಳ ಸಹಿತ ನಾಲ್ಕು ಫಿರಂಗಿ ಗಾಡಿಗಳೊಡನೆ ಏಳು ಫಿರಂಗಿಗಳನ್ನು ಇಡಲಾಗಿದೆ. ಇವುಗಳ ಪೈಕಿ ಏಳು ಫಿರಂಗಿಗಳನ್ನು ಉತ್ಸವ ಸಂದರ್ಭಗಳಲ್ಲಿ ಎಂದರೆ ಮಹಾರಾಜರ ವರ್ಧಂತಿಗಳು, ವಿಜಯ ದಶಮಿಯಂದು ದಸರಾ ಮೆರವಣಿಗೆಗೆ ಮುಮಚೆ ಮತ್ತು ಬನ್ನಿ ಮಂಟಪದಲ್ಲಿ ಉಪಯೋಗಿಸಲಾಗುತ್ತಿತ್ತು. ಇಂದಿಗೂ ವಿಜಯ ದಶಮಿಯಂದು ಅಭಿನಂದನೆ ಸಲ್ಲಿಸಲು ಈ ಫಿರಂಗಿಗಳನ್ನು ಬಳಸಲಾಗುವುದು. ಪೆಟ್ಟಿಗೆಗಳನ್ನು ಹೊಂದಿರುವ ಉಳಿದ ನಾಲ್ಕನ್ನು ಫಿರಂಗಿ ಗಾಡಿಗಳು ಎಂದು ಕರೆಯುವರು. ಗೌರವ ರಕ್ಷೆಗಾಗಿ ಬಳಸುವ ಈ ಏಳು ಫಿರಂಗಿಗಳ ಪೈಕಿ ನಾಲ್ಕು ಫಿರಂಗಿಗಳನ್ನು ಫರ್ತ್ಸ್ ಉಕ್ಕಿನಿಂದ (Firths Steel) ಮಾಡಲಾಗಿದೆ. ಮತ್ತು ಅವುಗಳ ಮೇಲೆ HONI SOIT QUI MAL Y

PENSE ಎಂಬ ಫ್ರೆಂಚ್ ಬರಹವಿದೆ. ಉಳಿದ ಮೂರು ಹಿತ್ತಾಳೆಯಿಂದ ಮಾಡಿದುವಾಗಿವೆ. ಕುಶಲಕರ್ಮಿಯ ಹೆಸರು ಎ.ಬ್ರೋಮೆ ಸ್ಥಳ ಕಾಸಿಪುರ ಹಾಗೂ 1856, 1857 ಮತ್ತು 1859 ಎಂಬ ಬೇರೆಬೇರೆ ವರ್ಷಗಳು ನಮೂದಾಗಿವೆ. 1856 ಮತು 1857 ಎಂಬ ಕಾಲ ನಮೂದಾಗಿರುವುವುಗಳಲ್ಲಿ ಚಕ್ರವರ್ತಿಯನ್ನು ಪ್ರತಿನಿಧಿಸುವ ರಾಜ ಲಾಂಛನವಿದೆ. ಅವುಗಳ ಮೇಲೆ VR (ವಿಕ್ಟೋರಿಯಾ ರೆಜಿನಾ) ಎಂಬ ಸಂಕೇತ ಮತ್ತು ಶಾಸನ ಬರಹ ಇವೆ. 1859ರ ಕಾಲಮಾನ ನಮೂದಿತವಾಗಿರುವುದರಲ್ಲಿ ಎಂಬ FONI SOIT QUI MAL Y PENSE ಎಂಬ ಫ್ರೆಂಚ್ ಬರಹವಿದೆ.

ಗೊಂಬೆ ತೊಟ್ಟಿ :

ದಸರಾ ಉತ್ಸವಗಳಲ್ಲಿ ಬೊಂಬೆಗಲ ಪ್ರದರ್ಶನಕ್ಕೆಂದು ಮೂಲತಃ ಗೊಂಬೆ ತೊಟ್ಟಿಯನ್ನು ನಿರ್ಮಿಸಲಾಗಿತ್ತು. ದಸರಾ ಸಮಯದಲ್ಲಿ ಬೊಂಬೆಗಳ ಪೂಜೆಯನ್ನು ನಡೆಸುವುದು ಮೈಸೂರಿನಲ್ಲಿ ಒಂದು ಸಂಪ್ರದಾಯವೇ ಆಗಿದೆ. ಇದು ವಿಜಯನಗರದ ಕಾಲದಿಂದ ಬಂದ ಸಂಪ್ರದಾಯ. ಈ ಹಬ್ಬಗಳಲ್ಲಿ ಪ್ರತಿಯೊಂದು ಮನೆಯಲ್ಲಿಯೂ ಬೊಂಬೆಗಳನ್ನು ಸುಂದರವಾಗಿ ಜೋಡಿಸಿ ಇಡುತ್ತಾರೆ. ಈ ಸಂಪ್ರದಾಯ ಇಂದಿಗೂ ಮುಂದುವರೆದುಕೊಂಡು ಬಂದಿದೆ.

ಅರಮನೆಯಲ್ಲಿರುವ ಗೊಂಬೆ ತೊಟ್ಟಿಯನ್ನು ಈ ಉದ್ದೇಶಕ್ಕಾಗಿಯೇ ನಿರ್ಮಿಸಲಾಗಿತ್ತು ಮತ್ತು ಮಹಾರಾಜರುಗಳ ಕಾಲದಲ್ಲಿ ದಸರಾ ಉತ್ಸವಗಳ ಸಮಯದಲ್ಲಿ ಇದನ್ನು ಸಾರ್ವಜನಿಕರಿಗೆ ತೆರೆಯಲಾಗುತ್ತಿತ್ತು. ಇಂದು ಗೊಂಬೆ ತೊಟ್ಟಿಯ ಪಶ್ಚಿಮ ಭಾಗದ ಅಂಕಣಗಳಲ್ಲಿ ವಿವಿಧ ಕಲಾಕೃತಿಗಳ ಸಂಗ್ರಹವಿದೆ. ಇದರಲ್ಲಿ ರಾಜ ಮನೆತನದವರು ಸಂಗ್ರಹಿಸಿರುವ ಯೂರೋಪಿನ ಅಮೃತ ಶಿಲಾ ಶಿಲ್ಪಗಳೂ ಸೇರಿವೆ.

ಸಂದರ್ಶಕರು ಗೊಂಬೆ ತೊಟ್ಟಿಲು ದಕ್ಷಿಣ ತುದಿಯಲ್ಲಿರುವ ದ್ವಾರದ ಮೂಲಕ ಅರಮನೆಯನ್ನು ಪ್ರವೇಶಿಸುತ್ತಾರೆ. ಅವರನ್ನು ಆಕರ್ಷಿಸುವಂಥ ಮೊತ್ತಮೊದಲು ವಸ್ತು ಎಂದರೆ ಹಳೆಯ ಅರಮನೆಯ ಮರದ ಮಾದರಿ. ಆ ಅರಮನೆ 1897ಕ್ಕೆ ಕೋಟೆಯಲ್ಲಿ ಇದ್ದಿತು. ಅದು ಒಂದು ಉತ್ತಮ ಮಾದರಿಯಾಗಿದ್ದು, ಆ ಕಾಲದ ವಾಸ್ತುಶಿಲ್ಪವನ್ನು ಬಿಂಬಿಸುತ್ತದೆ.

ಮುಂದಿನ ಅಂಕಣದಲ್ಲಿ ಯೂರೋಪ್ ಮೂಲದ ಅಮೃತ ಶಿಲೆಯ ಸಣ್ಣ ಪ್ರತಿಮೆಗಳಿವೆ. ಹದಿನೆಂಟನೆಯ ಶತಮಾನದ ಕೊನೆಯ ಮತ್ತು ಹತ್ತೊಂಬತ್ತನೆಯ ಶತಮಾನದ ಆದಿ ಭಾಗಗಳಲ್ಲಿ ಇಟಲಿಯ ಮತ್ತು ಸ್ಕ್ಯಾಂಡಿನೇವಿಯದ ಶಿಲ್ಪಿಗಳು ಅದರಲ್ಲಿಯೂ ವಿಶೇಷವಾಗಿ ಕ್ಯಾನೋವ ಮತ್ತ ಥೋರ್ ವಾಲ್ಡ್ಸರವರು ಅಮೃತ ಶಿಲೆಯಲ್ಲಿ ಅಂಥ ಅಲಂಕಾರಿಕ ಶಿಲ್ಪಗಳನ್ನು ನಿರ್ಮಿಸುತ್ತಿದ್ದರು. ಈ ಕಲೆಗೆ ಫ್ರಾನ್ಸಿನಲ್ಲಿ ಅಧಿಕ ಪ್ರೋತ್ಸಾಹವೂ ದೊರಕಿತ್ತು. ಇದನ್ನು ನಿಯೋಕ್ಲಾಸಿಕಲ್ ಶೈಲಿ ಎಂದು ಕರೆಯಲಾಯಿತು. ಎಕೋಲೆ ಡೆ ಬಿಯಕ್ಸ್ ಆರ್ಟ್ಸ್ (Ecole des besux-Art)ಅಧಿಕೃತ ಮನ್ನಣೆ ಪಡೆದಿದ್ದುದರಿಂದ, ಅದು ಸಾಂಪ್ರದಾಯಿಕ ಶೈಲಿ ಎಂದೂ ಪ್ರಸಿದ್ಧವಾಗಿದೆ. ಈ ಸಂಗ್ರಹದಲ್ಲಿರುವ ಶಿಲ್ಪಗಳು ಈ ಪಂಥವನ್ನು ಪ್ರತಿನಿಧಿಸುತ್ತವೆ.

ಕೈಗೆಟುಕದ ದ್ರಾಕ್ಷಿ ಹುಳಿ ಎಮಬ ನಾಣ್ಣುಡಿಯನ್ನು ಬಿಂಬಿಸುವ ಲೋಹದ ಶಿಲ್ಪ ಆಸಕ್ತಿಯ ಮತ್ತೊಂದು ವಸ್ತುವಾಗಿದೆ. ಈ ಶಿಲ್ಪಾಕೃತಿಯು ವಾಸ್ತವವೆಮಬಂತೆ ತೊರುವ ಸಲುವಾಗಿ ಅದಕ್ಕೆ ದೀಪಗಳನ್ನು ಅಳವಡಿಸಲಾಗಿದೆ.

ಆಕರ್ಷಕವಾದ ಜೇಡಿ ಮಣ್ಣಿನ (ಪೊರ್ಸಿಲಿನ್)ಅಲಂಕಾರಿಕ ದೀಪಗಳ ಜೋಡಿ ಇಲ್ಲಿಯೇ ಇದೆ. ಇವು ಜಪಾನೀ ಮೂಲದವಾಗಿವೆ.

ಬೆಳ್ಳಿ ಕೊಡೆ ಮತ್ತು ರಾಮ, ಸೀತೆ, ಲಕ್ಷ್ಮಣ ಹಾಗೂ ಹನುಮಾನರನ್ನು ಪ್ರತಿನಿಧಿಸುವ ರಾಜಾಸ್ಥಾನದ ಭಾರತೀಯ ಅಮೃತಶಿಲಾ ಶಿಲ್ಪಗಳ ಜೊತೆಗೆ ಕನ್ನಡಿಯ ಅಲಂಕರಣವಿರುವ ಮರದ

ಮಂಟಪ ಆಕರ್ಷಣೀಯ ಮತ್ತೊಂದು ವಸ್ತುವಾಗಿದೆ. ಇದು ಸ್ತಂಭಗಳಿರುವ ಕಮಾನಿನ ರಚನೆಯಾಗಿದೆ ಮತ್ತು ಇದರಲ್ಲಿ ಪೌರಾಣಿಕ ಕಲ್ಪನೆಯಾದ ಯಾಳಿಯ ಆರು ನಾಗಂದಿಗೆ ಆಕೃತಿಗಳಿವೆ. ಈ ಮರದ ಗುಡಿಯ ಮೇಲ್ಭಾಗದಲ್ಲಿ ಹಲವು ಸ್ತರಗಳ ವಿಮಾನವಿದೆ. ಮಂಟಪದಲ್ಲಿ ಗಣೇಶನ ವಿಗ್ರಹವಿದೆ.

ಗೊಂಬೆ ತೊಟ್ಟಿಯ ದಕ್ಷಿಣ ಮತ್ತು ಉತ್ತರ ಭಾಗಗಳು ಅರಮನೆಯ ತೊಟ್ಟಿಗೆ ಸಾಗುವ ಮಾರ್ಗದಿಂದ ಪ್ರತ್ಯೇಕಿಸಲ್ಪಟ್ಟಿದೆ. ಅದಕ್ಕೆ ಎರಡು ಭಾಗಗಳಿರುವ ಹಿತ್ತಾಳೆ ಬಾಗಿಲು ಇದೆ. ಅದು ಆನೆ ಬಾಗಿಲು ಎಂದು ಸುಪರಿಚಿತವಾಗಿದೆ. ಗೇಟಿನ ಕೆಳಭಾಗದಲ್ಲಿ ಎರಡು ಆನೆಗಳ ಉಬ್ಬು ಚಿತ್ರಗಳಿವೆ. ಮೇಲಿನ ಭಾಗದಲ್ಲಿ ಸೂಕ್ಷ್ಮವಾದ ವರ್ಣವಿನ್ಯಾಸಗಳಿವೆ. ಇದರ ಮಧ್ಯದ ಮೇಲು ಭಾಗದಲ್ಲಿ ಮೈಸೂರು ರಾಜವಂಶದ ಲಾಂಛನವಾದ ಗಂಡ ಭೇರುಂಡ ಇದೆ. ಇದು ಕೂಡ ಲೋಹದ ಫಲಕದ ಮೇಲೆ ನಿರ್ಮಿಸಲಾಗಿರುವ ಉಬ್ಬು ಚಿತ್ರ ಫಲಕ. ಇದನ್ನು ಕಾಲ್ಪನಿಕ ಪ್ರಾಣಿ "ವ್ಯಾಳ" ಹಿಡಿದಿಕೊಂಡಿದೆ. ಈ ಲಾಂಛನದ ತಳ ಭಾಗದಲ್ಲಿ ಮೈಸೂರು ದೊರೆಗಳ ಧ್ಯೇಯವಾಕ್ಯವಾದ " ಸತ್ಯಮೇವೋದ್ಧರಾಮ್ಯಹಂ" ನಾನು ಸತ್ಯವನ್ನು ಮಾತ್ರ ಎತ್ತಿಹಿಡಿಯುತ್ತೇನೆ. ಎಂಬ ಸಂಸ್ಕೃತ ಸೂಕ್ತಿ ಇದೆ. ಬಾಗಿಲುಗಳ ತಳ ಭಾಗದಲ್ಲಿ ತಯಾರಕರ ಹೆಸರನ್ನು ಸೂಚಿಸುವ BARTONSON & CO.DES "RS" ಎಂಬ ಉಲ್ಲೇಖವಿದೆ. ಇವರು ಈ ಶತಮಾನದ ಆದಿಭಾಗದಲ್ಲಿ ಬೆಂಗಳೂರಿನಲಿದ್ದ ಸುಪ್ರಸಿದ್ಧ ವಿನ್ಯಾಸಗಾರರಾಗಿದ್ದರು.

ಹಿತ್ತಾಳೆ ಗೇಟಿನ ಪಾರ್ಶ್ವಗಳಲ್ಲಿ ಆನೆಯ ಮುಖಗಳ ಎರಡು ಸ್ಮಾರಿಕೆಗಳಿವೆ. ಇವನ್ನು ಮಹಾರಾಜರು ಮೈಸೂರು ಜಿಲ್ಲೆಯ ಚಾಮರಾಜನಗರಮತ್ತು ಗುಂಡ್ಲುಪೇಟೆ ಅರಣ್ಯಗಳಲ್ಲಿ ೧೯೫೫ರಲ್ಲಿ ಭೇಟೆಯಾಡಿದ್ದರು. ಇದರ ಕಾಲಾನಂತರದ ಯಾವುದೇ ಸ್ಮಾರಿಕೆ ನಮ್ಮ ಗಮನಕ್ಕೆ ಬರುವುದಿಲ್ಲ. ಇದು ಮಹಾರಾಜರು ಪ್ರಾಣಿಗಳ ಬೇಟೆಯನ್ನು ಕೈಬಿಟ್ಟಿದ್ದರೆಂಬುದನ್ನು ಸೂಚಿಸುತ್ತದೆ. ಅನಂತರ ಅವರು ವಿಶ್ವ ವನ್ಯ ಪ್ರಾಣಿ ಸಂರಕ್ಷಣಾ ಸಂಘದ ಅಧ್ಯಕ್ಷರಾದರು.

ಗೊಂಬೆತೊಟ್ಟಿಯ ಉತ್ತರ ಭಾಗದಲ್ಲಿಯೂ ಅನೇಕ ಗೊಂಬೆಗಳಿವೆ. ಇವು 19ನೇಯ ಶತಮಾನದ ಕೊನೆಯ ಭಾಗ ಮತ್ತು ಇಪ್ಪತ್ತನೆಯ ಶತಮಾನದ ಮೊದಲ ಭಾಗಕ್ಕೆ ಸೇರಿದವು ಎನ್ನಬಹುದು. ಅವುಗಳಲ್ಲಿ

ಅನೇಕವನ್ನು ಪಟಿಲುವಾದಕು ಚೌರಿವಾಹಕರು, ಕೃಷ್ಣ, ರುಕ್ಮಿಣಿ ಮತ್ತು ಸತ್ಯಭಮೆ ಮರದ ಹೊಟ್ಟಿನಿಮದ ಮಾಡಿ, ಅವಕ್ಕೆ ಬಣ್ಣ ಹಾಕಲಾಗಿದೆ. ಈ ವಿಭಾಗದಲ್ಲಿ ಇರುವ ಆಕರ್ಷಕ ವಸ್ತುಗಳ ಪೈಕಿ ಒಂದು ವಿಶಿಷ್ಟವಾದ ಕನ್ನಡಿಯ ಕುಶಲ ಕಲೆಯನ್ನು ಪ್ರದರ್ಶಿಸುವ ಮರದ ಮಂಟಪವಾಗಿದೆ. ರೆಕ್ಕೆಯಿರುವ ದೇವದೂತರನ್ನು ಸೂಚಿಸುವ ಮರದ ಎರಡು ಚಾಚು ವಿಗ್ರಹಗಳ ಸಮೇತ, ಇದರಲ್ಲಿ 12 ಮರದ ಕಂಬಗಳಿವೆ. ಈ ಬಾಲಕರ ಪ್ರತಿಮೆಗಳು ಚರ್ಚುಗಳಲ್ಲಿನ ದೇವತೆಗಳನ್ನು ನೆನಪಿಸುತ್ತವೆ. ಮಂಟಪಕ್ಕೆ ಪಂಚ ಕಲಶ ಸಮೇತವಾದ ಸುಂದರವಾದ ವಿಮಾನ ಪಂಕ್ತಿಯಿದೆ. ಮಂಟಪದ ಇಡೀ ರಚನೆಯು ಮೈಸೂರು ಕುಶಲ ಕೆಲಸಗಾರರ ಕಲೆಯ ಅತ್ಯುತ್ತಮ ಮಾದರಿಯಾಗಿದೆ.

ಚಿನ್ನದ ಅಂಬಾರಿ:

ಗೊಂಬೆ ತೊಟ್ಟಿಲು ಉತ್ತರದ ತುತ್ತ ತುದಿಯಲ್ಲಿ ಚಿನ್ನದ ಅಂಬಾರಿ ಇದೆ. ಈ ಅಂಬಾರಿಯು ಮುಖ್ಯವಾಗ ಮಂಟಪದ ರೂಪದಲ್ಲಿರುವ ಒಂದು ಮರದ ರಚನೆಯಾಗಿದೆ. ಇದು ಸುರುಳಿಯಲಂಕಾರ, ಪರ್ಣ ಮತ್ತು ಪುಷ್ಪಗಳನ್ನು ಒಳಗೊಂಡ ಜಟಿಲವಾದ ವಿನ್ಯಾಸಗಳಿಂದ ಕೂಡಿರುವ ಚಿನ್ನದ ಫಲಕಗಳಿಂದ ಆವೃತವಾಗಿದೆ. ವಿನ್ಯಾಸಗಳನ್ನು ಉಬ್ಬು ಚಿತ್ರ ತಂತ್ರದಿಂದ ರೂಪಿಸಲಾಗಿದೆ. ಈ ಕಲೆಯಲ್ಲಿ ಮೈಸೂರು ಕುಶಲ ಕರ್ಮಿಗಳು ಸುಪ್ರಸಿದ್ದರು. ಮರದಿಂದ ಮಾಡಲಾಗಿದ್ದು ಚಿನ್ನದ ಬಣ್ಣದಿಂದ ಲೇಪಿತವಾಗಿರುವ ಅಂಬಾರಿಯ ಈಗಿರುವ ಗೋಪುರಾಗ್ರ ಪಂಚ ಕಲಶಗಳನ್ನು ಪ್ರತಿನಿಧಿಸುತ್ತದೆ. ಗೋಪುರಾಗ್ರದ ಮುಂಭಾಗದಲ್ಲಿ ಬ್ಯಾಟರಿ ಚಾಲಿತ ಹಸಿರು ಮತ್ತು ಕೆಂಪು ದೀಪಗಳಿವೆ. ದಸರಾ ಮೆರವಣಿಗೆಯಲ್ಲಿ ಮಹಾರಾಜರು ಮೆರವಣಿಗೆ ಮುಂದುವರಿಯಲು ಅಥವಾ ನಿಲ್ಲಿಸಬಯಸಿದಾಗ ಮಾವುತ ಈ ರೀತಿ ಮಾಡಲು ಈ ದೀಪಗಳು ನೆರವಾಗುತ್ತಿದ್ದುವು. ಅಂಬಾರಿಯು ಎರಡು ದಂತದ ಚೌರಿಗಳಿಂದ ಅಲಂಕೃತವಾಗಿದೆ. ಇವು ಜರಿತುದಿಯಿರುವಂಥ ಸುಂದರವಾದ ದಂತದ ಚಿರುಗೊದಲುಗಳಿಂದ ಕೂಡಿದುವಾಗಿವೆ.

ಅಂಬಾರಿಯನನು ದಸರಾ ಮಹೋತ್ಸವ ಅಂತಿಮ ದಿನವಾದ ವಿಜಯ ದಶಮಿಯಂದು ಬಳಸಲಾಗುತ್ತಿತ್ತು. ಅದನ್ನು ವರ್ಣಮಯವಾಗಿ ಅಲಂಕರಿಸಿದ, ಸಿಂಗಾರಗವುಸು ಹೊದಿಸಿದ ಆನೆಯ ಮೇಲೆ ಇಡಲಾಗುತ್ತಿತ್ತು. ಹಿಂದಿನ ಕಾಲದಲ್ಲಿ ಮಹಾರಾಜರು ತಮ್ಮ ಸೋದರ ಮತತು ಸೋದರಳಿಯರೊಡನೆ ಅಂಬಾರಿಯಲ್ಲಿ ಕುಳಿತುಕೊಳ್ಳುತ್ತಿದ್ದರು. ದಸರೆಯಲ್ಲಿ ಚಿನ್ನದ ಅಂಬಾರಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ತೆರಳಿದ ಮೈಸೂರು ರಾಜವಂಶದ ಕಡೆಯ ದೊರೆ ಶ್ರೀ ಜಯಚಾಮರಾಜೇಂದ್ರ ಒಡೆಯರು.

ದಸರಾ ಮೆರವಣಿಗೆ ಪರಂಪರೆ ಇಂದಿಗೂ ಮುಂದುವರಿಯುತ್ತಿದೆ. ಆದರೆ, ಮೈಸೂರು ನಗರದ ಅಧಿಷ್ಠಾತ್ರಿ ದೇವತೆಯಾದ ಚಾಮುಂಡೇಶ್ವರಿಯ ವಿಗ್ರಹವನ್ನು ಚಿನ್ನದ ಅಂಬಾರಿಯಲ್ಲಿ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲಾಗುತ್ತಿದೆ. ಸುಮಾರು 80 ಕಿಲೋಗ್ರಾಂ ಚಿನ್ನ ಬಳಸಿ ಈ ಅಂಬಾರಿಯನ್ನು ನಿರ್ಮಿಸಲಾಗಿದೆ.

ಕಲ್ಯಾಣ ಮಂಟಪ:

ಅರಮನೆಯ ಮುಂಭಾಗ ಪ್ರಾಂಗಣದ ಪೂರ್ವಕ್ಕೆ ಇರುವ ಮಾರ್ಗದ ಮೂಲಕ ಸಂದರ್ಶಕರು ಕಲ್ಯಾಣ ಮಂಟಪದ ಸಭಾಂಗಣವನ್ನು ಪ್ರವೇಶಿಸುವರು ಈ ಪ್ರಾಂಗಣದ ಪೂರ್ವದ ಮತ್ತು ಪಶ್ಚಿಮದ ಗೋಡೆಗಳು ಹಾಗೂ ಕಲ್ಯಾಣ ಮಂಟಪದ ಪೂರ್ವ, ದಕ್ಷಿಣ ಮತ್ತು ಪಶ್ಚಿಮದ ಗೋಡೆಗಳು ಮೈಸೂರಿನ ಪ್ರಖ್ಯಾತ ಅರಮನೆ ಕಲಾವಿದರಾದ ಕೆ. ಕೇಶವಯ್ಯ, ಎಸ್. ಎನ್. ಸ್ವಾಮಿ, ವೈ. ನಾಗರಾಜು, ಎಸ್. ಶಂಕರರಾಜು, ಎಸ್. ಆರ್. ಐಯ್ಯಂಗಾರ್ ಮತ್ತು ವೈ. ಸುಬ್ರಮಣ್ಯರಾಜು ಮೊದಲಾದವರು ಚಿಡಿಸಿರುವ ತೈಲ ವರ್ಣಚಿತ್ರಗಳನ್ನು ಒಳಗೊಂಡಿದ್ದು ಪ್ರಸಿದ್ಧ ದಸರಾ ಮಹೋತ್ಸವವನ್ನು ಚಿರಸ್ಥಾಯಿಗೊಳಿಸಿವೆ.

ದಸರಾ ಮೆರವಣಿಗಯನ್ನು ಚಿತ್ರಿಸಿರುವ 26 ವರ್ಣ ಚಿತ್ರಗಳಿವೆ. ನಾಲ್ಕು ಬೇರೆ ಬೇರೆ ಚಿತ್ರಗಳೂ ಇವೆ. ಕಲ್ಯಾಣ ಮಂಟಪದ ದಕ್ಷಿಣ ಗೋಡೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ವರ್ಧಂತ್ಯುತ್ಸವದ ಮೆರವಣಿಗೆ, ದುರ್ಗಾ ಪೂಜೆ ಅಥವಾ ಆಯುಧ ಪೂಜೆ ಪಶ್ಚಿಮದ ಅಂಗಳದಲ್ಲಿ ಚಾಮುಂಡೇಶ್ವರಿ ತೇರು ಮತ್ತು ಕೃಷ್ಣ

ಜನ್ಮಾಷ್ಟಮಿ ಉತ್ಸವ. ದಸರಾ ಮಹೋತ್ಸವಗಳನ್ನು ಪ್ರತಿಬಿಂಬಿಸುವಂಥ ಈ ವರ್ಣ ಚಿತ್ರಗಳು ವಾಸ್ತವ ಛಾಯಾ ಚಿತ್ರಗಳನ್ನು ಆಧರಿಸಿದುವಾಗಿರುವುವು ಮತ್ತು 1934ರಿಂದ 1945ರ ಅವಧಿಯಲ್ಲಿ ಈ ವರ್ಣಚಿತ್ರಗಳು ರಚನೆಗೊಂಡಿವೆ.

ಗೋಡೆಯ ಮೇಲೆ ರಚಿಸಲಾಗಿರುವ ವರ್ಣ ಚಿತ್ರಗಳು ಅಶೋಕ ರಸ್ತೆಯ ಈ ಕೊನೆಯಲ್ಲಿರುವ ಮೈಸೂರು ಕೋಟೆಯ ಹೊರಗಿನಿಂದ ಕಾಣಬರುವ ಮೆರವಣಿಗೆಯನನು ಚಿತ್ರಿಸಿವೆ. ಮೆರವಣಿಗೆಯಲ್ಲಿನ ಕೆಲವು ಹೆಗ್ಗುರುತುಗಳಿಂದಾಗಿ ಅನೇಕ ಭಿತ್ತಿ ಚಿತ್ರಗಲು ಗಮನಾರ್ಹವಾಗಿವೆ. ಉದಾಹರಣೆಗೆ 3ನೇ ಪಟ್ಟಿಕೆಯಲ್ಲಲಿ ಅಶೋಕ ರಸ್ತೆಯಲ್ಲಿನ ಸೇಂಟರ ಫಿಲೋಮಿನಾ ಚರ್ಚ್‌ನ್ನು ಚಿತ್ರಿಸಿದೆ. ಚರ್ಚಿನ ಬಾಗಿಲಿನಲ್ಲಿನ ಪತಾಕೆಯಲ್ಲಿರುವ (God Bless Our Maharaja)ನಮ್ಮ ಮಹಾರಾಜರನ್ನು ದೇವರು ಹರಸಲಿ ಎಂಬುದು ಹೃದಯಸ್ಪರ್ಶಿಯಾದಾಗಿದೆ. ಪಟ್ಟಿಕೆ 10ರಲ್ಲಿ ಪಟ್ಟ ಆನೆ, ಪಟ್ಟದ ಕುದುರೆ ಮತ್ತು ಪಲ್ಲಕ್ಕಿಯಲ್ಲಿರುವ ಪಟ್ಟದ ಕತ್ತಿ ಇವು ಮೆರವಣಿಗೆ ಹೊರಟಿರುವುದು ಕಂಡುಬರುತ್ತದೆ. 13 ಮತ್ತು 14ನೇ ಪಟ್ಟಿಕೆಗಳಲ್ಲಿ ಸುಪ್ರಸಿದ್ಧರನೇಕರನ್ನು ಚಿತ್ರಿಸಿಲಾಗಿದೆ. ಪಟ್ಟಿಕೆ 13ರ ಬಲಭಾಗದಲ್ಲಿ ಇರುವವರು ಸಮಗೀತ ಕಲಾನಿಧಿ ಶ್ರೀ. ಕೆ. ವಾಸುದೇವಾಚಾರ್, ವೈಣಿಕ ಪ್ರವೀಣ ಶ್ರೀ ಎಸ್. ಸುಬ್ಬಣ್ಣ, ವೈಣಿಕ ಪ್ರವೀಣ ಶ್ರೀ. ಸಿ. ವೆಂಕಟಗಿರಿಯಪ್ಪ, ಗಾಯಕ ಶಿಖಾಮಣಿ ಶ್ರೀ ಮುತ್ತುಸ್ವಾಮಿ ಭಾಗವತರು (ಇವರೆಲ್ಲರೂ ಸಂಗೀತಗಾರರು) ಅರಮನೆ ಕಲಾವಿದ ಶ್ರೀ.ಕೆ. ಕೇಶವಯ್ಯ, ಮಾಜಿ ಕೇಂದ್ರ ಸಚಿವ ಶ್ರೀ ಹೆಚ್. ಸಿ. ದಾಸಪ್ಪ ಮತ್ತು ಇತರರು. ಪಟ್ಟಿಕೆ 14ರಲ್ಲಿ ಇರುವವರು ಮೈಸೂರಿನ ಇತರ ಪ್ರಮುಕರ ಪೈಕಿ ವೈಣಿಕ ಶಿಖಾಮಣಿ ಶ್ರೀ ವೀಣೇ ಶೇಷಣ್ಣ ಮತ್ತು ಗಾನ ವಿಶಾರದ ಬಿಡಾರಂ ಕೃಷ್ಣಪ್ಪ. ಈ ಪಟ್ಟಿಕೆಯ ದಕ್ಷಿಣ ಭಾಗದಲ್ಲಿ ಇರುವ ಪ್ರಮುಖರ ಪೈಕಿ ಖ್ಯಾತ ಸಾಹಿತಿಯೂ, ಅರ್ಥಶಾಸ್ತ್ರ ವಿಶಾರದರೂ ಆದ ಮಹಾಮಹೋಪಾಧ್ಯಾಯ ಡಾ. ಆರ್. ಶಾಮಾ ಶಾಸ್ತ್ರಿ ಅವೂ ಸೇರಿದ್ದಾರೆ. ಪಟ್ಟಿಕೆ 20 ಆಸಕ್ತಿದಾಯಕವಾಗಿದೆ. ಇದು ರಾಜರ ಖಾಸಾ ಅಂಗರಕ್ಷಕರನ್ನು – ಹಳೆಪೈಕದವರು ಎಂದು ಇವರನ್ನು ಕರೆಯಲಾಗುತ್ತಿತ್ತು ಅವರನ್ನು ಕೂಡ ಚಿತ್ರಿಸಲಾಗಿದೆ. ಅವರು ತಮ್ಮ ಪ್ರಾಣವನ್ನೇ ಪಣವಾಗಿಟ್ಟು ದೊರೆಯ ಜೀವವನ್ನು ರಕ್ಷಿಸಲು ಸದಾ ಸಿದ್ಧರಾಗಿರುತ್ತಿದ್ದ ರಕ್ಷಕ ದಳವನ್ನು ಪ್ರತಿ

ನಿಧಿಸುವವರಾಗಿದ್ದಾರೆ. ಅವರೆಲ್ಲರಿಗೂ ತಮ್ಮ ಮೀಸೆಗಳನ್ನು ಚೆನ್ನಾಗಿಟ್ಟುಕೊಂಡಿರಲು ವಿಶೇಷ ಭತ್ಯ ನೀಡಲಾಗುತ್ತಿತ್ತು ಎನ್ನಲಾಗಿದೆ.

ಈ ವರ್ಣಚಿತ್ರಗಳ ಪೈಕಿ ಪಟ್ಟಿಕೆ 19 ಅತ್ಯಂತ ವಿಶಿಷ್ಟವಾದುದಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಸೋದರ (ಶ್ರೀ ಕಂಠೀರವ ನರಸಿಂಹರಾಜ ಒಡೆಯರು ಹಾಗೂ ಸೋದರ ಸಂಬಂಧಿ ಶ್ರೀ ಜಯಚಾಮರಾಜ ಒಡೆಯರು) ಸಮೇತ ಅಲಂಕೃತ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಅರಮನೆಯ ಮುಂಭಾಗದಿಂದ ಮೆರವಣಿಗೆ ಹೊರಟಿರುವುದನ್ನು ಇದರಲ್ಲಿ ಚಿತ್ರಿಸಲಾಗಿದೆ. ಅನೆಯ ಮುಂಭಾಗದಲ್ಲಿ ಪುಷ್ಪವೃಷ್ಟಿ ಮಾಡಲಾಗಿದೆ. ಚಾಮುಂಡಿ ಬೆಟ್ಟ ಹಿನ್ನಲೆಯಾಗಿದೆ. ಪರಿಣಿತ ಕಲಾವಿದ ಕೆ. ಕೇಶವಯ್ಯನವರು ಪಟ್ಟಿಕೆಯನ್ನು ಕೌಶಲ್ಯದಿಂದ ಚಿತ್ರಿಸಿದ್ದಾರೆ ಇಡೀ ರಚನೆಗೆ ತ್ರಿಕೋನ ದೃಶ್ಯ ಪರಿಣಾಮವನ್ನು ತುಂಬಿರುವವರು. ಭೇಟಿ ನೀಡುವ ವೀಕ್ಷಕರು ಪಟ್ಟಿಕೆಯ ಮುಂದೆ ಸಾಗಿದಂತೆ ಆನೆ, ರಾಜವಂಶದ ಗಣ್ಯರಯ ಮತ್ತು ದರ್ಬಾರಿನವರು ತಮ್ಮತ್ತಲೇ ದಿಟ್ಟಿಸುತ್ತಿರುವಂತೆ ಅವರಿಗೆ ಕಾಣುತ್ತದೆ. ಈ ರೀತಿಯಲ್ಲಿ ವಿಜಯನಗರದ ದೊರೆಗಳು ಆರಂಭಿಸಿ ಮೈಸೂರು ಒಡೆಯರು ಚಿರಸ್ಮರಣಿಯಗೊಳಿಸಿದ ದಸರಾ ಉತ್ಸವಗಳನ್ನು ಈ ವರ್ಣ ಚಿತ್ರಪಟ್ಟಿಕೆಗಳು ಅಜರಾಮರಗೊಳಿಸಿವೆ.

ರಾಜರ ಕುಟುಂಬದ ಎಲ್ಲ ವಿವಾಹಗಳಿಗೆ ನಾಜೂಕಿನಿಂದ ರಚಿಸಲಾಗಿರುವ ಮತ್ತು ಅಲಂಕೃತವಾಗಿರುವ ಕಲ್ಯಾಣ ಮಂಟಪ ಸಭಾಂಗಣವಾಗಿತ್ತು. ಇದು 1912ರಲ್ಲಿ ಪೂರ್ಣಗೊಂಡಿತ್ತು ಮತ್ತು ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರ ವಿವಾಹ ಇಲ್ಲಿ ನೆರವೇರಿತು.

ಈಗಾಗಲೇ ಉಲ್ಲೇಖಿಸಿರುವಮತೆ ಅಷ್ಟಭುಜಾಕೃತಿ ಮಂಟಪ ಮತ್ತು ಮಯೂರ ಅಲಂಕರಣದ ಸಹಿತವಾದ ಬಣ್ಣದ ಗಾಜಿನ ಚಾಣಿಯನನು ಪ್ರಖ್ಯಾತ ವಾಲ್ಟರ್ ಮ್ಯಾಕ್ ಫರ್‌ಲೇನ್ ಸ್ಯಾರೆಸೆನ್ ಫೌಂಡ್ರಿ, ಗ್ಲಾಸ್ಗೋನಲ್ಲಿಲ ತಯಾರಿಸಲಾಗಿತ್ತು. ಈ ಸಭಾಂಗಣದ ಕೆಲವು ಇಂಗ್ಲಿಷ್ ಮೊಸಾಯಿಕ್ ಟೈಲ್ಸಿನಿಂದ ಮಾಡಲಾದ ಮಯೂರ ವಿನ್ಯಾಸದಿಂದ ಕೂಡಿದೆ. ರಾಜರ ಅತಿಥಿಗಳು ಎಲ್ಲ ಕಲಾಪಗಲನ್ನು ವೀಕ್ಷಿಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಅಷ್ಟಕೋನಾಕೃತಿಯ ಸಭಾಂಗಣದಲ್ಲಿ ಒಂದು ಮೊಗಸಾಲೆಯನ್ನು

ರೂಪಿಸಲಾಗಿದೆ. ಸಭಾಂಗಣದ ಸುತ್ತಲಿರುವ ಇತರ ಎಲ್ಲ ಸ್ತಂಭಗಳಲ್ಲಿ ಗ್ರಾನೈಟಿನ ಬೋದಿಗೆಗಳಿದ್ದು ಇವುಗಳಲ್ಲಿ ಗೀತೋಪದೇಶ, ವಾಮನ ಮತ್ತು ಬಲಿ, ಮೇನಕೆ ಮತ್ತು ಶಕುಂತಲೆಯನ್ನು ಬಿಟ್ಟು ಹೋಗುತ್ತಿರುವ ವಿಶ್ವಾಮಿತ್ರ, ಸಾಕು ತಾಯಿ ಯಶೋಧೆಯೊಡನೆ ಇರುವ ಕೃಷ್ಣ ಮೊದಲಾದ ಪ್ರಸಂಗಗಳನ್ನು ಕೆತ್ತಲಾಗಿದೆ. ಅಶ್ವಗಳು, ಆನೆಗಳು ಮತ್ತು ಗೋವುಗಳು ಹಾಗೂ ರಾಜ ಲಾಂಛನ ಗಂಡ ಭೇರುಂಡ ಮೊದಲಾದವುಗಳ ಕೆತ್ತನೆಗಳೂ ಇವೆ. ಶಿಲ್ಪ ಕೆತ್ತನೆಗಳು ಮೈಸೂರು ಶಿಲ್ಪಕಲೆಯ ಪರಿಂಪರೆಯನ್ನು ಪ್ರಕಟಪಡಿಸುವಂತೆ ಕಾಣುತ್ತವೆ.

ಚಿತ್ರಶಾಲೆ:

ರಾಜ ಮನೆತನದ ಅತ್ಯಮೂಲ್ಯವಾದ ಅನೇಕ ವರ್ಣಚಿತ್ರಗಳು ಮತ್ತು ಛಾಯಚಿತ್ರಗಲನ್ನು ಕಲ್ಯಾಣ ಮಂಟಪದ ದಕ್ಷಿಣಭಾಗದಲ್ಲಿರುವ ಚಿತ್ರಶಾಲೆಯಲ್ಲಿ ಪ್ರದರ್ಶಿಸಲಾಗಿದೆ.

ಸುಮಾರು 100 ವರ್ಷಗಳಷ್ಟು ಹಳೆಯದಾದ ಎರಡು ದೊಡ್ಡ ಛಾಯಾಚಿತ್ರಗಳೂ ಇಲ್ಲಿವೆ. ಅವುಗಳ ಪೈಕಿ ಒಂದರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು, ಅವರ ತಮ್ಮ ಕಂಠೀರವ ನರಸಿಂಹರಾಜ ಒಡೆಯರು ಮತ್ತು ಸೋದರಿಯಾದ ಜಯಲಕ್ಷ್ಮಮ್ಮಣ್ಣಿ, ಕೃಷ್ಣರಾಜಮ್ಮಣ್ಣಿ, ಮತ್ತು ಕೆಂಪಚೆಲುವರಾಜಮ್ಮಣ್ಣಿಯವರು ಇದ್ದಾರೆ. ಎರಡನೇ ಛಾಯಚಿತ್ರ ರಾಜಮಾತೆಯಾದ ವಾಣಿವಿಲಾಸ ಸನ್ನಿಧಾನ ಎಂಬ ನಾಮಧ್ಯೇಯದಿಂದಲೇ ಸುವಿಖ್ಯಾತರಾದ ಕೆಂಪನಂಜಮ್ಮಣ್ಣಿಯವರದು, ರಾಜಮಾತೆಯಾದ ಇವರು ಆಧುನಿಕ ಮೈಸೂರು ಅರಮನೆಯ ಪುನರ್ ನಿರ್ಮಾಣಕ್ಕೆ ಕಾರಣರಾದವರೂ ಹೌದು. ಈ ಎರಡು ಛಾಯಾಚಿತ್ರಗಳನ್ನು ಸಿದ್ಧಪಡಿಸಿರುವವರು ಡೆಕ್ ಟ್ಯುಪೇ ಅಂಡ್ ಕಂಪನಿ(DEC TUFO &CO). ವಾಣೀವಿಲಾಸದ ಸನ್ನಿಧಾನದ ಚಿತ್ರದಲ್ಲಿ 1897ಎಂದು ಕಾಲ ನಮೂದಾಗಿದೆ.

ಚಿನ್ನ ಸಹಿತ ಜಲವರ್ಣದಲ್ಲಿ ರಚಿಸಲಾದ ಸೂಕ್ಷ್ಮ ಪ್ರತಿರೂಪ ವರ್ಣಚಿತ್ರ ಮುಮ್ಮಡಿ ಕೃಷ್ಣರಾಜ ಒಡೆಯರದು (ಕ್ರಿ.ಶ. 1799-1869)ಅವರ ಇಳಿವಯಸ್ಸಿನಲ್ಲಿ ಇದನ್ನು ರಚಿಸಲಾಗಿದೆ.

ಚಿತ್ರ ಪಟದ ಮೇಲಿನ ತೈಲವರ್ಣಚಿತ್ರ ಕಂಠೀರವ ನರಸಿಂಹರಾಜ ಒಡೆಯರದು. ಇದನ್ನು ಫಿಲಿಕ್ಸ್ ವಕ್ಲರ್ ರಚಿಸಿದ್ದಾರೆ. ಇದು ಇಪ್ಪತರ ವಯಸ್ಸಿನ ಯುವರಾಜರನ್ನು ಚಿತ್ರಿಸಿದ್ದಾರೆ.

ಚಾಮರಾಜ ಒಡೆಯರ (1868–1894)ಬೃಹತ್ ಛಾಯಚಿತ್ರವನ್ನು ಚಿತ್ರಪಟದ ಮೇಲೆ ಅಂಟಿಸಲು ಅರಮನೆಯ ಛಾಯಾ ಚಿತ್ರಗ್ರಾಹಕರಾಗಿದ್ದ ಎ. ಆರ್. ವಾಸು ಅವರು ತೆಳುವಾದ ಬ್ರೋಮೈಡ್ ಪ್ರಿಂಟ್‌ಗಳನ್ನು ಬಳಸುವ ತಂತ್ರವನ್ನು ಅನುಸರಿಸಿದ್ದಾರೆ.

ಸುವಿಖ್ಯಾತ ರಾಜ ಕಲಾವಿದ ರಾಜಾ ರವಿವರ್ಮರ ಎರಡು ಕಲಾಕೃತಿಗಳನ್ನು ಚಿತ್ರಶಾಲೆಯಲ್ಲಿ ಹೆಮ್ಮೆಯಿಂದ ಪ್ರದರ್ಶಿಸಲಾಗಿದೆ. ಇದರ ಕಾಲ 1885 ಆಗಿರುತ್ತದೆ. ರಾಜ ಕಲಾವಿದರ ಸ್ವಹಸ್ತಾಕ್ಷರದಲ್ಲಿ "ರವಿವರ್ಮ ಕೋಯಿಲ್ ತುಮ್ಲುರಾನ್ 1885"(Ravivarma Coil Thumluran,1885)

ಅಧ್ಯಾಯ – 4

ಮೈಸೂರು ಒಡೆಯರ ಕಾಲದಲ್ಲಿ ದೇವಾಲಯಗಳು

ಮತ್ತು

ಶಿಲ್ಪಗಳು

ಅಧ್ಯಾಯ – 4

ಮೈಸೂರು ಒಡೆಯರ ಕಾಲದಲ್ಲಿ ದೇವಾಲಯಗಳು ಮತ್ತು ಶಿಲ್ಪಗಳು

ಮೈಸೂರು ಮನೆತನದ ಆಳ್ವಿಕೆಯಲ್ಲಿ ದೇವಾಲಯಗಳು, ಚಿತ್ರಗಳು, ಶಿಲ್ಪಗಳು, ಅರಮನೆಗಳು, ಕೋಟೆ ಕೊತ್ತಲಗಳು ಮತ್ತು ಅಣೆಕಟ್ಟುಗಳು, ಕೆರೆ, ಬಾವಿಗಳ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದಾರೆ. ಆ ಕಾಲದಲ್ಲಿನ ಕಲಾವಿದರು ಕಟ್ಟಡಗಳ ನಿರ್ಮಾಣದ ಅಭಿವೃದ್ಧಿಗೆ ತೋರಿದ ಆಸಕ್ತಿ ಹಾಗು ಆ ಸಂದರ್ಭದಲ್ಲಿ ಇದ್ದ ವಸ್ತುವಿಶೇಷತೆಗಳ ಲಭ್ಯತೆಯೂ ಕೂಡ ಹೊಸ ಹೊಸ ಮಾಧ್ಯಮಗಳನ್ನು ರೂಢಿಸಿಕೊಂಡ ಹಾಗೆ ಅವಶ್ಯಕತೆಗನುಗುಣವಾಗಿ ಬಳಸಿಕೊಂಡಿರುವುದನ್ನು ಗಮನಿಸಲಾಗಿದೆ. ಅದಕ್ಕಾಗಿ ಶಿಖರ-ಗೋಪುರಗಳನ್ನು ವಿಜಯನಗರದ ಶೈಲಿಯನ್ನು ಅನುಸರಿಸಿದರೂ ನಾವಿಣ್ಯತೆಯನ್ನು ಅದರಲ್ಲಿ ಕಾಣಿಸಲು ಅವುಗಳ ನಿರ್ಮಾಣಗಳಲ್ಲಿ ಹೊಸ ಮಾಧ್ಯಮವನ್ನು ಪ್ರಯೋಗಿಸಿರುವುದು ಕಂಡುಬಂದಿರುತ್ತದೆ.

ಮೈಸೂರು ಅರಮನೆಯ ಕೋಟೆಯಲ್ಲಿರುವ ದೇವಸ್ಥಾನಗಳು:

ಮೈಸೂರು ಅರಮನೆಯ ಕೋಟೆಯಲ್ಲಿ ಮತ್ತು ಅದರ ಸುತ್ತಮುತ್ತ ಗಮನಾರ್ಹವಾಗಿರುವ ಶಿಲ್ಪಗಳನ್ನು ಹೋಂದಿರುವ ಉತ್ತಮ ದೇವಾಲಯಗಳು ಇವೆ.

ಕೋಡಿ ಭೈರವೇಶ್ವರ ಸ್ವಾಮಿ ದೇವಸ್ಥಾನ:

ಭೈರವನ ರೂಪದಲ್ಲಿ ಶಿವನಿಗೆ ಅರ್ಪಿತವಾದ ಈ ದೇವಾಸ್ಥಾನವು ಹಿಂದಿನ ತನ್ನ ನೆಲೆಯಿಂದಾಗಿ ಈ ಹೆಸರನ್ನು ಪಡೆದುಕೊಂಡಿದೆ. ಸುಮಾರಾಗಿದ ಚಿಕ್ಕದಾಗಿರುವ ಈ ದೇವಸ್ಥಾನ ದೇವರಾಯ ಸಾಗರ ಅಥವಾ ದೊಡ್ಡಕೆರೆಯ ಕೋಡಿಯ ಮೇಲುಭಾಗದಲ್ಲಿತ್ತು. ಇಂಯಿದ ಅರಮೆನಯ ಕೋಟೆಯ ಹೊರವಲಯದಲ್ಲಿ ಇದೆ ಮತ್ತು ದೇವರಾಯ ಸಾಗರವು ದಸರಾ ವಸ್ತು ಪ್ರದರ್ಶನದ ಸಂಕೀರ್ಣವಾಗಿದೆ. ಈ ದೇವಸ್ಥಾನ

ಮೈಸೂರಿನ ಇತಿಹಾಸದ ದೃಷ್ಟಿಯಿಂದ ತುಂಬ ಪ್ರಸಿದ್ಧವಾದುದು. ಮೈಸೂರು ರಾಜ್ಯದ ಸಂಸ್ಥಾಪಕರಾದ ಯದುರಾಯ ಮತ್ತು ಕೃಷ್ಣರಾಯರು ರಾಜಪುರೋಹಿತರನು ಸಂಧಿಸಿದ್ದು ಇದೇ ಸ್ಥಳದಲ್ಲಿ ಇದರಿಂದಾಗಿಯೇ ಮೈಸೂರು ರಾಜ್ಯ ಸ್ಥಾಪನೆಗೊಂಡಿದ್ದು. ಆ ಚಿಕ್ಕ ಗುಡಿಯಲ್ಲಿ ಭೈರವನ ವಿಗ್ರಹವಿದೆ. ಇದು ಒಂದು ಮೀಟರಿಗಿಂತಲೂ ಕಡಿಮೆ ಎತ್ತರವಾಗಿದೆ. ವಿಗ್ರಹದ ನಾಲ್ಕೂ ಹಸ್ತಗಳಲ್ಲಿ ತ್ರಿಶೂಲ, ಡಮರು, ಕಪಾಲ, ಮತ್ತು ಖಡ್ಗ(ಕತ್ತಿ)ಗಳಿವೆ. ಭೈರವನ ಎಡ ಭಾಗದಲ್ಲಿ ಭದ್ರಕಾಳಿಯ ವಿಗ್ರಹವಿದ್ದು, ಮೇಲಕ್ಕೆ ಎತ್ತಿದ ಬಲಗೈ ಕುಡುಗೋಲನ್ನು ಹಿಡಿದಿದೆ.ಭೈರವನ ಬಲಪಾರ್ಶ್ವದಲ್ಲಿ ಚೌರೀಧಾರಕ ಇದ್ದಾನೆ.

ಈ ಶತಮಾನದ ಪ್ರಥಮ ಪಾದದಲ್ಲಿ ಅರಮನೆಯ ಕೋಟೆಯಲ್ಲಿದ್ದ ಇಕ್ಕಟ್ಟಾದ ಕಟ್ಟಡಗಳನ್ನು ತೆಗೆದು ಹಾಕುತ್ತಿದ್ದಾಗ, ಐತಿಹಾಸಿಕವಾಗಿ ಪ್ರಾಮುಖ್ಯತೆಯನ್ನು ಹೊಂದಿದ ಈ ಪ್ರಾಚೀನ ದೇವಸ್ಥಾನವನ್ನು ಕೆಡವಿಹಾಕುವ ಪ್ರಯತ್ನ ನಡೆಯಿತು. ಮೈಸೂರು ರಾಜ ವಂಶದೊಡನೆ ಏರ್ಪಟ್ಟಿದ್ದ ಅದರ ಸಂಬಂಧವನ್ನು ಪರಿಗಣಿಸಿ ನಾಲ್ವಡಿ ಕೃಷ್ಣರಾಜ ಒಡೆಯರವರು ಆ ಪ್ರಯತ್ನವನ್ನು ತಡೆಗಟ್ಟಿದರು.

ಶ್ರೀ ಲಕ್ಷ್ಮೀರಮಣ ಸ್ವಾಮಿ ದೇವಸ್ಥಾನ

ಈ ದೇವಸ್ಥಾನವು ಮೈಸೂರು ನಗರದ ಪ್ರಾಚೀನ ದೇವಸ್ಥಾನಗಳ ಪೈಕಿ ಒಂದಾಗಿದೆ. ಇದು ಅರಮನೆಯ ಒಳಗಡೆ, ಕೋಟೆಯ ಪಶ್ಚಿಮ ಭಾಗದಲ್ಲಿ ಇದೆ. ಕೃಷ್ಣದೇವರಾಯನ ತಂದೆ ವಿಜಯನಗರದ ರಾಜ ನರಸನಾಯಕನ ಆಜ್ಞೆಯ ಮೇರೆಗೆ ಕ್ರಿ.ಶ. 1499ರಲ್ಲಿ ಲಕ್ಷ್ಮೀರಮಣಸ್ವಾಮಿಗೆ ಮಾಡಿದ ದಾನವನ್ನು ಕೋಲ್ಸ್ ಗಾರ್ಡನ್ (ಇಂದಿನ ಬನ್ನಿಮಂಟಪ)ನಲ್ಲಿ ಕಂಡು ಬಂದ ಶಾಸನ ದಾಖಲಿಸಿದೆ. "ಅನಾಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ"ಯ ಪ್ರಕಾರ 1599ರಲ್ಲಿ ರಾಜ ಒಡೆಯರ ಪ್ರಾರ್ಥನೆಯ ಮೇರೆಗೆ ದೈವಕೃಪೆಯಿಂದ, ಅರೆ ಕುರುಡ ಬ್ರಾಹ್ಮಣನೊಬ್ಬನ ಅಂಧತ್ವ ನಿವಾರಣೆಯಾಯಿತು. ಆ ಕಾರ್ಯದ ಜ್ಞಾಪಕಾರ್ಥವಾಗಿ ದೇವರಿಗೆ ಎದುರಾಗಿ ಅಂಜಲೀ ಮುದ್ರೆಯಲ್ಲಿ ನಿಂತಿರುವ ರಾಜನ ವಿಗ್ರಹವನ್ನು ಸ್ಥಾಪಿಸಲಾಗಿದೆ.

ಅನಾಲ್ಸ್‌ನಲ್ಲಿ ಮತ್ತು ಪವಾಡ ಸಹ ದಾಖಲಾಗಿದೆ. ರಾಜ ಒಡೆಯರು ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನಕ್ಕೆ ತನ್ನ ಪ್ರಾಂತ್ಯದ ಮೂಲಕ ಹೋಗುವುದನ್ನು ತಡೆಗಟ್ಟುವುದರಲ್ಲಿ ಕಾರುಗಳ್ಳಿಯ ದಳವಾಯಿ ವೀರರಾಜಯ್ಯ ವಿಫಲನಾದ.

ಆ ಪರಾಭವದ ಸೇಡು ತೀರಿಸಿಕೊಳ್ಳುವ ಸಲುವಾಗಿ ವೀರರಾಜಯ್ಯನು ರಾಜ ಒಡೆಯರಿಗೆ ವಿಷವೊಡ್ಡುವಂತೆ ಲಕ್ಷ್ಮೀರಮಣಸ್ವಾಮಿ ದೇವಸ್ಥಾನದ ಅರ್ಚಕ ಶ್ರೀನಿವಾಸಯ್ಯನಿಗೆ ಆಮಿಷವೊಡ್ಡಿದ. ರಾಜ ಒಡೆಯರು ಪ್ರತಿನಿತ್ಯ ಈ ದೇವಸ್ಥನದಲ್ಲಿ ಪೂಜೆ ಸಲ್ಲಿಸುತ್ತಿದ್ದರು. ಒಂದು ಮುಂಜಾನೆ ಅರ್ಚಕನು ತೀರ್ಥಕ್ಕೆ ವಿಷವನ್ನು ಬೆರೆಸಿದ್ದ. ಆತ ರಾಜ ಒಡೆಯರಿಗೆ ತೀರ್ಥ ನೀಡುತ್ತಿದ್ದಾಗ, ಆತನ ಕೈಗಳು ನಡುಗರಾರಂಭಿಸಿದವು. ಅರ್ಚಕನನ್ನು ಪ್ರಶ್ನಿಸಿದಾಗ ತೀರ್ಥವು ವಿಷಮಿಶ್ರಿತವಾಗಿದೆಯೆಂಬ ಅಂಶವನ್ನು ಒಪ್ಪಿಕೊಂಡುಬಿಟ್ಟ. ರಾಜ ಒಡೆಯರು ಆ ತೀರ್ಥವನ್ನೇ ಸೇವಿಸಿದರು. ಅನಾಲ್ಸ್ ಪ್ರಕಾರ ಅವರ ಕಂಠದಲ್ಲಿ ವಿಷವು ಅಮೃತವಾಗಿ ಪರಿವರ್ತನೆಗೊಂಡಿತು. ಅರ್ಚಕನನ್ನು ಕನ್ನಂಬಾಡಿಯ ದೇವಸ್ಥಾನಕ್ಕೆ ವರ್ಗಾವಣೆ ಮಾಡುವುದರ ಮೂಲಕ ದಂಡಿಸಲಾಯಿತು. ಕಾರುಗಳ್ಳಿ ದಳವಾಯಿಯ ಮೂಗು, ಕಿವಿಗಳನ್ನು ಕತ್ತರಿಸಲಾಯಿತು. ಆತನ ಕೋಟೆಯನ್ನು ನಾಶಪಡಿಸಿ ಅವನ ಖಜಾನೆಯ ಆದಾಯವನ್ನು ರಾಜವಂಶದ ಕುಲದೇವತೆಯಾದ ಚಾಮುಂಡೇಶ್ವರಿಗೆ ಸಮರ್ಪಿಸಲಾಯಿತು. ತಮ್ಮ ಪ್ರಾಣರಕ್ಷಣೆ ಮಾಡಿದುದಕ್ಕಾಗಿ ರಾಜ ಒಡೆಯರು ಲಕ್ಷ್ಮೀರಮಣನಿಗೆ ಕಾಣಿಕೆಯಾಗಿ ದೇವಸ್ಥಾನಕ್ಕೆ ಬಂಗಾರದ ಕಲಶದಿಂದ ಕೂಡಿದ ಎತ್ತರವಾದ ಗೋಪುರವನ್ನೊಳಗೊಂಡ ಮಹಾದ್ವಾರವನ್ನು ನಿರ್ಮಾಣ ಮಾಡಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರವರು ಮಹಾದ್ವಾರ ಮತ್ತು ಗೋಪುರವನ್ನು ಜೀರ್ಣೋದ್ಧಾರ ಮಾಡಿಸಿದುದನ್ನು ದೇವಸ್ಥಾನದಲ್ಲಿರುವ 1851ರ ನವೆಂಬರ್ 30ರ ಒಂದು ಶಾಸನ ದಾಖಲಿಸಿದೆ.

ದೇವಸ್ಥಾನದ ಹಿಂಬದಿಯಲ್ಲಿರುವ ಸುಂದರವಾದ ಮಂಟಪವನ್ನು ಕಂಠೀರವ ನರಸರಾಜ ಒಡೆಯರು(ಕ್ರಿ.ಶ. 1638-1659) ನಿರ್ಮಿಸಿದರು. ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ

ಪಟ್ಟಾಭಿಷೇಕಕ್ಕೆ ಸಂಬಂಧಿಸಿದ ಸಕಲ ಧಾರ್ಮಿಕ ಕಾರ್ಯಕಲಾಪಗಳು 1799 ಜೂನ್ 30ರಂದು ಈ ದೇವಸ್ಥಾನದಲ್ಲೇ ನಡೆದುದರಿಂದಲೂ ಈ ದೇವಸ್ಥಾನ ಮುಖ್ಯವಾಗಿದೆ.

ಶ್ರೀ ಶ್ವೇತ ವರಾಹಸ್ವಾಮಿ ದೇವಸ್ಥಾನ

ಶ್ರೀ ಶ್ವೇತವರಾಹಸ್ವಾಮಿ ದೇವಸ್ಥಾನ ಕೋಟೆಯ ದಕ್ಷಿಣ ಮಹಾದ್ವಾರದ ಬಳಿಇದೆ. ಅದು ಹೊಯ್ಸಳ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ದೇವಸ್ಥಾನದ ಉತ್ಸವ ಮೂರ್ತಿಯು ಚಿಕ್ಕ ದೇವರಾಜ ಒಡೆಯರ (1673-1704) ಕೊಡುಗೆ ಎಂಬುದಾಗಿ, ಅದರ ಅಡಿಯಲ್ಲಿರುವ ಶಾಸನದಲ್ಲಿ ದಾಕಲಿಸಿದೆ. ಈಗ ಗರ್ಭಗೃಹದಲ್ಲಿರುವ ಶ್ವೇತ ವರಾಹಸ್ವಾಮಿ ಶಿಲಾ ಪ್ರತಿಮೆಯನ್ನು ಚಿಕ್ಕದೇವರಾಜ ಒಡೆಯರು ಶ್ರೀ ಮುಷ್ಣದಿಂದ ತಂದರು ಮತ್ತು ಆಗಿನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ಹೊಸ ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಿದರು. ಆ ದೇವಸ್ಥಾನವನ್ನು ಟೀಪೂ ಸುಲ್ತಾನ್ ನಾಶಮಾಡಿದನು. ಅನಂತರ 1809ರಲ್ಲಿ ಆಮೂರ್ತಿಯನ್ನು ಮೈಸೂರಿಗೆ ತರಲಾಯಿತು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರು ಇಚ್ಛೆಯ ಮೇರೆಗೆ ದಿವಾನ್ ಪೂರ್ಣಯ್ಯನವರು ಕಟ್ಟಿಸಿದ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಯಿತು.

ದೇವಸ್ಥಾನದಲ್ಲಿ ಸುಂದರವಾದ ಕೆತ್ತನೆ ಮಾಡಿದ ಮಹಾದ್ವಾರ, ಮೋಹಕವಾದ ಸ್ಥಂಭಗಳು ಮತ್ತು ಉತ್ತಮ ಗೋಪುರ ಇವೆ. ಅಲ್ಲಿ ಶ್ರೀ ವೈಷ್ಣವ ಸಂತರಾದ ದೇಶಿಕರ್ ಮತ್ತು ಜೀಯರ್ ಅವರುಗಳ ಪ್ರತಿಮೆಗಳಿವೆ. ಆ ದೇವಸ್ಥಾನದ ಮುಖ್ಯ ಲಕ್ಷಣಗಳ ಪೈಕಿ ಒಂದು ಎಂದರೆ ನವರಂಗ ಮತ್ತು ಗೋಡೆಗಳ ಮೇಲೆ ರಚಿಸಿದ ಭಿತ್ತಿ ಚಿತ್ರಗಳು. ಈ ಭಿತ್ತಿ ಚಿತ್ರಗಳಲ್ಲಿ ರಾಮಾಯಣ ಮತ್ತು ಭಾಗವತದ ದೃಶ್ಯಗಳನ್ನು ಅದರಲ್ಲಿಯೂ ವಿಶೇಷವಾಗಿ ಕಾಪಾಡಿಕೊಂಡು ಬರಲಾಗಿದೆ. ದೇವಸ್ಥಾನವು ಎತ್ತರವಾದ ಗೋಡೆಯ ಆವರಣದೊಳಗಿದೆ. ಆಗ್ನೇಯ ಪಾರ್ಶ್ವದ ಭಿತ್ತಿಯ ಮೇಲೆ, ರಾಮ ಪಟ್ಟಾಭಿಷೇಕವನ್ನು ಚಿತ್ರಿಸುವ ಭಿತ್ತಿಚಿತ್ರವೂ ಇದೆ. ಈ ಪಟ್ಟಿಕೆಯ ತಳಭಾಗದಲ್ಲಿ ಬರೆದಿರುವ ಶಾಸನದಿಂದ ಈ ವರ್ಣ ಚಿತ್ರವನ್ನು ಶಕ ಸಂವಂತ್ಸರದ ಭಾವ ಮಾಘ ಶುದ್ಧ ದ್ವಿತೀಯದಂದು (ಕ್ರಿ.ಶ.1875) ಪೂರೈಸಲಾಯಿತು ಎಂದು ತಿಳಿದು ಬರುತ್ತದೆ.

ಶ್ರೀ ತ್ರಿನಯಲನೇಶ್ವರಸ್ವಾಮಿ ದೇವಸ್ಥಾನ

ಇದು ಒಂದು ಪ್ರಾಚೀನ ದೇವಾಲಯವಾಗಿದ್ದು, ಇದು ಮೂಲ ಮೈಸೂರು ಕೋಟೆಯ ಹೊರಭಾಗದಲ್ಲಿ ದೇವರಾಯಸಾಗರದ (ದೊಡ್ಡಕರೆ) ದಡದಲ್ಲಿ ರಾಜ ಒಡೆಯರ ಕಾಲಕ್ಕಿಂತಲೂ ಮೊದಲೇ ಇದ್ದಿತು. ಕಂಠೀರವ ನರಸರಾಜ ಒಡೆಯರು ಮತ್ತು ಅವರ ಉತ್ತರಾಧಿಕಾರಿ ದೊಡ್ಡ ದೇವರಾಜ ಒಡೆಯರ ಕಾಲದಲ್ಲಿ ಕೋಟೆಯನ್ನು ವಿಸ್ತರಿಸಲಾಯಿತು. ತ್ರಿನಯನೇಶ್ವರ ದೇವಸ್ಥಾನ ಕೋಟೆ ಒಳಗೆ ಸೇರಿತು. ದೇವಸ್ಥಾನವನ್ನು ವಿಸ್ತರಿಸಲಾಯಿತು ಮತ್ತು ನವೀಕರಿಸಲಾಯಿತು. ಕಂಠೀರವ ನರಸರಾಜ ಒಡೆಯರು ಒಂದು ಕೈಸಾಲೆಯನ್ನು ನಿರ್ಮಿಸಿದರು ಮತ್ತು ಪಂಚಲಿಂಗಗಳನ್ನು ಹಾಗೂ ದಕ್ಷಿಣಮೂರ್ತಿ, ಕ್ಷೇತ್ರಪಾಲ, ಕುಮಾರ ಮತ್ತು ಸೂರ್ಯ ಸೇರಿದಂತೆ ಹಲವು ದೇವತೆಗಳನ್ನು ಪ್ರತಿಷ್ಠಾಪಿಸಿದರು. ಅಂಜಲೀಮುದ್ರೆಯ ತಮ್ಮ ಶಿಲಾ ಪ್ರತಿಮೆಯನ್ನು ಅಲ್ಲಿ ಸ್ಥಾಪಿಸಿದರು. ಅದೇ ಭಂಗಿಯಲ್ಲಿನ ದೊಡ್ಡ ದೇವರಾಜ ಪ್ರತಿಮೆಯೂ ಅದರ ಪಕ್ಕದಲ್ಲಿ ಇದೆ. ಪಶ್ಚಿಮಾಭಿಮುಖವಾಗಿರುವ ಶಿವ ದೇವಾಲಯಗಳನ್ನು ಪವಿತ್ರ ಸಾನಿಧ್ಯವೆನ್ನಲಾಗುತ್ತದೆ. ತ್ರಿನಯನೇಶ್ವರ ಎಂಬ ಜನಪ್ರಿಯ ಹೆಸರನ್ನು ಸ್ಥಳಪುರಾಣ ಹೀಗೆ ವಿವರಿಸುತ್ತದೆ. ತೃಣಬಿಂದು ಋಷಿಯು ಈ ಸ್ಥಳದಲ್ಲಿ ಶಿವನನ್ನು ಕುರಿತು ತಪಸ್ಸು ಮಾಡಿದ. ಸಂತೃಪ್ತನಾದ ಶಿವನು ಪ್ರತ್ಯಕ್ಷನಾದ. ತೃಣಬಿಂದು ಮುನಿ ಇಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿದ. ಹೀಗಾಗಿ ಇಲ್ಲಿನ ಲಿಂಗ ತೃಣೇಶ್ವರ ಎಂದೂ ಕರೆಯಲಾಗಿದೆ. ಶಿವನಿಗೆ ಮೂರು ಕಣ್ಣುಗಳು ಇರುವುದರಿಂದ ದೇವರನ್ನು ತ್ರಿನಯನೇಶ್ವರ ಎಂದು ಕರೆಯಲಾಗುತ್ತಿದೆ. ಅರ್ಧಮೀಟರಿಗೂ ಕಡಿಮೆ ಎತ್ತರದ ತೃಣಬಿಂದು ವಿಗ್ರಹ ಕೂಡ ದೇವಾಲಯ ಸಂಕೀರ್ಣದಲ್ಲಿ ಕಂಡುಬರುತ್ತದೆ.

ದೇವಸ್ಥಾನಕ್ಕೆ ಮಹಾದ್ವಾರ ಸಮೇತ ಸುತ್ತುಗೋಡೆ ಇದೆ. ಮೂಲತಃ ಇದರ ಮೇಲ್ಭಾಗದಲ್ಲಿ ಗೋಪುರವಿತ್ತೆಂದು ಹೇಳಲಾಗಿದೆ. ಈ ಗೋಪುರ ಕ್ರಿ.ಶ. 18ನೇ ಶತಮಾನದ ಕೊನೆಯ ವೇಳೆಗೆ ನಾಶಗೊಂಡಿತೆಂದು ಹೇಳಲಾಗಿದೆ.

ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನ

ತಮ್ಮನ್ನು ತಾವು ಮಹಾಭಾರತ ಶ್ರೀ ಕೃಷ್ಣನಿಂದ ಸ್ಥಾಪಿತವಾದ ಯದುವಂಶದವರೆಂದು ಮೈಸೂರು ರಾಜವಂಶೀಯರು ಹೇಳಿಕೊಳ್ಳುತ್ತಾರೆ. ಹಾಗಾಗಿ, ಕೃಷ್ಣನಿಗೆಂದು ಯಾವುದೇ ದೇವಸ್ಥಾನವಿರದ ಲೋಪ ತುಂಬುವ ಸಲುವಾಗಿ, ಅವರ ಶ್ರೀ ಪಸನ್ನ ಕೃಷ್ಣದೇವಸ್ಥಾನ ನಿರ್ಮಾಣ ಕಾರ್ಯ 1825ರಲ್ಲಿ ಪ್ರಾರಂಭಿಸಿದರು. ಶಾಸನದ ಪ್ರಕಾರ 1829ರಲ್ಲಲಿ ಅದು ಪೂರ್ಣಗೊಂಡಿತು.

ಗರ್ಭಗುಡಿಯಲ್ಲಿ ಕ್ಲೋರೈಟ್ ಸಿಸ್ಟ್‌ನಲ್ಲಿ ಮಾಡಲಾದ ಅಂಬೆಗಾಲು ಕೃಷ್ಣನ ಸುಂದರವಾದ ವಿಗ್ರಹವಿದೆ. ಒಂದು ಕೈಯಲ್ಲಿ ಬೆಣ್ಣೆಯ ಮುದ್ದೆ ಇದೆ. ಶಿಶುವಿನ ಮುಗ್ಧಭಾವ ಆ ಮೂರ್ತಿಯಲ್ಲಿ ಚೆನ್ನಾಗಿ ವ್ಯಕ್ತಗೊಂಡಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಈ ಸತ್ಕಾರ್ಯದ ನೆನಪಿಗಾಗಿ ಈ ದೇವಸ್ಥಾನದಲ್ಲಿ ಇಂದಿಗೂ ಪತ್ನೀಸಮೇತರಾದ ಅವರ ವಿಗ್ರಕ್ಕೆ ಪೂಜಾದಿನಗಳನ್ನು ನಡೆಸಲಾಗುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರೇ ಈ ದೇವಸ್ಥಾನಕ್ಕೆ ದಾನಗಳನ್ನು ನೀಡಿದ್ದಾರೆ. ಪ್ರತಿಯೊಂದರಲ್ಲೂ ಹೆಸರು ನಮೂದಿಸಿದ್ದಾರೆ. ದೇವದೇವತೆಗಲ ಸಾಧು ಸಂತರ ಹಿತ್ತಾಳೆ ವಿಗ್ರಹಗಳನ್ನು ನೀಡಿದ್ದಾರೆ. ದೇವಸ್ಥಾನದ ಹೊರಭಾಗದಲ್ಲಿ ಅತ್ರಿಮುನಿಯ ಶಿಲ್ಪವಿದೆ. ಪರಿಂಪರೆಯ ಪ್ರಕಾರ, ಕೃಷ್ಣರಾಜ ಒಡೆಯರು ಆತ್ರೇಯ ಗೊತ್ರಕ್ಕೆ ಸೇರಿದವರಾಗಿದ್ದುದರಿಂದ ದೇವಸ್ಥಾನದ ಪ್ರಥಮ ಪುರೋಹಿತ ಕೂಡ ಈ ಗೋತ್ರಕ್ಕೆ ಸೇರಿದ್ದುದರಿಂದ ಅತ್ರಿಯ ಪ್ರತಿಮೆಯನ್ನು ಇಲ್ಲ ಸ್ಥಾಪಿಸಲಾಗಿದೆ.

ವರಾಹಸ್ವಾಮಿ ದೇವಸ್ಥಾನದಂತೆಯೇ ಈ ದೇವಸ್ಥಾನವೂ ಅದರ ಮಧ್ಯ ನವರಂಗದ ಭಿತ್ತಿ ಚಿತ್ರಗಳಿಗೆ ಪ್ರಸಿದ್ಧವಾಗಿದೆ. ಈ ಭಿತ್ತಿ ಚಿತ್ರಗಳು ಭಾಗವತ ಪ್ರಸಂಗಗಳನ್ನು ಚಿತ್ರಿಸಿವೆ. ಈದೇವಸ್ಥಾನದ ಮತ್ತು ವರಾಹ ಸ್ವಾಮಿಯ ದೇವಸ್ಥಾನದ ಭಿತ್ತಿ ಚಿತ್ರಗಳು 19ನೇ ಶತಮಾನದ ಮೈಸೂರು ವರ್ಣಚಿತ್ರಗಳಿಗೆ ಅತ್ಯುತ್ತಮ ಮಾದರಿಗಳಾಗಿವೆ.

ಜಿಲ್ಲೆ ವೆಂಕಟರಮಣಸ್ವಾಮಿ ದೇವಸ್ಥಾನ

ಟಿಪ್ಪುವಿನ ಆಳ್ವಿಕೆಯ ಅವಧಿಯಲ್ಲಿ ಮೈಸೂರು ರಾಜಮನೆತನ ಶ್ರೀರಂಗಪಟ್ಟಣದಲ್ಲಿಯೇ ಇದ್ದಿತು. ಇಮ್ಮಡಿ ಕೃಷ್ಣರಾಜ ಒಡೆಯರ ಮಡದಿ ರಾಣಿ ಲಕ್ಷ್ಮಮ್ಮಣ್ಣಿಯವರಿಗೆ ರಾಜಮನೆತನದ ಬಗ್ಗೆ ಹಾಗೂ ಅದರ ಭವಿಷ್ಯದ ಬಗ್ಗೆ ತೀವ್ರವಾದ ಆತಂಕವಿತ್ತು. ಆ ಸಮಯದಲ್ಲಿ ವೆಂಕಟರಮಣಸ್ವಾಮಿ ಅವರ ಕನಸಿನಲ್ಲಿ ಬಂದು,ಬಲಮುರಿಯಲ್ಲಿರುವ ತನ್ನ ವಿಗ್ರಹವನ್ನು ತಂದು ಮೈಸೂರಿನಲ್ಲಿ ಪ್ರತಿಷ್ಠಾಪಿಸಬೇಕೆಂದೂ ಈ ಪುಣ್ಯಕಾರ್ಯದಿಂದ ಆಕೆಯ ವಂಶಕ್ಕೆ ದುರಿತಗಳಿಂದ ಮುಕ್ತಿ ದೊರೆಯುವುದೆಂದೂ ತಿಳಿಸಿದ. ಹಾಗಾಗಿ ಆಕೆ ಸುಲ್ತಾನನ ಅರಿವಿಗೆ ಬಾರದಂತೆ ಬಲಮುರಿಗೆ ತೆರಳಿದರು ಹಾಗೂ ವೆಂಕಟರಮಣಸ್ವಾಮಿಯ ವಿಗ್ರಹವನ್ನು ಮೈಸೂರಿಗೆ ತಂದರು. ದೇವಸ್ಥಾನದಲ್ಲಿ ಅದನ್ನು ಪ್ರತಿಷ್ಠಾಪಿಸಿ, ನಿರಂತರವಾಗಿ ಪೂಜಾದಿಗಳನ್ನು ಸಲ್ಲಿಸಿದರು. ಇದರಿಂದ ರಾಜಮನೆತನಕ್ಕೆ ಸಹಾಯವಾಯಿತೆನ್ನಲಾಗಿದೆ. ಟಿಪ್ಪೂವಿನ ಪತನಾನಂತರ ರಾಜ್ಯಾಧಿಕಾರವನ್ನು ಮತ್ತೆ ಒಡೆಯರ ಮನೆತನಕ್ಕೆ ನೀಡಲಾಯಿತು.

ಶ್ರೀ ಭುವನೇಶ್ವರಿ ದೇವಸ್ಥಾನ

ಅರಮನೆಯ ಕೋಟೆಯ ದಕ್ಷಿಣದಲ್ಲಿರುವ ವರಾಹಸ್ವಾಮಿ ದೇವಸ್ಥಾನಕ್ಕೆ ಹೊಂದುವಂತೆ ಉತ್ತರ ಭಾಗದಲ್ಲಿ ಭುವನೇಶ್ವರಿ ದೇವಸ್ಥಾನವನ್ನು ಸ್ಥಾಪಿಸಲಾಗಿದೆ. ಇದರಿಂದ ಕೋಟೆ ಸಂಕೀರ್ಣದಲ್ಲಿ ಸಮಮಿತಿಯ ವಿನ್ಯಾಸ ಏರ್ಪಟ್ಟಂತಾಗಿದೆ. 1951ರಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಇದನ್ನು ಕಟ್ಟಿಸಿದರು. ದೇವಸ್ಥಾನದ ಗೋಪುರ ವಿಶಿಷ್ಟ ದ್ರಾವಿಡ ಶೈಲಿಯಲ್ಲಿದೆ. ಪ್ರಧಾನ ದೇವತೆಯಾದ ಭುವನೇಶ್ವರಿಯ ವಿಗ್ರಹವನ್ನು ಮೈಸೂರಿನ ಸುವಿಖ್ಯಾತ ಶಿಲ್ಪಿಗಳಾದ ಶಿಲ್ಪಿ ಸಿದ್ದಲಿಂಗಸ್ವಾಮಿ ಕಡೆದಿರವರು, ಇವುಗಳ ಜೊತೆಗೆ ಸೂರ್ಯ, ಮಹಾವಿಷ್ಣು, ಮಹೇಶ್ವರ, ರಾಜರಾಜೇಶ್ವರಿ, ಗಣಪತಿ ಮತ್ತು ಚಾಮುಂಡೇಶ್ವರಿ ಇತರ ವಸ್ತುಗಳ ಪೈಕಿ ಒಂದು ತಾಮ್ರದ ಸೂರ್ಯಮಂಡಲವಾಗಿದ್ದು ಇದನ್ನು

ಮಹಾರಾಜ ಜಯಚಾಮರಾಜ ಒಡೆಯರ್ ಅವರು ಅರಮನೆಯಿಂದ ಈ ದೇವಸ್ಥಾನಕ್ಕೆ ವರ್ಗಾಯಿಸಿದರೆನ್ನಲಾಗಿದೆ.

ಶ್ರೀ ಗಾಯತ್ರೀ ದೇವಸ್ಥಾನ

ತ್ರಿನಯನೇಶ್ವರ ದೇವಸ್ಥಾನಕ್ಕೆ ಸರಿಯಾಗಿ ಹೊಂದಿಕೊಳ್ಳುವ ರೀತಿಯಲ್ಲಿ ಕೋಟೆಯ ಆಗ್ನೇಯ ಮೂಲೆಯಲ್ಲಿ ಗಾಯತ್ರಿ ದೇವಸ್ಥಾನ ಇದ್ದು, ಇದರಿಂದ ಸಂಪೂರ್ಣ ಸಮಮಿತಿಯ ವಿನ್ಯಾಸ ಏರ್ಪಟ್ಟಿದೆ. ಈ ದೇವಸ್ಥಾನವನ್ನು ಕೂಡ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು 1953ರಲ್ಲಿ ನಿರ್ಮಾಣ ಮಾಡಿಸಿದರು. ಆವರಣದಲ್ಲಿ ಸಾವಿತ್ರಿ ಮತ್ತು ಲಕ್ಷ್ಮೀ ಈ ದೇವತೆಗಳ ಮೂರು ಗುಡಿಗಳಿವೆ.

ದೇವಸ್ಥಾನ ನವರಂಗದಲ್ಲಿ ಗಣೇಶ, ಶಿವ, ಸೂರ್ಯ ಮತ್ತು ಮಹಾವಿಷ್ಣು ಇವರ ವಿಗ್ರಗಳು ಇವೆ. ಈ ಎಲ್ಲ ವಿಗ್ರಹಗಳನ್ನೂ ಮೈಸೂರಿನ ಸುಪ್ರಸಿದ್ಧ ಶಿಲ್ಪಿಗಳಾದ ಶಿಲ್ಪಿ ಸಿದ್ಧಲಿಂಗಸ್ವಾಮಿಗಳು ಕೆತ್ತಿದ್ದಾರೆ.

ಹರದನಹಳ್ಳಿಯ ಗೋಪಾಲಕೃಷ್ಣ ದೇವಾಲಯ:

ಹರದನಹಳ್ಳಿಯು ಚಾಮಾರಾಜನಗರ ಜಿಲ್ಲೆಯ ಒಂದು ಗಡಿಗ್ರಾಮವಾಗಿದ್ದು, ಇಲ್ಲಿದ್ದ ಶ್ರೀ ಗೋಸಲ ಚೆನ್ನಬಸವೇಶ್ವರ ಮಠ(ನಿರಂಜನ ಪೀಠ)ವನ್ನು ನಾಶ ಮಾಡಿ ಅದೇ ಸ್ಥಳದಲ್ಲಿ ಶ್ರೀ ಗೋಪಾಲಕೃಷ್ಣಸ್ವಾಮಿ ದೇವಾಲಯ ನಿರ್ಮಾಣವಾಗಿದೆ. ಇದಕ್ಕೊಂದು ದೊಡ್ಡ ದಾಖಲಾತಿಯೇ ಇದೆ. ಮೈಸೂರು ಪ್ರಾಂತ್ಯವನ್ನು ಆಳುತ್ತಿದ್ದ ಒಡೆಯರ ಆಳ್ವಿಕೆಯ ಕಾಲದಲ್ಲಿ ವಿಶಾಲಾಕ್ಷ ಪಂಡಿತನ ಬುದ್ಧಿವಂತಿಕೆಯ ಪ್ರತಿಫಲವಾಗಿ ಚಿಕ್ಕ ದೇವರಾಜ ಒಡೆರಯ ಮಹಾರಾಜರಾಗುತ್ತಾರೆ. ಆದರೆ ಚಿಕ್ಕದೇವರಾಜ ಒಡೆರಯ ಕಾಲದಲ್ಲಿ ವಿಶಾಲಾಕ್ಷ ಪಂಡಿತ ಮುಖ್ಯಮಂತ್ರಿಯಾಗಿರುತ್ತಾನೆ. ಈತ ಜೈನ ಧರ್ಮದವನು ಇವನಂತೆ ಇನ್ನಿಬ್ಬರು ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಮಂತ್ರಿಯಾಗಿರುತ್ತಾರೆ. ತಿರುಮಲಾರ್ಯ(ಬ್ರಾಹ್ಮಣ) ಮತ್ತು ಷಡಕ್ಷರಿ ವೀರಶೈವ. ಈ ಮೂವರು ಮೂಲತಃ ಚಾಮರಾಜನಗರ ತಾಲೂಕಿನ ಯಳಂದೂರಿನವರು. ಚಿಕ್ಕದೇವರಾಜ ಒಡೆಯರು

ರಾಜನಾದ ಸಂದರ್ಭದಲ್ಲಿ ಅರಮನೆಯ ಖಜಾನೆ ಖಾಲಿಯಾಗಿರುತ್ತದೆ. ಚಿಕ್ಕದೇವರಾಜನಿಗೆ ನವಕೋಟಿ ನಾರಾಯಣ ಎಂಬ ಬಿರುದು ಇತ್ತು. ಇಂತಹ ಸಂದರ್ಭದಲ್ಲಿ ರಾಜನಿಗೆ ಹಣದ ಸಮಸ್ಯೆ ಎದುರಾಗುತ್ತದೆ. ಮಂತ್ರಿಯಾಗಿದ್ದ ವಿಶಾಲಾಕ್ಷ ಪಂಡಿತನು ರಾಜನಿಗೆ ಹಣದ ಸಂಗ್ರಹಣೆಗಾಗಿ ಮಾರ್ಗೋಪಾಯವನ್ನು ನೀಡುತ್ತಾನೆ. ಅದೇನೆಂದರೆ ಮೈಸೂರು ಪ್ರಾಂತ್ಯದ ರೈತರು ಶ್ರೀಮಂತರಾಗಿರುತ್ತಾರೆ. ವೀರಶೈವ ವರ್ಗದವರೇ ಹೆಚ್ಚಾಗಿರುವ ರೈತರ ಮೇಲೆ ಸುಂಕವನ್ನು ವಿಧಿಸುವ ಮೂಲಕ ಹಣವನ್ನು ಸಂಗ್ರಹಿಸುವ ಉಪಾಯವನ್ನು ವಿಶಾಲಾಕ್ಷ ಪಂಡಿತನು ಕೊಡುತ್ತಾನೆ. ಅದೇರೀತಿ ರಾಜನು ಸುಮಾರು ೨೧ ರೀತಿಯ ತೆರಿಗೆಯನ್ನು ರೈತರ ಮೇಲೆ ವಿಧಿಸುತ್ತಾನೆ.

ಈ ರೀತಿಯ ತೆರಿಗೆಗಳು ಯಾವುವು ಎಂದರೆ, ರೈತರು ತಮ್ಮ ಮನೆಯಲ್ಲಿ ಉಪಯೋಗಿಸಿ ಬಳಸುತ್ತಿದ್ದ ಜೋಳದ ಕಡ್ಡಿ, ಬಾಗಿಲು, ನೇಗಿಲು, ಮದುವೆ–ಮುಂಜಿ, ಜನನ–ಮರಣ ತೆರಿಗೆ, ದನ–ಕರು ಎಮ್ಮೆ ಇತ್ಯಾದಿ ಹಾಗೆ ರೈತರ ಮೇಲೆ ತೆರಿಗೆಯನ್ನು ವಿಧಿಸಿದಾಗ ಪ್ರಾರಂಭದಲ್ಲಿ ರೈತರು ತೆರಿಗೆಯನ್ನು ನೀಡುತ್ತಾರೆ. ಅನಂತರ ರೈತರು ತಮ್ಮಲ್ಲಿದ್ದ ನೇಗಿಲು, ಮನೆ ಬಾಗಿಲು, ಮುಂತಾದ ಕೃಷಿ ಉಪಯೋಗಿ ವಸ್ತುಗಳನ್ನು ಕೊಂಡೋಯ್ದು ಕೆರೆಗಳಿಗೆ ಹಾಕಿಬಿಡುತ್ತಾರೆ.

ಮನೆ ಆಸ್ತಿಗಳನ್ನು ಕಳೆದುಕೊಂಡು ಎಲ್ಲರೂ ಆಹಾರಕ್ಕಾಗಿ–ಊಟಕ್ಕಾಗಿ ವೀರಶೈವ ಮಠಗಳಿಗೆ ಹೋಗಿ ಸೇರಿಕೊಳ್ಳುತ್ತಾರೆ. ಮಠದಲ್ಲಿ ಎಷ್ಟು ದಿನಾ ಅಂತ ಜನರಿಗೆ ಊಟ ವಸತಿ ಮಾಡಲಾಗುತ್ತದೆ. ಅಂದಿನ ಪರಿಸ್ಥಿತಿಯಲ್ಲಲಿ ಮಠದಲ್ಲಿ ರಾಗಿ–ಜೋಳ ಇರುವ ತನಕ ಜನರು ಇದ್ದರು. ಈ ಕಡೆ ವಿಶಾಲಾಕ್ಷಪಂಡಿತ ರೈತರ ಹಣ ಸಂಪತ್ತು ಮಠದಲ್ಲಿದೆ ಎಂದು ರಾಜನಿಗೆ ಮತ್ತೊಂದು ಉಪಾಯ ಹೇಳಿ ನಾವು ತೆರಿಗೆಯನ್ನು ಮಠಗಳ ಮೇಲೆ ಹಾಕಿದರೆ ನಮ್ಮ ಖಜಾನೆಗೆ ಹೆಚ್ಚಿನ ಹಣ ಸೇರುತ್ತದೆ ಎಂದು ಹೇಳುವ ಮೂಲಕ ತೆರಿಗಯನ್ನು ವಿಧಿಸುತ್ತಾನೆ.

ಭಕ್ತರಿಗೆ ಕೋಪ ಬಂದು, ನಾವೂ ಹೀಗೆ ಕುಳಿತರೆ ಏನೂ ಮಾಡಲು ಸಾಧ್ಯ ಆಗುವುದಿಲ್ಲ. ಎಲ್ಲಾ ರೈತರು ಸೇರಿ ರಾಜನನ್ನು ಕೆಳಗಿಳಿಸಿ ಆತನ ಸಾರ್ವಭೌಮತ್ವವನ್ನು ತಡೆದು ನಾವೇ ರಾಜ್ಯಾಡಳಿತ

ನಡೆಸುವುದು ಸರಿ ಎಂದು ತೀರ್ಮಾನಿಸಲು ನಂಜನಗೂಡು ತಾಲ್ಲೂಕಿನ ದೊಡ್ಡಕೌಲಂದೆ ಮತ್ತು ತಾಯೂರು ಎಂಬ ಊರುಗಳಲ್ಲಿ ರೈತರು ಸಭೆ ಸೇರಿದರು. ಈ ವಿಷಯ ವಿಶಾಲಾಕ್ಷ ಪಂಡಿತನಿಗೆ ತಿಳಿಯಿತು. ರೈತರು ಮಠದ ಸ್ವಾಮಿಗಳು ಸೇರಿದರೆ ಏನಾದರೂ ಮಾಡಿ ಬಿಡುತ್ತಾರೆ ಎಂದು ಮಂತ್ರಿ ಸುತ್ತೋಲೆಯನ್ನು ಹೊರಡಿಸುತ್ತಾನೆ. ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸ್ವತಃ ಮಹಾರಾಜರೇ ನಿಮ್ಮನ್ನು ನೋಡಲು ಬರುತ್ತಾರೆ. ಅಲ್ಲಿ ರಾಜರು, ಸ್ವಾಮೀಜಿ, ಮಂತ್ರಿ, ನಾವೆಲ್ಲರೂ ಇರುತ್ತೇವೆ ಎಂದು ಕರೆ ಕೊಡುತ್ತಾನೆ. ಅದರಂತೆ ನಂಜನಗೂಡು ಸಮೀಪ ಇರುವ ವಿದ್ಯಾಪೀಠದ ಮುಂಭಾಗ ಸ್ಥಳ ಅಂದರೆ "ದಳವಾಯಿ ತೋಟ"(ಸಂತೆ ಮೈದಾನ ಎನ್ನುವ ಮಾತಿದೆ.)ದ ಬಳಿ ಮಂತ್ರಿ, ಸ್ವಾಮೀಜಿಯನ್ನು ಆಹ್ವಾನಿಸುತ್ತಾನೆ. ಮಂತ್ರಿಯ ಉದ್ದೇಶ ಚಳುವಳಿಯ ಮುಖಂಡತ್ವವನ್ನು ವಹಿಸಿಕೊಂಡಿದ್ದ ಸ್ವಾಮೀಜಿಗಳನ್ನು ಕೊಲೆ ಮಾಡುವುದು. ಅಂದು ನಡೆದ ಸಭೆಯಲ್ಲಿ ಸಾವಿರಕ್ಕೂ ಮೇಲ್ಪಟ್ಟು ಜಂಗಮರನ್ನು ವಿಶಾಲಾಕ್ಷ ಪಂಡಿತ ಕೊಲೆ ಮಾಡಿಸುತ್ತಾನೆ. ಇದನ್ನು ತಿಳಿದ ರೈತರು ಶ್ರೀರಂಗಪಟ್ಟಣದಲ್ಲಿ ವಿಶಾಲಾಕ್ಷ ಪಂಡಿತನನ್ನು ಬರ್ಭರವಾಗಿ ಕೊಲೆ ಮಾಡುತ್ತಾನೆ. ಮುಂದೆ ತಿರುಮಲಾರ್ಯ ಮಂತ್ರಿಯಾಗುತ್ತಾನೆ. ಈತನ ಕಾಲದಲ್ಲಿ ಬ್ರಾಹ್ಮಣರ ಪ್ರಾಬಲ್ಯ ಹೆಚ್ಚಾಗುತ್ತದೆ. ಚಿಕ್ಕದೇವರಾಜನು ಇವನಿಗೆ ಸಹಕಾರಿಯಾಗಿ ನಿಲ್ಲುತ್ತಾನೆ. ಈ ದಿನಗಳಲ್ಲಿ ಗೋಸಲಮಠವನ್ನು ಕೆಡವಿ ಅದರ ಕಲ್ಲುಗಳಿಂದಲೇ ಗೋಪಾಲಕೃಷ್ಣಸ್ವಾಮಿಯ ದೇವಾಲಯವನ್ನು ನಿರ್ಮಿಸುತ್ತಾರೆ.

ಶ್ರೀ ಗೋಪಾಲಕೃಷ್ಣಸ್ವಾಮಿಯ ದೇವಾಲಯವನ್ನು ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಕಾಲ ೧೬೮೪-೧೭೦೪ರ ಅವಧಿಯಲ್ಲಿ ದೇವಾಲಯ ನಿರ್ಮಾಣವಾಗಿದೆ. ಶ್ರೀ ಗೋಪಾಲಕೃಷ್ಣಸ್ವಾಮಿಯ ದೇವಾಲಯದಲ್ಲಿ ವಿಶಿಷ್ಟವಾದ ಪೂಜೆ ನಡೆಯುತ್ತಿದ್ದು, ಗೋಕುಲಾಷ್ಟಮಿಯ ಹಬ್ಬದ ದಿನ ರಥೋತ್ಸವ ಜರಗುವುದು. ಅಂದು ಬೆಳಗ್ಗೆ ಹತ್ತು ಉತ್ಸವ ಹೊರಡುವ ಮುನ್ನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದಾಗ ಮೊದಲು ಒಂದು ಹಗ್ಗಕ್ಕೆ ಒಂದು ತೆಂಗಿನಕಾಯಿಯನ್ನು ಕಟ್ಟಿಕೊಂಡು ಅದನ್ನುಒಬ್ಬ ವ್ಯಕ್ತಿ ಹಗ್ಗವನ್ನಡಿಕಂಡು ತಿರುಗಿಸುತ್ತಿದ್ದು ಸುತ್ತ-ಮತ್ತು ನಿಂತಿದ್ದ ಭಕ್ತಾಧಿಗಳು ದೊಣ್ಣೆಯಿಂದ ಕಾಯಿಯನ್ನು ಹೊಡೆದಾದ ನಂತರ ಉತ್ಸವಕ್ಕೆ ಪೂಜೆ ಅರ್ಪಿಸಿ ನಂತರ ಉತ್ಸವ ಮೂರ್ತಿಯ ಮೆರವಣಿಗೆ ಮುಗಿದ

ನಂತರ ದೇವಾಲಯದ ಒಳಭಾಗದಲ್ಲಿ ಅಂದು ಸೇರಿದ ಎಲ್ಲಾ ಭಕ್ತ ಜನರಿಗೆ ದೇವರ ಪ್ರಾಸದವೆಂದು ಉಪಾಹಾರವನ್ನು ಹಂಚಿತ್ತಿದ್ದರು ಇಂದು ಸಹ ಈ ಪದ್ಧತಿ ರೂಢಿಯಲ್ಲಿದೆ.

ಶ್ರೀ ದಿವ್ಯಲಿಂಗೇಶ್ವರ ದೇವಾಲಯ:

ಹರದನಹಳ್ಳಿಯ ಭವ್ಯಿ ಇತಿಹಾಸದ ಕೈಗನ್ನಡಿ ದಿವ್ಯಲಿಂಗೇಶ್ವರ ದೇವಾಲಯ ಈ ದೇವಾಲಯದ ಹಿಂದಿನ ಹೆಸರು ಅಣಿಲೇಶ್ವರ, ಅಮೃತೇಶ್ವರ, ಅಳಲೇಶ್ವರ ಎಂದು.

ದೇವಾಲಯದ ಬೆಳಕಿಗೆ ಬಂದುದರ ಬಗ್ಗೆ ಐತಿಹ್ಯವೊಂದು ಹೀಗಿದೆ. ಇಂದು ನಾವು ನೋಡುವ ದೇವಾಲಯದ ಸ್ಥಳದಲ್ಲಿ ಹಿಂದೆ ಗಿಡ ಮರಗಳಿಂದ ಕೂಡಿದ ತಾಣವಿತ್ತು. ಕಾಲಕ್ರಮೇಣ ಒಂದು ಬಾರಿ ಹಸು ಹುಲ್ಲನ್ನು ಮೇಯಲು ಈ ಸ್ಥಳಕ್ಕೆ ಹೋದಾಗ ಹಸುವೊಂದು ಹುಲ್ಲನ್ನು ಮೇಯ್ದು ಕೊನೆಯಲ್ಲಿ ಕಲ್ಲೊಂದಕ್ಕೆ ಹಾಲನ್ನು ಸುರಿಸಿ ಹಿಂದಿರುಗುವಾಗ ಈ ದೃಶ್ಯವನ್ನು ಕಂಡ ಗೊಲ್ಲನೊಬ್ಬ ಈ ಸ್ಥಳವನ್ನು ಪರೀಕ್ಷಿಸಿದಾಗ ಮಣ್ಣಿನಲ್ಲಿ ಸ್ವಲ್ಪಭಾಗ ಮುಚ್ಚಿದ ಒಂದು ಕಲ್ಲು ಗೋಚರಿಸಿತು. ಇದನ್ನು ಕಬ್ಬಿಣದ ಸರಳಿನಿಂದ ಹೊಡೆದಾಗ ದಿವ್ಯವಾದಂತಹ ಬೆಳಕು ಪ್ರಜ್ವಲಿಸಿತು. ಗೊಲ್ಲ ಮೂರ್ಛೆ ಹೋಗುತ್ತಾನೆ. ಸ್ವಲ್ಪ ಸಮಯದಲ್ಲಿ ಮೂರ್ಛೆ ತಿಳಿದ ಗೊಲ್ಲ ನೋಡುತ್ತಾನೆ. ಪುಟ್ಟ ಕಲ್ಲೊಂದು ಮಣ್ಣಿನಲ್ಲಿರುವುದು ತಿಳಿದು, ಊರಿನ ಪ್ರಮುಖರಿಗೆ ಹೋಗಿ ತಿಳಿಸುತ್ತಾನೆ. ಬಂದಂತಹ ಜನರು ಸ್ಥಳವನ್ನು ನೋಡಿದಾಗ ಇದು ದೇವರು ನೆಲೆ ನಿಂತಿರುವ ಲಿಂಗಸ್ಥಳವೆಂದು ತಿಳಿದು ಬೆಳೆದು ನಿಂತಿದ್ದ ಗಿಡ ಮರಗಳನ್ನು ಕತ್ತರಿಸಿ ಪುಟ್ಟದೊಂದು ದೇವಾಲಯವನ್ನು ನಿರ್ಮಿಸುತ್ತಾರೆ.

ಈ ಶ್ರೀ ದಿವ್ಯಲಿಂಗೇಶ್ವರ ದೇವಾಲಯವು ಬೆಳಕಿಗೆ ಬಂದಂತ ಹೆಚ್ಚು ಪ್ರಚಲಿತದಲ್ಲಿರುವ ಮತ್ತೊಂದು ಐತಿಹ್ಯವೆಂದರೆ ಹರದನಹಳ್ಳಿ (ಮಗ್ಗೆಯ) ಹಿಂದೊಮ್ಮೆ ನೀರಿನಿಂದ ಆವೃತವಾಗಿ ಅಲ್ಪ-ಸ್ವಲ್ಪ ಭಾಗ ಗಿಡ ಮರಗಳನ್ನೊಳಗೊಂಡ ನಿರ್ಜನ ಪ್ರದೇಶವಾಗಿತ್ತು. ವ್ಯಾಪಾರಸ್ಥರು

ಅರಿಕುಟಾರ(ಚಾಮರಾಜನಗರ)ದಿಂದ ತಮಿಳುನಾಡಿನ ಸತ್ಯಮಂಗಲಕ್ಕೆ ಹೋಗಬೇಕಾದರೆ ಹರದನಹಳ್ಳಿಯ ಮಾರ್ಗವಾಗಿ ಹೋಗುತ್ತಿದ್ದರು. ಇಲ್ಲಿನ ಸುತ್ತಮುತ್ತಲ ವಿಳ್ಳದೆಲೆ-ಅಡಿಕೆ ತಮಿಳುನಾಡಿನ ಮಧುರೈ ಈರೋಡಿನ ಮಾರುಕಟ್ಟೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದಿತ್ತು.

ಶ್ರೀ ದಿವ್ಯಲಿಂಗೇಶ್ವರ ದೇವಾಲಯದ ಹೊರಾಂಗಣವು ವಿಶಾಲವಾಗಿದ್ದು, ಪೂರ್ವ ದಿಕ್ಕಿಗೆ ಬಾಗಿಲನ್ನು ಹೊಂದಿದ್ದು ಮೊದಲಿಗೆ ಗರುಡಕಂಬವಿರುತ್ತೆ. ಬಲಭಾಗ ಮತ್ತು ಎಡಭಾಗದಲ್ಲಿ ಎರಡು ಮಂಟಪಗಳಿವೆ. ಶ್ರೀ ದಿವ್ಯಲಿಂಗೇಶ್ವರ ದೇಗುಲದ ಗೋಪುರವು ಐದು ಮಹಡಿಗಳನ್ನು ಹೊಂದಿದ್ದು ಐವತ್ತು ಅಡಿ ಎತ್ತರವಿದೆ. ಐದು ಮಹಡಿಯೊಳಗೆ ಕಲಾತ್ಮಕವಾದ ಮರದ ಜೋಡಣೆ ಮನಸ್ಸನ್ನು ಸೆಳೆಯುತ್ತದೆ.

ಗೋಪುರ ಒಳಗಡೆಯಷ್ಟೆ, ಹೊರಗಡೆಯೂ ಕಲಾತ್ಮಕವಾಗಿದ್ದು, ಅನೇಕ ಚಿತ್ರ-ವಿಚಿತ್ರಗಳು ಇಟ್ಟಿಗೆಯಿಂದ ನಿರ್ಮಾಣವಾಗಿವೆ. ಗೋಪುರವನ್ನು ನಿರ್ಮಾಣ ಮಾಡುವುದಕ್ಕಾಗಿಯೇ ವಿಶೇಷವಾಧ ಇಟ್ಟಿಗೆಯನ್ನು ಬಳಸಿರುವುದು ತಿಳಿದು ಬರುತ್ತದೆ. ಗೋಪುರದ ಮೇಲೆ ಕಳಸವನ್ನು ಜೋಡಿಸುವ ಎರಡು ಕಳಸ ಗೋಪುರಗಳಿವೆ. ಗೋಪುರದ ತಳಭಾಗದ ಎರಡು ಕಡೆ ತೆರೆದ ಮನೆಯಿದ್ದು, ಪ್ರಸಾದ ವಿತರಿಸಲು ಉಪಯೋಗಿಸುತ್ತಿದ್ದರು. ಮುಂದೆ ಬಲಭಾಗಕ್ಕೆ ಯಾಗಶಾಲೆಯಿದ್ದು, ಎಡಗಡೆ ಅಡಿಗೆ ಮನೆಯಿದೆ. ಹಬ್ಬ, ವಿಶೇಷಪೂಜೆ ದಿನ ಅನ್ನಸಂತರ್ಪಣೆ ನಡೆಯುವಾಗ ಉಪಯೋಗಿಸುತ್ತಿದ್ದ ಅಡಿಗೆ ಮನೆ ಇದ್ದು ಪಕ್ಕದಲ್ಲಿ ೧೩ ನಾಗರಕಲ್ಲನ್ನು ಪ್ರತಿಷ್ಠೆ ಮಾಡಿದ್ದಾರೆ. ಮುಂದೆ (ಮರದ)ಗರುಡ ಸ್ಥಂಭವಿದ್ದು, ಅದರ ಮುದೆ ಶಿವಲಿಂಗಕ್ಕೆ ನೇರವಾಗಿ ನಂದೀಶನ ಕಲಾತ್ಮಕವಾದ ವಿಗ್ರಹವಿದೆ. ನೂರೈದು ಅಡಿಯ ಅಂತರದಲ್ಲಿ ನಂದೀಶನ ವಿಗ್ರಹವನ್ನು ಪ್ರತಿಷ್ಠೆ ಮಾಡಿದ್ದಾರೆ. ಮುಂದೆ ಎಡಗಡೆಗೆ ವೀರಭದ್ರಸ್ವಾಮಿ ಗುಡಿ,ಬಲಗಡೆ ಕಾಳಭೈರವ ದೇವರ ಗುಡಿಯಿದೆ. ಇದರ ಸಮೀಪದಲ್ಲೇ ಎರಡು ಕಡೆ ದ್ವಾರಪಾಲಕರ ವಿಗ್ರಹವಿದ್ದು ಇದು ಎರಡನೆ ಪ್ರವೇಶ ದ್ವಾರವಾಗಿದ್ದು ಮುಂದೆ ಹೋದರೆ ಹೊಸದಾಗಿ ನಿರ್ಮಿಸಿರುವ ಅಯ್ಯಪ್ಪಸ್ವಾಮಿ ಗುಡಿಯಿದ್ದು, ಎಡಗಡೆ ಗಣಪತಿ ವಿಗ್ರಹವಿದ್ದು ಮೂರನೆ ದ್ವಾರವನ್ನು ಪ್ರವೇಶಿಸಿದರೆ ಖಾಲಿ ಕೊಠಡಿಯಿದ್ದು ಐದನೆ ಪ್ರವೇಶ ದ್ವಾರದ ನಂತರ 'ದಿವ್ಯಲಿಂಗೇಶ್ವರ' ಮೂರ್ತಿಯು ಲಿಂಗದ ರೂಪದಲ್ಲಿರುವುದು ಕಂಡು ಬರುತ್ತದೆ.

ದೇವಾಲಯದ ಒಳಾಂಗಣದ ಬಲಭಾಗದಲ್ಲಿ ಸರಸ್ವತಿ ಗುಡಿಯಿದ್ದು, ಮೂರ್ತಿಯ ಹಿಂದೆ ಒಂದು ಶಿಲಾಶಾಸನ ಬಹಳ ಮುಖ್ಯವಾದುದಾಗಿದ್ದು ಇದರ ಕಾಲ ಶಕವರುಷ ೧೪೦೩ ಕ್ರೋಧಿ ಸಂವತ್ಸರದ ಮಾಘ ೧೦ನೇ ಸೋಮವಾರ (ಇದನ್ನು ಕ್ರಿ.ಶ. ೧೪೮೫ ಫೆಬ್ರವರಿ ೧೦ ಬುಧವಾರ) ಈ ಶಾಸನ ಇಮ್ಮಡಿರಾಯ ಒಡೆಯರ ಕುಮಾರ ದೇಂಪಣ್ಣ ಒಡೆಯರು ಸಕಲ ಮರ್ಯಾದೆಯಿಂದ ದಿವ್ಯಲಿಂಗೇಶ್ವರ ದೇವರಿಗೆ ಪೂಜೆ ಸಲ್ಲಿಸಿ ಅದೇ ವೇಳೆಗೆ ಯಂಣ್ಣೆನಾಡು ಅಂದರೆ ಹರದನಹಳ್ಳಿಯನ್ನು ಧಾರೆಯನ್ನೆರೆದು ಕೊಟ್ಟಿದ್ದಾಗಿ ಉಳಿದ ವಿಷಯಗಳನ್ನ ತಿಳಿಸುತ್ತದೆ. ಈ ಗುಡಿಯ ಪಕ್ಕದಲ್ಲೆ ಕಾಮಾಕ್ಷಿ ದೇವಿಯ ವಿಗ್ರಹವಿದ್ದು, ಕಾಮಾಕ್ಷಿಗುಡಿ ಎಂದು ಪ್ರಖ್ಯಾತಿ ಹೊಂದಿದ್ದು, ಈ ಗುಡಿಯ ಎಡಭಾಗದಲ್ಲೊಂದು ಸುರಂಗ ಮಾರ್ಗವಿದೆ. ಇದರ ಪ್ರವೇಶ ದ್ವಾರದಿಂದ ಐದು ಮನೆಯನ್ನು ಸುತ್ತಿ ಹೋದರೆ ಸುರಂಗ ಮಾರ್ಗದ ದಾರಿಕಾಣುತ್ತದೆ. ಒಂದು ಮಾಹಿತಿಯ ಪ್ರಕಾರ ಜನಾರ್ಧನ ದೇವಾಲಯಕ್ಕೆ ದಾರಿಯಿದೆ ಎಂದು ತಿಳಿಯುತ್ತದೆ. ಅಂತಹ ಹರದನಹಳ್ಳಿಯಿಂದ ಮಣಿಪುರದ ಅರಸು ಬಬ್ರುವಾಹನ ರಾಜಧಾನಿಯಾಗಿತ್ತು. ದಂತಕಥೆ ಇರುವ 'ಹರಳು ಕೋಟೆ'(ಚಾಮರಾಜ ನಗರವಿರುವ ಹರಳುಕೋಟೆ)ಗೆ ಸುರಂಗ ಮಾರ್ಗವಿದೆ ಎಂದು ತಿಳಿಯುತ್ತದೆ. ಇದು ಬಹುತೇಕ ನಂಬುವಂತಾಗಿದೆ.

ಹೀಗೆ ದೇವಾಲಯದ ಹಿಂಭಾಗಕ್ಕೆ ಹೋದರೆ ಎಂಟು ಲಿಂಗಗಳನ್ನೊಳಗೊಂಡ ವಿಶಾಲವಾದ ಗುಡಿಯಿದ್ದು, ಈ ಎಲ್ಲಾ ಲಿಂಗಗಳು ಬೇರೆ ಬೇರೆ ರೀತಿಯಾಗಿವೆ. ಈ ಗುಡಿಯ ಮೇಲ್ಛಾವಣಿಯಲ್ಲಿ ತುಂಬಾ ಪ್ರಸಿದ್ಧವಾದಂತಹ ಕಲಾತ್ಮಕ ಚಿತ್ರಗಳಿದ್ದು ಪ್ರಾಕೃತಿಕ ವಿಕೋಪದವಾದ ಮಳೆಯಿಂದ ಎಲ್ಲಾ ಚಿತ್ರಗಳು ಕಣ್ಮರೆಯಾಗಿವೆ. ವಿಜಯನಗರದ ತರುವಾಯ ರಚನೆಯಾಗಿದ್ದು ಮೈಸೂರು ಒಡೆಯರ ಆರಂಭ ಕಾಲಕ್ಕೆ ಸೇರಿದವು ಎಂದು ಖಚಿತವಾಗಿ ಹೇಳಬಹುದು. ಏಕೆಂದರೆ ಶಿವನ ದೇವಾಲಯದಲ್ಲಿ ಒಡೆಯರ ಕಾಲದಲ್ಲಿ ನಡೆದಿರುವ ಕೆಲಸ. ವೈಷ್ಣವರು ತಮ್ಮ ಕುರುಹಾಗಿ ಶ್ರೀ ಗೋಪಾಲಕೃಷ್ಣ ಸ್ವಾಮಿ ದೇವಾಲಯವನ್ನು ಇಲ್ಲಿ ವೀರಶೈವ ಮಠವನ್ನೇ ನಾಶಮಾಡಿ ನಿರ್ಮಿಸಿರುವುದರಿಂದ ಮೈಸೂರು ಒಡೆಯರ ಕಾಲದಲ್ಲಿ ಹರದನಹಳ್ಳಿ ಸ್ವಲ್ಪ ಮಾರ್ಪಾಡಾಗಿದೆ.

ಈ ಕೈಸಾಲೆಯಲ್ಲಿ ಒಟ್ಟು ಒಂಭತ್ತು ಅಂಕಣಗಳಿದ್ದು, ಮೊಲನೆಯ ಅಂಕಣದಲ್ಲಿ ಶಿವನು ಪದ್ಮಾಸನದಲ್ಲಿರುವ ಚಿತ್ರವಿದ್ದು, ಶಿವನಿಗೆ ಐದು ಮುಖಗಳು ಮತ್ತು ದಶಹಸ್ತಗಳು ಇರುವುದು ಇಲ್ಲಿಯ ವಿಶೇಷವಾಗಿದೆ. ಶಿವನ ಸುತ್ತಲೂ ಗಿಳಿ, ಹೂ ಬಳ್ಳಿಗಳು, ಹಂಸ ಮತ್ತು ಆನೆಯ ಸಾಲನ್ನು ಚಿತ್ರಿಸಿದ್ದು, ತೊಲೆಯಲ್ಲಿ ನೀಳಜಡೆಯ ಸರ್ವಾಲಂಕಾರ ಭೂಷಿತಳಾದ ಗೋಪಿಯೊಬ್ಬಳು ಮೋಹಕ ಭಂಗಿಯಲ್ಲಿ ನಿಂತು ಮೊಸರು ಕಡೆಯುತ್ತಿರುವುದು ಮತ್ತು ಅವಳನ್ನುಕಾಡಿಸುತ್ತಿರುವ ಕೃಷ್ಣ, ಕೊಳಲು ನುಡಿಸುತ್ತಿರುವ ಕೃಷ್ಣ, ಗಜಲಕ್ಷ್ಮಿ, ಗಣಪ, ಲಕ್ಷ್ಮೀನಾರಾಯಣ, ಉಮಾಮಹೇಶ್ವರ, ಶಿವಾರ್ಜುನಯುದ್ಧ (ಅರ್ಜುನನು ಶಿವನಿಗೆ ಭಾಣ ಬಿಡುತ್ತಿರುವುದು ಇತ್ಯಾದಿ ದೃಶ್ಯಗಳು ಇದ್ದು, ಮತ್ತೊಂದು ಕಡೆ ಭಕ್ತನೊಬ್ಬ ಬಿಳಿಯ ಉದ್ದವಾದ ಕೋಟು, ಟೋಪಿ ಮತ್ತು ಉತ್ತರೀಯವನ್ನು ಧರಿಸಿರುವ ಚಿತ್ರವಿದ್ದು, ಅಷ್ಟದಿಕ್ಪಾಲಕರು ಲಿಂಗವನ್ನು ಪೂಜಿಸುತ್ತಿರುವುದು, ಒಂದೆಡೆ ದೇವಾನುದೇವತೆಗಳು ಇನ್ನೊಂದೆಡೆ ಅಸುರರು ಹಾವನ್ನು ಹಗ್ಗವನ್ನಾಗಿ ಮಾಡಿಕೊಂಡು ಹಾಲ್ಗಡಲನ್ನು ಕಡೆಯುತ್ತಿರುವುದು, ಸಮುದ್ರ ಮಥನ), ಜಲಂದರ ಸಂಹಾರ, ಅವನ ಸುತ್ತ ಬ್ರಹ್ಮ ತಂಬೂರಾದಿಗಳು, ಸಂಗೀತಗಾರರು ಮತ್ತು ಮೃದಂಗ, ಡಮರುಗಳನ್ನು ಬಾರಿಸುತ್ತಿರುವ ವಾದ್ಯಗಾರರು, ಗಣ್ಯ ವ್ಯಕ್ತಿಯೊಬ್ಬನು ತನ್ನ ಹೆಂಡತಿ ಮಕ್ಕಳ ಸಮೇತ ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವುದು ಇತ್ಯಾದಿ ಚಿತ್ರಗಳನ್ನು ಕಾಣಬಹುದು. ಇಲ್ಲಿ ಸ್ತ್ರೀ ಪುರಷರು ವಿಜಯ ನಗರದ ಕಾಲದ ಶೈಲಿಯಲ್ಲಿ ಸಿಂಗರಿಸಿಕೊಂಡಿರುವುದೊಂದು ವಿಶೇಷ. ಮುಂದಿನ ಅಂಕಣದಲ್ಲಿ "ಅಂಧಕಾಸುರ ಮರ್ದನ" ಚಿತ್ರಣವಿತ್ತೆಂದು ಇಲ್ಲಿನ ಹಿರಿಯರು ಹೇಳುತ್ತಾರೆ "ಗಜಾಸುರ ಮರ್ದನ" ಗಜಾಸುರನನನು ಕೊಂದು ಆನೆಯ ತಲೆಯ ಮೇಲೆ ನಾಟ್ಯಮಾಡುತ್ತಿರುವ ಶಿವನ ದೃಶ್ಯ ರೋಮಾಂಚನವಾಗಿದೆ. ಮತ್ತೊಂದರಲ್ಲಲಿ ಹಾವಾಡಿಗನೊಬ್ಬನು ಪುಂಗಿಯನ್ನು ಊದುತ್ತಿರುವುದು ಅವನೆದುರಿಗೆ ಹೆಡೆ ಬಿಚ್ಚಿದ ಸರ್ಪ ನಾಗಸ್ವರಕ್ಕೆ ತಕ್ಕಂತೆ ತಲೆಯಾಡಿಸುತ್ತಿರುವುದು, ಕೋತಿಯೊಂದು ಈ ದೃಶ್ಯವನ್ನ ಹಿಂಗಾಲುಗಳ ಮೇಲೆ ನಿಂತು ತದೇಕ ಚಿತ್ತದಿಂದ ನೋಡುತ್ತಿರುವ ತೀರಾಮಬ್ಬಾದ ಚಿತ್ರಣಗಳಿವೆ. ಮುಂದಿನ ಅಂಕಣದಲ್ಲಿ ಬೃಹತ್ ಕಮಲ ಮತ್ತು ವೀರಭದ್ರನ ಚಿತ್ರಗಳಿವೆ. ಶ್ರೀಮನ್ನಾರಾಯಣನು ತನ್ನ ಪತ್ನಿ ಲಕ್ಷ್ಮೀಯನ್ನು ತೊಡೆಯ ಮೇಲೆ ಕೂರಿಸಿಕೊಂಡು, ಸಿಂಹಾಸನದಲ್ಲಿ ಉಪಸ್ಥಿತನಾಗಿರುವ ಚಿತ್ರವಿದೆ. ಇಲ್ಲಿ ವಿಷ್ಣುವಿಗೆ

ಚತುರ್ಭುಜಗಳಿದ್ದು ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖವನ್ನು ಹಿಡಿದಿರುವನು. ಕೆಳಗಿನ ಬಲಗೈ ಅಭಯ ಮುದ್ರೆಯಲ್ಲಿದೆ. ಎಡಗೈಯನ್ನು ಲಕ್ಷ್ಮೀಯ ತೊಡೆಯ ಮೇಲಿಟ್ಟಿರುವನು. ಇಬ್ಬರ ಕಿರೀಟವೂ ಸೇರಿದಂತೆ ಸಕಲಭರಣವನ್ನು ತೊಟ್ಟಿದ್ದಾರೆ. ಲಕ್ಷ್ಮೀಯದು ಪಾರ್ಶ್ವ ನೋಟ, ಬಲಗೈಯಲ್ಲಿ ಹೂವಿದೆ. ನಾರಾಯಣನ ಹಣೆಯ ಮೇಲೆ ವೈಷ್ಣವ ಧರ್ಮದ ಚಿಹ್ನೆಯಾದ ತ್ರಿನಾಮವನ್ನು ಎದ್ದು ಕಾಣುವಂತೆ ಎಳೆದಿರವರು. ಕೆಳಭಾಗದಲ್ಲಿ ಭುಜದ ಮೇಲೆ ಧನಸ್ಸನ್ನೇರಿಸಿಕೊಂಡು ಕೈಮುಗಿಯುತ್ತಿರುವ ಭಕ್ತನಿದ್ದಾನೆ. ಅವರ ಪಾದಗಳನ್ನು ಸ್ವಲ್ಪ ಮುಂದೆ ವಾಲಿದಂತೆ ಚಿಡಿಸಿದ್ದಾರೆ. ಈ ದೃಷ್ಟಿಯಿಂದಲೇ ಇಲ್ಲಿ ಚಿತ್ರಗಳು 'ಲೇಪಾಕ್ಷಿ ಚಿತ್ರ'ಗಳನ್ನು ಬಹುವಾಗಿ ಹೋಲುತ್ತವೆನ್ನಲಾಗಿದೆ. ಕೆಲವರು ಇದನ್ನು ರಾಮಸೀತೆಯರ ಚಿತ್ರವೆಂದೂ ಕೆಳಭಾಗದಲ್ಲಿರುವ ವ್ಯಕ್ತಿ ಲಕ್ಷ್ಮಣನೆಂದೂ ತಪ್ಪಾಗಿ ಅರ್ಥೈಸುವರು.

ಕೊನೆಯ ಅಂಕಣದಲ್ಲಿ ನಂದಿಯ ಮೇಲೆ ಕುಳಿತ ಶಿವ ಪಾರ್ವತಿಯರ ಚಿತ್ರವಿದೆ. ಇಕ್ಕೆಲಗಳಲ್ಲಿ ಸೇವಕರಿದ್ದಾರೆ. ಇದೂ ಸಹ ಅರ್ಧಮಾತ್ರ ಉಳಿದುಕೊಂಡಿದೆ. ಇವಲ್ಲದೆ ಇಲ್ಲಲಿ ಗೋಪಿಕಾ ವಸ್ತ್ರಾಪಹರಣ, ಶಿವನಿಗೆ ಕಣ್ಣನ್ನು ಒಪ್ಪಿಸುತ್ತಿರುವ ಬೇಡರ ಕಣ್ಣಪ್ಪ, ವೇಣುಗೋಪಾಲ ವೀಣೆ ನುಡಿಸುತ್ತಿರುವ ಸ್ತ್ರೀಯರು, ಭಕ್ತರು, ಮುಸ್ಲಿಂ ರಾಜನೊಬ್ಬ ಗುಡುಗಡಿಯನ್ನು ಸೇವಿಸುತ್ತಿರುವುದು ಇತ್ಯಾದಿ ಚಿತ್ರಗಳಿದ್ದವೆಂದು ನೋಡಿದ ಹಿರಿಯರು ತಿಳಿಸುತ್ತಾರೆ. ಹೀಗೆ ಇನ್ನೂ ಅನೇಕ ಚಿತ್ರ ರಚನೆಗಳು ಗುರುತು ಸಿಗದಂತೆ ನಾಸವಾಗಿವೆ.

ಇದೇ ಮಾರ್ಗದಲ್ಲಿ ಸಾಗಿದರೆ ದಕ್ಷಿಣಾ ಮೂರ್ತಿಯ ಗುಡಿಯಿದ್ದು ಇದರ ಪಕ್ಕದಲ್ಲಿ ದೇವಾಲಯಕ್ಕೆ ಸುಣ್ಣ ತುಂಬಲು ಬಳಸುತ್ತಿದ್ದ 'ದೋಣಿ ಕಲ್ಲು' ಇದ್ದು ಇದರ ಎದುರಿಗೆ ನಾಮಲಿಂಗದ ಗುಡಿ ಇದೆ. ಈ ಗುಡಿಯ ಸಮಿಪ ಶಿಲಾಶಾಸನದ ಕಲ್ಲುಗಳ(ಒಟ್ಟು ೧೨)ನ್ನು ನಿಲ್ಲಿಸಲಾಗಿದೆ.

ಸಾಂಪ್ರದಾಯಿಕ ಮಾರ್ಗದ ಶಿಲ್ಪರಚನಾ ಹಂತಗಳು:

ಶಿಲ್ಪಕಲೆಗಳ ಬಗ್ಗೆ ಸಾಕ್ಷಾತ್ ಶಿಲ್ಪಬ್ರಹ್ಮ ಕಲಾಪಂಡಿತರಾದ ಶ್ರೀ. ಸಾಕ್ಯ ರಾಮಚಂದ್ರರಾಯರು 'ಶಿಲ್ಪವೆಂಬ ಮಾತಿಗೆ ಬೆರಗನ್ನುಂಟುಮಾಡುವ ಕೈ ಕೆಲಸ ಎಂದರ್ಥ' ವೆಂತಲೂ ಸಂಸ್ಕೃತದ ಶಿಲ್ಪವೆಂಬ

ಶಬ್ದ 'ಶೀಲ ಸಮಾಥೌ' ಎನ್ನುವ ಧಾತುವಿನಿಂದ ಒದಗಿಬಂದುದೆಂದೂ, ಮನಸ್ಸಿನ ಏಕಾಗ್ರತೆ, ಏಕತಾನತೆಗಳಿಂದ ಹೊರಬಂದುದೆಲ್ಲ ಶಿಲ್ಪವೆಂದೂ ಒಂದು ನಿರ್ವಚನವಿದೆ. ಶಿಲ್ಪೋಪನಿಷತ್ತೆಂಬ ಗ್ರಂಥವು ಜಗತ್ತಿನ್ನೆಲ್ಲ ಸೃಷ್ಟಿಮಾಡಿದ ಬ್ರಹ್ಮನು ತನ್ನ ಮನಸ್ಸಿನಿಂದ ಮಾಡಿದುದೆಲ್ಲ ಶಿಲ್ಪವೇ ಎಂದು ಹೇಳುತ್ತದೆ. ಅದೇ ಗ್ರಂಥದಲ್ಲಿ, ಜಗತ್ತಿನ ಉದಯಕ್ಕೆ ಕಾರಣವಾಗಿ ಮನಸ್ಸು ಕಾಣಿಸಿಕೊಳ್ಳುತ್ತದೆ. ಮನಸ್ಸಿನ ಸಂಕಲ್ಪದಿಂದಲೆ ಜಗತ್ತಿನಲ್ಲಿ ಎಲ್ಲವೂ ಕೈದೆಳೆಯುತ್ತವೆ. ಹಾಗೆ ಮೊದಲಾದುವೆ ಜಗಚ್ಛಿಲ್ಪ, ಎಂದೂ ಹೇಳಿದೆ. ಮಹ ವಾಸ್ತುಶಾಸ್ತ್ರವೂ 'ಆದಿಮೂರ್ತಿಃ ಸ್ವಯಂಶಿಲ್ಪೀ' ಎಂದು ಒಕ್ಕಣೆ ಮಾಡಿದೆ. ಋಗ್ವೇದವು ಜಗತ್ ಸೃಷ್ಟಿಮಾಡಿದ ಪರದೈವವನ್ನೇ ವಿಶ್ವಕರ್ಮನೆಂದು ಕರೆದು ಹಾಡಿ ಹೊಗಳಿದೆ: ಅವನನ್ನೆ ವಾಸ್ತೋಷ್ಪತಿಯೆಂದೂ ಉಲ್ಲೇಖಿಸಿದೆ.

ಮಾನಸಾರದಲ್ಲಿ ವಿಶ್ವಕರ್ಮನಿಂದ ಸ್ಥಪತಿ ಹೊರಹೊಮ್ಮಿದನೆಂದು ಹೇಳಿದೆ. ಹಾಗಯೇ ಬ್ರಹ್ಮನ ಉಳಿದ ಮೂರು ೦ದಿ ಪ್ರಕಾರಪುರುಷರಾದ ವಿಶ್ವಭೂ, ವಿಶ್ವಸ್ತಿ, ವಿಶ್ವಸ್ರಷ್ಟಾ ಎಂಬುವರಿಂದ ಕ್ರಮವಾಗಿ ಸೂತ್ರಗ್ರಾಹಿ, ವರ್ಧಕಿ, ತಕ್ಷಕರೆಂಬ ಕೆಲಸಗಾರರು ಹೊರಬಂದರೆಂದೂ ಒಕ್ಕಣೆಯಿದೆ. ಶಿವನ ಪೂರ್ವ ದಿಕ್ಕಿನ ಮುಖವೆ ವಿಶ್ವಸ್ರಷ್ಟಾ ಎಂದೂ ಹೇಳುವುದುಂಟು. ಅಂತೂ ಈ ನಾಲ್ವರು ವಾಸ್ತುಶಿಲ್ಪಕ್ಕೆ ಆದಿಪುರುಷರೆಂದು ತಾತ್ಪರ್ಯ, ದೇವಾಲಯ, ಪ್ರಾಸಾದ (ಅರಮನೆ, ನಗರ, ಗ್ರಾಮ, ಗೃಹ(ಮನೆ), ವಾಪಿ(ಬಾವಿ), ಕೂಪ(ಹಳ್ಳ), ತಾಟಕ (ಕೊಳ) ದುರ್ಗ (ಕೋಟೆ), ಚತುಃಶಾಲ (ಚಾವಡಿ) ರಥ (ತೇರು,ಯಾನ), ಯಂತ್ರ (ಉಪಕರಣಗಳು) ಭೂಷ (ಅಲಂಕಾರದ ಒಡವೆಗಳು) ಮೊದಲಾದ ವಾಸ್ತುವೆನಿಸಿಕೊಂಡ ಎಲ್ಲ ಕೆಲಸಗಳಿಗೂ ಈ ನಾಲ್ವರು ಆದಿಪುರುಷರ ಪ್ರತಿನಿಧಿಗಳಾದ ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ, ತಕ್ಷಕ ಎಂಬ ನಾಲ್ವರ ಸಹಯೋಗ ಅಗತ್ಯವಾದುದೆ. ಇವರಲ್ಲಿ ಸ್ಥಪತಿಯೇ ಮುಖ್ಯನಾದುದರಿಂದ, ಉಳಿದವರು ಇವನನ್ನು ಅನುಸರಿಸಿಯೇ ನಡೆಯುವುದರಿಂದ ಈ ಎಲ್ಲ ಕೆಲಸವನ್ನು 'ಸ್ಥಾಪತ್ಯ' ವೆಂದು ನಿರ್ದೇಶಿಸಿದರು.

ಸ್ಥಪತಿಯು ಉಳಿದ ಮೂವರಿಗೂ ಗುರುವೆಂದೂ, ಸ್ಥಾಪನಾಚಾರ್ಯನೆಂದೂ, ಸರ್ವಶಾಸ್ತ್ರಜ್ಞನೆಂದೂ ವರ್ಣನೆಗಳಿವೆ. ಇವನ ನಂತರ ಸೂತ್ರಗ್ರಾಹಿ: ಅವನಿಗೆ ಅಳತೆಗಲ ವಿಚಾರ, ಕಟ್ಟಡದ ಅಥವಾ ಶಿಲ್ಪದ ಲೆಕ್ಕಾಚಾರ, ಶಿಲ್ಪಶಾಸ್ತ್ರದ ಪರಿಚಯ ಇವೆಲ್ಲ ವಿಶೇಷವಾದುದು. ಚಿತ್ರವು ಅವನಿಗೆ ತಿಳಿದಿರಬೇಕು. ಇನ್ನು ವರ್ಧಕಿಯೆಂದರೆ ಬಳಸುವ ವಸ್ತುಗಳ ಗುಣದೋಷಗಳನ್ನು ಅರಿತುಕೊಂಡು ಬೇರೆ ಬೇರೆ ಭಾಗಗಲ ಜೋಡಣೆ, (ವರ್ಧಕಿ ಎನುವ ಮಾತಿಗೆ 'ಬೆಳೆಸುವವನು' ಎಂದರ್ಥ) ಅಂಗೋಪಾಂಗಗಳ ವ್ಯವಸ್ಥೆ ಇವನ್ನೆಲ್ಲ ನೋಡಿಕೊಳ್ಳುವವನು. ಇವನನ್ನು 'ಕರ್ಮಜ್ಞ', 'ವಿಚಾರಜ್ಞ', ಶ್ರುತಜ್ಞ' ಎಂದೆಲ್ಲ ಬಣ್ಣಿಸಿದ್ದಾರೆ. ಮೊದಲ ಇಬ್ಬರಿಗಿಂತ ಹೆಚ್ಚಾಗಿ ಇವನು ಕೆಲಸಗಾರ, ಆದರೆ ಸೂತ್ರಗ್ರಾಹಿಯ ನಿರ್ದೇಶನದ ಮೇಲೆ ಅವನ ಕೆಲಸ ಸಾಗಬೇಕು (ಹಾಗೆಂದೆ ಕಮ್ಮಜ್ಞನಾದರೂ ಶ್ರುತಜ್ಞ); ಸ್ವತಂತ್ರವಾಗಿ ಹೊಣೆಯನ್ನೂ ಹೊರಬಲ್ಲವನಾದುದರಿಂದ ವಿಚಾರಜ್ಞ, ಕಡೆಯವನಾದ ತಕ್ಷಕ(ಬಡಗಿ) ಕೆಲಸಗಾರನಷ್ಟೆ. ಅವನಿಗೆ ಅಳತೆ, ಆಕಾರ, ಜೋಡಣೆ ಮೊದಲಾದ ವಿವರಗಳ ಪರಿಚಯ ಶಾಸ್ತ್ರದಿಂದ ಆಗುವುದಿಲ್ಲ; ಅನುಭವ, ಅಭ್ಯಾಸಗಳಿಂದಲೆ ಆಗಬೇಕು. ಅವನು ದಾರು (ಮರ), ಆಯಃ(ಕಬ್ಬಿಣ), ತಾಮ್ರ, ಶಿಲೆ(ಕಲ್ಲು)ಮತ್ತು ಸ್ವರ್ಣ (ಬಂಗಾರ)ಗಳಲ್ಲಿತನ್ನ ಕೆಲಸ ಮಾಡುತ್ತ ಕ್ರಮೇಣ ಐದು ವೃತ್ತಿ ವಿಭಾಗಗಳಿಗೆ (ಪಂಚಾಳ) ಕಾರಣನಾದನೆಂದು ಎಣಿಕೆ.

ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ, ತಕ್ಷಕ ಎನ್ನುವ ವಿಭಾಗವನ್ನು ಶಿಲ್ಪಗಳಲ್ಲೆ ಮಾಡಿಕೊಳ್ಳಬಹುದು: ಅವರವರ ಸಾಮರ್ಥ್ಯ, ವೈಶಿಷ್ಟ್ಯ, ಕೌಶಲಗಳನ್ನನುಸರಿಸಿ ಈ ತಾರತಮ್ಯ ಏರ್ಪಡುತ್ತದೆ. ಶಿಲ್ಪದ ಕೆಲಸ ಆಗಬೇಕಾದಾಗ, ಎಲ್ಲರಿಗೂ ಮಾರ್ಗದರ್ಶನ ಮಾಡಿ ಎಲ್ಲರ ಮೇಲ್ವಿಚಾರಣೆ ನೋಡಿಕೊಳ್ಳುವವ ಸ್ಥಪತಿ: ಅಳತೆಗಳನ್ನು ನಿರ್ಧರಿಸಿ, ಚಿತ್ರವನ್ನು ಬರೆದು ಉಳಿದಿಬ್ಬರಿಗೆ ಮಾರ್ಗದರ್ಶನಮಾಡುವವ ಸೂತ್ರಗ್ರಾಹಿ. ಸೂತ್ರಗ್ರಾಹಿಯನ್ನು 'ರೇಖಾಜ್ಞ'ನೆಂದು ಕರೆದಿದ್ದಾರೆ. 'ಡ್ರಾಯಿಂಗ್' ಪ್ರಕಾರವನ್ನು ಚೆನ್ನಾಗಿ ಬಲ್ಲವನು ಇವರಿಬ್ಬರಿಗೂ ಶಾಸ್ತ್ರಜ್ಞನ ಚೆನ್ನಾಗಿಯೆ ಇರಬೇಕು. 'ಮಾನಸಾ'ದಲ್ಲಿ ಸ್ಥಪತಿಯನ್ನು 'ಸರ್ವಶಾಸ್ತ್ರಜ್ಞ' ಎಂದು ಕರೆದಿದ್ದರೆ ಸೂತ್ರಗ್ರಾಹಿಯನ್ನು 'ಶಿಲ್ಪಶಾಸ್ತ್ರ ವಿದುತ್ತದು' ಎಂದಿದ್ದಾರೆ. ಉಳಿದಿಬ್ಬರು 'ಕರ್ಮಜ್ಞರು', ಅವರಿಗೆ ಶಾಸ್ತ್ರಜ್ಞಾನದ ಅಗತ್ಯವಿರದು. ವರ್ಧಕಿಯನ್ನು 'ಕರ್ಮಜ್ಞ'ನೆಮದೂ ತಕ್ಷಕನನ್ನು 'ಕರ್ಮವಿತ್' ಎಂದೂ

ಬಣ್ಣಿಸಿ ಅವರ ನಡುವೆ ವ್ಯತ್ಯಾಸವನ್ನು ಸೂಚಿಸಿದ್ದಾರೆ. ದೇವಾಲಯಗಳಲ್ಲಾಗಲಿ ರಾಜಭವನಗಳಲ್ಲಾಗಲಿ ನಮಗೆ ಕಾಣಸಿಗುವ ಶಿಲ್ಪಗಳು ಹೀಗೆ ನಾಲ್ಕೂ ತೆರನಾದ ಕೆಲಸಗಾರರೂ ಕೂಡಿಮಾಡಿದುವೇ.

ಮೈಸೂರು ಶಿಲ್ಪಕಲೆ ಆಧುನಿಕತೆಯಡೆಗೆ:

ಮುಂದೆ ಸಾಗಿದಂತೆಯೇ ಶಿಲ್ಪಕಲೆಯ ಬೆಳವಣಿಗೆಯೂ ಆಧುನಿಕವಾಗಿ, ಬದಲಾವಣೆಗಳಿಗೆ ಅವಕಾಶವನ್ನು ನಿರಂತರವಾಗಿ ನೀಡುತ್ತಲೆ ಬಂದುದರಿಂದ, ಈ ಹಿಂದೆ ನಿರೂಪಿಸಿರುವಂತೆ ಗಂಗರು, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಮುಂದುವರಿದು ಮೈಸೂರು ಹೀಗೆ, ಕರ್ನಾಟಕದ ಶಿಲ್ಪಕಲೆ ಭಾರತೀಯ ಶಿಲ್ಪಕಲೆಯ ಸಾಂಪ್ರದಾಯಿಕ ಸೊಗಸಿನ ಜೊತೆ ಜೊತೆಗೇ ಬೆಳೆದು ಉಳಿದು ಬಂದಿರುವಂತೆ ತನ್ನದೇ ಆದ ಕೊಡುಗೆಯನ್ನೂ ಭಾರತೀಯ ಶಿಲ್ಪಗಳಿಗೆ ನೀಡಿದೆ. ಚಾಲುಕ್ಯ ವಿಜಯನಗರದಸರ ಶಿಲ್ಪಕಲೆಯ ಬೆಳವಣಿಗೆಗಳ ನಡುವೆ ಹಲವು ಕೊಡುಗೆಗಳಿಂದ ಪಡೆದುಕೊಂಡು ನೀಡಿದ ಫಲ ಮುಂದಿನ ಶಿಲ್ಪಕಲೆ ಬೆಳವಣಿಗೆಗೆ ಸ್ಫೂರ್ತಿ ನೀಡಿದ್ದು ಸಹಜ. ಅಂದಿನ ಶಿಲ್ಪಗಳು ಗ್ರಾನೈಟ್ ಶಿಲೆಯನ್ನು ದುಡಿಸಿಕೊಂಡ ಧೀಮಂತತೆ, ಸರಳ ಸುಂದರತೆ ಗಮನಿಸುವಂಥದ್ದು. ಆನಂತರದ ನಮ್ಮ ಸಂಪ್ರದಾಯ ಶಿಲ್ಪಕಲೆ ನಿಂತ ನೀರಾದಂಥ ಸಂದರ್ಭ. (ಆದರೆ ಚಿತ್ರಕಲೆ ಆ ಸ್ಥಿತಿಯಿಂದ ಪಾರಾದದ್ದು ಕುತೂಹಲಕಾರಿ. ಇಂದಿಗೂ ವಿಜಯನಗರ ಚಿತ್ರಕಲೆಯ ಬೇರುಗಳಿಂದ ಜೀವತಳೆದ ಮೈಸೂರು, ಸುರಪುರ ಶೈಲಿಯ ಚಿತ್ರ-ಕಲೆಗಳಿಗೆ ಇರುವ ಬೇಡಿಕೆ ಇಂದಿನ ಸಂದರ್ಭದಲ್ಲಿ ಅರ್ಥವಾಗುವ ವಿಷಯ. ಆದರೂ ಸಮಕಾಲೀನ ಪಶ್ಚಿಮ ಪ್ರಭಾವದ ಚಿತ್ರಕಲೆಯ ನಡುವೆಯೂ ಉಂಟಾಗಿರುವ ಈ ಬೇಡಿಕೆ ಅದು ಪಶ್ಚಿಮದ ರಾಷ್ಟ್ರಗಳಿಂದ ಎಂಬದೂ ಗಮನಿಸುವ ಅಂಶ) ಎಂಬುದಾಗಿ ಶ್ರೀ.ಕೆ.ವಿ. ಸುಬ್ರಹ್ಮಣಂ ಅವರು ವಿವರಿಸಿದ್ದಾರೆ.

ಭಾರತೀಯ ಶಿಲ್ಪವು ಮಧ್ಯಯುಗದಲ್ಲಿ ವಿನಾಶದ ಅವಗಡಕ್ಕೆ ಸಿಲಿಕಿಯೂ ಉಳಿದುಕೊಂಡ ನಮ್ಮ ಶಿಲ್ಪಕಲ್ಪನೆಗಳು ಅದೇ ರೀತಿಯಲ್ಲಿ ಉಳಿದವು. ಮೊಗಲ್, ಬ್ರಿಟಿಷರ ಆಡಳಿತಾವಧಿಯಲ್ಲಿ ನಮ್ಮ ಸಂಪ್ರದಾಯ

ಶಿಲ್ಪಿಗಳು ಅಷ್ಟೇನೂ ಪ್ರೋತ್ಸಾಹಕರ ವಾತಾವರಣದಲ್ಲಿರಲಿಲ್ಲ. ಬ್ರಿಟೀಷರ ಅಂತಿಮ ದಿನಗಳಲ್ಲಿ ಅಕೆಡೆಮಿಕ್ ಆದ ಶಿಲ್ಪ ಸೃಷ್ಟಿಯ, ಮಾನವಾಕಾರಗಳ ಅಧ್ಯಯನದ ಶೈಲಿ ಅವರ ಪ್ರಾರಂಭಿಸಿದ ಕಲಾ ಶಾಲೆಗಳಲ್ಲಿ ಕಲಿಸಲ್ಪಟ್ಟಿತಾದರೂ ನಮ್ಮವರಿಗೆ, ನಮ್ಮ ರಾಷ್ಟ್ರಕಂಡ ಸ್ವಾತಂತ್ರ್ಯದ ಬೆಳಕಲ್ಲಷ್ಟೇ ಆಧುನಿಕ ಕಲ್ಪನೆಯ ಜ್ಞಾನೋದಯವಾಗಲು ಸಾಧ್ಯವಾಗಿದ್ದು ಆಧುನಿಕ ಅಥವಾ ನವ್ಯಕಲೆ ಎಂಬ ಪದಗಳನ್ನು ಪ್ರಸ್ತಾಪಿಸುವಾಗ ನಮ್ಮಲ್ಲಿ ಪಶ್ಚಿಮದ ಕಲೆಯ ಅನುಕರಣೆ ದಟ್ಟವಾಗಿ ಕಾಡುತ್ತದೆ, ಸಹಜವೂ ಕೂಡ. ಆಧುನಿಕ ಎಂಬ ಪದ ೧೯ನೆಯ ಶತಮಾನದಲ್ಲಿ ಕಂಡುಬಂದಿರುವುದೇ ನಮಗೆ ಹೆಚ್ಚು.

ಕರ್ನಾಟಕ ರಾಜ್ಯದ ಆಧುನಿಕ ಶಿಲ್ಪಕಲೆಯ ಆರಂಭದ ದಿನಗಳು ಕುತೂಹಲಕಾರಿಯಾಗಿಲ್ಲ, ಪಶ್ಚಿಮದಂತೆ ನಮ್ಮ ಆಧುನಿಕ ಕಲೆ ಆ ಹಿಂದಿನ ಸಂಪ್ರದಾಯಕ್ಕೆ ತಿರುಗೇಟು ನೀಡಲು ಹುಟ್ಟಿಕೊಂಡದ್ದಲ್ಲ. ಹೊಸ ಅನುಭವಗಳ ಅಭಿವ್ಯಕ್ತಿಗಾಗಿ, ಬ್ರಿಟೀಷರ ವಿಕ್ಟೋರಿಯನ್ ಪ್ರಭಾವದ ಅಕಡೆಮಿಕ್ ಶೈಲಿಯನ್ನು ಕಾಲಕಾಲಕ್ಕೆ ಹಲವು ಬದಲಾವಣೆಗಲ ಮೆರುಗು ನೀಡಿ, ನಮ್ಮ ಮೂಲ ನೆಲೆಯ ಸತ್ವಗಳನ್ನು ಸಂಯೋಜಿಸಿ ನಮಗೆ ಬೇಕಾದಂತೆ ಕಲ್ಪಸಿಕೊಂಡ ಶಿಲ್ಪಕಲೆ. ಈ ನಡುವೆ ನಮ್ಮಲ್ಲಿ ಸಾಂಪ್ರದಾಯಿಕವಾದ ಶಿಲ್ಪಗಳೂ ಸೃಷ್ಟಿಯಾಗುತ್ತಲೇ ಇವೆ. ಆದರೂ ಈ ಹಿಂದಿನ ನಮ್ಮ ಸಂಪ್ರದಾಯವನ್ನು ಅನುಸರಿಸಿದ ಕಲ್ಪನೆಗಳ ಮೂಲದಿಂದ ತಂದುಕೊಂಡ ಕ್ಲೀಷೆಯಾದ ವಸ್ತು, ಪುರಾಣಗಳ ಪಾತ್ರಗಳನ್ನು ಶಿಲ್ಪಿಸದೆ ಹೊಸ ಕಲ್ಪನೆಗಳನ್ನು ರೂಪಿಸುವ ಆಶಯ ಚಿಗುರೊಡೆಯಿತು. ಆನಂತರದ ಹೊಸ ಸಂದರ್ಭ, ಹೊಸ ಸಂವೇದನೆಗಳ ಮುಖಾಮುಖಿಯ ಅಭಿವ್ಯಕ್ತಿಗೆ ಹಲವು ಹೊಸ ಮಜಲುಗಳನ್ನ ನಮ್ಮ ಶಿಲ್ಪಗಳು ಕಂಡುಕೊಂಡದ್ದಂತೂ ಆಧುನಿಕತೆಯ ನಿಜವಾದ ಸೊಗಡನ್ನು ಅರಗಿಸಿಕೊಂಡಂತಾಯಿತು. ಹಿಂದಿನ ಹಾದಿಯಿಂದ ಭಿನ್ನ ಸೃಷ್ಟಿಗಳಿಗೆ ದೃಷ್ಟಿಗಳಿಗೆ ನಮ್ಮ ಶಿಲ್ಪಿಗಳು ತಮ್ಮನ್ನು ತೆರೆದುಕೊಳ್ಳುವುದೂ ಸಾಧ್ಯವಾಯಿತು. ಗುಹಾಲಯ, ದೇವಾಲಯಗಳ ಒಳ-ಹೊರ ಭಿತ್ತಿಗಳ ಖಾಲಿಸ್ಥಳ ತುಂಬುವ ಉದ್ದೇಶದಿಂದ ಸೃಷ್ಟಿಯಾಗುತ್ತಿದ್ದ್ ಶಿಲ್ಪಕಲೆ ಹೊಸ ಸಂದರ್ಭಕ್ಕೆ ಮೈಯೊಡ್ಡಿದ ಶಿಲ್ಪಗಳಿಂದ ಹೊಸ ಕಲ್ಪನೆಗಳಲ್ಲಿ ತನ್ನ ಎಲ್ಲ ಬದಿಗಳನ್ನು ತೋರಿಸುವಂಥ, ಘನತ್ವ ಹೊಂದಿದ ರೂಪಗಳನ್ನು ಪಡೆಯಿತು. ಭಾವಶಿಲ್ಪಗಳು ಹೆಚ್ಚು ಚಲಾವಣೆಗೆ ಬಂದವು. ಮೈಸೂರಿನಲ್ಲೂ ಇಂಥ ಶಿಲ್ಪಗಳು ಸೃಷ್ಟಿಯಾಗಲು ಅಷ್ಟೇನೂ

ತಡವಾಗಲಿಲ್ಲ. 1911ರಲ್ಲೆ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಶಿಲ್ಪಕಲೆಯನ್ನು ಕಲಿತ ಪುಣೆಯ ಗಣಪತಿ ರಾವ್ ಕಾಶಿನಾಥ್ ಮ್ಹಾತ್ರೆ ೧೮೮೫ರ ಹೊತ್ತಿಗೆ ತಮ್ಮ ಶ್ರಮದಿಂದ ಅಪಾರ ಯಶಸ್ಸುಗಳಿಸಿದರು. 1899ರಲ್ಲಿ ಪ್ಲಾಸ್ಟರ್ ಆಫ್ ಪ್ಯಾರೀಸ್ ಮಾಧ್ಯಮದ 'ಮಂದಿರಾ ಕಡೆ' ಶೀರ್ಷಿಕೆಯ ಅವರ ಶಿಲ್ಪ ಎಲ್ಲರ ಮೆಚ್ಚಿಗೆ ಗಳಿಸಿತ್ತು. ರಾಜರವಿವರ್ಮನೂ ಈ ಶಿಲ್ಪವನ್ನು ನೋಡಿ ಮೆಚ್ಚಿದ ಉಲ್ಲೇಖಗಳಿವೆ. ಪ್ಯಾರೀಸ್ ಕಲಾ ಪ್ರದರ್ಶನಕ್ಕೂ ಹಲವು ಭಾವಶಿಲ್ಪಗಳನ್ನು ಮ್ಹಾತ್ರೆ ಕಳುಹಿಸಿದ್ದರು. ಈ ಎಲ್ಲಾ ಕಾರಣಗಳಿಂದ ಅವರ ಶಿಲ್ಪಕಲಾ ನೋಡಿ ಮೆಚ್ಚಿದ ಉಲ್ಲೇಖಗಳಿವೆ. ಪ್ಯಾರೀಸ್ ಕಲಾ ಪ್ರದರ್ಶನಕ್ಕೂ ಹಲವು ಭಾವಶಿಲ್ಪಗಳನ್ನು ಮ್ಹಾತ್ರೆ ಕಳುಹಿಸಿದ್ದರು. ಈ ಎಲ್ಲಾ ಕಾರಣಗಳಿಂದ ಅವರ ಶಿಲ್ಪಕಲಾ ಕೌಶಲ್ಯದ ಖ್ಯಾತಿ ಮೈಸೂರು ಸಂಸ್ಥಾನಕ್ಕೆ ಬರೋಡದ ಮಹಾರಾಜ ಶಿಲ್ಪಕಲಾ ಕೌಶಲ್ಯದ ಖ್ಯಾತಿ ಮೈಸೂರು ಸಂಸ್ಥಾನಕ್ಕೆ ಬರೋಡದ ಮಹಾರಾಜ ಸಯ್ಯಾಜಿರಾಯರಿಂದ ತಲುಪಿತು. ಕಲಾಭಿಮಾನಿ ಕೃಷ್ಣರಾಜ ಒಡೆಯರಿಂದ 1913ರಲ್ಲಿ ದಿವಾನ್ ಶೇಷಾದ್ರಿ ಅಯ್ಯರ್‌ರವರ ಜ್ಞಾಪಕಾರ್ಥವಾಗಿ ಅವರ ಮೂರ್ತಿ ಶಿಲ್ಪ ಸಿದ್ಧಪಡಿಸಲು ಮತ್ತೆ ಮ್ಹಾತ್ರೆಯವರಿಗೆ ಕರೆ ಹೋಯಿತು.

ಅದಾದ ನಂತರದಲ್ಲಿ ಅವರು ಚಾಮರಾಜೆಂದ್ರ ಒಡೆಯರ್ ಅವರ ಭಾವಶಿಲ್ಪವನ್ನೂ ರಚಿಸಿದರು. ಮೈಸೂರಿನಲ್ಲಿ ಆ ಸಂದರ್ಭದಲ್ಲಿ ಅವರು ಸರ್ಕಾರದ ಮುಖ್ಯ ಅತಿಥಿಯಾಗಿ ಉಳಿದುಕೊಂಡಿದ್ದರು. ಚಾಮರಾಜೇಂದ್ರರ ಶಿಲ್ಪವನ್ನು ಅವರು 07.09.1918ರಲ್ಲಿ ಪೂರ್ಣಗೊಳಿಸಿಕೊಟ್ಟರು. ಮುಂದೆ ಅವರು ಮೈಸೂರಿನಲ್ಲಿ ಉಳಿಯಲಿಲ್ಲ. ಅದೇಕಾಲಕ್ಕೆ ಮೈಸೂರು ಮನೆತನದವರು ಬ್ರಿಟೀಷರ ಪ್ರಭಾವದಿಂದ ದೇಶದ ಇತರ ಎಲ್ಲ ರಾಜಮನೆತನಗಳಂತೆ ವರ್ಣಚಿತ್ರ ಮತ್ತು ಶಿಲ್ಪಗಳನ್ನು ಸಂಗ್ರಹಿಸುವ, ಹಾಗೂ ಕಲಾವಿದರನ್ನು ಪೋಷಿಸುವ ಹವ್ಯಾಸದವರಾಗಿದ್ದರು. ಜೆ.ಜೆ. ಕಲಾಶಾಲೆಯ ಹಾದಿಯಲ್ಲಿ ಚಾಮರಾಜೇಂದ್ರ ಕರಕುಶಲ ಶಾಲೆಯೂ ಇದ್ದಿತು. ಮ್ಹಾತ್ರೆಯವರಂತೆ ಮೈಸೂರಿನಲ್ಲಿ ಜರ್ಮನಿಯ ಜಿಲಾದಿನ್ ಉಡ್ ವಿಲ್ಲೆ, ಇಂಗ್ಲೆಂಡಿನ ಸ್ಟರ್ಲಿಂಗ್, ಇಟಲಿಯ ಶಿಲ್ಪಿ ಕೊಲ್ಯಾಸ್ ರಾಬರ್ಟ್ ಎಂಬುವವರುಗಳೂ ಮೈಸೂರು ಅರಸರ ಆಶ್ರಯದಲ್ಲಿದ್ದರು.

ವರ್ಣಶಿಲ್ಪಿ ಕೆ. ವೆಂಕಟಪ್ಪ (1887-1962)ರಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯಲ್ಲಿ ಚಿತ್ರಕಲೆ ಕಲಿಯಲಾರಂಭಿಸಿದ ನಂತರದ ಹಲವು ವರ್ಷಗಳಲ್ಲಿ ಚಿತ್ರಕಲೆಯ ದಿಗ್ಗಜರುಗಳನ್ನು ಅವರ ಸೃಷ್ಟಿಗಳನ್ನೂ ಪ್ರತ್ಯಕ್ಷ ಕಾಣುವ ಅವಕಾಶವಾಯಿತು. ಇದು. ಬಂಗಾಳದ ಪುನರುಜ್ಜೀವನದ ಮಹತ್ತರ ಕಾಲ. ವೆಂಕಟಪ್ಪ ಕಲ್ಕತ್ತಾ ಕಲಾ ಶಾಲೆಯಲ್ಲಿ ಕಲಿತು (1916) ಮೈಸೂರಿಗೆ ಮರಳಿದ್ದರು. ಪುಣೆಯ ಮ್ಹಾತ್ರೆ, ಇಟಲಿಯ ಕೊಲ್ಬಸ್ ರಾಬರ್ಟ್ ಮೊದಲಾದವರ ಪಶ್ಚಿಮದ ನೆಲೆಯ ಶಿಲ್ಪಿಗಳಿಂದ ಸಾಕಷ್ಟು ಪ್ರಭಾವಿತರಾಗಿದ್ದ ಅವರು ಕಲ್ಕತ್ತೆಯಲ್ಲಿ'Sentimental portrait sculpture, false imperial glory and naturalist imitationism of the Greaco-Roman models'ಗಳನ್ನು ಹೆಚ್ಚಾಗಿ ಅಧ್ಯಯನ ಮಾಡಿರಬೇಕು. ಚಿತ್ರಕಲಿಕೆ ಜೊತೆಗೆ Modelingಅನ್ನು ಆಸಕ್ತಿಯಿಂದ ಅಭ್ಯಾಸ ಮಾಡಿರಬೇಕು. 1958ರಲ್ಲಿ ಮೈಸೂರು ಸಾರ್ವಜನಿಕ ಶಿಕ್ಷಣ ನಿರ್ದೇಶಕರಿಗೆ ಬರೆದ ಪತ್ರವೊಂದರಲ್ಲಿ 14ವರ್ಷದ ಅಕೆಡೆಮಿಕ್ ಶಿಕ್ಷಣ ಚಿತ್ರ-ಶಿಲ್ಪಗಳೆರಡರಲ್ಲೂ ತಮಗೆ ಆಗಿದೆಯೆಂದು ಉಲ್ಲೇಖಿಸಿದ್ದಾರೆ. (1917ರಲ್ಲಿ ಕಲ್ಕತ್ತೆಯ ಕಲಾಶಾಲೆಯಲ್ಲಿ ಕಲಿಯಲು Scholarship(ವಿದ್ಯಾರ್ಥಿವೇತನ)ವನ್ನು ಎರಡು ವರ್ಷಗಳ ಅವಧಿಗೆ ಮುಂದುವರೆಸುವವ ವಿಷಯ ಮೈಸೂರು Inspector general of education ರವರಿಂದ ತಿಳಿದು ಆ ವಿದ್ಯಾರ್ಥಿ ವೇತನವನ್ನು ಯೂರೋಪಿನಲ್ಲಿ ಶಿಲ್ಪದ ಬಗ್ಗೆ ಉನ್ನತ ಅಧ್ಯಯನಕ್ಕಾಗಿ ಹೋಗುವವರೆಗೆ ಮೈಸೂರಿನಲ್ಲೇ Advanced music studyಗಾಗಿ ನೀಡುವ ವ್ಯವಸ್ಥೆಯಾಗಬೇಕೆಂದು ಕೋರಿದ್ದಾರೆ. 7ವರ್ಷ ಚಿತ್ರ ಮತ್ತು ಮಾಡೆಲಿಂಗ್‌ನಲ್ಲಿ ಪ್ರಿನ್ಸಿಪಾಲರಿಗೆ ಒಟ್ಟಾರೆ ಪಶ್ಚಿಮದ ಶಿಲ್ಪಕಲೆಯ ಬಗ್ಗೆ ಅವರಿಗಿದ್ದ ಆಸಕ್ತಿ ಗಮನಾರ್ಹವಾಗಿ ಈ ಎರಡು ಪತ್ರಗಳಲ್ಲಿ ವ್ಯಕ್ತವಾಗಿವೆ. ಆಧುನಿಕ ಸ್ಪಂದನ ಅವರೊಳಗೆ ಕೆಲಸ ಮಾಡುತ್ತಿದ್ದುದು ತಿಳಿಯುತ್ತದೆ. ಬಂಗಾಳ ಸಂಪ್ರದಾಯ ಶೈಲಿಯಿಂದ ಹೊರಬಂದು ಅವರು ಪಶ್ಚಿಮದ ಹಾದಿಯ ವರ್ಣಚಿತ್ರಗಳನ್ನು ಸೃಷ್ಟಿಸಿರುವಂತೆಯೇ ಶಿಲ್ಪದಲ್ಲೂ ಸಾಂಪ್ರದಾಯಿಕ ಉಬ್ಬು ಶಿಲ್ಪಗಳ ಜೊತೆಗೆ ಭಾವಶಿಲ್ಪಗಳನ್ನೂ ರೂಪಿಸಿದರು. ಪ್ಲಾಸ್ಟರ್ ಆಫ್ ಪ್ಯಾರೀಸ್ ಪುಡಿಯನ್ನು ಕಲ್ಕತ್ತೆಯಿಂದ ಬೆಂಗಳೂರಿಗೆ ತರಿಸಿಕೊಳ್ಳುತ್ತಿದ್ದರು. ಅವರು ರವೀಂದ್ರರ (1989ರಲ್ಲಿ)ಭಾವಶಿಲ್ಪ ಹೊಸಭಾವ ವೈಭವಗಳನ್ನು

ತುಂಬಿಕೊಂಡಿವೆ. ಹಾಗೆಯೇ ಅವರಿಗೆ ಹೋಟೆಲೊಂದರಲ್ಲಿ ಊಟ ಬಡಿಸುತ್ತಿದ್ದ ಮಾಣಿಯನ್ನು Model ಆಗಿ ದುಡಿಸಿಕೊಂಡರು! ಹೀಗೆ ನಮ್ಮ ರಾಜ್ಯದ ಶಿಲ್ಪಕಲೆಯು ಆಧುನಿಕತೆಯ ಪುಟಗಳನ್ನು ಮ್ಹಾತ್ರೆ ವೆಂಕಟಪ್ಪನವರುಗಲ ಕಾಲದಿಂದಲೇ ತೆರೆಯುಬಹುದು.

ರೂಪಶಿಲ್ಪಿ ಬಸವಯ್ಯ:

1925ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಗಮನ ಸೆಳೆದ ಮೈಸೂರು ಅರಸರ ಆಸ್ಥಾನ ಶಿಲ್ಪಿಯಾಗಿ ಬಸವಯ್ಯ(1900-1974) ನೇಮಕ ಗೊಂಡರು. ಆಗಿನ ಕಾಲಕ್ಕೆ(ರೂಪಶಿಲ್ಪ) Modelling ನಲ್ಲಿ ನಿಷ್ಣಾತರಾಗಿದ್ದರು. ಸಹಜ ಪ್ರತಿಭಾವಂತರಿಗೆ ಉತ್ತಮವಾಗಿ ಸಿದ್ಧಿಸುವ ಈ ಕಲೆಯನ್ನು ಬಸವಯ್ಯ 1914-1919ರ ಸಮಯದಲ್ಲಿ ಮೈಸೂರಿನ ವೃತ್ತಿ ಶಿಕ್ಷಣ ಕರಕುಶಲಕಲೆಗಳ ಅಭಿವೃದ್ಧಿಯ ಉದ್ದೇಶದ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಕಲಿತರು. ರೂಪಶಿಲ್ಪವನ್ನು ಬಲ್ಲ ಕೆ. ರಾಮಕೃಷ್ಣನ್ ಅಲ್ಲಿ ಡ್ರಾಯಿಂಗ್ ವಿಭಾಗದ ಮುಖ್ಯಸ್ಥರಾಗಿದ್ದರು. (ಕೆ. ವೆಂಕಟಪ್ಪನವರಿಗೂ ಇವರು ಗುರುಗಳಾಗಿದ್ದರು) Modelling ವಿಭಾಗದಲ್ಲಿ ಮದರಾಸಿನ ಎಂ. ಗೋವಿಂದ ಪಿಳ್ಳೆಯವರ ಬಳಿಯೂ ಬಸವಯ್ಯ ಕಲಿತರು. ಗೋವಿಂದ ಪಿಳ್ಳೆ ಶಿಲ್ಪಕಲೆಯಲ್ಲಿ ಪಶ್ಚಿಮದ ಅಕಡೆಮಿಕ್ ಜ್ಞಾನದ ರಸಧಾರೆಯೇ ಆಗಿದ್ದರು. ಗಂಭೀರವಾಗಿ ಹರಿಯುವ ನದಿಯಂಥ ಅವರು ಪ್ರಚಾರ ಬಯಸದವರಾಗಿದ್ದರು. ಮುಂಬಯಿಯ ಸರ್.ಜೆ.ಜೆ. ಕಲಾಶಾಲೆಯಲ್ಲಿ ಶಿಲ್ಪಕಲೆ ಕಲಿಯಲು ಮೈಸೂರು ಅರಸರ ವಿದ್ಯಾರ್ಥಿ ವೇತನ ಪಡೆದು (ಶಿಲ್ಪಿಯಾದವನಿಗೆ ಚಿತ್ರಕಲೆಯ ಪರಿಚಯವೂ ಅಗತ್ಯ ಎಂದು ಭಾವಿಸಿ) ಚಿತ್ರ ಕಲೆಯನ್ನು ಕಲಿತರು.

ಬಸವಯ್ಯನವರು ರೂಪಶಿಲ್ಪಿಯೆಂದೇ ಖ್ಯಾತನಾಮರಾದವರು ಮುಂಬಯಿಯ ಹಲವು ಸ್ಟುಡಿಯೋಗಳಲ್ಲಿಲ ಕಲಿತು ರೂಪಶಿಲ್ಪದ ಉನ್ನತ ಹಂತಗಳನ್ನು ಮುಟ್ಟಿದರು. ವಿ.ವಿ.ವಾಗ್ ಮತ್ತು ಮ್ಹಾತ್ರೆಯವರಂಥ ಖ್ಯಾತರ ಬಳಿ ಕಲಿಯುವ ಅವಕಾಶವಾಯಿತು. ಮೈಸೂರಿಗೆ ಹಿಂತಿರುಗಿದ ಮೇಲೆ 1925 ರಿಂದ 1940ರ ವರೆಗೆ ಹಲವು ವ್ಯಕ್ತಿಗಳ ಭಾವರೂಪ ಶಿಲ್ಪಗಳನ್ನು ಸಿದ್ಧಪಡಿಸಿದರು. ಆ ಕಾಲದ ಮತ್ತೊಬ್ಬ

ಸೃಜನಶೀಲ ಶಿಲ್ಪಿ ಚಿತ್ರಕಾರರು ಆಗಿದ್ದ ಆರ್.ಎಸ್.ನಾಯ್ಡು ಸ್ವಯಂ ಸ್ಫೂರ್ತಿಯ ಕಲಿಕೆಯವರು. 1950ರ ಸುಮಾರಿನಲ್ಲಿ ಬೆಂಗಳೂರಿನಲ್ಲಿ ಮತ್ತು 1957ರ ನಂತರ ಮೈಸೂರಿನಲ್ಲಿದ್ದ ಅವರು ಪಶ್ಚಿಮದ ಕಲೆಯ ಪರಿಚಯ ಹೊಂದಿದ್ದವರು. ಲಂಡನ್ನಿಗೂ. ಭೇಟಿ ನೀಡಿದ್ದರು. ಪೋಲ್ಯಾಂಡ್ ನವ್ಯಕಲೆಯನ್ನು ಮೆಚ್ಚಿಕೊಂಡಿದ್ದರು. ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ತೀವ್ರಭಾವನೆಯ ಮತ್ತು ವ್ಯಂಗ್ಯ ವಿಡಂಬನೆಯ ಉಬ್ಬು ಶಿಲ್ಪಗಳೇ ಅಲ್ಲದೆ, ಲೆನಿನ್, ಗಾರ್ಕಿ, ಮುಸಲೋನಿ, ಗಾಂಧಿ, ಬುದ್ಧ, ಕ್ರಿಸ್ತ, ಬೇಂದ್ರೆ, ಕುವೆಂಪು ಮೊದಲಾದವರ ಭಾವ ಶಿಲ್ಪಗಳನ್ನು ಅವರು ಸೃಷ್ಟಿಸಿದರು.

ಹೀಗೆ ಸಾಗಿರುವ ಕಲೆ ಮತ್ತು ಧರ್ಮಗಳ ಹಾಗೂ ಸಾಂಸ್ಕೃತಿಕ ಕೊಡುಗೆಗಳ ನಡುವೆ ಅಗಲಿಸಲಾರದ ನಂಟೊಂದಿದೆ ಎಂಬ ವಿಷಯ ಅನೇಕ ದೇಶಗಳ ಸಾಂಸ್ಕೃತಿಕ ಅಧ್ಯಯನದಿಂದ ತಿಳಿದುಬರುತ್ತದೆ. ಭರತ ಖಂಡದ ಸಂಗೀತ, ನೃತ್ಯ, ಚಿತ್ರಕಲೆ, ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಪರಿಚಯವಾದಾಗ ನಮ್ಮ ದೇಶದ ಸಂಸ್ಕೃತಿಯೂ ಕಲೆ ಮತ್ತು ಧರ್ಮಗಳಿಗಿರುವ ಈ ಸಾವಯವ ಸಂಬಂಧವನ್ನು ಸ್ವೀಕರಿಸುವುದು ನಮಗೆ ಮನವರಿಕೆಯಾಗುತ್ತದೆ. ಮತ್ತು ಶಿಲ್ಪಕಲೆಗೆ ವಾಸ್ತು ಶಿಲ್ಪಕ್ಕಿಂತ ಹಿಂದಿನ ಇತಿಹಾಸವಿರುವುದು ಸ್ಪಷ್ಟವಾಗುತ್ತದೆ. ಈ ನಾಡಿನ ಸಂಸ್ಕೃತಿಯ ಮೇಲೆ ವೈಧಿಕ ಧರ್ಮ, ನಂತರ ಅದರಿಂದ ಸಿಡಿದೆದ್ದ ಜೈನ ಮತ್ತು ಬೌದ್ಧ ಧರ್ಮಗಳು, ನಂತರ ದೇಶದ ಆಕ್ರಮಣ ನಡೆದು ಇಸ್ಲಾಂ, ಕ್ರಿಶ್ಚಿಯನ್ ಧರ್ಮಗಳು, ಸಿಖ್, ಪಾರ್ಸಿ ಧರ್ಮ ಮುಂತಾದವು ಹಲವಾರು ರೀತಿಯ ಅಚ್ಚಳಿಯದ ಪ್ರಭಾವ ಬೀರಿವೆ. ಇವುಗಳಲ್ಲಿ ಇಸ್ಲಾಂ ಧರ್ಮವೊಂದನ್ನು ಬಿಟ್ಟು ಮಿಕ್ಕೆಲ್ಲವುಗಳ ಗಾಢ ಪ್ರಭಾವಗಳನ್ನು ಶಿಲ್ಪಕಲೆ ಮೂಡಿಸಿವೆ.

ಮೈಸೂರು ಅರಸರ ಕಲಾವೈಭವಗಳಿಗೆ ವಿಜಯನಗರ ಅರಸರ ಪ್ರಭಾವವು ಇದೆ. ಇಲ್ಲಿ ಕೆಲವು ವಿಜಯನಗರದ ಶಿಲ್ಪವೈಭವಗಳನ್ನು ಪರಾಮರ್ಶಿಸಲಾಗಿದೆ:

ವಿಜಯನಗರದ ದೇವಾಲಯಗಳ ಮುಖ್ಯ ಆಕರ್ಷಣೆಗಳಾದ ಮಹಾದ್ವಾರದ ಮೇಲಿನ ಆಕಾಶದೆತ್ತರಕ್ಕೆ ಚಾಚಿಕೊಂಡಿರುವ ಗೋಪುರ, ದೇವಸ್ಥಾನದ ಕಲ್ಯಾಣಮಂಟಪಗಳು,

ಮುಖಮಂಟಪಗಳು ಮೇಲಿನ ಪ್ರಸ್ತರಗಳ ಸಾಲುಗಳು ಹೀಗೆ ದೇವಾಲಯದ ಆಲಂಕರಣಕ್ಕೆ ಕಲ್ಲನಲ್ಲಿ ಕೆತ್ತಲು ಬೇಕಾಗುವ ಕಾಲಾವಕಾಶವನ್ನು ಗಮನಿಸಿದರೆ ಪ್ರಾಯಶಃ ನಿರ್ಮಿಸಲು ಅಗಾಧವಾದಷ್ಟು ಸಮಯಬೇಕಾಗುತ್ತದೆ. ಅದಕ್ಕೆಂದೇ ವಿಜಯನಗರದ ಕಾಲದಲ್ಲಿ ಕಲಾವಿದ ಅಂದು ಪ್ರಚಲಿತದಲ್ಲಿದ್ದ ಹೊಸ ಮಾಧ್ಯಮವನ್ನು ತನ್ನದಾಗಿಸಿಕೊಂಡಿರಬೇಕು. ಈ ಹೊಸ ಮಾಧ್ಯಮವೇ ಪ್ರಸ್ತುತ ಚರ್ಚೆಯಲ್ಲಿರುವ ಗಾರೆ. ಗಾರೆ ಕಲಾಮಾಧ್ಯಮವಾಗಿ ವಿಜಯನಗರ ಕಾಲದಲ್ಲಿ ಗಾರೆ ಶಿಲೆಯಷ್ಟೇ ಪ್ರಮುಖವಾದ ಮಾಧ್ಯಮವಾಯಿತು. ಯಾವುದೇ ದೇವಾಲಯದ ನಿರ್ಮಾಣವಿರಲಿ, ಮಂಟಪ, ಪುಷ್ಕರಿಗಳಾಗಲೀ ಅಥವಾ ಇನ್ನಾವುದೋ ಖಾಸಗಿ ಕಟ್ಟಡದ ನಿರ್ಮಾಣವಿರಲಿ ಇಟ್ಟಿಗೆ ಮತ್ತು ಗಾರೆ ಅಲ್ಲಿ ಉಪಯೋಗವಾಗಿರುವುದನ್ನು ಗಮನಿಸಬಹುದಾಗಿದೆ.

ಗಾರೆಯೊಂದಿಗೆ ಇಟ್ಟಿಗೆ ಕೂಡ ವಿಜಯನಗರ ಕಾಲದ ದೇವಾಲಯಗಳ ಅಲಂಕರಣಗಳಲ್ಲಿ ಅಷ್ಟೇ ಮುಖ್ಯವಾದ ವಸ್ತುವಾಗಿದೆ. ಗೋಪುರ, ಶಿಖರ ಮತ್ತು ಕಿರು ವಿಮಾನಗಳ ನಿರ್ಮಾಣದಲ್ಲಿ ಮತ್ತು ಆಕೃತಿಗಳ ವಿಭಿನ್ನ ವಿನ್ಯಾಸಗಳ ಹಾಗೂ ಯಾವುದೇ ಸೂಕ್ಷ್ಮವಾದ ಅಲಂಕಾರಿಕ ವಸ್ತುಗಳ ರಚನೆಯಲ್ಲಿ ಗಾರೆ ಮತ್ತು ಇಟ್ಟಿಗೆ ಸಮಾನಾಗಿ ಉಪಯೋಗವಾಗಿದೆ.

ಗಾರೆ ಮಾಧ್ಯಮದ ಕಲೆ:

ಮಾಧ್ಯಮವಾಗಿ ಗಾರೆ ಕಲಾ ಮಾಧ್ಯಮವು ಬೆಳೆದುದನ್ನು ಸ್ಥೂಲವಾಗಿ ಗಮನಿಸಿದರೆ ಅದರ ಕಲಾ ಇತಿಹಾಸ ನಮ್ಮನ್ನು ಪ್ರಾಚೀನ ಕಾಲದತ್ತ ಕೊಂಡೊಯ್ಯುತ್ತದೆ. ಗಾರೆಯನ್ನು ಪ್ರಾಚೀನ ನಾಗರೀಕತೆಗಳಲ್ಲಿ ಉಪಯೋಗಿಸಿರುವುದನ್ನು ಈಜಿಪ್ತ, ಸುಮೇರಿಯನ್ ಮತ್ತು ಸಿಂಧೂ ನದಿ ಕೊಳ್ಳದ ಹರಪ್ಪ, ಮೆಹೆಂಜೋದಾರೋಗಳ ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು. ಈಜಿಪ್ತಿನ ಪಿರಮಿಡ್ಡುಗಳಲ್ಲಿನೊಳ ಕೋಣೆಗಳಲಿಕಮಡುಬರುವ ಭಿತ್ತಿಚಿತ್ರಗಳ ಹಿನ್ನೆಲೆಯಾಗಿ ಗಾರೆ ಉಪಯೋಗವಾಗಿದೆ. ಸಮೇರಿಯನ್ ಸಂಸ್ಕೃತಿಯಲ್ಲಿನ ಜಿಗುರಾಟ್‌ಗಳ ನಿರ್ಮಾಣದಲ್ಲಿ ಮತ್ತು ಬಿಡಿ ಆಕೃತಿಗಳ ನಿರ್ಮಾಣದಲ್ಲಿ ಗಾರೆ ಉಪಯೋಗವಾಗಿದೆ. ಗ್ರೀಕೋ-ರೋಮನ್ ನಾಗರೀಕತೆಗಳಲ್ಲಿ ಕಟ್ಟಡಗಳ ನಿರ್ಮಾಣದಲ್ಲಿ ಮತ್ತು

ಕಲಾತ್ಮಕವಾದ ಶಿಲ್ಪಾಕೃತಿಗಳ ರಚನೆಗಾಗಿ ಗಾರೆ ಮಾಧ್ಯಮವಾಗಿದೆ. ಗಾರೆಗೆ ಸ್ವತಂತ್ರವಾದ ಕಲಾಮಾಧ್ಯಮದ ಸ್ಥಾನ ದೊರೆತಿದ್ದು ಗ್ರೀಕೋ-ರೋಮನ್ ಕಾಲದಲ್ಲಿಯೇ ಅನ್ನಬಹುದು.

ಇತ್ತ ಭಾರತದಲ್ಲಿ ಕುಷಾನರ ಕಾಲದಲ್ಲಿ ಗಾಂಧಾರ ಶೈಲಿಯಲ್ಲಿ ರಚಿಸಲ್ಪಟ್ಟ ಹಲವಾರು ಬಿಡಿ ಆಕೃತಿಗಳು ಮತ್ತು ಕಥಾನಕ ಆಕೃತಿಗಳು ಕಂಡು ಬರುತ್ತವೆ. ಇವು ಮುಖ್ಯವಾಗಿ ಬೌದ್ಧ ಧರ್ಮಕ್ಕೆ ಸೇರಿವೆ. ಶಾತವಾಹನರ ಕಾಲದ ಲಯಣಗಳಲ್ಲಿ ಹಾಗೂ ಗುಪ್ತ, ವಾಕಾಟಕ ರಾಜ ಮನೆತನದವರು ನಿರ್ಮಿಸಿರುವ ಬೌದ್ಧ ಚೈತ್ಯ ವಿಹಾರಗಳಲ್ಲಿನ ಭಿತ್ತಿ ಚಿತ್ರಗಳ ಹಿನ್ನೆಲೆಯ ಲೇಪನವಾಗಿ ಗಾರೆಯನ್ನು ಉಪಯೋಗಿಸಿದೆ. ಅಲ್ಲದೆ ಐಹೊಳೆಯಲ್ಲಿನ ಚಾಲುಕ್ಯ ಪೂರ್ವ ಕಾಲದ ಇಟ್ಟಿಗೆಯ ಕಟ್ಟಡವನು ಗಾರೆಯನ್ನು ಉಪಯೋಗಿಸಯೇ ಕಟ್ಟಿದೆ. ನಂತರದ ಕಾಲದಲ್ಲಿ ಗಾರೆಯ ಉಪಯೋಗವಾಗಿದ್ದರೂ ಅದು ಸ್ವಲ್ಪ ವಿರಳವೆಂದೇ ಹೇಳಬೇಕು. ಏಕೆಂದರೆ, ದೇಶದ ಉದ್ದಗಲಕ್ಕೂ ಅಂದು ಪ್ರಭಾವಕಾರಿಯಾಗಿ ಪ್ರಚಲಿತದಲ್ಲಿದ್ದ ಭವ್ಯವಾದ ಲಯಗಳ ಕೆತ್ತನೆ, ದೇಗುಲಗಳ ನಿರ್ಮಾಣ, ಶಿಲ್ಪಗಳ ಕೆತ್ತನೆ ಎಲ್ಲವೂ ಶಿಲೆಯನ್ನು ಆಧರಿಸಿದವುಗಳೇ. ಹೀಗಾಗಿ ಅಂದು ಶಿಲೆ ಪ್ರಮುಖ ಮಾಧ್ಯಮವಾಯಿತು. ಆದರೆ, ಗಾರೆಗೆ ವಿಶೇಷವಾದ ಸ್ಥಾನಮಾನ ಮತ್ತೊಮ್ಮೆ ದೊರೆತದ್ದು, 13-14ನೇ ಶತಮಾನದಲ್ಲಿ ಅನ್ನಬಹುದು. (ಡಾ. ಆರ್.ಹೆಚ್)

ನಿರ್ಮಾಣ ಮಾಧ್ಯಮದಲ್ಲಿ ಗಾರೆಯು ಅದರ ಪ್ರಾಮುಖ್ಯತೆ ಮತ್ತು ಉಪಯೋಗವನ್ನು ಅದರ ತಾಂತ್ರಿಕತೆ ಮತ್ತು ಅದರ ಸರಳತೆಯನ್ನು ಅವಲಂಬಿಸಿದೆ ಎಂದು ಹಲವರು ಅಭಿಪ್ರಾಯಪಟ್ಟಿರುತ್ತಾರೆ. ಅದಕ್ಕಾಗಿಯೇ ಪರ್ಷಿಯಾದಲ್ಲಿ ಇಸ್ಲಾಮಿಕ್ ದೊರೆಗಳು ಭವ್ಯವಾದ ಮಸೀದಿಗಳನ್ನು ನಿರ್ಮಿಸಲು ಪ್ರಾರಂಭಿಸಿದ್ದು, ಪ್ರಾಯಶಃ ಅದೇ ಪರಂಪರೆ ಭಾರತದಲ್ಲಿ ಇಸ್ಲಾಮಿಕ್ ಧರ್ಮದ ಅರಸರು ರಾಜ್ಯಭಾರ ಪ್ರಾರಂಭಿಸಿದ ಮೇಲೆ ಮುಂದುವರೆದುಕೊಂಡು ಬಂದಿತೆಂದು ಹೇಳಬಹುದು. ಮಹಾದ್ವಾರಗಳ ಅಲಂಕರಣ, ಮಸೀದಿಗಳ ಒಳಮಾಳಿಗೆಗಳ, ಗೋಡೆಗಳ ಅಲಂಕರಣ, ಹೀಗೆ ಪ್ರಾರಂಭವಾದ ಗಾರೆಯ ಉಪಯೋಗ ಕಾಲ ಕ್ರಮೇಣ ವಿಜಯನಗರ ಕಾಲದಲ್ಲಿ 'ಶಿಲೆಗೆ' ಪರ್ಯಾಯವಾಗಿ ಇಟ್ಟಿಗೆಯೊಂದಿಗೆ ಪ್ರಮುಖ ಮಾಧ್ಯಮವಾಯಿತು.

ಗಾರೆಯ ತಾಂತ್ರಿಕತೆ:

ಗಾರೆ ಮಾಧ್ಯಮವು ಅಷ್ಟು ಅಗಾಧ ರೀತಿಯಲ್ಲಿ ಬಳಸಲು ಮುಖ್ಯ ಕಾರಣ ಅದರ ಸರಳ ತಾಂತ್ರಕತೆ. ನವೀನ ಯುಗದ ಸಿಮೆಂಟಿನಷ್ಟೇ ಗಟ್ಟಿಯಾದ ಈ ಮಾಧ್ಯಮ ಬಳಸಲು ಸುಲಭವೂ ಆಗಿದೆ. ಸಿಮೆಂಟ್ ನೀರಿನೊಂದಿಗೆ ಬೆರೆತೊಡನೆ ಕೆಲವೇ ಗಂಟೆಗಳಲ್ಲಿ ಗಟ್ಟಿಯಾಗಿ ಬಿಡುತ್ತದೆ. ಆದರೆ ಗಾರೆಯನ್ನು ತಯಾರಿಸಿ ಕೆಲವು ದಿನಗಳವರೆಗೆ ಹಾಗೆ ಇಡಬಹುದು. ಗಾರೆಯ ಈ ಅನುಕೂಲಕರ ಮಿಶ್ರಣ ಅಂದಿನ ವಿಜಯನಗರದ ಕಲಾವಿದರಿಗೆ, ಅತ್ಯಂತ ಆಕರ್ಷಕವಾದ ಮಾಧ್ಯಮವಾಗಿ ಕಂಡಿರಬೇಕು.

ಗಾರೆಯನ್ನು ಮುಖ್ಯವಾಗಿ ಸುಣ್ಣ, ಮರಳು, ನೀರು ಮತ್ತು ಕೆಲವು ಅಂಟು ದ್ರಾವಣಗಳನ್ನು ಸೇರಿಸಿ ತಯಾರಿಸುತ್ತಾರೆ. ಉಪಯೋಗವನ್ನು ಅವಲಂಬಿಸಿ ಮತ್ತು ರಚಿಸಬೇಕಾದ ಆಕೃತಿಯ ಸೂಕ್ಷ್ಮತೆ, ಅಲಂಕರಣವನ್ನು ಗಮನದಲ್ಲಿಸಿ ಗಾರೆಯ ಸರಿಯಾದ ಗುಣಮಟ್ಟದ ತಯಾರಿಕೆ ನಡೆಯುತ್ತದೆ. ಆಕೃತಿಗಳು ಗಾರೆಯ ಗುಣಮಟ್ಟವನ್ನು ಅವಲಂಬಿಸಿವೆ ಎಂಬುದನ್ನು ಹಲವಾರು ಉದಾಹರಣೆಗಳಿಂದ ರುಜುವಾತುಪಡಿಸಬಹುದು. ಗಾರೆಯಲ್ಲಿ ಸುಣ್ಣದ ಗುಣಮಟ್ಟ ಅತೀ ಮುಖ್ಯ. ಸೋಸಿ ತೆಗೆದ ಕಪ್ಪೆಚಿಪ್ಪಿನ ಸುಣ್ಣ ಅಥವಾ ಸುಣ್ಣಬುರಳಿ ಇವು ಮುಖ್ಯ ವಸ್ತುಗಳು. ಇದರೊಂದಿಗೆ ಉತ್ತಮ ಮರಳು, ಲೋಳೆಸರ, ಚಿಲ್ವಪಾತ್ರೆ ಕಾಯಿ, ಬೆಲ್ಲ ಅಥವಾ ಕೆಲವು ನಲ ಮೊಟ್ಟೆಯೂ ಕೂಡಾ ಅಂಟು ದ್ರಾವಣದ ರೂಪದಲ್ಲಿ ಉಪಯೋಗವಾಗುತ್ತದೆ. ಎಲ್ಲವನ್ನು ಹದಕ್ಕೆ ತಕ್ಕಂತೆ ಹಾಕಿ ಚೆನ್ನಾಗಿ ರುಬ್ಬಬೇಕು. ರುಬ್ಬಿದನಂತರ ಬೆಣ್ಣೆಯ ಹಾಗೆ ಹದಕ್ಕೆ ಬಂದಾಗ ಮತ್ರ ಯಾವುದೇ ಆಕೃತಿಯ ರಚನೆ ಇರಲಿ ಅತ್ಯಂತ ನೈಜವಾಗಿ ಮೂಡುತ್ತದೆ. ಅಲ್ಲದೆ, ಉಪಯೋಗಕ್ಕೂ ಸಹಕಾರಿಯಾಗುತ್ತದೆ. ಪ್ರಾಚೀನ ಕಾಲದಲ್ಲಿಯೇ ವಿವಿಧ ವರ್ಗದ ಗುಣಮಟ್ಟದ ಗಾರೆ ಗ್ರೀಕ್ ಮತ್ತು ಇಟಲಿ ದೇಶಗಳ ಕಲೆಯಲ್ಲಿ ಉಪಯೋಗವಾಗಿರುವುದು ಕಂಡುಬರುತ್ತದೆ. ಅಂತಹುದೇ ಪ್ರಯತ್ನ ವಿಜಯನಗರದ ಕಾಲದ ವಿವಿಧ ರಚನೆಗಳಲ್ಲಿ ಆಗಿರುವುದನ್ನು ಹಲವಾರು ಉದಾಹರಣೆಗಳಿಂದ ಗಮನಿಸಬಹುದು.

ಮೈಸೂರು ರಾಜ್ಯದ ಕಲಾ ಶೈಲಿಗಳಿಗೆ ಪೂರಕವಾದ ವಿಜಯನಗರ ಕಾಲದಲ್ಲಿ ಗಾರೆಯು ಒಂದು ಸಂಪೂರ್ಣವಾದ ಕಲಾಮಾಧ್ಯಮವಾಗಿ ಬೆಳೆದಿತ್ತು ಎನ್ನುವುದನ್ನು ಇಂದಿಗೂ ಉಳಿದಿರುವ ಆ ಕಾಲದ ದೇವಾಲಯಗಳಿಂದ ಮತ್ತು ವಿವಿಧ ಕಟ್ಟಡಗಳಿಂದ ತಿಳಿಯಬಹುದು. ವಿಜಯನಗರದ ರಾಜಧಾನಿ ಹಂಪೆಯಲ್ಲಿನ ಎಲ್ಲಾ ದೇವಾಲಯಗಳಲ್ಲಿ ಒಂದಲ್ಲ ಒಂದು ವಿಧದಲ್ಲಿ ಗಾರೆಯ ಉಪಯೋಗವಿದೆ. ವಿಜಯನಗರದ ರಾಜ್ಯವ್ಯಾಪ್ತಿಯುದ್ದಕ್ಕೂ ಹರಡಿಕೊಂಡಿರುವ ಮಂಟಪಗಳಿರಲಿ ಅಥವಾ ಯಾವುದೇ ಸಾರ್ವಜನಿಕ ಕಟ್ಟಡಗಳಿರಲಿ ಗಾರೆ ಮಾಧ್ಯಮವಾಗಿ ಉಪಯೋಗವಾಗಿದೆ. ಅಂದರೆ ಗಾರೆಯ ತಯಾರಿಕೆ, ಅದನ್ನು ಉಪಯೋಗಿಸಲು ಸಿದ್ಧವಾಗರುತ್ತಿದ್ದ ಕಲಾವಿದರು, ಗಾರೆ ಕೆಲಸದವರು ಎಲ್ಲವನ್ನು ಲೆಕ್ಕ ಹಾಕಿದರೆ ಯೋಚನೆಗೂ ಮೀರಿದ ಬೆಳವಣಿಗೆ ಕಾಣುತ್ತದೆ. ಶಿಲೆಯನ್ನು ಬದಿಗೆ ತಳ್ಳಿ ತನ್ನನ್ನು ಮುಖ್ಯ ಮಾಧ್ಯಮವನ್ನಾಗಿ ಸ್ಥಾಪಿಸಿಕೊಳ್ಳುವಲ್ಲಿ ಗಾರೆ ಯಶಸ್ವಿಯಾಗಿದೆ. ಅಥವಾ ಶಿಲೆಗೆ ಸಮಾನಾಂತರವಾದ ಸ್ಥಾನವನ್ನು ಅದು ಪಡೆದಿದೆ ಎನ್ನಬಹುದು. ದೇವಸ್ಥಾನದ ಮುಖ್ಯ ಆಕರ್ಷಣೆಗಳಾದ ಶಿಖರ, ಗೋಪುರ, ವಿಮಾನಗಳ ಗೂಡಿನ ಸಾಲು ಹಾಗೂ ಇನ್ನಿತರ ಅಲಂಕರಣಗಳಲ್ಲಿ ಆಕೃತಿಗಳು ಮುಖ್ಯವಾಗಿ ಕಂಡು ಬರುತ್ತವೆ. ಸಾಮಾನ್ಯವಾಗಿ ಆಯಾ ದೇವಸ್ಥಾನಕ್ಕೆ ಸಂಬಂಧಪಟ್ಟಂತಹ ಪಂಥೀಯ ಆಕೃತಿಗಳು ಕಾಣಿಸಿಕೊಂಡಿವೆ. ವೈಷ್ಣವ-ಶೈವ ಪಂಥಕ್ಕೆ ಸೇರಿದ ಆಕೃತಿಗಳೂ ಒಟ್ಟೊಟ್ಟಿಗೆ ಕಾಣಿಸಿರುವ ಉದಾಹರಣೆಗಳು ಇಲ್ಲದಿಲ್ಲ.

ಆರಂಭದಲ್ಲಿ ಪ್ರಸ್ತುತ ಗಾರೆ ಮಾಧ್ಯಮದ ನಿರ್ಮಾಣಗಳು ವಿಜಯನಗರದ ಪ್ರಪ್ರಥಮ ರಾಜಮನೆತನದ ಅರಸರ ಕಾಲದಲ್ಲಿ ನಿರ್ಮಿಸಿದ ದೇವಾಲಯಗಳಲ್ಲಿ ಗಾರೆ ಕೆಲಸ ಇದ್ದಿರಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆನಂತರದ ಕಾಲದಲ್ಲಿಯೂ ಕೂಡ ಹಲವಾರು ಹೊಸ ಜೋಡಣೆಗಳೂ ಆಗಿರುವ ಸಾಧ್ಯತೆ ಇರುತ್ತದೆ. ಗಾರೆಯು ಇದ್ದಕ್ಕಿದ್ದಂತೆ ಅಷ್ಟು ವೇಗವಾಗಿ ಮತ್ತು ಶಿಲೆಗೆ ಪರ್ಯಾಯವಾಗಿ ಉಪಯೋಗಗೊಳ್ಳಲು ಕಾರಣಗಳು ಹಲವಾರು ಇರುಬಹುದು. ಸಮರೋಪಾದಿಯಲ್ಲಿ ನಿರ್ಮಾಣಗೊಂಡ ವಿಶಾಲ ದೇವಾಲಯಗಳು ಮೂಲತಃ ಮಾಳಿಗೆಯವರೆಗೂ ಗಟ್ಟಿಯಾದ ಕಣಶಿಲೆಯಲ್ಲಿ(ಗ್ರಾನೈಟ್)ಯೇ ನಿರ್ಮಾಣವಾದವು. ಕಂಬಗಳ ಅಲಂಕರಣ, ಹೊರಭಿತ್ತಿಗಳ ಅಲಂಕರಣ

ಹೀಗೆ, ವಿವಿಧ ಆಕೃತಿತಗಳನ್ನು ಕೆತ್ತುವ ಕೆಲಸಕ್ಕೆ ಸಾಮಾನ್ಯವಾಗಿ ಹೆಚ್ಚು ಸಮಯ ಬೇಕಾಗುತ್ತಿತ್ತು. ಬಹುಶಃ ತಾಂತ್ರಿಕವಾಗಿ ಇದನ್ನೇ ಮೇಲ್ಮಟ್ಟಕ್ಕೆ ಮುಂದುವರಿಸಿದರೆ ಉದ್ದೇಶಿತ ಸಮಯದಲ್ಲಿ ನಿರ್ಮಾಣಕಾರ್ಯಸಂಪೂರ್ಣಗೊಳ್ಳದೆ ಇರುವ ಸಂಭವ ಹೆಚ್ಚು. ಹೀಗಾಗಿ ಮೂಲ ನಕ್ಷೆಯಲಿರುವ ಆಕೃತಿಗಳನ್ನು ಈ ಹೊಸ ಇಟ್ಟಿಗೆ, ಗಾರೆಯನ್ನು ಮೂಲ ವಸ್ತುವನ್ನಾಗಿ ಮಾಡಿಕೊಂಡು ನಿರ್ಮಿಸಿದರು ಎಂದೆನಿಸುತ್ತದೆ. ದೇವಸ್ಥಾನಕ್ಕಾಗಿಯೇ ವಿವಿಧ ಆಕಾರದ ಇಟ್ಟಿಗೆಯ ತಯಾರಿಕಾ ಕೇಂದ್ರಗಳು ಕಾರ್ಖಾನೆ ಮಾದರಿಯಲ್ಲಿ ಪರಾರಂಭವಾಗಿದ್ದಿರಬಹುದು: ಇದರ ಜೊತೆಯಲ್ಲಿಯೇ ಗಾರೆಐಊ ಕೂಡ ಸಾಕಷ್ಟು ಪ್ರಮಾಣದಲ್ಲಿ ತಯಾರಗುತ್ತಿತ್ತು. ಇಂದಿಗೂ ಕೂಡ ವಿಯನಗರ(ಹಂಪೆ)ದಲ್ಲಿ ಅಲ್ಲಿ ಗಾರೆ ಅರೆಯುವ ಕಲ್ಲುಗಳನ್ನು ನೋಡಬಹುದು.

ವಿಯನಗರದ ಕಲಾವಿದ ಇಟ್ಟಿಗೆ ಮತ್ತು ಗಾರೆಯನ್ನು ಉಪಯೋಗಿಸಿ, ಕಲಾತ್ಮಕವಾದ, ಸುಂದರವಾದ ಆಕೃತಿಗಳನ್ನು ನಿರ್ಮಿಸುವಲ್ಲಿ ಸಿದ್ಧಹಸ್ತನಾಗಿದ್ದ. ಸಾಮಾನ್ಯವಾಗಿ ಆಕೃತಿಗಳು ಶಿಲ್ಪಗಳಂತೆ ಬಿಡಿ ಆಕೃತಿಗಳಲ್ಲ. ಹಿನ್ನೆಲೆ ಗೋಡೆಗೆ ಅಂಟಿಕೊಂಡಂತೆ ಇವೆ. ಇದೆ ತಾಂತ್ರಿಕತೆಯನ್ನು ಶಿಲಾ ಆಕೃತಗಳನ್ನು ಭಿತ್ತಿಗಳ ಮೇಲೆ ಕೆತ್ತುವಾಗ ಅನುಸರಿಸಲಾಗುತ್ತದೆ. ವಿಜಯನಗರದುದ್ದಕ್ಕೂ ಇರುವ ಶಿಲಾ ಆಕೃತಿಗಳು ಕೆಳ ಉಬ್ಬು(Relief) ಶಿಲ್ಪಗಳಾಗಿವೆ. ಹೆಚ್ಚು ಹಾರಚಾಚಿರುವ ಉಬ್ಬು ಶಿಲ್ಪಗಳಲ್ಲವೆಂದಲ್ಲ, ಆದರೆ ಸಾಮನ್ಯವಾಗಿ ಕೆಳ ಉಬ್ಬು ಶಿಲ್ಪಗಳ ಸಂಖ್ಯೆಯೇ ಹೆಚ್ಚು. ಇವುಗಳಿಗೆ ಸಮಾನಾಂತರವಾಗಿ ಗಾರೆ ಆಕೃತಿಗಳೂ ದುಡಮು ಶಿಲ್ಪಗಳಂತೆಯೇ ಹೆಚ್ಚು ಉಬ್ಬು ಆಕೃತಿಗಳಾಗಿ ಬೆಳೆದವು. ಗಾರೆ ಆಕೃತಿಗಳನ್ನು ನೋಡಿದಾಗ, ಹರನನೆಲಯಂದ ಸಂಘೂರ್ಣವಾಗಿ ಹೊರಬರುತವಂತೆ, ಭಾಸವಾಗದೇ ಇರದು. ಕಲಾಅವಿದನೆಐಗೆ ಇಲ್ಲಿ ಸ್ಥಾಳಾವಕಾಶದ ಸಂಪೂರ್ಣ ಜ್ಞಾನವಿದೆ. ಆದ್ದರಿಂದ ಇರುವ ಅವಕಾಶಕ್ಕೆ ಅನುಗುಣವಾಗಿ ಆಕೃತಿಗಳನ್ನು ನಿರ್ದೇಶಿಸಿದ್ದಾನೆ. ಭಿತ್ತಿ ಚಿತ್ರಗಳಲ್ಲಿ ಮತ್ತು ಭಿತ್ತಿ ಆಕೃತಿಗಳಲ್ಲಿ ಕಂಡು ಬರುವ ಆಕೃತಿಗಳ ಸಂಯೋಜನೆ ಇಲ್ಲಿಯೂ ಕಂಡು ಬರುತ್ತದೆ. ಮುಖ್ಯ ಆಕೃತಿ ಎಲ್ಲ ಆಕೃತಿಗಳಿಗಿಂತ

ಎತ್ತರವಾಗಿದ್ದು ಮಧ್ಯದಲ್ಲಿರುತ್ತದೆ. ಉಳಿದವುಗಳು ಎರಡು ಪಕ್ಕಗಳಲ್ಲಿ ಸಮಾನಾಂತರವಾಗಿ ರಚಿಸಲ್ಪಡುತ್ತವೆ. ಇದನ್ನೆ ನಾವು ಕಲಾ ಇತಿಹಾಸದಲ್ಲಿ ಸಮಾನಾಂತರವಾದ ಸಂಯೋಜನೆ ಎನ್ನುವುದು.

ಹಂಪೆಯಲ್ಲಿ, ಕನಕಗಿರಿಯಲ್ಲಿ, ಇತ್ತ ಹಳೆ ಮೈಸೂರು ಭಾಗದಲ್ಲಿ ನಿರ್ಮಾಣದ ಬಹುತೇಕ ಎಲ್ಲ ದೇವಾಲಯಗಳಲ್ಲೂ ಹೆಚ್ಚು ಕಡಿಮೆ ಒಂದೇ ತೆರನಾದ ಗಾರೆ ಕೆಲಸವಿದೆ. ಹಂಪೆಯಲ್ಲಿಯ ದೇವಾಲಯಗಳಲ್ಲಿ ಕೆಲಸವನ್ನು ಗಾರೆ ಕಲೆಯ ದೃಷ್ಟಿಯಿಂದ ಅಭ್ಯಾಸ ಮಾಡಿದಾಗ ಹಲವಾರು ಹೊಸ ವಿಷಯಗಳು ಹೊರಬರುತ್ತವೆ. ಮೊದಲನೆಯದಾಗಿ ಅವುಗಳ ರಚನಾ ವಿಧಾನದಲ್ಲಿ ಸಾಧಿಸಿದ ಪ್ರಗತಿ ಹಾಗೂ ರಚನೆಯಲ್ಲಿ ಕಂಡುಕೊಂಡ ತಾಂತ್ರಿಕ ಪರಿಣತಿ. ಉದಾಹರಣೆಯಾಗಿ ವಿಜಯವಿಠಲ ದೇವಾಲಯ, ವಿರೂಪಾಕ್ಷ ದೇವಾಲಯ, ಕೃಷ್ಣ, ಹಜಾರರಾಮ ದೇವಾಲಯಗಲು ಆಗೂ ಅಚ್ಯುತಾಪುರದಲ್ಲಿಯ ಕಿರು ದೇವಾಲಯಗಳು ಗಾರೆ ಕಲೆಗೆ ಉತ್ತಮ ಉದಾಹರಣೆಗಳಾದರೆ, ಇತ್ತ ರಾಜ–ರಾಣಿಯರ ಖಾಸಗೀ ಕಟ್ಟಡಗಳಾದ ಕಮಲ್‌ಮಹಲ್ (ರಾಣಿಮಹಲ್) ಮತ್ತು ರಾನಿಯರ ಸ್ನಾನಗೃಹಗಳು ಉತ್ತಮ ಗುಣಮಟ್ಟದ ಮತ್ತು ಅತ್ಯಂತ ಆಕರ್ಷಕವಾದ ಗಾರೆ ಕಲೆಯನ್ನು ಹೊಂದಿವೆ. ಹಂಪೆಯ ಭೌಗೋಳಿಕ ವ್ಯಾಪ್ತಿಯಲ್ಲಿರುವ ಕನಕಗಿರಿಯಲ್ಲಿನ ಎಲ್ಲಾ ದೇವಾಲಯಗಳೂ ಗಾರೆ ಕಲೆಯ ಉತ್ತಮ ಉದಾಹರಣೆಗಳಾಗಿವೆ. ಗಾರೆ ಆಕೃತಿಗಳ ಬೆಳವಣಿಗೆಯನ್ನು ಈಗಿನ ಆಂಧ್ರಪ್ರದೇಶದ ಹಲವಾರು ಸ್ಥಳಗಳಲ್ಲಿಯೂ ನೋಡಬಹುದು. ತಿರುಪತಿ ಹತ್ತಿರವಿರುವ ಕಾಳಹಸ್ತಿಯಲ್ಲಿ ಕೃಷ್ಣದೇವರಾಯ ನಿರ್ಮಿಸಿದ ರಾಯಗೋಪುರ, ಹಿಂದೂಪುರದ ಹತ್ತಿರವಿರುವ ಲೇಪಾಕ್ಷಿಯಲ್ಲಿ ವೀರಣ್ಣ, ವಿರುಪಣ್ಣ, ನಿರ್ಮಿಸಿದ ವೀರಭದ್ರೇಶ್ವರ ದೇವಸ್ಥಾನ, ತಾಟಪತ್ರಿ ಹಾಗೂ ಕಡಪಾ ಜಿಲ್ಲೆಯ ಪುಷ್ಪಗಿರಿಯಲ್ಲಲಿನ ಸಂತಾನ ಮಲ್ಲೇಶ್ವರ ದೇವಾಲಯದಲ್ಲಿನ ಅಪರೂಪದ ಕಥಾನಕ ಆಕೃತಿಗಳು ಹೀಗೆ ಅಗಾಧವಾದ ರೀತಿಯಲ್ಲಿ ಗಾರೆ ಆಕೃತಿಗಳು ಬೆಳವಣಿಗೆ ಹೊಂದಿ ಉತ್ಕೃಷ್ಟ ಪರಂಪರೆಗೆ ನಾಂದಿ ಹಾಡಿದವು.

ಗಾರೆ ಆಕೃತಿಗಳ ಚರ್ಚೆ:

ಪ್ರಸ್ತುತ ಚರ್ಚೆಯಲ್ಲಿ ಮೊಟ್ಟ ಮೊದಲು ಹಂಪೆಯಲ್ಲಿನ ದೇವಾಲಯಗಳನ್ನು ಮತ್ತು ಖಾಸಗಿ ಕಟ್ಟಡಗಳನ್ನು ನೋಡಬಹುದು. ಸಾಮಾನ್ಯವಾಗಿ ಈ ಮೊದಲೇ ವಿವರಿಸಿದಂತೆ, ದೇವಾಲಯದ ಕಿರೀಟಪ್ರಾಯವಾದ ಗೋಪುರ, ಶಿಖರ ಹಾಗೂ ದೇವಾಲಯ ಸುತ್ತಲೂ ಇರುವ ಪೌಳಿಮಂಟಪ, ರಂಗಮಂಟಪ ಮತ್ತು ಕಲ್ಯಾಣ ಮಂಟಪಗಳ ಮೇಲಣ ಸ್ತರಗಳಲ್ಲಿ ಗಾರೆ ಆಕೃತಿಗಳು ಕಂಡು ಬರುತ್ತವೆ. ಗೋಪುರಶಿಖರಗಳಲ್ಲಿ ಬಿಡಿಯಾಗಿ ವಿಭಿನ್ನ ಸ್ತರಗಳಲ್ಲಿ ಹಾಗೂ ಕಿರುದ್ವಾರಗಳ ಎರಡು ಬದಿಗಳಲ್ಲಿ ದ್ವಾರಪಾಲಕರಾಗಿ ಮತ್ತು ಮೂಲೆಗಳಲ್ಲಿ ಕಿರುವಿಮಾನಗಳಲ್ಲಿ ಹೊರಚಾಚಿರುವ ನಸಿಕಗಳಲ್ಲಿ ಅಲಂಕಾರಿಕ ವಿಗ್ರಹಗಳಂತಯೆ ಆಕೃತಿಗಲು ಕಂಡು ಬರುತ್ತವೆ. ಮಂಟಪಗಳ ಮೇಲಿರುವ ಗೂಡುಗಳಲ್ಲಿ ಮತ್ತು ಕಿರು ವಿಮಾನಗಳಲಿ ಹಲವಾರು ದೇವಾನುದೇವತೆಗಳ ಆಕೃತಿಗಳ ರಚನೆ ಇವೆ. ಅಲ್ಲದೆ ಅತ್ಯಂತ ನಾಜೂಕಾದ ಸುರುಳಿಯಂತಹ ಬಳ್ಳಿಗಳ ವಿನ್ಯಾಸ, ಮಕರ, ವ್ಯಾಳ(ಯಾಳಿ) ಮುಖಗಳು, ಪಕ್ಷಿಗಳ ವಿನ್ಯಾಸ ಹೀಗೆ ಹಲವಾರು ಹೊಸ ನಮೂನೆಗಳು ಗಾರೆಯಲ್ಲಿ ಮತ್ತು ಇಟ್ಟಿಗೆಯಲ್ಲಿ ಅರಳತೊಡಗಿದವು.

ವಿರೂಪಾಕ್ಷ ದೇವಾಲಯದಲ್ಲಿನ ಪಕ್ಕದ ಮಂಟಪದ ಮೇಲೆ ಇರುವ ಆಕೃತಿಗಳು ಒಂದೇ ತೆರನಾದ ಶೈಲಿಯನ್ನು ಹೊಂದಿವೆ. ಪ್ರಾಯಶಃ ಈ ಎಲ್ಲಾ ಆಕೃತಿಗಳೂ ಒಂದೇ ಗುಂಪಿನ ಕಲಾವಿದರ ಕೆತ್ತನೆಯಾಗಿರಬೇಕು. ಉಮಾಮಹೇಶಮೂರ್ತಿ ಮತ್ತು ಲಕ್ಷ್ಮೀನರಸಿಂಹ ಆಕೃತಿಗಳಲ್ಲಿ ಅತ್ಯಂತ ಸಾಮ್ಯತೆ ಇದೆ. ಎರಡೂ ಆಕೃತಿಗಳಲ್ಲಿ ಸ್ತ್ರೀಯರ ಅಂದರೆ ಪಾರ್ವತಿ ಮತ್ತು ಲಕ್ಷ್ಮೀ ಕ್ರಮವಾಗಿ ತಮ್ಮ ಪುರುಷರ ಎಡ ತೊಡೆಯ ಮೇಲೆ ಕುಳಿತಿದ್ದಾರೆ. ಆಕೃತಿಗಳಲ್ಲಿ ಶಿವ ಮತ್ತು ನರಸಿಂಹ ಪೀಠಗಳ ಮೇಲೆ ಮಹಾರಾಜ ಲೀಲಾಸನದಲ್ಲಿ ಕುಳಿತಿದ್ದಾರೆ. ಚತುರ್ಭುಜರಾಗಿರುವ ಈ ಆಕೃತಿಗಳಲ್ಲಿ ದೈಹಿಕ ನೈಜತ ಸ್ಪಷ್ಟವಾಗಿ ಕಾಣುತ್ತದೆ. ಸರ್ವ ಅಲಂಕಾರ ಭೂಷಣವಾದ ಆಕೃತಿಗಳಲ್ಲಿ ಸ್ವಾಭಾವಿಕ ನಾಜೂಕುತನ ಎದ್ದುಕಾಣುತ್ತದೆ.

ಆಕೃತಿಗಳ ಮುಖ್ಯ ಭಾಗವನ್ನು ಮತ್ತು ಪೀಠಗಳನ್ನು ಚಿಕ್ಕ ಚಿಕ್ಕ ಇಟ್ಟಿಗೆಗಳಲ್ಲಿ ಆಕೃತಿಯ ಆಕಾರಕ್ಕೆ ತಕ್ಕಂತೆ ಕಟ್ಟಿಕೊಂಡು ನಂತರ ಕೈ, ಕಾಲು ಮುಖ ಹಾಗೂ ವಿವಿಧ ಭಾಗಗಳನ್ನು ಗಾರೆಯಿಂದ

ನಿಧಾನವಾಗಿ ಹಂತ ಹಂತವಾಗಿ ರಚಿಸಲಾಗುತ್ತದ.ಎ ಕೆಲವೊಮಮೆ ಹೊರಚಾಚಿರುವ ಭಾಗಗಳನ್ನು /ಭಾಗವನ್ನು ಹಿಡಿಯಲು ಒಳಗಿನಿಂದ ಬಿದಿರು ಅಥವಾ ಕಬ್ಬಣದ ತಂತಿಗಳನ್ನು ಬಳಸಿದ್ದಾರೆ ಇದನ್ನೇ ಆರ್ಮೇಚರ ಎನ್ನುವುದು. ಗಾರೆ ಅಥವಾ ಸಿಮೆಂಟಿನ ಆಕೃತಿಗಳನ್ನು ಇಡಿಯಾಗಿ ಅದೇ ಮಾಧ್ಯಮದಿಮದ ಮಾಡಿದರೆ ಸಂಪೂರ್ಣವಾಗಿ ಆರ್ಮೇಚರ್ ಬಳಸವೇಕಾಗುತ್ತದೆ. ಅಂದರೆ ಆಕೃತಿಗಳ ಭದ್ರತೆ ಮತ್ತು ಬಳಕೆಗೆ ಅದು ಅವಶ್ಯಕವಾಗಿದೆ. ವಿಜಯನಗರದ ಹಲವಾರು ಆಕೃತಿಗಳಲ್ಲಿ ಈ ತಾಂತ್ರಿಕತೆಗಳನ್ನು ಉಪಯೋದಿಗಿಸುರವುದನ್ನು ನಾವು ಪ್ರಸ್ತುತವಾಗಿ ಗಮನಿಸಬಹುದು.

ವೃಷಭವಾಹನ ಶಿವ-ಪಾರ್ವತಿ ಆಕೃತಿಯಲ್ಲಿ ಶಿವ-ಪಾರ್ವತಿ ವೃಷಭದ ಮೇಲೆ ಎರಡೂ ಕಾಲುಗಳನ್ನು ಸವಾರಿ ಮಾಡುವ ಹಾಗೆ ಹರಡಿ ಕುಳಿತಿದ್ದಾರೆ. ಸರ್ವಾಲಂಕರಣ ಭೂಷಿತವಾದ ನಂದಿ ಮತ್ತು ಶಿವ-ಪಾರ್ವತಿಯರು ಅತ್ಯಂತ ಸ್ವಾಭಾವಿಕವಾಗಿ ಮೂಡಿ ಬಂದಿದ್ದಾರೆ. ಎರಡೂ ಪಕ್ಕಗಳಲ್ಲಿ ಗಣಗಳು ಭಕ್ತಿಯಿಂದ ಕೈಮುಗಿದು ನಿಂತಿದ್ದಾರೆ. ಇಲ್ಲಿ ನಾವು ನಂದಿಯನ್ನು ವಿಶೇಷವಾಗಿ ಗಮನಿಸಬೇಕು. ಗೂಡಿನ ಅಳತೆಗೆ ಮತ್ತು ನಂದಿಯ ದೇಹದ ಅಡ್ಡಲಾಗಿ ಚಾಚಿಕೊಂಡಿರುವ ಅಳತೆಯನ್ನು ಗಮನಿಸಿದರೆ ಸ್ಥಳದ ಅವಕಾಶದ ಹೊಂದಾಣಿಕೆಯನು ಗಮನಿಸಬಹುದು. ನಂದಿ ಹಿಂಭಾಗದಲ್ಲಿ ಕೊಂಚ ಮಣಿದಂತೆ ಹಿಂಗಾಲುಗಳನ್ನು ಮಡಚಿದೆ. ಮೇಲೆ ಕುಳಿತ ಪಾರ್ವತಿ-ಪರಮೇಶ್ವರರು ಅತ್ಯಂತ ಆರಾಮವಾಗಿ ಹಾಗೂ ಅಕರ್ಷಕವಾಗಿ ಕಾಣುತ್ತಾರೆ. ಇದೇ ದೇವಾಲಯಲದಲ್ಲಿನ ವೃಷಭವಾಹನ ಶಿವ ಹಾಗೂ ಬ್ರಹ್ಮ ಮತ್ತು ನರ್ತನ ಭಂಗಿಯಲ್ಲಿರುವ ಗಣಪತಿ ಗಾರೆ ಕಲೆಗೆ ಉತ್ತಮ ಉದಾಹರಣೆಗಳಾಗಿವೆ. ಶೈಲಿಯಲ್ಲಿ ಹಾಗೂ ರಚನೆಯಲ್ಲಿ ಒಂದೇ ಗುಂಪಿಗೆ ಸೇರುವ ಈ ಆಕೃತಿಗಳು ಶೈಲಿಯಲ್ಲಿ ಪ್ರೌಢಿಮೆಯನ್ನು ಬಿಂಬಿಸುತ್ತವೆ. ಪುರುಷಾಕೃತಿಗಳಲ್ಲಿ ಸಾಮಾನ್ಯವಾಗಿ ಕುಸುರಿನಿಂದ ಕೂಡಿದ ಕಂಠಹಾರಗಳು, ಮಾಲೆಗಳು, ಸ್ಕಂದಾಲಂಕಣಗಳು ಹಾಗೂ ಕಿರೀಟಗಳು ಆಕರ್ಷಕವಾಗಿ ಮೂಡಿ ಬಂದಿವೆ. ಉಡುಗೆ, ತೊಡುಗೆ ಕೂಡಾ ನೈಜತೆಯನ್ನು ಹೊಂದಿವೆ. ಇನ್ನು ಪ್ರತಿಮಾ ಲಕ್ಷಣಕ್ಕನುಗುಣವಥಿ ಆಯಾ ಆಕೃತಿಗಳು ತಮ್ಮ ಆಯುಧಗಳನ್ನು ಹಿಡಿದಿವೆ. ನರ್ತನ ಗಣಪತಿಯು ಬಹುಶಃ ನರ್ತನ ಆಕೃತಿಗಳ ಮಧ್ಯೆ ಇದೆ ಎನಿಸುತ್ತದೆ. ಎರಡೂ ಬದಿಯಲ್ಲಿರುವ ನರ್ತಿಸುತ್ತಿರುವ ಸ್ತ್ರೀ ಆಕೃತಿಗಳು ಇದಕ್ಕೆ ಸಾಕ್ಷಿಯಾಗಿವೆ.

ವಿರೂಪಾಕ್ಷ ದೇವಾಲಯದ ಆಕೃತಿಗಳಲ್ಲಿ ಗ್ರಾನೈಟ್ ಶಿಲೆಯಲ್ಲಿ ಸಾಧ್ಯವಾಗದ ನೈಜತೆ ಮೂಡಿ ಬಂದಿದೆ. ಅಲ್ಲದೆ ಸಂಯೋಜನೆಯಲ್ಲಿ ಪ್ರೌಢಿಮೆ ಎದ್ದು ಕಾಣುತ್ತದೆ.

ಹಜಾರ ರಾಮಚಂದ್ರ ದೇವಸ್ಥಾನದಲ್ಲಿ ಆಕೃತಿಗಳು ಸಭೆಯ ಚಿತ್ರಗಳಂತೆ ಹೆಚ್ಚಿನ ಸಂಖ್ಯೆಯ ಆಕೃತಿಗಳನ್ನು ಹೊಂದಿವೆ. ಮಧ್ಯದಲ್ಲಿ ಮುಖ್ಯ ಆಕೃತಿ ಮತ್ತು ಇಕ್ಕೆಲಗಳಲ್ಲಿ ಕೈಮುಗಿದು ವಿಭಿನ್ನ ಉಡುಗೆ-ತೊಡುಗೆಗಳೊಂದಿಗೆ ನಿಂತಿರುವ ಆಕೃತಿಗಳು ಗಮನ ಸೆಳೆಯುತ್ತವೆ. ನಿಂತಿರುವ ವಿಷ್ಣು-ಲಕ್ಷ್ಮೀಯ ಆಕೃತಿಗಳು ಮತ್ತು ಕುಳಿತಭಂಗಿಯಲ್ಲಿರುವ ವೈಕುಂಠ ವಿಷ್ಣು(ಲಕ್ಷ್ಮೀನಾರಾಯಣ) ವಿರೂಪಾಕ್ಷ ದೇವಾಲಯದ ಆಕೃತಿಗಳಂತೆಯೇ ಇವೆ. ಆದರೆ ಕೊಂಚ ನೀಳವಾದ ದೇಹ ಸೌಂದರ್ಯವನ್ನು ಹೊಂದಿವೆ. ಇಲ್ಲಿ ಆಕೃತಿಗಳು ಧರಿಸಿರುವ ಕಿರೀಟಗಳಲ್ಲಿ ವಿರೂಪಾಕ್ಷ ದೇವಾಲಯಗಳಿಗಿಂತ ವಿಭಿನ್ನತೆಯನ್ನು ಗಮನಿಸಬಹುದು. ಶಿಲ್ಪಗಳಲ್ಲಿರುವ ಸರಳವಾದ ಹೆಚ್ಚು ಅಲಂಕಾರಿಕವಲ್ಲದ ಶೈಲಿ ಇಲ್ಲಿ ಮೂಡಿ ಬಂದಿದೆ. ಸಂಯೋಜನೆಯಲ್ಲಿ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿ ಆಕೃತಿಗಳನ್ನು ಜೋಡಿಸಲಾಗಿದೆ.

ಹೆಚ್ಚು ಜೀರ್ಣಾವಸ್ಥೆಯಲ್ಲಿರುವ ಕೃಷ್ಣ ದೇವಾಲಯದಲಿ ಗಾರೆ ಆಕೃತಿಗಳು ಬಹುಶಃ ಮೂಲದಲ್ಲಿ ಅತ್ಯಂತ ಆಕರ್ಷಕವಾದ ಹಾಗೂ ಅಷ್ಟೇ ಉತ್ಕೃಷ್ಟವಾದ ಪ್ರೌಢ ಶೈಲಿಯನ್ನು ಹೊಂದಿದಂತೆ ತೋರುತ್ತವೆ.

ಶ್ರೀದೇವಿ-ಭೂದೇವಿಯರೊಂದಿಗೆ ವಿಷ್ಣುವನ್ನು ತೋರಿಸಲಾಗಿದೆ. ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿನ ಎರಡೂ ಬದಿಗಳಲ್ಲಿ ದೇವಿಯರು ಲಾಲಿತ್ಯ ಪೂರ್ಣವಾದ ಭಂಗಿಯಲ್ಲಿ ನಿಂತಿದ್ದಾರೆ. ವಿಷ್ಣುವಿನ ಎಡಭಾಗದಲ್ಲಿ ಸ್ತ್ರೀಯರ ಸಾಲು ಆಕೃತಿಗಳಿದ್ದರೆ, ಬಲಗಡೆ ಪುರುಷರ ಸಾಲು ಆಕೃತಿಗಳಿವೆ. ಕೈಮುಗಿದ ಹಾಗೂ ವಿಭಿನ್ನ ಭಾವ-ಭಂಗಿಗಳನ್ನು ಈ ಆಕೃತಿಗಳಲ್ಲಿ ಗಮನಿಸಿಬಹುದು. ಆಕೃತಿಗಳಲ್ಲಿನ ನೈಜತೆ ಮತ್ತು ಸ್ವಾಭಾವಿಕ ಸಹಜತೆ ಎಲ್ಲವನ್ನು ಜೀವಂತವಾಗಿಸುತ್ತವೆ. ಆರೋಗ್ಯಭರಿತ ದೇಹಸೌಂದರ್ಯ, ದೇಹದ ಕರಾರುವಕ್ಕಾದ ಉಬ್ಬುತಗ್ಗುಗಳು ಆಕೃತಿಗಳ ಸಹಜತೆಯನ್ನು ಹೆಚ್ಚಿಸುತ್ತವೆ. ಹಜಾರ ರಾಮಚಂದ್ರ ದೇವಾಲಯದಲ್ಲಿನ ಗಾರೆ ಆಕೃತಿಗಳಲ್ಲಿ ಸ್ವಲ್ಪ ಜಡತ್ವವನ್ನು ನೋಡಬಹುದು. ಆದರೆ ಇಲ್ಲಿ ಕಾವ್ಯಮಹವಾದ ಶೈಲಿಯ ಪಕ್ವತೆ ಇದೆ. ಕ್ರಷ್ಣ ದೇವಾಲಯದಲ್ಲಿರುವ ರತಿ ಮನ್ಮಥರ ಆಕೃತಿತಳನ್ನು ಗಮನಿಸಿದಾಗ ಮೇಲೆ

ವಿವರಿಸಿದ ಭಾವನೆ ಬಾರದೆ ಇರದು. ಇದೇ ದೇವಾಲಯದದ ಆವರಣದಲ್ಲಿಯ ಕಿರು ದೇವಾಲಯದ ಶಿಖರದ ಮೇಲಿನ ವಿಷ್ಣು ಮತ್ತು ದಕ್ಷಿಣದ ಭಗ್ನಗೊಂಡಿರುವ ಮಹಾಗೋಪುರದ ವಿವಿಧ ಹಂತಗಳನ್ನು ಗಮನಿಸಬಹುದು. ವಿಷ್ಣು ಮತ್ತು ದೇವಿ ಹಾಗೂ ಕುಳಿತ ವಿಷ್ಣು ಮತ್ತು ದ್ವಾರಪಾಲಕರು ಶೈಲಿಯಲ್ಲಿ ಒಂದೇ ತರಹವಾಗಿವೆ. ಕೊಂಚ ಕುಳ್ಳು ಎನಿಸುವ ದೇಹದ ರಚನೆಯನ್ನುಳಿದರೆ, ಉಳಿದ ಎಲ್ಲ ಅಂಶಗಳ ಕೃಷ್ಣ ದೇವಾಲಯದ ಮುಖ್ಯ ಗಾರೆ ಆಕೃತಿಗಳಿಗೆ ಸರಿಸಮವಾಗಿವೆ.

ಕೃಷ್ಣ ದೇವಾಲಯದ ಮುಖ್ಯದ್ವಾರದ ಮೇಲಿನ ಗೋಪುರ ಹೆಚ್ಚು ಕಡಿಮೆ ಇಂದು ಭಗ್ನಾವಸ್ಥೆಯಲ್ಲಿದೆ. ಅಳಿದುಳಿದ ಕೆಲವು ಆಕೃತಿಗಳನ್ನು ಗಮನಿಸಿದರೆ ಅತ್ಯಂತ ಪ್ರೌಢವಾದ ಶೈಲಿಯನ್ನು ಹೊಂದಿದ ಆಕೃತಿಗಳೆಂದು ಅನ್ನಿಸದೆ ಇರದು. ಶಿಖರದ ಹೊರಕ್ಕೆ ಹರಡಿರುವ ಶಾಲದ ಮುಖ, ಅದರ ಪಕಳೆಗಳ ಹಾಗೆ ಕಣುವ ವಿನ್ಯಾಸ ಮತ್ತು ವಿಶಾಲವಾಗಿ ಚಾಚಿರುವ ವ್ಯಾಳಿ ಮುಖ ಇವೆಲ್ಲವೂ ಗಾರೆಯಿಂದಲೇ ರಚಿಸಲ್ಪಟ್ಟಿವೆ. ವಿಶಾಲಮುಖದ ಮೇಲಣ ಮಕರಗಳು, ಅವುಗಳಿಂದ ಹೊರಬರುವ ಮಾನವ ಆಕೃತಿಗಳ ಸಾಲು ಕಮಾನನ್ನು ಹೊಂದಿಕೊಂಡ ವಿಧ ತುಂಬ ಆಕರ್ಷಕವಾಗಿವೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಕಲಾವಿದ ಯಾವ ಹಿಡಿತಕ್ಕೂ ಒಳಗಾಗದೇ ತನ್ನಲ್ಲಿ ಅಡಗಿರುವ ಕಲೆಯನ್ನು ಅಭಿವ್ಯಕ್ತಗೊಳಿಸಿರುವ ರೀತಿ ನಿಜಕ್ಕೂ ಶ್ಲಾಘನೀಯವಾಗಿದೆ.

ಇಲ್ಲಿನ ಸುಪ್ರಸಿದ್ಧ ವಿಜಯ ವಿಠ್ಠಲ ದೇವಸ್ಥಾನದ ಉದಾಹರಣೆಯನ್ನು ತೆಗೆದುಕೊಂಡರೆ ಬಹುತೇಕವಾಗಿ ಈ ದೇವಾಲಯದ ಗಾರೆಯಾಕೃತಿಗಳು ಭಗ್ನಾವಸ್ಥೆಯಲ್ಲಿವೆ. ಒಂದು ಹಂತದಲ್ಲಿ ಇಲ್ಲಿನ ಶಿಖರ, ಗೋಪುರಗಳ ಮೇಲಣ ಉಪ್ಪರಿಗೆಗಳಲ್ಲಿ ಗಾರೆಯಾಕೃತಿಗಳು ರಾರಾಜಿಸಿದ್ದಿರಬಹುದು. ವಿಜಯ ವಿಠ್ಠಲ ದೇವಾಲಯವನ್ನು ವಾಸ್ತುಕೃತಿ, ಶಿಲ್ಪಗಳ ವಿಭಿನ್ನತೆ, ಶೈಲಿಯ ದೃಷ್ಟಿಯಿಂದ ಮುಖ್ಯವಾದ ಕೃತಿಯೆಂದು ಪರಿಗಣಿಸಲಾಗುತ್ತದೆ. ಹಾಗೆಯೇ ಇದಕ್ಕೆ ಪೂರಕವಾಗಿ ಶಿಖರದ ಮೇಲೆ ಉಳಿದ ಕೆಲವೇ ಆಕೃತಿಗಳು ಇವೆ.

ವಿಜಯ ವಿಠ್ಠಲ ದೇವಾಲಯದ ಗಾರೆಯಾಕೃತಿಗಳ ಎರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ತೆಗೆದುಕೊಂಡಿದೆ. ಗರ್ಭಗೃಹದ ಶಿಖರದ ಮೇಲಿನ ಶುಕನಾಸದ ಸ್ಥಳದಲ್ಲಿರುವ ವಿಷ್ಣುವಿನ ಮೂರ್ತಿ ಮತ್ತು ಅದೇ ಶಿಖರದ ದಕ್ಷಿಣ ಭಾಗದಲ್ಲಿನ ಗೋವರ್ಧನ ಕೃಷ್ಣ ವಿಷ್ಣುವಿನ ಆಕೃತಿ ಶೈಲಿಯಲ್ಲಿ ಸಾಕಷ್ಟು ಪ್ರೌಢಿಮೆಯನ್ನು ಹೊಂದಿದೆ. ಆದರೆ ಹೆಚ್ಚು ಆಕರ್ಷಕವಾಗಿರುವುದು ಗೋವರ್ಧನ ಕೃಷ್ಣ ಕೃತಿಯಾಗಿದೆ. ಆಕೃತಿಯಲ್ಲಿ ಕೃಷ್ಣ ಬಲಗೈಯಲ್ಲಿ ಮೇಲಕ್ಕೆತ್ತಿ ಗೋವರ್ಧನಗಿರಿಯನ್ನು ಎತ್ತಿ ಹಿಡಿದಿದ್ದಾನೆ. ಎಡಗೈ ಕಟ್ಯಾವಲಂಬಿತ ಸ್ಥಿತಿಯಲ್ಲಿದೆ. ಎರಡೂ ಬದಿಯಲ್ಲಿ ಗೋವುಗಳನ್ನು ತೋರಿಸಲಾಗಿದೆ. ದಷ್ಟಪುಷ್ಟವಾದ ಕೊಂಚ ಕುಳ್ಳು ಎನಿಸುವ ಶರೀರ ಕೃಷ್ಣನನ್ನು ಬಾಲಕನೆಂಬ ಭಾವನೆ ತರಿಸುತ್ತದೆ. ಇಂತಹದೇ ಶಿಲ್ಪ ಪ್ರಪ್ರಥಮವಾಗಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಬಾದಾಮಿಯ ಉತ್ತರ ಗುಡ್ಡದ ಮೇಲಣ ಶಿವಾಲಯ(ವೈಷ್ಣವ ದೇವಾಲಯ)ದ ದಕ್ಷಿಣ ಹೊರಗೋಡೆಯ ಮೇಲಿರುವುದನ್ನು ನೆನಪಿಸಿಕೊಳ್ಳಬಹುದು. ಒಂದಂತೂ ನಿಜ- ವಿಜಯನಗರದ ಕಲಾವಿದರಿಗೆ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳರ ಕಲೆಯ ಅಗಾಧವಾದ ಹಿನ್ನೆಲೆ ಇತ್ತು. ಚಾಲುಕ್ಯರ ಕಲೆಯ ಹಲವಾರು ಅಂಶಗಳೂ ಸ್ಫೂರ್ತಿದಾಯಕವಾಗಿ ಉಳಿದು, ಬೆಳೆದುಕೊಂಡು ಬಂದಿವೆ. ಪ್ರಸ್ತುತ ದೇವಾಲಯದ ಗೋವರ್ಧನಧಾರಿ ಕೃಷ್ಣ ಮತ್ತು ಬಾದಾಮಿಯ ಮೇಲಣ ಶಿವಾಲಯದ ಶಿಲ್ಪಗಳನ್ನು ಪಕ್ಕಪಕ್ಕದಲಿರಿಸಿ ತುಲನೆ ಮಾಡಿದಾಗ ಶೈಲಿಯ ಪ್ರಭಾವ ಮತು ಶಿಲ್ಪದ ವಸ್ತುವಿನ ಪ್ರಭಾವ ಎಷ್ಟು ಗಾಢವಾಗಿದೆ. ಎಂದು ಊಹಿಸಬಹುದು. ಕಲೆಯ ಅಂಶಗಳು ಹಾಗೂ ಕಲಾತ್ಮಕ ಗುಣಗಳ ಶೈಲಿ ನಿರಂತರವಾಗಿ ಪರೋಕ್ಷವಾಗಿ ಮುಂದುವರೆಯುತ್ತಲೆ ಇರುತ್ತವೆ. ಇದಕ್ಕೆ ಮುಖ್ಯ ಕಾರಣ ಕಲಾವಿದನೆ ಆಗಿದ್ದಾನೆ.

ಹಂಪೆಯ ಪರಿಸರದ ಮತ್ತೊಂದು ಮುಖ್ಯ ಆಕರ್ಷಣೆಯಾದ ಅಂದು ರಾಜರಾಣಿಯರ ಖಾಸಗಿ ಕಟ್ಟಡವಾಗಿದ್ದ ರಾಣಿಮಹಲ್ ಅಥವಾ ಕಮಲ್‌ಮಹಲ್ ಮತ್ತು ರಾಣಿಯರ ಸ್ನಾನ ಗೃಹಗಳು. ಇಸ್ಲಾಮಿಕ್ ವಾಸ್ತುಶೈಲಿಯ ಸೊಗಡಿನೊಂದಿಗೆ ಮತು ಭಾರತೀಯ ಶೈಲಿಯ ಮಿಶ್ರಣದೊಂದಿಗೆ ನಿರ್ಮಾಣಗೊಂಡ ಈ ಎರಡೂ ಕಟ್ಟಡಗಳೂ ಗಾರೆ ಕಲೆಯ ಉತ್ತಮ ಉದಾಹರಣೆಗಳಾಗಿವೆ.

ಕಮಲ್ ಮಹಲ್‌ನ ಕಮಾನಿನ ಸುತ್ತಲೂ ಐದು ಸಾಲಿನಲ್ಲಿ ವಿವಿಧ ವಿನ್ಯಾಸವಾಗಿ ರೂಪಗೊಂಡ ಕೆಳ ಉಬ್ಬು ಚಿತ್ರಣ ಕ್ಲಿಷ್ಟಕರವಾದ, ಅಷ್ಟೇ ಸೂಕ್ಷ್ಮವಾದ ವಿನ್ಯಾಸಗಳಿಂದ ಕೂಡಿದ, ತೀರ ಮೇಲಿನ ಸ್ಥರದಲ್ಲಿನ ವ್ಯಾಳ ಮುಖದಿಂದ ಈ ವಿನ್ಯಾಸ ಉಗಮವಾಗುತ್ತದೆ. ವಿವಿಧ ಬಳ್ಳಿಗಳು, ಪಕ್ಷಿಗಳು, ಹಾಗೂ ವೃತ್ತಾಕಾರದ ವಿಭಿನ್ನ ಸುಳಿಯ ಚಿತ್ರಣ ಕಂಡುಬರುತ್ತದೆ. ಕಮಲ್ ಮಹಲ್‌ನ ಮೇಲ್ಮಹಡಿಯು ಕಮಾನಿನ ವಿನ್ಯಾಸವನ್ನು ತೋರಿಸುತ್ತದೆ. ಬಳ್ಳಿಗಳು, ಎಲೆಗಳು ಹಾಗೂ ಒಂದಕ್ಕೊಂದು ಹೊಂದಿದಂತೆ ಇರುವ ಪಕ್ಷಿಗಳು ಕಮಾನಿನ ಸೌಂದರ್ಯವನ್ನು ಹೆಚ್ಚಿಸಿವೆ. ಕಮಲ್‌ಮಹಲ್‌ನ ಇನ್ನೊಂದು ಕಮಾನಿನಲ್ಲಿ ರೂಪುಗೊಂಡ ಹಕ್ಕಿಗಳ ಸಾಲು ಆಕರ್ಷಣೀಯವಾಗಿದೆ. ಈ ಹಕ್ಕಿಗಳನ್ನು ಮೊದಲೇ ಅಚ್ಚಿನಲ್ಲಿ ತಯಾರಿಸಿಕೊಂಡು ನಂತರ ಗೋಡೆಗೆ ಒಂದಕ್ಕೊಂದು ಹೊಂದಿಕೊಳ್ಳುವಂತೆ ಕೂಡಿಸಿದೆ. ಕಮಾನು ಭಾವಗೀತಾತ್ಮಕವಾದ ವೃತ್ತಾಕಾರದೊಂದಿಗೆ ಹೊಂದಿಕೊಂಡಿದೆ. ವಿಜಯನಗರ ಪೂರ್ವಕಾಲದ ದೇವಾಲಯಗಲ ಭುವನೇಶ್ವರಿಯನ್ನು ಜ್ಞಾಪಕಕ್ಕೆ ತರುವ ರಾಣಿಯರ ಸ್ನಾನಗೃಹದ ಒಂದು ಒಳಮಾಳಿಗೆಯಲ್ಲಿನ ಗಾರೆ ಕೆಲಸ ಬಹುಶಃ ಕಲಾವಿದನೋರ್ವನ ಜಾಣ್ಮೆಯನ್ನು ಪ್ರದರ್ಶಿಸುತ್ತದೆ.

ಹಂಪೆಯಲ್ಲಿನ ಎಲ್ಲ ಮುಖ್ಯ ದೇವಾಲಯಗಳು ಮತ್ತು ಖಾಸಗಿ ಕಟ್ಟಡಗಳು ಪ್ರಾಯಶಃ ರಾಜರ ಅಥವಾ ಅವರ ಮಂತ್ರಿಗಳ ಸ್ವಂತ ನಿರ್ದೇಶನಗಳಲ್ಲಿ ನಿರ್ಮಾಣವಾದವುಗಳಾಗಿವೆ. ಹಂಪೆಯಲ್ಲಿ ವಾಸ್ತವಿಕವಾದ ಶಿಲ್ಪ ಮತ್ತು ಗಾರೆಕಲಾವಿದ ಹಾಗೂ ವಿನ್ಯಾಸಗಾರ ಶ್ರಮ ತೆಗೆದುಕೊಂಡು ಕೆಲಸ ಮಾಡಿದಷ್ಟು ಪ್ರಾಯಶಃ ಬೇರಲ್ಲೂ ಮಾಡಿರಲಿಕ್ಕಿಲ್ಲವೇನೋ ಎಂಬ ಭಾವನೆ ಬರುತ್ತದೆ. ಆದರೆ ಹಲವಾರು ಹೊರಗಿನ ಉದಾಹರಣೆಗಳಿಂದ ಅಲ್ಲೂ ಕೂಡ ಆಯಾ ಸ್ಥಳೀಯ ನಾಯಕರ ಮಾಂಡಲೀಕರ ಆಶ್ರಯ ಮತ್ತು ಸ್ವಂತ ಪೋಷಣೆಯಲ್ಲಿ ನಿರ್ಮಾಣವಾದ ದೇವಾಲಯಗಳು ಮತ್ತು ಅಲ್ಲಿನ ಕಲೆ ಪ್ರಾಯಶಃ ಹಂಪೆಯಷ್ಟೇ ಪ್ರಗತಿಯನ್ನು, ಪ್ರೌಢಿಮೆಯ ಶೈಲಿಯನ್ನು ತೋರಿಸುತ್ತದೆ.

ಗಂಗಾವತಿ ತಾಲ್ಲೂಕಿನ ಕನಕಗಿರಿಯಲ್ಲಿ ಹಲವಾರು ದೇವಾಲಯಗಳಲ್ಲಿ ಪ್ರಾಯಶಃ ಗಾರೆ ಕಲೆಯ ಅತ್ಯುತ್ತಮ ಉದಾಹರಣೆಗಳು ಇವೆ. ಕನಕಗಿರಿಯ ಪ್ರಮುಖ ದೇವಾಲಯ ಕನಕಾಚಲಪತಿ ಅಥವಾ

ನರಸಿಂಹ ದೇವಸ್ಥಾನದ ಕಲ್ಯಾಣ ಮಂಟಪ, ಗೋಪುರ, ಶಿಖರ ಹಾಗೂ ಪ್ರಾಕಾರದ ಒಳಗಿನ ಮಂಟಪದ ಸಾಲಿನ ಮೇಲೆ ಹಲವಾರು ಉತ್ತಮ ಉದಾಹರಣೆಗಳಿವೆ. ವಿಜಯನಗರದ ಮಾಂಡಲೀಕ ಮನೆತನವಿದ್ದ ಕನಕಗಿರಿಯಲ್ಲಿ ಕೂಡ ಗಾರೆ ಕಲಾವಿದ ಆಶ್ರಯ ಪಡೆದು ಕೆಲಸ ಮಾಡಿದ್ದಾನೆ. ಲಕ್ಷ್ಮೀನರಸಿಂಹ, ಲಕ್ಷ್ಮೀನಾರಯಣ, ಕೃಷ್ಣ ಹೀಗೆ ವಿಭಿನ್ನ ದೇವಾನು ದೇವತೆಗಳನ್ನು ಚಿತ್ರಿಸುವ ಆಕೃತಿಗಳಿವೆ. ಈ ದೇವಾಲಯದಲ್ಲಿ ಕಲ್ಯಾಣ ಮಂಟಪದ ಒಳ ಭಿತ್ತಿಯಲ್ಲಿ ವಿಭಿನ್ನ ದೃಶ್ಯಗಳನ್ನು ತೋರಿಸುವ ಗಾರೆಯ ಕೃತಿಗಳಿವೆ. ವಿಶೇಷವೇನೆಂದರೆ ಎಲ್ಲಾ ಆಕೃತಿಗಳೂ ಬಣ್ಣದಿಂದ ಕೂಡಿವೆ. ಮೂಲದಲ್ಲೇ ಮಾಡಿದ ಬಣ್ಣಕ್ಕೆ ನಂತರದಲ್ಲಿ ವಾರ್ನಿಷ್ ಲೇಪನ ಮಾಡಿರುವ ಸಾಧ್ಯತೆ ಇದೆ. ವೈಕುಂಠ ವಿಷ್ಣು, ಶಿವಪಾರ್ವತಿಯರ ಕಲ್ಯಾಣ, ಶ್ರೀಕೃಷ್ಣ ಮತ್ತು ರಾಮರ ಕಲ್ಯಾಣದ ಭಿನ್ನ ಚಿತ್ರಣಗಳು, ಗೋಪಿಕೆಯರ ಮಧ್ಯೆ ಕೃಷ್ಣ, ರಾಮ ಲಕ್ಷ್ಮನ ಹಗೂ ಇನ್ನಿತರ ಆಕೃತಿಗಳು ಇವೆ. ಶೈಲಿಯಲ್ಲಿ ಮುಖ್ಯ ಆಕೃತಿಗಳೊಂದಿಗೆ ಸಾಮ್ಯತೆ ಅಷ್ಟಾಗಿ ಕಂಡುಬರುವುದಿಲ್ಲ. ಇಲ್ಲೂ ಕೂಡ ಇಟ್ಟಿಗೆ-ಗಾರೆ ಆಕೃತಿಗಳ ನಿರ್ಮಾಣದಲ್ಲಿ ಮೂಲ ವಸ್ತುಗಳಾಗಿವೆ. ಬಹುಶಃ ಹೆಚ್ಚು ಅಳತೆಬದ್ಧವಾದ ಮತ್ತು ಅಷ್ಟೇ ಸಮರ್ಪಕವಾದ ಸಹಜವೆನಿಸುವ ಆಕೃತಿಗಳು ಇಲ್ಲಿ ಕಾಣಬರುತ್ತವೆ. ಲಕ್ಷ್ಮೀನರಸಿಂಹ ಆಕೃತಿಯಲ್ಲಿ ಪೀಠದ ಮೇಲೆ ಕುಳಿತಿರುವ ನರಸಿಂಹನ ತೊಡೆಯ ಮೇಲೆ ಲಕ್ಷ್ಮೀಯನ್ನು ಕೂಡಿಸಲಾಗಿದೆ. ಇಲ್ಲಿ ಕಲಾವಿದನು ಹೊರಕ್ಕೆ ಚಾಚಿರುವ ಕೈಗಳನ್ನು ಗಟ್ಟಿಯಾಗಿ ಕೂಡಿಸಲು ತಂತಿಯನ್ನು ಆರ್ಮೇಚರ್ ರೂಪದಲ್ಲಿ ಬಲಸಿರುವುದನ್ನು ಗಮನಿಸಬಹುದು. ಇದೇ ಆಕೃತಿಯ ಗೂಡಿನ ಮೇಲಿನ ಕಮಾನಿನಲ್ಲಿ ಹಕಿಗಳ ಸಾಲು, ವ್ಯಾಳಿಮುಖಗಳು ಕೂಡ ಇವೆ. ಲಕ್ಷ್ಮೀನಾರಾಯಣನ ಆಕೃತಿ ಒಂದು ಕ್ಷಣ ಹಂಪೆಯ ಕೃಷ್ಣ ದೇವಾಲಯದ ಮತ್ತು ವಿರೂಪಾಕ್ಷ ದೇವಾಲಯದ ಆಸನ ಆಕೃತಿಗಳನ್ನು ಜ್ಞಾಪಕಕ್ಕೆ ತರುತ್ತದೆ. ಆದರೆ ಇಲ್ಲಿ ಸಂಯೋಜನೆಯಲ್ಲಿ ಮುಖ್ಯ ಆಕೃತಿಯ ಇಕ್ಕೆಲಗಳಲ್ಲಿ ಹೆಚ್ಚು ನಿಬಿಡವಾದ ಆಕೃತಿಗಳಿಲ್ಲ. ಸಹಾಯಕರ ಹಾಗೆ ಎರಡೆರಡು ಆಕೃತಿಗಳು ಕೈಮುಗಿದು ಮುಖ್ಯ ಆಕೃತಿಯ ಬದಿಗೆ ನಿಂತಿದ್ದಾರೆ. ಲಕ್ಷ್ಮೀನಾರಾಯಣ ಆಕೃತಿಯಲ್ಲಿ ವಿಶೇಷವಾಗಿ ಲಕ್ಷ್ಮೀ ಕುಳಿತಿದ್ದಾಳೆ. ಯಾವ ಗ್ರಂಥಗಳಲ್ಲೂ ಕಾಣದ ಈ ತರಹದ ಹೊಂದಾಣಿಕೆ ಕೇವಲ ಕಲಾವಿದನ ಕಲ್ಪನೆಗೆ ಮಾತ್ರ ಸಾಧ್ಯ. ಇಂತಹದೇ ಇನ್ನೊಂದು ಕೃತಿ ಕೃಷ್ಣ ಕೈಯಲ್ಲಿ ಶಂಖವನ್ನು ಕಟ್ಯಾವಲಂಬಿತದಲ್ಲಿ

ಹಿಡಿದಿರುವುದು. ಬಲ ಮುಂಗೈ ಹಾಳಾಗಿದೆ. ಪ್ರಾಯಶಃ ಕೊಳಲೋ ಅಥವಾ ಬೆಣ್ಣೆ ಮುದ್ದೆಯೋ ಇರಬೇಕು. ಇಲ್ಲಿ ಕೃಷ್ಣ ಬಾಲಕನಾಗಿದ್ದಾನೆ. ದುಂಡು ದುಂಡಾದ ಎಳೆ ದೇಹ, ಅಗಲವಾದ ಮುಖ, ಬಾಚಿ ಮೇಲೆ ಕಟ್ಟಿರುವ ಕೇಶ, ಮೊಳಕಾಲ ಮೇಲೆ ಅರ್ಧ ವೃತ್ತಾಕಾರವಾಗಿ ಹರಡಿರುವ ವೈಜಯಂತಿ ಮಾಲೆ, ಮುಂಗೈ ಕಟ್ಟು, ತೊಳ್ಬಂದಿಗಳು ಹಾಗು ಕಂಠಿಹಾರ ಕೃಷ್ಣನಲ್ಲಿ ಎದ್ದುಕಾಣುವ ಅಂಶಗಳು. ಇಲ್ಲಿ ಕೃಷ್ಣ ಶಂಖವನ್ನು ಹಿಡಿದಿರುವ ರೀತಿ ಬನವಾಸಿ ಕದಂಬರ ಕಾಲದ ವಿಷ್ಣು, ಹರಿಹರ ಹಾಗೂ ಬಾದಾಮಿಯ ಚಾಲುಕ್ಯರ ಲಯಣ ದೇವಾಲಯಗಳಲ್ಲಿನ ವಿಷ್ಣು, ಹರಿಹರ ಶಿಲ್ಪಗಳಲ್ಲಿ ಕಾಣಬರುವ ಆಯುಧ ಹಿಡಿವ ರೀತಿ ಇಲ್ಲಿ ಮೂಡಿಬಂದಿದೆ. ಕಲಾವಿದ ಇಲ್ಲಿ ಶಂಖವನ್ನು ಕಟ್ಯಾವಲಂಭಿತದಲ್ಲಿ ಚಿತ್ರಿಸಿರುವ ವಿಧ ಪ್ರಾಚೀನ ಅಂಶಗಳ ಮರು ಉಪಯೋಗ ಅಥವಾ ಮುಂದುವರೆಯುವಿಕೆಯನ್ನು ತೋರಿಸುತ್ತದೆ.

ಕನಕಗಿರಿಯಲ್ಲೇ ಇರುವ ಈಶ್ವರ ದೇವಾಲಯದ ಮೇಲಿರುವ ಆಸನ ಭಂಗಿಯಲ್ಲಿನ ಶಿವ ಪಾರ್ವತಿ ಹಾಗು ಗಣೇಶ್ವರ ಆಕೃತಿಗಳೂ ಕನಕಾಚಲ ದೇವಾಲಯದ ಶೈಲಿಗೆ ಅನುಗುಣವಾಗಿವೆ. ಪ್ರಾಯಶಃ ಈ ಆಕೃತಿಗಳೂ ಕೂಡ ನುರಿತ ಕಲಾವಿದನ ಕೃತಿಗಳಾಗಿವೆ. ಈಶ್ವರನ ತೊಡೆಯ ಮೇಲೆ ಕುಳಿತ ಪಾ"ರ್ವತಿ ತನ್ನ ಕಾಲುಗಳನ್ನು ಕಮಲದ ಮೇಲೆ ಇರಿಸಿದ್ದಾಳೆ. ಹಾಗೆಯೇ ಪೀಠದ ಮೇಲೆ ಕುಳಿತ ಶಿವನ ಕೆಳಗೆ ಕಮಲದ ಆಸನವಿದೆ. ಎಡಗೈಯಲ್ಲಿ ತಂಬೂರದರನಾದ ತಂಬೂರ ಹಾಗೂ ಬಲಬದಿಯಲ್ಲಿ ಗಣನ ಆಕೃತಿ ಇದೆ. ವೃಷಭದ ಅವಶೇಷವನ್ನು ಮಾತ್ರ ಕೆಳಗಡೆ ಗಮನಿಸಬಹುದು.

ಇಡಿಯಾಗಿ ಗಾರೆಯ ಕಲೆಯನ್ನು ವಿಜಯನಗರದ ರಾಜ್ಯ ವ್ಯಾಪ್ತಿಯಾಗಿ ನೋಡಿದಾಗ ಅದೊಂದು ಪರಿಪೂರ್ಣವಾದ ಮಾಧ್ಯಮವಾಗಿ ಬೆಳೆಯಿತು ಎಂದು ಹೇಳಬಹುದು. ಕೇವಲ ಕಟ್ಟಡದ ನಿರ್ಮಾಣದ ವಸ್ತುವಾಗಿರದೆ ಕಲಾ ಮಾಧ್ಯಮವಾಗಿ ವಿಕಾಸಗೊಂಡಿತು. ಕಲಾವಿದರು ಮೂಲತಃ ಗಾರೆಯಲ್ಲೇ ಪರಿಣತಿ ಪಡೆದವರೇ ಎಂಬಲ್ಲಿ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಶಿಲೆಯನ್ನು ಕೆತ್ತಿ ಶಿಲ್ಪಗಳನ್ನು ರಚಿಸುವಲ್ಲಿ ಪರಿಣಿತಿ ಪಡೆದದ್ದು ಹಿಂದಿನಿಂದಲೂ ಬೆಳೆದು ಬಂದ ಸಂಪ್ರದಾಯ. ಒಮ್ಮಿಂದೊಮ್ಮೆಲೆ ಅಷ್ಟು ಭವ್ಯವಾಗಿ ಮತ್ತು ಅಗಾಧವಾದ ರೀತಿಯಲ್ಲಿ ದೇವಾಲಯ ನಿರ್ಮಾಣ ಮತ್ತು ಗಾರೆ ಆಕೃತಿಗಳ ನಿರ್ಮಾಣಕ್ಕೆ

ಕೈಜೋಡಿಸಿದ ಕಲಾವಿದರು ಯಾರು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಈ ಮೊದಲು ಶಿಲೆಯಲ್ಲಿ ಕೆಲಸ ಮಾಡಿದ ಕಲಾವಿದರೇ ಗಾರೆ ಕೆಲಸದಲ್ಲಿ ಪರಿಣತಿ ಪಡೆದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಅಷ್ಟು ಸಂಖ್ಯೆಯಲ್ಲಿ ಒಟ್ಟಿಗೆ ಗಾರೆ ಕಲಾವಿದರು ಇದಕ್ಕೂ ಮೊದಲೇ ಪರಿಣತಿ ಪಡೆದಿದ್ದರೆ? ಪ್ರಾಯಶಃ ಹಾಗೆ ಆಗಿರಲು ಸಾಧ್ಯವಿರಲಿಕ್ಕಿಲ್ಲ. ಏಕೆಂದರೆ, ಗಾರೆ ಕಲಾ ಮಾಧ್ಯಮವಾಗಿ ಪ್ರಾರಂಭದಿಂದಲೂ ಇತ್ತಾದರೂ ವಿಜಯನಗರ ಕಾಲದಲ್ಲಿ ರೂಪಗೊಂಡಷ್ಟು ದೇವಾಲಯ ಅಲಂಕರಣ ಆಕೃತಿಗಳು ಬಹುಶಃ ಬೇರಾವ ಕಾಲದಲ್ಲೂ ಆಗಲಿಲ್ಲ. ಇದಕ್ಕೂ ಮೊದಲು ತಮಿಳುನಾಡು – ಕೇರಳ ಪ್ರದೇಶದ ಪಾಂಡ್ಯರ ಕಾಲದಲ್ಲಿ ದೇವಾಲಯಗಳಲ್ಲಿ ಅಲಂಕರಣಕ್ಕೆ ಗಾರೆ ಬಳಸುವ ಪರಂಪರೆ ಪ್ರಾರಂಭವಾಗಿತ್ತು. ಅದು ವಿಜಯನಗರದಷ್ಟು ಭವ್ಯತೆಯನ್ನು ಮತ್ತು ವಿಸ್ತಾರವನ್ನು ಹೊಂದಿರಲಿಲ್ಲ. ವಿಜಯನಗರದ ಕಾಲದಲ್ಲಿ ಮಾತ್ರ ಹೆಚ್ಚಿನ ಕಲಾ ಚಟುವಟಿಕೆಗಳು ತಮಿಳು-ಮಲೆಯಾಳ ಪ್ರದೇಶಗಳಲ್ಲಿ ಕಾಣಬರುತ್ತವೆ. ಅದರಲ್ಲೂ ಗಾರೆ ಕಲೆ ತಮಿಳು ಪ್ರದೇಶದಲ್ಲಿ ವಿಜಯನಗರೋತ್ತರ ಕಾಲದಲ್ಲೂ ಚಲಾವಣೆಯಲ್ಲಿತ್ತು. ಪ್ರಾಯಶಃ ಅದೇ ಸಿದ್ಧಹಸ್ತರಾಗಿರುವುದು. ಕಲಾವಿದರು ಮೂಲತಃ ಶಿಲೆಯಲ್ಲಿ ಕೆಲಸ ಮಾಡುತ್ತಿದ್ದಿರಬಹುದು. ಗಾರೆಯ ಉಪಯೋಗ ಪ್ರಾರಂಭವಾದ ಮೇಲೆ ಅದರಲ್ಲಿ ತಮ್ಮನ್ನು ತೊಡಗಿಸಿಕೊಂಡು ಗುಂಪು-ಗುಂಪುಗಳಲ್ಲಿ ಪರಿನತರಾಗಿದ್ದಿರಬೇಕು. ಶಿಲ್ಪವನ್ನು ಕೆತ್ತುವ ಕೈ ಈಗ ತೇಪೆಗಳಿಂದ ಗಾರೆಯನ್ನು ಮಾಡುವಂತಾಯಿತು. ಅಜಂತಾದಲ್ಲಿ ಶಿಲ್ಪಿಗಳೇ ಚಿತ್ರಕಾರರಾಗಿದ್ದ ಉದಾಹರಣೆಗಳಲ್ಲವೆ ಹಾಗೆ. ಆಕೃತಿಗಳ ವಿಷಯದ ಹೊರವುಗಳನ್ನು ಅರಿತ ಕಲಾವಿದ ಅದಕ್ಕೆ ತಕ್ಕಂತೆ ಆಕೃತಿಗಳನ್ನು ರೂಪಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಗಾರೆಯಾಕೃತಿಗಳಲ್ಲಿ ಶೈಲಿಗಳಲ್ಲಿ ವಿಭಿನ್ನತೆ ಎದ್ದು ಕಾಣುತ್ತದೆ. ಬಹುಶಃ ಒಂದೇ ಸಮಯದಲ್ಲಿ ಬೇರೆ ಬೇರೆ ಕಲಾವಿದರ ಗುಂಪುಗಳು ಒಂದೇ ಸ್ಥಳದಲ್ಲಿ ಆದರೆ ಬೇರೆ ಬೇರೆ ದೇವಾಲಯಗಳಲ್ಲಿ ಕೆಲಸ ಮಾಡುತ್ತಿದ್ದಿರಬೇಕು. ಬಹುಶಃ ಅದಕ್ಕಾಗಿಯೇ ವಿರೂಪಾಕ್ಷ ದೇವಾಲಯ ಮತ್ತ ಹಜಾರರಾಮ ದೇವಾಲಯಗಳ ಆಕೃತಿಗಳಲ್ಲಿನ ಶೈಲಿಯ ಭಿನ್ನತೆ ಸ್ಪಷ್ಟವಾಗಿರುವುದು. ಅದೇ ರೀತಿ ಕನಕಗಿರಿಯಲ್ಲಿ

ಆಕೃತಿಗಳು ಬಹುಶಃ ಶೈಲಿಯ ಪಕ್ವತೆಯನ್ನು ಬಿಂಬಿಸುತ್ತವೆ. ಹೀಗೆ ಶೈಲಿಗಳಲ್ಲಿನ ವಿಭಿನ್ನತೆ ಸ್ಥಳದಿಂದ ಸ್ಥಳಕ್ಕೆ ಕಾಣುತ್ತಲೆ ಇರುತ್ತದೆ.

ಗಾರೆಯಾಕೃತಿಗಳು ದೇವಾಲಯಗಳ ನಿರ್ಮಾಣದ ಮತ್ತು ದೇವಾಲಯದ ನೀಲನಕ್ಷಯ ಮೂಲ ವಿನ್ಯಾಸದಲ್ಲಿ ಇದ್ದುವಗಳೇ ಆಗಿವೆ. ಅವಶ್ಯವಿದ್ದ ಸಣ್ಣಪುಟ್ಟ ಹೊಂದಾಣಿಕೆಗಳನ್ನು ಕಲಾವಿದ ಮಾಡಿರಬಹುದು. ಪ್ರಾಯಶಃ ಇದು ಪೂರ್ವ ನಿಯೋಜಿತವಾದದ್ದು. ಒಂದು ಕಿರು ವಿಮಾನ-ಗೂಡನ್ನು ನಿರ್ಮಿಸಲು ಪ್ರಾರಂಭಿಸಿದೊಡನೆ ಅದರಲ್ಲಿ ಯಾವ ಆಕೃತಿ ಬರಬೇಕು ಅಥವಾ ಕೆಲವೊಮ್ಮೆ ಆಕೃತಿಗಳ ಪ್ರಾಮುಖ್ಯತೆ ಮತ್ತು ಅಳತೆಗಳಿಗೆ ತಕ್ಕಂತೆಯೂ ವಿಮಾನ-ಗೂಡುಗಳ ನಿರ್ಮಾಣವಾಗಿರಬೇಕು. ಒಟ್ಟಿನಲ್ಲಿ ಪ್ರಸ್ತುತ ಅಧ್ಯಯನದಿಂದ ಗಾರೆಯಾಕೃತಿಗಳು ದೇವಾಲಯದ ಮೂಲ ಕಲ್ಪನೆಯಲ್ಲಿ ಇದ್ದವು ಎಂದು ತಿಳಿದುಬರುತ್ತದೆ. ಮುಂದುವರೆದಂತೆ

ಮೈಸೂರಿನಿಂದ ಸುಮಾರು 16 ಮೈಲಿ ಅಂತರದಲ್ಲಿ ದಕ್ಷಿಣಕ್ಕಿರುವ ನಂಜನಗೂಡು ಶೈವ ಧರ್ಮೀಯರ ಕ್ಷೇತ್ರವಾಗಿದ್ದು ಶ್ರೀಕಂಠೇಶ್ವರ ಅಥವಾ ನಂಜುಂಡೇಶ್ವರ ದೇವಾಲಯ ಇಲ್ಲಿಯ ಪ್ರಮುಖ ಆಕರ್ಷಣೀಯವಾದಂತಹ ಕ್ಷೇತ್ರವಾಗಿರುತ್ತದೆ. ಕಪಿಲ ಮತ್ತು ಗುಂಡ್ಲು ಹೊಳೆಗಳ ಸಂಗಮ ಈ ಕ್ಷೇತ್ರದ ಪ್ರಾಮುಖ್ಯತೆಯನ್ನು ಹೆಚ್ಚಿಸಿದೆ. ಈ ದೇವಾಲಯವು ಹೊಯ್ಸಳರು, ವಿಜಯನಗರದ ಅರಸರು ಹಾಗೂ ಮೈಸೂರಿನ ಒಡೆಯರ ಆಶ್ರಯವನ್ನು ಪಡೆದಿತ್ತೆಂದು ತಿಳಿದು ಬರುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಮೈಸೂರಿನ ಒಡೆಯುರು ನೀಡಿರುವ ಕೊಡುಗೆಗಳ ಬಗ್ಗೆ ವಿವರಿಸಲಾಗಿದೆ. ಒಡೆಯರ ರಾಜಧಾನಿಗೆ ಸಮೀಪದಲ್ಲಿದ್ದ ನಂಜನಗೂಡಿನ ಈ ದೇವಾಲಯ ಎಂದಿನಿಂದ ಒಡೆಯರ ಮನೆತನದ ಗಮನ ಸೆಳೆದಿರುತ್ತದೆ.

ಮೊದಲಿನಿಂದಲೂ ಶ್ರೀಕಂಠೇಶ್ವರ ಜನಪದರ ದೈವವಾಗಿದ್ದು, ಹೆಚ್ಚು ಭಕ್ತರು ಗ್ರಾಮೀಣ ಪ್ರದೇಶದವರೇ ಆಗಿರುತ್ತಾರೆ. ಇಲ್ಲಿ ನಡೆಯುವ ಜಾತ್ರೆಗಳಿಗೆ ಇಂದಿಗೂ ಜನಪದರೇ ಬಹಳವಾಗಿ ಭಾಗವಹಿಸುತ್ತಿರುವುದು ಗಮನಾರ್ಹ. ಈ ರೀತಿಯ ದೇವಾಲಯಕ್ಕೆ ಆಳರಸರು ನೀಡುವ ಕೊಡುಗೆಗಳು

ಅವರ ಜನಪ್ರಿಯತೆಯನ್ನು ಇಮ್ಮಡಿಗೊಳಿಸುವ ಅವಕಾಶವನ್ನು ಹೆಚ್ಚಿಸುತ್ತಿದ್ದವು. ಅಂದರೆ ದೇವಾಲಯಕ್ಕೆ ದಾನ-ಧರ್ಮಗಳನ್ನು ನೀಡುವುದು ರಾಜ್ಯದ ನೀತಿಯಾಗಿಯೂ ಪಾಲಿಸಲಾಗುತ್ತಿತ್ತು. ಹಾಗೆಯೇ ಆಳವಾಗಿ ಗಮನಿಸಲು ಹೋದಾಗ ಸಮಕಾಲೀನ ದಾಖಲೆಗಳ ಪ್ರಕಾರ ಮೊದಲನೆ ರಾಜ ಒಡೆಯರು ಅಧಿಕಾರಕ್ಕೆ ಬರುವವರೆವಿಗೂ ಈ ದೇವಾಲಯಕ್ಕೆ ಮೈಸೂರಿನ ಒಡೆಯರ ಮನೆತನದವರಿಂದಾಗಲೀ ಅಥವಾ ಅರಸರಿಂದಾಗಲೀ ಯಾವುದೇ ರೀತಿಯ ದಾನ ಧರ್ಮಗಳು ಸಂದಾಯ ಆಗಿರುವುದಿಲ್ಲ. ಇದಕ್ಕೆ ಹಲವಾರು ಕಾರಣಗಳನ್ನು ಗಮನಿಸಬಹುದಾಗಿದೆ. ಮೊದಲನೆಯದಾಗಿ ವಿಜಯನಗರದ ಅರಸರ ಸಾಮಂತರಾಗಿದ್ದ ಮೈಸೂರಿನ ಒಡೆಯರು ಆರಂಭದಲ್ಲಿ ಮಿತಿಯಾದ ಆರ್ಥಿಕ ಸಂಪತ್ತನ್ನು ಹೊಂದಿದ್ದರು. ದಾಖಲೆಗಳ ಪ್ರಕಾರ ರಾಜ ಒಡೆಯರು ಅಧಿಕಾರಕ್ಕೆ ಬಂದಾಗ ಅವರ ಅಧೀನದಲ್ಲಿ 33 ಗ್ರಾಮಗಳಿದ್ದವು. ಅವುಗಳ ಹುಟ್ಟುವಳಿ 25000 ಗದ್ಯಾಣಗಳಾಗಿದ್ದವು. ಪರಿಣಾಮವಾಗಿ ಆರಂಭದ ಒಡೆಯರು ದೇವಾಲಯಗಳಿಗೆ ದಾನ ಮಾಡುವಷ್ಟು ಸಂಪತ್ತು ಹೊಂದಿರಲಿಲ್ಲ ಎನ್ನಬಹುದು. ಎರಡನೆಯದಾಗಿ ಸಾಮಂತ ಅರಸರೆನಿಸಿದ್ದ ಇವರು ರಾಜ್ಯ ವಿಸ್ತರಣೆಯಂತಹ ಕಾರ್ಯಕ್ಕೆ ತೊಡಗುವುದು ಸಾಧ್ಯವಿರಲಿಲ್ಲ. ಇದರಿಂದಾಗಿ ಇವರ ಆರ್ಥಿಕ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆಗಳು ಇರಲಿಲ್ಲವೆಂದೇ ತಿಳಿಯಬೇಕಾಗುತ್ತದೆ. ಇದಲ್ಲದೆ ಪ್ರಮುಖವಾಗಿ ದೇವಾಲಯಗಳಿಗೆ ಹೆಚ್ಚು ಕೊಡುಗೆಗಳನ್ನು ದಾನಮಾಡುವ ಮೂಲಕ ಜನಪ್ರಿಯತೆ ಗಳಿಸಬೇಕಾದ ಅಗತ್ಯ ಇರಲಿಲ್ಲ. ವಿಜಯನಗರ ಶೈಲಿ ಮುಂದುವರೆದ ಶೈಲಿಯೇ ಮೈಸೂರು ಶೈಲಿ.

ಮೊದಲಿಗೆ ರಾಜ ಒಡೆಯರು ಕ್ರಿ.ಶ. 1610ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳುವುದರೊಂದಿಗೆ ವಿಜಯನಗರದ ಸಾರ್ವಭೌಮಾಧಿಕಾರವನ್ನು ಕಿತ್ತೊಗೆದು ಪ್ರಾಯೋಗಿಕವಾಗಿ ಸ್ವತಂತ್ರರಾದರು. ಈ ಘಟನೆಯ ನಂತರವೇ ಒಡೆಯರು ತಮ್ಮ ಸಂಸ್ಥಾನದ ದೇವಾಲಯಗಳ ಅಭಿವೃದ್ಧಿಯ ಕಡೆಗೂ ಗಮನ ಹರಿಸಿರುವುದು ಕಂಡು ಬರುತ್ತದೆ. ರಾಜ ಒಡೆಯರು ಮೂಲದೇವರಾದ ಶ್ರೀಕಂಠೇಶ್ವರನಿಗೆ ವಿಭೂತಿ ರೇಖೆಯಿಂದ ಯುಕ್ತವಾದ ನವರತ್ನ ಖಚಿತ ಚಿನ್ನದ ಕೊಳಗವನ್ನು ಸಲ್ಲಿಸಿದ್ದಾರೆ. ಇದೊಂದು ಚಿನ್ನದ ಮುಖವಾಡವಾಗಿದ್ದು ಹಣೆಯ ಮೇಲೆ ನವರತ್ನಗಳಿಂದ ಕೂಡಿದ ಮೂರು ಪಟ್ಟೆ ಹಾಕಲಾಗಿದೆ. ಇದನ್ನು ಇಂದಿಗೂ ದೇವಾಲಯದಲ್ಲಿ ನಡೆಯುವ ಎರಡು ಜಾತ್ರೆಗಳ

ಸಂದರ್ಭದಲ್ಲಿ ದೇವರಿಗೆ ಧಾರಣೆ ಮಾಡಲಾಗುತ್ತಿದೆ. ಇದರಿಂದ ನಂಜುಂಡೇಶ್ವರ ದೇವಾಲಯಕ್ಕೆ ರಾಜ ಒಡೆಯರ ಕಾಲದಲ್ಲಿ ಮೊದಲ ದೇವದಾನ ಸಂದಾಯವಾಗಿರುವುದು ಸ್ಪಷ್ಟವಾಗಿದೆ.(ಸುಧಾಮಣಿ)

ಮುಂದುವರೆದಂತೆ ರಾಜ ಒಡೆಯರ ನಂತರ ಅವರ ಮೊಮ್ಮಗ ಚಾಮರಾಜ ಒಡೆಯರ ಕಾಲದಲ್ಲಿ ಶ್ರೀಕಂಠೇಶ್ವರ ದೇವರಿಗೆ ಕಪಿಲಾ ನದಿತೀರದಲ್ಲಿ ನಡೆಸುತ್ತಿದ್ದ ಉತ್ಸವಾದಿ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯಲೆಂಬ ಉದ್ದೇಶದಿಂದ ಆ ನದೀ ತೀರದಲ್ಲಿ ಒಂದು ಮಂಟಪವನ್ನು ಕಟ್ಟಿಸಿದರು. ಅಲ್ಲದೆ ಈ ಕಾರ್ಯಕ್ರಮಗಳನ್ನು ವೀಕ್ಷಿಸಲು ಬರುವ ಜನರಿಗೆ ನೆರಳು ಸಿಗಲೆಂಬ ಉದ್ದೇಶದಿಂದ ಪಕ್ಕದಲ್ಲೇ ಅನೇಕ ವೃಕ್ಷಗಳಿಂದ ಕೂಡಿದ ಒಂದು ವನವನ್ನು ಬೆಳೆಸಿದರು. ಇದರಿಂದ ಒಡೆಯರು ತಮ್ಮ ಪ್ರಜೆಗಳ ವಿಶ್ವಾಸಕ್ಕೂ ಪಾತ್ರರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ನಂತರ ಮೊದಲನೇ ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ಅರಸರಿಂದ ಶ್ರೀಕಂಠೇಶ್ವರ ದೇವಾಲಯಕ್ಕೆ ಅವರ ಪೂರ್ವಿಕರಿಗಿಂತ ಹೆಚ್ಚಿನ ದೇವದಾನ ಲಭಿಸಿರುವುದು ಕಂಡುಬರುತ್ತದೆ. ಇದೇ ರೀತಿ ಅವರ ಸಂಸ್ಥಾನದ ದೇವಾಲಯಗಳಿಗೆ ಗಣನೀಯವಾಗಿ ದಾನ ನೀಡಿದ್ದುದು ಆಂತರಿಕ ಸಮಸ್ಯೆಗಳನ್ನು ಸ್ವಲ್ಪಮಟ್ಟಿಗಾದರೂ ಪರಿಹರಿಸಿಕೊಳ್ಳುವಲ್ಲಿ ಸಹಕಾರಿಯಾಯಿತು. ಪರಿಣಾಮವಾಗಿ ರಣದುಲ್ಲಾಖಾನನಂತಹ ಶತ್ರುಗಳನ್ನು ಎದುರಿಸುವುದು ಸಾಧ್ಯವಾಯಿತು. ಇವರ ಕಾಲದಲ್ಲಿ 10ನೇ ಜನರವರಿ 1644ರಲ್ಲಿ ದಳವಾಯಿ ವಿಕ್ರಮರಾಯ(ಬೆಟ್ಟದ ಚಾಮರಾಜ ಒಡೆಯರ ಪುತ್ರ) ಏಕಶಿಲಾ ಬೃಹತ್ ನಂದಿಯನ್ನು ಕೆತ್ತಿಸಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿ ಅದರ ಪೀಠದಲ್ಲಿ ಶಾಸನ ಬರೆಸಿದ್ದಾನೆ. ಇದೇ ಅವಧಿಯಲ್ಲಿ ಕಂಠೀರವ ನರಸರಾಜ ಒಡೆಯುರು ತಮ್ಮ ಹೆಸರಿನಲ್ಲಿ ನರಸಾಂಬುದೀಕೆರೆಯೊಂದನ್ನು ಕಟ್ಟಿಸಿ ಅದಕ್ಕೆ ಕುಂಡಿನೀ ನದಿಯಿಂದ ನೀರು ಹಾಯಿಸಲು ಅನುಕೂಲವಾಗುವಂತೆ ನದಿಗೆ ಸೇತುವೆ ಕಟ್ಟಿಸಿರುತ್ತಾನೆ. ಹಾಗೆ ಬಂದ ನೀರಿನಿಂದ ಬೆಳೆದ ಫಸಲನ್ನು ದೇವರ ಪಂಡಿತರ ಆರಾಧನೆ, ದೀಪಾರಾಧನೆ ಹಾಗು ರಥೋತ್ಸವಗಳಿಗೆ ಉಪಯೋಗಿಸಿಕೊಳ್ಳಬೇಕೆಂದು ಶಾಸನ ಬರೆಸಿದರು. ಆದರೆ ದಾಖಲೆಯಲ್ಲಿ ಖಚಿತವಾಗಿ ಯಾವ ಕೃಷಿ ಭೂಮಿಗೆ ಈ ನೀರನ್ನು ಬಳಸಿಕೊಳ್ಳಲು ಅನುಮತಿ ಇತ್ತೆಂಬುದನ್ನು ತಿಳಿದು ಬಂದಿರುವುದಿಲ್ಲ.

ಹೊಸದಾಗಿ ಭೂಮಿಯನ್ನು ಒಡೆಯರು ನೀಡಿದ್ದರೆ? ಅಥವಾ ಈಗಾಗಲೇ ದೇವಾಲಯದ ನಿಯಂತ್ರಣದಲ್ಲಿದ್ದ ಒಣ ಭೂಮಿಗೆ ನೀರಾವರೀ ಅನುಕೂಲ ಮಾಡಿಕೊಟ್ಟಿರಬೇಕು. ಇವರು ಮುಂದುವರೆದು ದೇವಾಲಯದಲ್ಲಿ ರಥೋತ್ಸವ ಸಂದರ್ಭದಲ್ಲಿ ಬಳಸುತ್ತಿದ್ದ ಗೌತಮ ರಥವು ಶಿಥಿಲವಾಗಿದ್ದುದರಿಂದ ಅದನ್ನು ದುರಸ್ತಿ ಮಾಡಿಸಿದ್ದರು. ಇವರು ಉತ್ತರಾಧಿಕಾರಿ ಮೊದಲನೇ ದೇವರಾಜ ಒಡೆಯರು ಶ್ರೀಕಂಠೇಶ್ವರನಿಗೆ ವಸ್ತ್ರದಾನ ಮಾಡಿದುದಾಗಿ ದಾಖಲೆಯೊಂದು ತಿಳಿಸುತ್ತದೆ. ಆದರೆ ಅದರ ವಿವರ ನೀಡಿಲ್ಲ. ಮುಂದೆ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಅವರು ದೇವರಿಗೆ ಪ್ರತಿದಿನ ಮುತ್ತಿನ ಸಹಸ್ರಾರ್ಚನೆ ಮಾಡಿಸುತ್ತಿದ್ದುದಾಗಿ ದಾಖಲೆ ಇದೆ. ಒಡೆಯರು ಈ ಸೇವೆಗಾಗಿ ದೇವಾಲಯಕ್ಕೆ ಒಂದು ಸಹಸ್ರ ಮುತ್ತುಗಳನ್ನು ನೀಡಿದ್ದಿರಬೇಕು.

ಮುಂದೆ ಚಿಕ್ಕದೇವರಾಜ ಒಡೆಯರ ಮರಣಾನಂತರ ಕಳಲೆ ಮನೆತನದ ವ್ಯಕ್ತಿಗಳು ಮೈಸೂರು ಸಂಸ್ಥಾನದ ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಮನಾರ್ಹ ಪಾತ್ರವಹಿಸಿದರು. ಈ ಅವಧಿಯಲ್ಲಿ ಅಧಿಕಾರಕ್ಕೆ ಬಂದ ಒಡೆಯರುಗಳು ಹಾಗೂ ದಳವಾಯಿ ಸಹೋದರರು ಶ್ರೀಕಂಠೇಶ್ವರ ದೇವರಿಗೆ ಗಣನೀಯ ಮಟ್ಟದಲ್ಲಿ ದೇವದಾನ ನೀಡಿರುವುದು ದಾಖಲೆಗಳಿಂದ ಸ್ಪಷ್ಟವಾಗಿದೆ. ಕ್ರಿ.ಶ.1725ರಲ್ಲಿ ಮೊದಲನೇ ಕೃಷ್ಣರಾಜ ಒಡೆಯರು ಕಪಿಲಾ ನದಿಯ ದಕ್ಷಿಣಕ್ಕೆ ತಮ್ಮ ಹೆಸರಿನಲ್ಲಿ ಕೃಷ್ಣರಾಜ ಎಂಬ ಅಗ್ರಹಾರ ಒಂದನ್ನು ನಿರ್ಮಿಸಿ ಶ್ರೀಕಂಠೇಶ್ವರ ದೇವರ ಸೇವೆಯಲ್ಲಿ ನಿರತವಾದ ಬ್ರಾಹ್ಮರಿಗೆ ವೃತ್ತಿಗಳನ್ನು ಹಂಚಿರುವುದರ ಬಗ್ಗೆ ದಾಖಲೆಯಿದೆ. ಆದರೆ ಈ ವೃತ್ತಿಗಳನ್ನು ಹೊರಗಿನಿಂದ ಹೊಸದಾಗಿ ಬ್ರಾಹ್ಮಣರನ್ನು ಕರೆತಂದು ನೀಡಿದ್ದರೋ ಅಥವಾ ಈಗಾಗಲೇ ಈ ದೇವರ ಸೇವೆಯಲ್ಲಿ ನಿರತತಾಇಗದ್ದವರಿಗೆ ಅನುಕೂಲ ಮಾಡಿಕೊಟ್ಟಿದ್ದರೋ ಎಂಬುದು ದಾಖಲೆಯಲ್ಲಿ ಸ್ಪಷ್ಟವಾಗಿಲ್ಲ. ಬಹುಶಃ ಎರಡೂ ರೀತಿಯಲ್ಲಿ ದಾನ ಸಂದಿದ್ದಿರಬೇಕು. ಅದೇನೇ ಇದ್ದರೂ, ಒಡೆಯರು ನಂಜುಂಡೇಶ್ವರನ ಸೇವೆಗೆ ತೊಡಿಕೊಂಡ ಬ್ರಾಹ್ಮಣರಿಗೆ ಅನುಕೂಲಮಾಡಿಕೊಟ್ಟರೆಂಬುದು ಮುಖ್ಯ ವಿಷಯವಾಗಿದೆ.

ವೀರಶೈವ ದಳವಾಯಿ ಕಳಲೆ ನಂಜರಾಜ ನಂಜುಂಡೇಶ್ವರನ ಅನನ್ಯ ಭಕ್ತನೆನಿಸಿದ್ದ ಆತ ಹೊಂದಿದ್ದ 'ಮಹಾದೇವ' ಹಾಗೂ 'ಶ್ರೀನಂಜುಂಡ' ಎಂಬೆರಡು ಮುದ್ರೆಗಳು ಮೇಲಿನ ಹೇಳಿಕೆಗೆ ಪುಷ್ಟಿ ನೀಡುತ್ತವೆ. ಅಲ್ಲದೆ ಈತ ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರ ಮಾಡಿರುವ ಹದಿನೇಳು ಶೈವಧರ್ಮಪರವಾದ ಕೃತಿಗಳಲ್ಲಿ 'ಗರಳಪುರಿ ಮಹಾತ್ಮೆ' ನಂಜನಗೂಡಿಗೆ ಸಂಬಂಧಪಟ್ಟುದುದಾಗಿದೆ. (ಗರಳಪುರಿ ಎಂಬುದು ನಂಜನಗೂಡಿಗಿದ್ದ ಮತ್ತೊಂದು ಹೆಸರು) ಈತ ಕ್ರಿ.ಶ.1756-1760ರ ನಡುವೆ ಅರವತ್ತಾರು ಪುರಾತನರ ಶಿಲಾವಿಗ್ರಹಗಳನ್ನು ಕೆತ್ತಿಸಿದ್ದಾನೆ. ಮತ್ತು ಅವುಗಳನ್ನು ಈ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದಾನೆ.

ಪ್ರತಿಯೊಂದು ವಿಗ್ರಹದ ಕೆಳಗೆ ಆ ಶಿವಭಕ್ತನ ಹೆಸರನ್ನು ಮತ್ತು ಅದನ್ನು ದಾನ ಮಾಡಿದ ನಂಜರಾಜನ ಹೆಸರನ್ನು ಕೆತ್ತಲಾಗಿದೆ. ಇವುಗಳಲ್ಲಿ ಒಂದು ವಿಗ್ರಹದ ಕೆಳಗೆ ಶಿವಭಕ್ತನ ಹೆಸರಿಲ್ಲ. ಲೂಯಿಸ್ ರೈಸ್‌ರವರು ಅದು ಧರ್ಮಭಕ ಎಂಬ ಶಿವಭಕ್ತನ ವಿಗ್ರಹ ಎಂದು ಊಹಿಸಿದ್ದಾರೆ. ಅದೇ ರೀತಿ ನಿರ್ವಚನ ವಿಗ್ರಹದ ಪಕ್ಕದ ಶಿಲಾ ಪೀಠದ ಮೇಲೆ ಯಾವುದೇ ವಿಗ್ರಹ ಇಲ್ಲ. ಆದರೆ ಪೀಠದಲ್ಲಿ ಶಿವಭಕ್ತನ ಹೆಸರನ್ನು ಮೂರ್ಖಭಕ್ತ ಎಂಬುದಾಗಿ ಕೆತ್ತಲಾಗಿದೆ. ಶಿವಭಕ್ತರ ವಿಗ್ರಹಗಳನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸುವುದರ ಮುಖಾಂತರ ನಂಜರಾಜ ನಂಜುಂಡೇಶ್ವರನ ಮೇಲೆ ತನಗಿರುವ ಅನನ್ಯ ಭಕ್ತಿಯನ್ನು ವ್ಯಕ್ತಪಡಿಸಿದ್ದಾನೆ. ಇದೇ ಅವಧಿಯಲ್ಲಿ ಎರಡನೇ ಕೃಷ್ಣರಾಜ ಒಡೆಯರು ಈ ದೇವಾಲಯಕ್ಕೆ ದ್ಯಾವಂಡ(ಇಂದಿನ ದೇವನಹಳ್ಳಿ) ಹೋಬಳಿ ಸ್ಥಳದ ಚನ್ನರಾಯಪಟ್ಟಣ ಹೋಬಳಿಗೆ ಸೇರಿದ್ದ ಮಹದೇವಕೊಡಿಗೆಹಳ್ಳಿ, ಗೆರೆಪುರ ಹಾಗೂ ಯಡೆಯೂರು ಗ್ರಾಮಗಳನ್ನು ನೀಡಿದ್ದಾರೆ. 1759ರ ಒಡೆಯರ ನಿರೂಪ ಒಂದು ಈ ದೇವಾಲಯದ ಸ್ಥಾನಿಕ ಹುದ್ದೆಗ ಸಂಬಂಧಿಸಿದಂತೆ ಶಂಕರ ದೀಕ್ಷಿತ ಎಂಬುವವನ ಸ್ಥಾನಕ್ಕೆ ಭಗವಾನುಶಾಸ್ತ್ರಿ ಎಂಬಾತನನ್ನು ನೇಮಿಸಿ ಆ ಹುದ್ದೆಗಿರುವ ಎಲ್ಲ ಸೌಲಭ್ಯಗಳನ್ನು ಆತನಿಗೆ ನೀಡಬೇಕೆಂದು ಮೈಸೂರು ನಗರ ಹೋಬಳಿ ಸೀಮೆಯ ಮೇಲ್ವಿಚಾರಕ ಚಿಕ್ಕಯ್ಯನಿಗೆ ನಿರ್ದೇಶನ ನೀಡಿರುವುದು ಕಂಡುಬರುತ್ತದೆ. ಆ ಹುದ್ದೆಯಲ್ಲಿ ಶಂಕರ ದೀಕ್ಷಿತ ಬಹುಶಃ ಹುದ್ದೆಯಿಂದ ನಿವೃತ್ತಿ ಹೊಂದಿದ್ದಿರಬೇಕು ಅಥವಾ ಆತ ಮರಣವಪ್ಪಿ ಆ ಸ್ತಾನ ತೆರವಾಗಿದ್ದಿರಬೇಕು ಅದೇನೇ ಇದ್ದರೂ ದೇವಾಲಯದ ಕಾರ್ಯಕ್ರಮಗಳಿಗೆ ಅಡ್ಡಿ ಉಂಟಾಗದಂತೆ ಸ್ಥಾನಿಕ ಸ್ಥಾನವನ್ನು ಭರ್ತಿಮಾಡಲು

ಒಡೆಯರು ತೋರಿದ ಕಾಳಜಿ ಗಮನಾರ್ಹ. ಇದೇ ಒಡೆಯರ ಕಾಲಕ್ಕೆ ಸೇರಿದ ಕ್ರಿ.ಶ. 1764ರ ಶಾಸನ ಒಂದು ನಂಜರಾಜ ಒಡೆಯ ಮತ್ತು ಮಲ್ಲ ಒಡೆಯ ಎಂಬಿಬ್ಬರು ಅಧಿಕಾರಿಗಳು ಶ್ರೀಕಂಠೇಶ್ವರ ದೇವರಿಗೆ ಹೊಸಹಳ್ಳಿಯಲ್ಲಿ ಜೋಡಿ ಭೂದಾನ ಮಾಡಿದುದಾಗಿ ಉಲ್ಲೇಖಿಸಿದೆ. ಇಲ್ಲಿ ಉಲ್ಲೇಖಿಸಿರುವ ನಂಜರಾಜ ಒಡೆಯ ದಳವಾಯಿ ನಂಜರಾಜನೇ ಅಥವಾ ಬೇರೆ ಅಧಿಕಾರಿಯೆ ಎಂಬುದು ಸ್ಪಷ್ಟವಿಲ್ಲ. ಸಾಮಾನ್ಯವಾಗಿ ದಳವಾಯಿ ನಂಜರಾಜನ ಶಾಸನಗಳಲ್ಲಿ ಆತ ತಾನು ಮಹಿಶೂರ ದಳವಾಯಿ ದೊಡ್ಡಯ್ಯನ ಪೌತ್ರ ಕಳಲೆ ವೀರರಾಜಯ್ಯನ ಪುತ್ರ ನಂಜರಾಜೈನ ಶೇವೆ ಎಂಬುದಾಗಿ ಅಥವಾ ಕಳಲೆ ನಂಜರಾಜ ಎಂಬುದಾಗಿ ಬರೆಸಿರುವುದು ಕಂಡುಬರುತ್ತದೆ. ಆದರೆ 1764ರ ಶಾಸನದಲ್ಲಿ ಮೇಲೆ ತಿಳಿಸಿರು ಉಲ್ಲೇಖಗಳು ಇರುವುದಿಲ್ಲ ಹಾಗಗಿ ಈ ದಾನ ಶಾಸನ ದಳವಾಯಿ ನಂಜರಾಜಯ್ಯನದೆಂದು ಊಹಿಸಲು ಕಷ್ಟವಾಗುತ್ತದೆ. ಅದೇನೇ ಇದ್ದರು ಚಿಕ್ಕದೇವರಾಜರ ಕಾಲದಲ್ಲಿದ್ದ ವೈಷ್ಣವ ಧರ್ಮದ ಪರ ಅಲೆ ದಳವಾಯಿಗಳ ಕಾಲದಲ್ಲಿ ಸ್ವಲ್ಪಮಟ್ಟಿಗೆ ರಾಜ್ಯದಲ್ಲಿ ಶೈವ ಧರ್ಮದ ಪರ ಉಂಟಾಯಿತನ್ನಬಹುದು.

18ನೇ ಶತಮಾನದ ಉತ್ತರಾರ್ಧದಲ್ಲಿ ಮೈಸೂರು ರಾಜ್ಯದ ಅಧಿಕಾರ ಸೂತ್ರ ಹಿಡಿದ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಶ್ರೀಕಂಠೇಶ್ವರ ದೇವಾಲಯಕ್ಕೆ ಹೆಚ್ಚಿನ ಕೊಡುಗೆಗಳು ಸಂದಾಯವಾಗಿಲ್ಲ. ಟಿಪ್ಪುವು ತನ್ನ ಪಟ್ಟ ಆನೆಯ ಕಣ್ಣಿಗೆ ತೊಂದರೆ ಉಂಟಾದಾಗ ನಂಜುಂಡೇಶ್ವನಿಗೆ ಪಚ್ಚೆ ಹಾರವನ್ನು ಒಪ್ಪಿಸಿ ಒಂದು ಲಿಂಗ ಪ್ರತಿಷ್ಠಾಪನೆ ಮಾಡಿಸಿದ್ದಾನೆ. ತನ್ನ ಆನೆಗೆ ಕಣ್ಣು ನೋವು ವಾಸಿಯಾದುದರಿಂದ ತಾನು ಪ್ರತಿಷ್ಠಾಪಿಸಿದ ಲಿಂಗಕ್ಕೆ 'ಹಕೀಂನಂಜುಂಡ' ಎಂದು ಹೆಸರಿಸಿದ್ದಾನೆ (ಇಲ್ಲಿ ನಂಜುಂಡೇಶ್ವರ ವೈದ್ಯನಾಗಿ ಟಿಪ್ಪುವಿಗೆ ಗೋಚರಿಸಿದ್ದಾನೆ.) ಈ ಲಿಂಗಕ್ಕೆ ದೇವಾಲಯದಲ್ಲಿ ಇಂದಿಗೂ ಪೂಜೆ ಸಲ್ಲಿಸಲಾಗುತ್ತಿದೆ. ಮೈಸೂರಿನ ಒಡೆಯರ ಆಳ್ವಿಕೆಯಲ್ಲೆಲ್ಲಾ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ ನಂಜುಂಡೇಶ್ವರ ದೇವಾಲಯದ ಅಭಿವೃದ್ಧಿಯ ದೃಷ್ಟಿಯಿಂದ ಮಹತ್ವವೆನಿಸಿದೆ. ಈ ಅವಧಿಯಲ್ಲಿ ದೇವಾಲಯಕ್ಕೆ ಹೊಸ ಭಾಗಗಳ ಸೇರ್ಪಡೆ ಗಣನೀಯ ಮಟ್ಟದಲ್ಲಾಯಿತು. ಜೊತೆಗೆ ವಿವಿಧ ಬಗೆಯ ದೇವದಾಯಗಳನ್ನು ಒಡೆಯರು ಹಾಗೂ ಆಳುವ ವರ್ಗದವರು ದೇವರಿಗೆ ಸಲ್ಲಿಸಿದ್ದಾರೆ. ಅವರುಗಳು ನೀಡಿರುವ ಆಭರಣಗಳು, ಬೆಳ್ಳಿಯ ವಾಹನಗಳು, ಪ್ರತಿಷ್ಠಾಪಿಸಿರುವ ಲಿಂಗಗಳು, ಭಕ್ತವಿಗ್ರಹಗಳು

ಇಂದಿಗೂ ದೇವಾಲಯದಲ್ಲವೆ. ಈ ದೇವಾಲಯದ ಪ್ರುಖ ಆಕರ್ಷಣೆಗಳಲ್ಲೊಂದಾದ ಮಹಾದ್ವಾರ ಗೋಪುರ ಒಡೆಯರು 1845ರಲ್ಲಿ ಕಟ್ಟಿಸಿದುದಾಗಿದೆ. ವಾಸ್ತವವಗಿ ಟಿಪ್ಪುವಿನ ನಂತರ ಪೂರ್ಣಯ್ಯನವರ ದಿವಾನಗಿರಿಯಲ್ಲಿ ಈ ದೇವಾಲಯಲಕ್ಕೆ ಆಳುವ ವರ್ಗದವರಿಮದ ಯಾವುದೇ ರೀತಿಯದಾನ ದೊರೆತಿಲ್ಲ. ಒಡೆಯರಯ ಪ್ರಾಪ್ತವಯಸ್ಸಿಗೆ ಬಂದು ರಾಜ್ಯದ ಆಡಳಿತವನ್ನು ಕ್ರಿ.ಶ.1811ರಲ್ಲಿ ತಮ್ಮ ಕೈಗೆ ತೆಗೆದುಕೊಂಡ ನಂತರ ಪುನಃ ನಂಜುಂಡೇಶ್ವನಿಗೆ ಒಡೆಯರ ಆಶ್ರಯ ಲಭಿಸಿರುವುದು ಕಂಡುಬರುತ್ತದೆ. ಈ ಅವಧಿಯಲ್ಲಿ ನಂಜುಂಡೇಶ್ವರನಿಗೆ ಹಾಗೂ ಆ ದೇವಾಲಯಕ್ಕೆ ದೊರೆತಿರುವ ದೇವದಾನಗಳು ಇಂತವೆ: ಕ್ರಿ. ಶ. 1815ರಲ್ಲಲಿ ಒಡೆಯರು ದೇವರಿಗೆ ಒಂದು ಚಿನ್ನದ ಹಾವನ್ನು ನೀಡಿದರು. ಕ್ರಿ.ಶ. 1819ರಲ್ಲಿ ಶಿಥಿಲವಾಗಿದ್ದ ಗೌತಮರಥವನ್ನು ಜೀರ್ಣೋದ್ಧಾರ ಮಾಡಿಸಿದರು. ಅದೇ ವರ್ಷ ಒಡೆಯರ ಮಗಳು ಕೆಂಪಚಾಮಮ್ಮಣ್ಣಿ ಮೂಲದೇವರಿಗೆ 'ಶ್ರೀಕಂಠಮುಡಿ' ಎಂಬ ಕಿರೀಟವನ್ನು ನೀಡಿದ್ದಾರೆ. ಇಂದಿಗೂ ಆ ಆಭರಣವನ್ನು ಜಾತ್ರೆಗಳ ಸಂದರ್ಭದಲ್ಲಿ ದೇವರಿಗೆ ಹಾಕಲಾಗುತ್ತಿದೆ. ಕ್ರಿ.ಶ. 1830ರಲ್ಲಿ ಸವಾರ್ ಕಛೇರಿಯ ಬಕ್ಷಿ ಭೀಮರಾಯ ಬೆಳ್ಳಿಯ ಅಶ್ವವಾಹನವನ್ನು 1834ರಲ್ಲಿ ಚಿಕ್ಕ ನಂದಿವಾಹನವನ್ನು ಹಾಗೂ ಮತ್ತೊಬ್ಬ ಅಧಿಕಾರಿ ಬಾಬುರಾಯಲ್ಲ ಬೆಳ್ಳಿಯ ಆನೆ ವಾಹನವನ್ನು ನೀಡಿದ್ದಾರೆ. ಇವುಗಳನ್ನು ಆಯಾ ಉತ್ಸವಗಳನ್ನು ಇಂದಿಗೂ ಉಪಯೋಗಿಸಲಾಗುತ್ತಿದೆ. ಇದೇ ಅವಧಿಯಲ್ಲಿ ರಾಣಿಯರಾದ ಕೆಂಪಿನ ಬಸಮ್ಮ ಬಸವೇಶ್ವರ ದೇವರನ್ನು. ಮರದೇವಮ್ಮ ದೇವೇಶ್ವರ ದೇವರನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದಾರೆ.. ಕ್ರಿ.ಶ. 1837ರಲ್ಲಿ ಒಡೆಯರು ಶ್ರೀಕಂಠೇಶ್ವರ ದೇವಾಲಯದಲ್ಲಿ ತುಲಾಭಾರ ಮಾಡಿಸಿಕೊಂಡು ಅದರ ನೆನಪಿಗಾಗಿ ದೇವರಿಗೆ ಅಭಿಸೇಕ್ಕೆ ಅನುಕೂಲವಾಗುವಂತೆ ಧಾರಾಪಾತ್ರೆಯನ್ನು ನೀಡಿ, ದೇವಾಲಯದ ಪೂಜಾ ಕೈಂಕರ್ಯಗಳು ಸುಲಲಿತವಾಗಿ ನಡೆಯಲೆಂಬ ಉದ್ದೇಶದಿಂದ ಹಾಲುಕೊಡುವ ಹಸುಗಳನ್ನು ಹಾಗೂ ಅವುಗಳ ಮೇವಿಗೆ ಗೋಮಾಳಗಳನ್ನು ಕೊಳ್ಳುವ ಸಲುವಾಗಿ ಚಿನ್ನ ನಾಣ್ಯಗಳನ್ನು ದಾನ ಮಾಡಿದರು. 1847ರಲ್ಲಿ ರಾಣಿ ಲಿಂಗಾಜಮ್ಮಣ್ಣಿ ಮಹಾಲಿಂಗೇಶ್ವರ ದೇವರನ್ನು ಪ್ರತಿಷ್ಠಾಪಿಸಿ ದೇವರಿಗೆ ಬೆಳ್ಳಿಯ ನಂದಿವಾಹನವನ್ನು ದಾನ ಮಾಡಿದರು. ಈ ನಂದಿವಾಹನದ ಮೇಲೆ ಕೆತ್ತಿರುವ ಆಭರಣಗಳ ವಿವರಣೆಯ ಪಟ್ಟಿ ಸುಮಾರು ನಾಲ್ಕು ಪುಟಗಳಷ್ಟಿದೆ. ಗೆಜ್ಜೆ, ಕಡಗ, ಗಂಟೆ, ಸಂಪಿಗೆದಂಡೆ, ಇತ್ಯಾದಿ ಆಭರಣಗಳನ್ನು ನಂದಿಗೆ ತೊಡಿಸಿರುವಂತೆ

ಕೆತ್ತಲಾಗಿದೆ. ಇದೇ ರಾಣಿ ದೇವಾಲಯಕ್ಕೆ ಜಾತ್ರೆ, ಉತ್ಸವದಿ ಕಾರ್ಯಕ್ರಮಗಳಲ್ಲಿ ಉಪಯೋಗಿಸಲು ಅನುಕೂಲವಾಗುವಂತೆ ಎರಡು ನಗಾರಿಗಳನ್ನು ನೀಡಿದ್ದಾರೆ. ಕ್ರಿ.ಶ. 1841ರಲ್ಲಿ ಒಡೆಯರ ಹಿರಿಯ ಮಗಳು ದೊಡ್ಡ ಪುಟ್ಟಮ್ಮಣ್ಣಿ ಬಾಲಕೆಂಪನಂಜೇಶ್ವರ ದೇವರನ್ನು, ಕಿರಿಮಗಳು ಪುಟ್ಟತಾಯಮ್ಮಣ್ಣಿ ಬಾಲಕೆಂಪದೇವಾಜೇಶ್ವರನನ್ನು ಪ್ರತಿಷ್ಠಾಪನೆ ಮಾಡಿಸಿದ್ದಾರೆ. ಒಡೆಯರ ರಾಣಿಯರು, ಅವರ ಮಕ್ಕಳು ಗಣನೀಯ ಪ್ರಮಾಣದಲ್ಲಿ ಲಿಂಗ ಪ್ರತಿಷ್ಠಾಪನೆ ಮಾಡಿಸಿರುವುದನ್ನು ಗಮನಿಸಿದಾಗ ಬಹುಶಃ ಮಹಾರಾಜರು ಕಳೆದುಕೊಂಡಿದ್ದ ಅಧಿಕಾರವನ್ನು ಪುನಃ ಪಡೆಯುವಂತಾಗಲೆಂದು ಅವರುಗಳು ನಂಜುಂಡೇಶ್ವರನಿಗೆ ಹರಕೆ ಹೊತ್ತುಕೊಂಡಿದ್ದರೆಂದು ತೋರುತ್ತದೆ. ಒಟ್ಟಿನಲ್ಲಿ ಲಿಂಗ ಪ್ರತಿಷ್ಠಾಪನೆಯನ್ನು ರಾಣಿಯರು ಪೈಪೋಟಿಯಿಂದ ಹಾಕಿಸಿದಂತೆ ತೋರುತ್ತದೆ. ಈ ಎಲ್ಲಾ ಗುಡಿಗಳಿಗೂ ಹಿತ್ತಾಳೆ ಬಾಗಿಲುವಾಡಗಳನ್ನು ಮಾಡಿಸಲಾಗಿದೆ. ಕ್ರಿ.ಶ. 1852ರಲ್ಲಿ ಒಡೆಯರರು ಚಿನ್ನ ಹಾಗೂ ಬೆಳ್ಳಿಗಳಿಂದ ತಯಾರಿಸಿದ ಕೈಲಾಸ ಪರ್ವತವನ್ನು ದೇವರಿಗೆ ನೀಡಿದ್ದಾರೆ. ಅದೇ ರೀತಿ ದೇವಾಲಯದ ಉತ್ಸವಮೂರ್ತಿಗೆ ಬೆಳ್ಳಿ ಮಂಟಪವನ್ನೂ ಪಲ್ಲಕ್ಕಿಯನ್ನು ಹೊರುವ ಬಿದುರಿನ ಎರಡು ತುದಿಗಳಿಗೆ ಬೆಳ್ಳಿ ಮುಚ್ಚಳವನ್ನು ಮಾಡಿಸಿಕೊಟ್ಟಿದ್ದಾರೆ.

ಶ್ರೀಕಂಠೇಶ್ವರ ದೇವಾಲಯದ ಮತ್ತೊಂದು ಆಕರ್ಷಣೆ ಅದರ ಪ್ರಾಕಾರದಲ್ಲಿರುವ ಕೈಸಾಲೆಗಳು, ಒಡೆಯರು ಈ ಕೈಸಾಲೆಗಳನ್ನು ನೂತನವಾಗಿ ಮಾಡಿಸಿದಲ್ಲದೆ ಅವುಗಲ ಕೈಪಿಡಿಯಲ್ಲಿ ಗಾರೆಯ ವಿಗ್ರಹಗಳನ್ನು ಕೆತ್ತಿಸಿದರು. ವರುಣ, ವಾಯು, ಗರುಡ, ಕುಬೇರ, ಮಹೇಶ್ವರ, ಉಮಾಮಹೇಶ್ವರ, ಸುಬ್ರಹ್ಮಣ್ಯ, ಭಿಕ್ಷಾಟನಾಮುರ್ತಿ ಇತ್ಯಾದಿ ತೊಂಬತ್ತು ವಿಗ್ರಹಗಳನ್ನು ಕೆತ್ತಿಸಿದ್ದಾರೆ. ಶ್ರೀಕಂಠೇಶ್ವರ ದೇವಾಲಯದ ಬಗೆಗೆ ವಿಶೇಷ ಆಸಕ್ತಿ ಇದ್ದುದರಿಂದಲೋ ಏನೋ ಮುಮ್ಮಡಿ ಕೃಷ್ಣರಾಜ ಒಡೆಯರು ಶಿಲೆ ಹಾಗೂ ಲೋಹಗಳಿಂದ ಮಾಡಿಸಿದ ತಮ್ಮ ಹಾಗೂ ತಮ್ಮ ರಾಣಿಯರ ಭಕ್ತ ವಿಗ್ರಹಗಳನ್ನು ಈ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದಾರೆ. ಕ್ರಿ.ಶ. 1876ರಲ್ಲಿ ಮುಮ್ಮಡಿ ಕ್ರಷ್ಣರಾಜ ಒಡೆಯರ ಮೊಮ್ಮಗ ನಂಜರಾಜ ಬಹದ್ದೂರ, ಶ್ರೀಕಂಠೇಶ್ವರ ದೇವರಿಗೆ ಒಂದು ಬೆಳ್ಳಿ ಹಂಸವಾಹನವನ್ನು ಸಲ್ಲಿಸಿದ್ದು, ಇಂದಿಗೂ ಅದು ದೇವಾಲಯದಲ್ಲಿದೆ. ಈ ದಾಖಲೆಯನ್ನು ಬಿಟ್ಟರೆ ಸದ್ಯಕ್ಕೆ ನಮಗೆ ಮೈಸೂರಿನ ಒಡೆಯರ ಮನೆತನದವರು ಈ ದೇವಾಲಯಕ್ಕೆ ದಾನ ನೀಡಿರುವುದಕ್ಕೆ ಶಾಸನಾಧಾರಗಳು ಲಭ್ಯವಿಲ್ಲ. ಮುಮ್ಮಡಿ

ಕೃಷ್ಣರಾಜ ಒಡೆಯರ ಕಾಲದಲ್ಲಿ ಅವರು ನೀಡಿರುವ ದೇವದಾನಗಳನ್ನು ಪರಿಶೀಲಿಸಿ ನೋಡಿದರೆ ಅವರು ಶೈವ ಹಗೂ ವೈಷ್ಣವ ದೇವಾಲಯಗಳೆರಡಕ್ಕೂ ಯಥೇಚ್ಛವಾಗಿ ದಾನ ನೀಡಿರುವುದು ಕಂಡುಬರುತ್ತದೆ. ಒಂದೊಂದು ದೇವಾಲಯದ ದಾನಗಳನ್ನು ಪ್ರತ್ಯೇಕವಾಗಿ ನೋಡಿದರೆ ಅವರು ನಂಜುಂಡೇಶ್ವರ ದೇವಾಲಯಕ್ಕೆ ಅತ್ಯಮತ ಹೆಚ್ಚು ದೇವದಾನ ನೀಡಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಇದಕ್ಕೆ ಅಂದಿನ ಪರಿಸ್ಥಿತಿಗಳನ್ನು ಕಾರಣವಾಗಿದ್ದಿರಬೇಕು. ಕ್ರಿ.ಶ. 1831ರಲ್ಲಿ ಒಡೆಯರನ್ನು ಸಂಸ್ಥಾನದ ಆಡಳಿತದಿಂದ ಹೊರಹಾಕಿ ಬ್ರಿಟಿಷ್ ಕಮೀಷನರ್‌ಗಳು ನೇರವಾಗಿ ಆಡಳಿತ ಸೂತ್ರ ಹಿಡಿದ ನಂತರ ಒಡೆಯರು ತಮ್ಮನ್ನು ಸಂಪೂರ್ಣವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಯಿತು. ಆಡಳಿತಾಧಿಕಾರ ಕಳೆದುಕೊಂಡ ದುಃಖ ಅವರನ್ನು ಹೆಚ್ಚು ಹೆಚ್ಚು ಧಾರ್ಮಿಕ ಕ್ಷೇತ್ರಕ್ಕೆ ತೊಡಗಿಸಿಕೊಳ್ಳುವಂತೆ ಪ್ರಚೋದಿಸಿತು. ಅವರಿಗೆ ನಂಜುಂಡೇಶ್ವರನ ಮೇಲೆ ಅಪಾರ ನಂಬಿಕೆ ಇದ್ದುದರಿಂದಲೋ ಏನೋ ಅವರು ಈ ದೇವಾಲಯಕ್ಕೆ ಆಗಿಂದಾಗ್ಗೆ ಭೇಟಿ ನೀಡುತ್ತಿದ್ದರು. ಪರಿಣಾವಾಗಿ ಇಲ್ಲಿಗೆ ಬಂದಾಗ ಉಳಿದುಕೊಳ್ಳಲು ಅನುಕೂಲವಾಗುವಂತೆ ಒಂದು ಅರಮನೆಯನ್ನು ಕಟ್ಟಿಸಿದರು. ಅದರ ಕುರುಹುಗಳು ಇಂದಿಗೂ ಇಲ್ಲಿಯ ಜೆ.ಎಸ್.ಎಸ್. ಕಾಲೇಜಿನ ಕಟ್ಟಡದಲ್ಲಿ ಕಾಣಸಿಗುತ್ತವೆ. ಮೈಸೂರಿನ ಒಡೆಯರು ಹಾಗೂ ಆಳುವ ವರ್ಗದವರು ಈ ದೇವಾಲಯಕ್ಕೆ ನೀಡಿರುವ ದೇವಾದಾನಗಳನ್ನು ಹೊಯ್ಸಳರು, ವಿಜಯನಗರದ ಅರಸರು ಅಥವಾ ಇನ್ನಾವುದೇ ಅರಸಮನೆತನಗಳಿಗೆ ಹೋಲಿಸಿ ನೋಡಿದರೆ ಅಂತಿಮವಾಗಿ ಈ ದೇವಾಲಯಕ್ಕೆ ಅತಿ ಹೆಚ್ಚು ದಾನ ನೀಡಿದ ಕೀರ್ತಿ ಮೈಸೂರಿನ ಒಡೆಯರಿಗೇ ಸಲ್ಲುತ್ತದೆ. ಇದಕ್ಕೆ ಕಾರಣ ಈ ದೇವಾಲಯ ರಾಜಧಾನಿಗೆ ಸಮೀಪವಿದ್ದು ಈ ಭಾಗದ ಜನರಿಗೆ ನಂಜುಂಡೇಶ್ವರನ ಬಗೆಗೆ ಹೆಚ್ಚಿನ ನಂಬಿಕೆ ಇದ್ದುದೇ ಆಗಿದೆ.

ಮೇಲೆ ತಿಳಿಸಿರುವ ಪ್ರಕಾರ ಕ್ರಿ.ಶ. 1876ರ ನಂತರ ಈ ದೇವಾಲಯಕ್ಕೆ ಒಡೆಯರ ಮನೆತನದಿಂದ (ಹಾಗೂ ಒಟ್ಟಾರೆ ಗಮನಿಸಿದಾಗ) ದಾನ ಲಭಿಸಿಲ್ಲವೆಂದರೆ ಅದಕ್ಕೆ ಮೈಸೂರು ಬ್ರಿಟಿಷರ ನೇರ ಆಳ್ವಿಕೆಗೆ ಒಳಗಾದುದು, ಆ ಸಂದರ್ಭದಲ್ಲಿ ದೇವಾಲಯಗಳನ್ನು ಮುಜುರಾಯಿ ಇಲಾಖೆಗೆ ಸೇರಿಸಿದುದು, ಇನಾಂ ಕಮೀಷನ್ ನೇಮಕ ಇತ್ಯಾದಿ ಅಂಶಗಳು ಕಾರಣಗಳಾಗಿ ಮೇಲ್ನೋಟಕ್ಕೆ ಕಂಡು ಬರುತ್ತದೆ. ಇವೆಲ್ಲಾ

ದೇವದಾನ ತನ್ನ ಮೊದಲಿನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳಲು ಕಾರಣಗಳಾಗಿದ್ದುವೆಂಬುದರಲ್ಲಿ ಸಂಶಯವಿಲ್ಲ ಆದರ ಇದರ ಜೊತೆಗೆ ಇನ್ನೂ ಕೆಲವು ಅಂಶಗಳನ್ನು ಸೇರಿಸಬಹುದು. ಕ್ರಿ.ಶ. 1800ರಲ್ಲಿ ಸಹಾಯಕ ಸೈನ್ಯ ಪದ್ಧತಿಗೆ ಒಡೆಯರು ಸಹಿ ಹಾಕಿದ ನಂತರ ರಾಜ್ಯವಿಸ್ತರಣೆಯಂತಹ ಶಕ್ತಿ ಸಾಮಾರ್ಥ್ಯಗಳ ಪ್ರದರ್ಶನಕ್ಕೆ ಅವಕಾಶವಿಲ್ಲದಂತಾದಾಗ ದೇವಾಲಯಗಳಿಗೆ ದಾನ ನೀಡುವುದನ್ನು ರಾಜ್ಯ ಒಂದು ನೀತಿಯಾಗಿ ಬಳಸಿಕೊಳ್ಳುವ ಅಗತ್ಯ ಇರಲಿಲ್ಲ. ಆದರೂ ಅಧಿಕಾರ ಕಳೆದುಕೊಂಡಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ದೈವಭಕ್ತನೆಂದು ತಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ, ತನ್ಮೂಲಕ ಜನರ ಹಾಗೂ ಅಧಿಕಾರಿಗಳ ವಿಶ್ವಾಸ ಗಳಿಸಿಕೊಂಡು ತಾವು ಪುನಃ ಆಡಳಿತಾಧಿಕಾರ ಹಿಂದಕ್ಕೆ ಪಡೆಯಲು ಇಂತಹ ಸತ್ಕಾರ್ಯಗಳನನು ಕೈಗೊಳ್ಳಬೇಕಾದ ಅಗತ್ಯ ಅವರಿಗಿತ್ತು. ಒಡೆಯರು ಇಂತಹ ಅನೇಕ ಕೆಲಸಗಳು ಮುಂದೆ 1858ರ ನಂತರ ಮೈಸೂರಿನ ರಾಜ ಮನೆತನಕ್ಕೆ ಅಧಿಕಾರ ಹಿಂತಿರುಗಿಸಬೇಕೆಂಬ ಚರ್ಚೆ ಬ್ರಿಟನ್ನಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಉಂಟಾದಾಗ ಕೆಲವು ಆಂಗ್ಲ ಅಧಿಕಾರಿಗಳು ಇವರ ಪರವಾಗಿ ವಾದಿಸಿದರು. ಒಟ್ಟಾರೆ ಒಡೆಯರ ಕಾಲದಲ್ಲಿ ಶ್ರೀಕಂಠೇಶ್ವರ ದೇವಾಲಯ ಅವರ ಉದಾರ ಆಶ್ರಯ ಪಡೆದು ಅಭಿವೃದ್ಧಿ ಹೊಂದಿತು. (ಡಾ.ಬಿ.ವಿ.ಸುಧಾಮಣಿ)

ಲೋಹ ಶಿಲ್ಪ:

ಜ್ಞಾನ, ಅನುಭವ ಮತ್ತು ಪ್ರಯೋಗದಿಂದ ಪ್ರಾಪ್ತವಾಗುತ್ತದೆ. ಅನುಭವ ಗ್ರಹಿಕೆ ಮತ್ತು ಅನುಸರಣೆಯಿಂದ ಸಿದ್ಧವಾಗುತ್ತದೆ. ಅನುಸರಣೆಯಲ್ಲಿ ಪ್ರಯೋತಾತ್ಮಕ ಕೂಡ ಇದೆ. ನಮ್ಮ ಜನಪದ ಆಹಾರ ಮತ್ತು ಔಷಧ ಪದ್ಧತಿಗಳು ಅನುಭವದಿಂದ ಸಿದ್ಧವಾದವು ಎಂದಾಗ ಅವು ನಿರಂತರ ಉಪಕರಣಗಳು ಆಯುಧಗಳು, ಅಲಂಕಾರಿಕ ವಸ್ತುಗಳು, ವ್ಯಾಯಾಮ ಪದ್ಧತಿಗಳು, ಕುಟ್ಟಿ ಬೀಸುವ ಪದ್ಧತಿಗಳು, ಯುದ್ಧ ತಂತ್ರಗಳು, ಮಳೆ, ಭೂಮಿ ಮತ್ತು ವಾತಾವರಣಕ್ಕೆ ಸಂಬಂಧಿಸಿದ ಅರಿವು, ಸಾಗಣೆ ಸಾಧನಗಳು, ದವಸ ಧಾನ್ಯ ಸಂರಕ್ಷಕ ಪದ್ಧತಿಗಳು, ಕುಯ್ಲು ಮತ್ತು ಕತ್ತರಿಸುವ ಸಾಧನಗಳು, ಜಲ ಸಂರಕ್ಷಣೆ ಮತ್ತು ಜಲವಾಹಕ ಪದ್ಧತಿಗಳು, ಬೇಟೆಯ ವಿಧಾನಗಳು, ಲೋಹ ಪರೀಕ್ಷೆ, ಲೋಹ

ಪರಿವರ್ತನೆ ಮತ್ತು ಲೋಹ ಸಂಯೋಗ ವಿಧಾನಗಳು (ಪ್ರೊ.ಹಿ.ಚಿ.ರಾಮಚಂದ್ರೇಗೌಡ : ಜನಪದ ತಂತ್ರಜ್ಞಾನ : ಸಂಪುಟ 3, ಸಂ: ಡಾ. ಚಕ್ಕರೆ ಶಿವಶಂಕರಯ್ಯ) ನಿರಂತರ ಪ್ರಯೋಗಗಳಿಂದ ಕರಗತಗೊಂಡಂತಹವು. ಕಾಲದ ಪರಿವರ್ತನೆ ಹಂತಗಳಲ್ಲಿ ಹಲವು ಕಳೆದುಕೊಂಡು ಕೆಲವನ್ನು ಪಡೆದುಕೊಂಡು ಭೂತಕಾಲದಿಂದ ವರ್ತಮಾನಕ್ಕೆ ವರ್ತಮಾನದಿಂದ ಭವಿಷ್ಯತ್ ಕಾಲಕ್ಕೆ ಪರಂಪರೆಯ ಜಾಡನ್ನು ಜನಪದ ಸಂಸ್ಕೃತಿಯು ತನ್ನ ಕೊಡುಗೆಗಳ ಮುಖಾಂತರ ಮಹತ್ವದ ಹಾದಿಯನ್ನು ತೋರಿಸಿಕೊಟ್ಟಿದೆ.

ಲೋಹ ಮಾಧ್ಯಮದಲ್ಲಿ ಲೋಹ ಶಿಲ್ಪ : ಮೈಸೂರು ಶೈಲಿ ಮತ್ತು ಗಾಜರಕೋಟ್ ಶೈಲಿ

ಮೈಸೂರು ಲೋಹ ಎರಕದ ಮೂರ್ತಿ ಶಿಲ್ಪ ಶೈಲಿ:

ಕರ್ನಾಟಕದಲ್ಲಿ ಲೋಹ ಎರಕದ ಮೂರ್ತಿ ರಚನೆಯಲ್ಲಿ ಹಲವಾರು ಕುಟುಂಬಗಳು ವೃತ್ತಿನಿರತವಾಗಿವೆ ಅವುಗಳಲ್ಲಿ ಕೋಲಾರದ ಶಿವಾರಪಟ್ಟಣದ ಸುತ್ತ ಮುತ್ತಲಿನ ಗ್ರಾಮಗಳು, ಮೈಸೂರಿನ ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳ ಗುರುಕುಲ, ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಹಲವು ಕುಟುಂಬಗಳು. ಇವುಗಳ ಮೂಲಸ್ಥಳಗಳು ಇವೇ ಆದರೂ ವ್ಯವಹಾರಿಕ ದೃಷ್ಟಿಯಿಂದ ನಾಡಿನಾದ್ಯಾಂತ ಹರಡಿಕೊಂಡಿರುತ್ತಾರೆ.

ಹೊಯ್ಸಳ ಶೈಲಿಯ ಶಿಲ್ಪಗಳು ಮೈಸೂರು ಶೈಲಿ ಲೋಹ ಶಿಲ್ಪಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರಿರುವಂತಹುದು ವಾಸ್ತವಾಗಿದೆ. ಮೈಸೂರು ಪ್ರಾಂತ್ಯದಲ್ಲಿ ಹಳೇಬೀಡು, ಬೇಲೂರು ಶಿಲ್ಪಗಳು ಹೆಚ್ಚು ಆಕರ್ಷಣೀಯತೆಯನ್ನು ಹೊಂದಿವೆ. ಅವುಗಳನ್ನು ಜನರಿಗೆ ತಲುಪಿಸುವ ಕೆಲಸವನ್ನು ಅಂದಿನ ಶಿಲ್ಪರಚನಾಕಾರರು ಬಹಳ ಉತ್ಸುಕತೆಯಿಂದ ನಿರ್ವಹಿಸಿರುವುದು ಕಂಡುಬರುತ್ತದೆ.

ಮೈಸೂರಿಗೆ ಹಾಸನ ಮತ್ತು ಮಂಡ್ಯ ಜಿಲ್ಲೆಗಳು ಹತ್ತಿರವಿರುವ ಕಾರಣ ಸಾಕಷ್ಟು ದೇವಾಲಯಗಳು ಹೊಯ್ಸಳ ಶೈಲಿಯನ್ನು ಹೋಲುವಂತಹ ದೇವಾಲಯಗಳೇ ಹೆಚ್ಚು ನಿರ್ಮಾಣಗೊಂಡಿರುವುದು ವಾಸ್ತವಾಗಿದೆ. ಶಿಲ್ಪ ಬ್ರಹ್ಮ ಎಂದೇ ಹೆಸರುವಾಸಿಯಾದ ಮೈಸೂರಿನ ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳವರ ಪರಿಶ್ರಮವನ್ನು ಇಂದು ಲೋಹ ಶಿಲ್ಪಗಳ ಅಧ್ಯಯನಕ್ಕೆ ಕಾರಣವಾಗಿದೆ.

ಮೈಸೂರು ಶೈಲಿ ಲೋಹ ಶಿಲ್ಪಗಳನ್ನು ರಚಿಸಬೇಕಾದರೆ ಅತ್ಯಂತ ನಿಖರವಾದ ತಾಳಮಾನ ಪ್ರಮಾಣ ಬದ್ಧತೆಗಳ ಅವಶ್ಯಕತೆಯು ಇರುತ್ತದೆ. ಅದರಲ್ಲೂ ವಿಗ್ರಹಗಳನ್ನು ರಚನೆ ಮಾಡುವಾಗ ಹಲವು ಗುಣಲಕ್ಷಣಗಳನ್ನು ಕಡ್ಡಾಯವಾಗಿ ಅರಿತುಕೊಂಡಿರುವಂತಹುದು ಬಹಳ ಮುಖ್ಯ. ಪ್ರತಿಯೊಬ್ಬರು ಈ ಲೋಹ ಶಿಲ್ಪಗಳನ್ನು ತಯಾರು ಮಾಡಬೇಕಾದರೆ ಅವರದ್ದೇ ಒಂದೊಂದು ನಿಯಮ ಪ್ರಾಕರಗಳು ಇರುತ್ತವೆ. ಒಂದೊಂದು ಶಿಲ್ಪ ಮಾಡಬೇಕಾದರೆ ಒಂದೊಂದು ವಿಶೇಷ ಅನುಭವವನ್ನು ಶಿಲ್ಪಿಯಾದವನು ಪಡೆಯುತ್ತಾನೆ.

ತಾಳಮಾನಗಳು:

ಶಿಲ್ಪಶಾಸ್ತ್ರದ ಪ್ರಕಾರ ರಚಿಸಲ್ಪಡುವ ಪ್ರತಿಯೊಂದು ವಿಗ್ರಹವನ್ನು ಅಳತೆ ಮಾಡಿಕೊಳ್ಳಲೇಬೇಕಾಗುತ್ತದೆ. ಪ್ರತಿಯೊಂದು ಭಾಗವು ಮುಖದಿಂದ ಪಾದದವರೆಗೆ ಹಾಗೂ ಕಾಲುಗಳ ಅಂತರ, ಮೂಗಿನ ಎತ್ತರ, ಬಾಯಿಯ ಅಗಲ, ಹಣೆಯ ಉದ್ದಗಳು, ಕೇಶ, ಕಪೋಲ, ಶಾಸ್ತ್ರದ ಪ್ರಕಾರ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ರಚಿಸಬೇಕಾದ ಶಿಲ್ಪದ ಚಿತ್ರವನ್ನು ಹಾಳೆಯ ಮೇಲೆ ಬಿಡಿಸಿಕೊಂಡು ಅದರಲ್ಲಿ ದೇಹ ರಚನೆಯನ್ನು ಮುಖ, ಕತ್ತು, ಎದೆಯ ಸುತ್ತಳತೆ, ನಾಭಿ, ತೊಡೆ, ಮಂಡಿ, ಕಾಲು, ಕೈ, ತೋಳು, ಭುಜ ಇವುಗಳನ್ನು ಪ್ರಮಾನಬದ್ಧವಾಗಿರುವಂತೆ ಚಿತ್ರಿಸಿಕೊಳ್ಳಬೇಕು. ಆನಂತರ ಚಿತ್ರಕ್ಕೆ ತಕ್ಕ ಶಿಲ್ಪವನ್ನು ಮೇಣದಲ್ಲಿ ರಚಿಸಿಕೊಂಡು, ಕೋರ್ ಕಟ್ಟಿ ಹಂತ ಹಂತದ ಪ್ರಯೋಗಗಳ ಮೂಲಕ ಎರಕವನ್ನು ಹುಯ್ಯಲಾಗುತ್ತದೆ.

ಪಂಚಲೋಹ ಶಿಲ್ಪ:

ಪೂಜಾರ್ಹ ವಿಗ್ರಹಗಳನ್ನು ಸಾಮಾನ್ಯವಾಗಿ ಪಂಚಲೋಹಗಳಿಂದ ರಚಿಸುತ್ತಾರೆ. ಪಂಚಲೋಹ ಎಂದರೆ ಐದು ಲೋಹಗಳ ಮಿಶ್ರಣ ಚಿನ್ನ, ಬೆಳ್ಳಿ, ಕಂಚು(ಹಿತ್ತಾಳೆ), ತಾಮ್ರ, ಸೀಸ ಇವುಗಳನ್ನು ಕರಗಿಸಿ ಎರಕ ಮಾಡಿ ಪಡೆಯುವ ಶಿಲ್ಪವೇ ಪಂಚಲೋಹ ಶಿಲ್ಪ ಆಗಿರುತ್ತದೆ. ಚಿನ್ನದ ಬೆಲೆ ಮೀತಿ ಮೀರಿ ಬೆಳೆದಿರುವದರಿಂದ ಅದನ್ನು ನೆಪ ಮಾತ್ರಕ್ಕೆ ಹಾಕುತ್ತಾರೆ. ಸ್ವರ್ಣ ಶಿಲ್ಪಿ ಸಿಂಗಣ್ಣಾಚಾರ್ಯರಿ ಚಿನ್ನದ ಕೆಲಸಕ್ಕೆ ಹೆಸರುವಾಸಿಯಾಗಿದ್ದರು, ಇವರು ನಿರ್ಮಿಸಿದ ಅಂಭಾರಿ, ಚಾಮುಂಡೇಶ್ವರಿ ಮೂರ್ತಿ ವಿಶ್ವಖ್ಯಾತಿಯನ್ನು ಹೊಂದಿದೆ.

ಮೇಣದ ಮೂರ್ತಿ:

ಮೈಸೂರು ಶೈಲಿಯಲ್ಲಿಯೂ ಕೂಡ ಮೇಣದ ಮೂರ್ತಿಯನ್ನು ಈ ಮೊದಲು ಹೇಳಿದಂತೆ ಚಿತ್ರವನ್ನು . ರಚಿಸಿಕೊಂಡು ಅದರ ತಾಳಮಾನಗಳಿಗೆ ತಕ್ಕಂತೆ ಮೇಣದ ಮೂರ್ತಿಯನ್ನು ರಚಿಸಿಕೊಳ್ಳುತ್ತಾರೆ. ಮೇಣದಲ್ಲಿ ವಿಗ್ರಹವನ್ನು ತಯಾರಿಸಿಬೇಕಾದರೆ ಅದಕ್ಕೆ ಪೂರಕವಾದ ಹಲವಾರು ಉಪಕರಣಗಳನ್ನು ಸಿದ್ಧಪಡಿಸಕೊಳ್ಳಬೇಕಾಗುತ್ತದೆ. ಈ ಉಪಕರಣಗಳನ್ನು ಕಬ್ಬಿಣ ಅಥವಾ ಬೇರಾವುದೇ ಲೋಹಗಳಲ್ಲಿ ತಯಾರಿಸಿಕೊಂಡರೆ ಅವು ಮೇಣದ ಜೊತೆಗೆ ಅಂಟಿಕೊಳ್ಳುವ ಅವಕಾಶಗಳೇ ಹೆಚ್ಚು, ಆದ್ದರಿಂದ ಇಂತಹ ಉಪಕರಣಗಳನ್ನು ಬಿದಿರು, ಪೈಬರ್, ಗಟ್ಟಿ ಮರದಲ್ಲಿ ಮಾಡಿಕೊಳ್ಳಬೇಕಾಗುತ್ತದೆ. ಆಗ ಇವುಗಳ ಸಹಾಯದಿಂದ ಮೇಣದ ಶಿಲ್ಪದಲ್ಲಿನ ಅಂಕು ಡೊಂಕು, ಹೆಚ್ಚು ಕಡಿಮೆ ಇವುಗಳನ್ನು ಸರಿಪಡಿಸಿಕೊಂಡು ಉದ್ದೇಶಿತ ಶಿಲ್ಪವನ್ನು ಪೂರ್ಣಗೊಳಿಸಬೇಕಾಗುತ್ತದೆ. ಮೇಣದಲ್ಲಿ ವಿಗ್ರಹ ತಯಾರಿಸಿಕೊಂಡ ನಂತರ ಶಿಲ್ಪದಲ್ಲಿ ಇರಬೇಕಾದ ಆಯುಧಗಳನ್ನು ಪ್ರತ್ಯೇಕವಾಗಿ ರಚಿಸಿಕೊಂಡು ಅವುಗಳ ತಾಳಮಾನ ಸರಿಹೊಂದಾಣಿಕೆಗಳನ್ನು ನೋಡಬೇಕಾಗುತ್ತದೆ. ನಿಂತ ಭಂಗಿ, ಕುಳಿತ ಭಂಗಿ, ಮಲಗಿದ ಭಂಗಿ ಹೀಗೆ ಉದ್ದೇಶಿತ ಶಿಲ್ಪದ ಎಲ್ಲಾ ಭಂಗಿಗಳನ್ನು ಮೇಣದ ಹಂತದಲ್ಲಿಯೇ

ಪರೀಕ್ಷಿಸಿಕೊಂಡು ಆನಂತರ ಮೇಣದಲ್ಲಿ ಚಾನಲ್ ಹಾಗೂ ಕೋರ್‌ನ್ನು ಕಟ್ಟಿ, ಒಣಗಿಸಿ, ಎರಕಕ್ಕೆ ಸಿದ್ಧಪಡಿಸಿಕೊಳ್ಳುತ್ತಾರೆ.

ಚಾನಲ್ ಕಟ್ಟುವ ವಿಧಾನ:

ಮೇಣದ ವಿಗ್ರಹಕ್ಕೆ ಕೋರ್ ಅಂದರೆ ಹುಸಿಮಣ್ಣು ಮೆತ್ತುವ ಮೊದಲು ಚಾನೆಲ್‌ಗಳನ್ನು ಕಟ್ಟಬೇಕಾಗುತ್ತದೆ. ಮುಖ್ಯವಾಗಿ ಎರಡು ಚಾನಲ್‌ಗಳನ್ನು ಈ ಶೈಲಿಯಲ್ಲಿ ಅಳವಡಿಸುತ್ತಾರೆ ಒಂದು ಲೋಹವನ್ನು ಎರಕ ಹಾಕುವುದಕ್ಕೆ ಮತ್ತೊಂದು ಗಾಳಿಯನ್ನು ಹೊರ ಹೊಮ್ಮಿಸುವುದಕ್ಕೆ. ಇಲ್ಲಿ ಶಿಲ್ಪದ ಪೂರ್ಣಪ್ರಮಾಣವನ್ನು ಒಂದೇ ಎರಕದಲ್ಲಿ ರಚಿಸುವುದಿಲ್ಲ. ಆಯುಧಗಳು, ವಾಹನಗಳು, ಸೂಕ್ಷ್ಮ ರಚನೆಗಳು ಮುಖ್ಯ ಶಿಲ್ಪ ಎರಕವಾದ ಮೇಲೆ ಹಂತ ಹಂತವಾಗಿ ಉಳಿದ ಭಾಗಗಳನ್ನು ಪ್ರತ್ಯೇಕವಾಗಿ ಎರಕ ಹೊಯ್ದು ತೆಗೆದು ಅವುಗಳಿಗೆ ಜೋಡಿಸುತ್ತಾರೆ. ಆದರೆ ಗಾಜರಕೋಟ್ ಶೈಲಿಯಲ್ಲಿ ಎಲ್ಲಾ ಭಾಗಗಳು ಸೇರಿಕೊಂಡಂತೆ ಒಟ್ಟು ಶಿಲ್ಪವನ್ನು ಒಮ್ಮೆಲೆ ಎರಕ ಹೊಯ್ಯುತ್ತಾರೆ. ಆಯ್ದ ಶಿಲ್ಪಗಳನ್ನು ಮಾತ್ರ ವಿಂಗಡಿಸಿಕೊಂಡು ಎರಕ ಹೊಯ್ಯುತ್ತಾರೆ.

ಮೈಸೂರಿನ ಈ ಶೈಲಿಯಲ್ಲಿ ಲೋಹ ಶಿಲ್ಪ ರಚನೆಗೆ ಹೆಚ್ಚು ಸಮಯ ಬೇಕಾಗುತ್ತದೆ. ಇದರಿಂದ ಗ್ರಾಹಕರನ್ನು ಹೆಚ್ಚು ಆಕರ್ಷಿಸಲು ಕಷ್ಟಕರವಾಗಿರುವುದರಿಂದ ಈಗಿನ ಕಾಲದಲ್ಲಿ ಮೇಣದಲ್ಲಿ ರಚನೆಯಾದ ಪರಿಪೂರ್ಣಮೂರ್ತಿಯನ್ನು, ಅದರ ಬಿಡಿ ಭಾಗಗಳಿಗೆ ತಕ್ಕಂತೆ ಬಿಂಬ ಮಾಡಿಕೊಂಡು **ಬಾಕ್ಸ್‌ಮೊಲ್ಡ್** ಮೂಲಕ ಎರಕ ಹಾಕಿಕೊಳ್ಳುತ್ತಾರೆ. ಹೆಚ್ಚು ಪ್ರತಿಗಳು ಬೇಕಾದರೆ ಈ ತಂತ್ರಗಾರಿಕೆಗೆ ಮಾರು ಹೋಗಿದ್ದಾರೆ. ಅಂತಯೇ ಎರಕವಾದ ಮೇಲೆ ಗ್ಯಾಸ್ ವೆಲ್ಡಿಂಗ್ ಮಾಡಿ ಅದರ ವಿನ್ಯಾಸಗಳನ್ನು ಶಿಲ್ಪಿಸಿ, ಪಾಲಿಷ್ ಮಾಡಿ ಪೂರ್ಣಗೊಳಿಸುತ್ತಾರೆ. ಇದರಿಂದ ಕೆಲಸ ಬೇಗ ಆಗುತ್ತದೆ ಎಂಬುದನ್ನು ಶಿಲ್ಪಿಗಳು ಅರಿತಿದ್ದಾರೆ.

ಮಣ್ಣು ಕಟ್ಟುವ ವಿಧಾನ:

ಮೇಣದಲ್ಲಿ ಸಿದ್ಧವಾದ ವಿಗ್ರಹಕ್ಕೆ ಮಣ್ಣು ಮೆತ್ತುವ ವಿಧಾನವು ಬಹಲ ಮುಖ್ಯವಾದ ತಾಂತ್ರಿಕ ಅಂಶಗಳನ್ನು ಹೊಂದಿದೆ.

ಪ್ರಥಮವಾಗಿ, ಪರಿಪೂರ್ಣವಾದ ಬಿಂಬಕ್ಕೆ ಮಣ್ಣು ಮೆತ್ತಬೇಕಾದರೆ ನಾವು ದೂಳುಮಣ್ಣು, ಜೇಡಿಮಣ್ಣನ್ನು ತೆಗೆದುಕೊಂಡು ಅವುಗಳನ್ನು ಮಿಶ್ರಮಾಡಿ ಪುಡಿಪುಡಿಯಾಗುವ ತನಕ ಚೆನ್ನಾಗಿ ಕುಟ್ಟಿ ಒಂದು ಜರಡಿಯಲ್ಲಿ ಸೋಸಬೇಕು. ನಂತರ ಅವೆರಡನ್ನು ಚೆನ್ನಾಗಿ ಕಲಸಿ ನೀರಿನಿಂದ ಹದಮಾಡಿಕೊಂಡು ಮಣ್ಣನ್ನು ಮೇಣದ ಆಕೃತಿಯ ಮೇಲೆ ತಿಳಿಯಾಗಿ ನಾಣ್ಯದ ದಪ್ಪ ಇರುವ ರೀತಿಯಲ್ಲಿ ಮೆತ್ತ ಬೇಕು, ಈ ಪದರ ಒಣಗಿದ ಮೇಲೆ ಮತ್ತೆ ಅದೇ ರೀತಿಯಾಗಿ ಪುನಾರಾವರ್ತನೆಯನ್ನು ಮುಂದುವರೆಸಬೇಕು.

ಆನಂತರ, ಜೇಡಿಮಣ್ಣನ್ನು ಜೊತೆಗೆ ಗೋಣಿತಾಟನ್ನು ತೆಗೆದುಕೊಂಡು ಅದನ್ನು ಸಣ್ಣದಾಗಿ ಪುಡಿ ಮಾಡಿ ಅದರಲ್ಲಿ ಬೆರಸಿ ಮತ್ತು ನೀರಿನಿಂದ ಮಣ್ಣನ್ನು ಚೆನ್ನಾಗಿ ಹದ ಮಾಡಿಕೊಂಡು ಸುಮಾರು ಕಾಲು ಅಂಗುಲದಿಂದ ಅರ್ಧ ಅಂಗುಲದವರೆಗೆ ಮೆತ್ತುತ್ತಾ ಹೋಗಬೇಕು. ಗೋಣಿತಾಟನ್ನು ಪಡಿಯನ್ನು ಮಣ್ಣಿನಿಂದ ಕಲಸುವುದರಿಂದ ಮಣ್ಣು ಬಿರುಕು ಬಿಡುವುದನ್ನು ಬಹುತೇಕ ತಡೆಗಟ್ಟುತ್ತದೆ.

ತದನಂತರ, ಮುಂದಿನ ಹಂತದಲ್ಲಿ ಮೆತ್ತಿದ ಸ್ವಲ್ಪ ಮಣ್ಣು ಸ್ವಲ್ಪ ಒಣಗಿದ ನಂತರ ಮತ್ತಷ್ಟು ದಪ್ಪನಾಗಿ ಅಂದರೆ ಸುಮಾರು ಒಂದಂಗುಲ ದಪ್ಪಕ್ಕೆ ಮೆತ್ತಿದ ನಂತರದಲ್ಲಿ ವಿಗ್ರಹ ಒಡೆದುಕೊಳ್ಳುವ ಅಥವಾ ಮುರಿದು ಬೀಳುವ ಅವಕಾಶಗಳಿರುವುದರಿಂದ ಅದನ್ನು ತಡೆಗಟ್ಟಲು ಕಬ್ಬಿಣದ ಸರಳುಗಳನ್ನಾಗಿ ಪಟ್ಟಿಗಳನ್ನಾಗಲೀ ಸುತ್ತಲು ಸೇರಿಸಿ ತಂತಿಯಿಂದ ಕಟ್ಟಬೇಕಾಗುತ್ತದೆ. ಈ ಸಮಯಕ್ಕೆ ಮೇಣದ ಶಿಲ್ಪ ಬಹುತೇಕ ಮಣ್ಣಿನಿಂದ ಮುಚ್ಚಿದಂತೆ ಆಗಿರುತ್ತದೆ. ಈ ರೀತಿಯಾಗಿ ಮಾಡುವುದರಿಂದ ಮೇಣದ ವಿಗ್ರಹ ಯಾವ ಆಕಾರವು ಕಾಣದೇ ಮಣ್ಣು ಮುದ್ದೆಯಂತಾಗಿರುತ್ತದೆ. ಮೇಣದ ವಿಗ್ರಹದಲ್ಲಿ ಎರಡು ಕೊಳವೆ ಆಕಾರದ ರಂಧ್ರಗಳನ್ನು ಮಾಡಿರಬೇಕಾಗುತ್ತದೆ. ಇದರ ಮುಖ್ಯ ಉದ್ದೇಶ ಕೋರ್ ಕಟ್ಟಿದ ಆಕೃತಿಯನ್ನು ಬೆಂಕಿಯಲ್ಲಿ ಕಾಯಿಸಿದಾಗ ಮೇಣ ಹೊರಬರಲು ಸಾಧ್ಯವಾಗುತ್ತದೆ.

ಕೋರ್ ಕಟ್ಟಿದ ಆಕೃತಿಯನ್ನು ಒಣಗಿದ ಮೇಲೆ ಬೆಂಕಿ ಒಲೆಯಲ್ಲಿ ಕಾಯಿಸಿದಾಗ ಕೋರ್ ಒಳಗಿನ ಮೇಣ ಕರಗಿ ರಂಧ್ರದ ಮೂಲಕ ಹೊರಬರುತ್ತದೆ. ಹೀಗೆ ಮೇಣ ಪೂರ್ತಿಯಾಗಿ ಹೊರಗಡೆ ಬಂದ ಮೇಲೆ ಅದರ ಒಳಗಡೆ ವಿಗ್ರಹದ ಟೊಳ್ಳಾದ ಆಕಾರ ಉಳಿದುಕೊಳ್ಳುತ್ತದೆ. ಹೀಗೆ ಉಳಿದುಕೊಂಡ ಟೊಳ್ಳಿನ ಕೋರ್ ಉಂಡೆಗೆ ಲೋಹದ ಮಿಶ್ರಣವನ್ನು ಎರಡ ಹುಯ್ಯಬೇಕಾಗುತ್ತದೆ.

ಲೋಹ ಎರಕ ಹುಯ್ಯುವುದು:

ಕೋರ್‌ನ ಟೊಳ್ಳನಾಕಾರದ ಉಂಡೆಯನ್ನು ಭೂಮಿಯಲ್ಲಿ ಮುಕ್ಕಾಲು ಭಾಗದಷ್ಟು ಕಾಣದಂತೆ ಹೂತು ಹಾಕಬೇಕು ನಂತರ ಅದರ ರಂಧ್ರದ ಒಳಗೆ ಕುದಿಯುತ್ತಿರುವ ಲೋಹದ ದ್ರವವನ್ನು ಸುರಿಯಬೇಕಾಗುತ್ತದೆ. ಯಾಕೆಂದರೆ ಬಿಸಿ ಲೋಹದ ರಸ ಸುರಿಯುತ್ತಿದ್ದ ಹಾಗೆ ಕೋರ್ ಗಟ್ಟಿಯು ಸಿಡಿಯಬಾರದೆಂಬ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ನಂತರ ಲೋಹದ ರಸ ಒಂದು ರಂಧ್ರದ ಮೂಲಕ ಮತ್ತೊಂದು ರಂಧ್ರದ ಮೂಲಕ ಅಂದರೆ ಇನ್ನೊಂದು ಚಾನಲ್‌ನ ಮೂಲದ ಹೊರಬರುತ್ತದೆ. ಈ ಲೋಹದ ರಸ ಮತ್ತೊಂದರಿಂದ ಬರುವ ಮುಂಚೆ ಬಿಸಿಗಾಳಿಯು ಹೊರಬರುತ್ತದೆ. ಸ್ವಲ್ಪ ಸಮಯದ ನಂತರ ಕೋರ್ ಗಟ್ಟಿಯು ತಣ್ಣಗಾದ ನಂತರ ಸುತ್ತಿಗೆಯಿಂದ ಅದನ್ನು ಒಡೆದು ಒಳಗಡೆ ಎರಕ ಹೊಯ್ದ ಆಕಾರವನ್ನು ನಿಧಾನವಾಗಿ ಬಿಡಿಸಿಕೊಳ್ಳಬೇಕು. ಆಕೃತಿಯನ್ನು ಬಿಡಿಸಿಕೊಂಡ ಮೇಲೆ ಅದರಲ್ಲಿ ಅನಾವಶ್ಯಕ ಹೆಚ್ಚಿನ ಅಂಶಗಳನ್ನು ಚಾಣದಿಂದ, ಫೈಲ್‌ನಿಂದ ಉಜ್ಜಿ ತೆಗೆಯಬೇಕು.

ಎರಕದ ಮೂರ್ತಿಗೆ ಇತರೆ ಭಾಗಗಳನ್ನು ಜೋಡಿಸುವ ಕ್ರಮ:

ಎರಕದ ನಂತರ ಪೂರ್ಣಗೊಂಡು ಉಜ್ಜಿ ಸರಿಪಡಿಸಿದ ವಿಗ್ರಹಕ್ಕೆ ಹಸ್ತಗಳು, ಆಯುಧಗಳು, ಬಟ್ಟೆ ವಿನ್ಯಾಸ, ಕಿರೀಟ, ನಡುಕಟ್ಟು, ಬಳೆಗಳು, ವೈಜಯಂತಿ ಮಾಲೆ ಮುಂತಾದ ಕುಸುರಿ ಕೆಲಸವನ್ನು ಸಣ್ಣ-ಸಣ್ಣ ಚಾಣಗಳಿಂದ ಕೆತ್ತಿ ಜೋಡಿಸುತ್ತಾರೆ. ಲೋಹ ಶಿಲ್ಪಕ್ಕೆ ಕುಸುರಿ ಕೆಲಸದಿಂದ ಘನತೆ ಮತ್ತು ಆಕರ್ಷಣೆ

ಹಾಗೂ ಸೌಂಧರ್ಯ ಹೆಚ್ಚುತ್ತದೆ. ಈ ವಿನ್ಯಾಸಗಳು ಆಯಾಯಾ ವಿಗ್ರಹಗಳಿಗೆ ವಿಶೇಷವಾದ ಅಲಂಕಾರಗಳಿಂದ ಕೂಡಿರುತ್ತವೆ. ಶಿಲಾ ಶಿಲ್ಪದಲ್ಲಿ ಒಂದೇ ಶಿಲೆಯಲ್ಲಿ ಮೂರ್ತಿಯನ್ನು ಪೂರ್ಣಗೊಳಿಸಿದಂತೆ, ಲೋಹ ಶಿಲ್ಪದಲ್ಲಿ ಅದು ಸಾಧ್ಯವಾಗುವುದಿಲ್ಲ ಯಾಕೆಂದರೆ ವಿಗ್ರಹ ದೊಡ್ಡದಿದ್ದಾಗ ಅದರ ಗಾತ್ರಕ್ಕೆ ತಂಕ್ಕಂತೆ ಎಲ್ಲಾ ಭಾಗಗಳನ್ನು ಒಂದೇ ಶಿಲೆಯಲ್ಲಿ ಮಾಡಲು ಕಷ್ಟಕರವಾಗುತ್ತದೆ. ಒಳ್ಳೆಯ ರೀತಿಯಲ್ಲಿ ಮೂಡಿಬರುವ ಉದ್ದೇಶದಿಂದ ಬಿಡಿ ಬಿಡಿಯಾಗಿ ಮೇಣದಲ್ಲಿ ನಿರ್ಮಾಣ ಮಾಡಿಕೊಂಡು ಕೋರ್ ಕಟ್ಟಿ, ಎರಕದ ನಂತರ ಗ್ಯಾಸ್ ವೆಲ್ಡಿಂಗ್‌ನ ಸಹಾಯದಿಂದ ಜೋಡಿಸುತ್ತಾರೆ. ಇದರಿಂದ ಆಯಾದ ಭಾಗಗಳಿಗೆ ಪ್ರತ್ಯೇಕವಾಗಿ ಗಮನ ಹರಿಸಿ ಉತ್ತಮ ವಿಗ್ರಹ ರಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಆನಂತರ ವಿನ್ಯಾಸಗಳಿಗೆ ಒತ್ತು ನೀಡಿ ಪೂರ್ಣಗೊಳಿಸಬೇಕಾಗುತ್ತದೆ.

ಶಿಲಾಟಂಕ:

ಲೋಹದ ಎರಕದ ಮೂಲಕ ಮೂಡಿಬಂದ ವಿಗ್ರಹಗಳ ಬಿಡಿ ಭಾಗಗಳನ್ನು ಬೆಸೆಯುವುದಕ್ಕೆ ಶಿಲಾಟಂಕ ವಿಧಾನ ಎಂದು ಕರೆಯುತ್ತಾರೆ. ಶಿಲಾಟಂಕಕ್ಕೆ ಶುದ್ಧವಾದ ಅರಗನ್ನು ಕರಗಿಸಿ ಜೊತೆಗೆ ಸೀಸವನ್ನು ಪ್ರತ್ಯೇಕವಾಗಿ ಕರಗಿಸಿ ಮಿಶ್ರಣ ಮಾಡಿ ತಯಾರಿ ಮಾಡಿಕೊಳ್ಳಬೇಕು, ಇದು ಹದವಾದ ನಂತರ ಸೀಸದ ದ್ರಾವಣವನ್ನು ಅಳತೆಗೆ ತಕ್ಕಂತೆ ನೋಡಿ ಅರಗಿನ ಜೊತೆ ಕರಗಿಸಬೇಕು ಇದರ ಸಹಾಯದಿಂದ ವಿಗ್ರಹಗಳ ಬಿಡಿ ಭಾಗಗಳ ಬೆಸುಗೆಯನ್ನು ಮಾಡಬಹುದಾಗಿದೆ.

ಬೆಸುಗೆ ಮಾಡುವ ಕ್ರಮ:

ಕಂಚು ಲೋಹದ ವಿಗ್ರಹ ಮಾಡಬೇಕಾದರೆ ಅದು ಪೂರ್ಣ ಪ್ರಮಾಣದಲ್ಲಿ ರಚಿಸಲಾಗುವುದಿಲ್ಲ. ಪೂರ್ಣ ವಿಗ್ರಹ ತಯಾರಾಗಬೇಕಾದರೆ ಅದರ ಎಲ್ಲಾ ಬಿಡಿ ಭಾಗಗಳನ್ನು ಕೂಡ ಸಿದ್ಧಪಡಿಸಿಕೊಂಡು ಎರಕಕ್ಕೆ ಹುಯ್ಯುವ ಮೂಲಕ ಅವುಗಳನ್ನು ಜೋಡಿಸಿ ಬೆಸುಗೆ ಮಾಡಲಾಗುತ್ತದೆ. ಯಾವುದೇ ವಿಗ್ರಹ ಮಾಡಿದರು ಅದರ ಮುಖ, ಕಿರೀಟ, ಕತ್ತಿನಿಂದ ಮೊಣಕಾಲಿನವರೆಗೆ ಮತ್ತು ಕೈಗಳು, ಆಯುಧಗಳು ಹಾಗು

ಎದೆಯ ಆಭರಣ ಮತ್ತು ವಸ್ತ್ರಗಳು ಇವುಗಳನ್ನು ಪ್ರತ್ಯೇಕವಾಗಿ ಮೇಣದಲ್ಲಿ ತಯಾರಿಸಿ, ಎರಕ ಹುಯ್ದ ಮೇಲೆ ಮೂಲ ಶಿಲ್ಪಕ್ಕೆ ಜೋಡಿಸಿ ಬೆಸುಗೆ ಮಾಡುತ್ತಾರೆ.

ಬೆಸುಗೆ ವಿಧಾನಗಳು:

ವಿಗ್ರಹಗಳನ್ನು ಬೆಸುಗೆ ಮಾಡುವಾಗ ಎರಡು ರೀತಿಯ ಕ್ರಮಗಳನ್ನು ಅನುಸರಿಸುತ್ತಾರೆ. ಒಂದು ಕಂಚು ಮತ್ತು ಬೆಳ್ಳಿಯ ಮಿಶ್ರಣವನ್ನು ಉಪಯೋಗಿಸಿ ಮಾಡುವ ವಿಧಾನ. ಮತ್ತೊಂದು ಸತು ಮತ್ತು ಬೆಳ್ಳಿಯ ಮಿಶ್ರಣವನ್ನು ಉಪಯೋಗಿಸಿ ಮಾಡುವ ವಿಧಾನ. ಮೊದಲನೆ ಕ್ರಮವಾದ ಕಂಚು ಮತ್ತು ಬೆಳ್ಳಿಯ ಮಿಶ್ರಣದಲ್ಲಿ ಬೆಸುಗೆ ಮಾಡುವಾಗ ಕಂಚಿನ ಬಣ್ಣ ಎದ್ದು ಕಾಣುತ್ತದೆ. ಸತು ಮತು ಬೆಳ್ಳಿಯ ಮಿಶ್ರಣದಲ್ಲಿ ಬೆಸುಗೆ ಮಾಡುವಾಗ ಸತು ಆವಿಯಾಗಿ ಹೋಗುವುದರಿಂದ ಬೆಳ್ಳಿ ಮಾತ್ರ ಪ್ರಧಾನವಾಗಿ ಎದ್ದು ಕಾಣುತ್ತದೆ. ಆಗ ಬೆಸುಗೆ ಹಾಕಿದ ಭಾಗದಲ್ಲಿ ಬೆಸುಗೆಯ ಮಾಹಿತಿ ಕಾಣಸಿಗುವುದಿಲ್ಲ. ಇಲ್ಲಿ ಯಾವುದೇ ಕ್ರಮ ಅನುಸರಿಸುವಾಗ ಯಾವ ಯಾವ ಲೋಹದಲ್ಲಿ ಮಾಡಿದರೂ ಕೂಡಾ ಅದರ ಬಣ್ಣಕ್ಕೆ ಅನುಗುಣವಾಗಿ ಬೆಸುಗೆಯ ಪದಾರ್ಥಗಳನ್ನು ಕಂಚು, ಎರಡು ಭಾಗ ಬೆಳ್ಳಿ ತೆಗೆದುಕೊಂಡು ಅದನ್ನು ಕರಗಿಸಿ ಗಟ್ಟಿ ಮಾಡಿಕೊಳ್ಳುತ್ತಾರೆ. ಯಾವುದು ಹೆಚ್ಚಾದರೂ ಹೊಂದಾಣಿಕೆಯಿಂದ ಕೂಡಿ ಬರುವುದಿಲ್ಲ. ಅಂತಹ ಬೆಸುಗೆ ಕ್ರಮ ಯೋಗ್ಯವಾಗಿರುವುದಿಲ್ಲ. ಮಿಶ್ರಣವನ್ನು ಕರಗಿಸಿ ಗಟ್ಟಿಯಾಗಿ ಮಾಡಿದ ನಂತರ ಅದನ್ನು ಪಟ್ಟಿಯಂತೆ ಅಥವಾ ಸರಳನಂತೆ ಮಾಡಿಕೊಂಡು ಬೆಸೆಯುವುದರಿಂದ ಉತ್ತಮ ಫಲಿತಾಂಶ ದೊರಕುತ್ತದೆ.

ಈಗಿನ ಸಂದರ್ಭದಲ್ಲಿ ಅತ್ಯಂತ ಸುಲಭದ ವಿಧಾನಗಳಿವೆ. ಬೆಳ್ಳಿ ಮತ್ತು ಕಂಚನ್ನು ಕರಗಿಸಿದ ಗಟ್ಟಿಯನ್ನು ಕೊಟ್ಟರೆ ಯಂತ್ರದ ಮೂಲದ ಸಣ್ಣ-ಸಣ್ಣ ರೇಖೆಗಳನ್ನಾಗಿ ಮಾಡಿಕೊಂಡು ಅದನ್ನು ಸಂದರ್ಭದ ಅನುಕೂಲಕ್ಕೆ ತಕ್ಕಂತೆ ಕತ್ತರಿಸಿಕೊಂಡು ಬೆಸುಗೆ ಹಾಕಲು ಉಪಯೋಗಿಸಲು ಬಳಸುತ್ತಾರೆ.

ಪಾಲಿಶ್ ಮಾಡುವ ವಿಧಾನ:

ಕಂಚು ಮತ್ತು ತಾಮ್ರ, ಚಿನ್ನ, ಬೆಳ್ಳಿ ಯಾವುದೇ ವಿಗ್ರಹ ರಚಿಸಿದರೂ ನಯಗಾರಿಕೆ ಅತ್ಯಾವಶ್ಯಕ. ಅದನ್ನು ನಾವು ಕೈಯಿಂದಲೇ ಮಾಡಬೇಕು. ಮರಳಿನ ಕಾಗದಿಂದ ಉಜ್ಜುವುದರಿಂದ ಮಾತ್ರ ಅದು ಸಾಧ್ಯವಿಲ್ಲ. ಲೋಹದ ಮೂರ್ತಿಗೆ ಪಾಲಿಶ್ ಮಾಡಬೇಕಾದರೆ ಅರದಿಂದ ಉಜ್ಜಿ ಅದಕ್ಕೆ ನಯವನ್ನು ತರಬೇಕು. ಅರಗಳಲ್ಲಿಯೂ ನಾನಾ ನಮೂನೆಗಳುಂಟು ಒರಟು ಹಲ್ಲು ಮತ್ತು ನಯವಾದ ಹಲ್ಲು ಎಂದು ಎರಡು ಭಾಗಗಳುಂಟು ಅದರಲ್ಲಿಲ ತುಂಬಾ ಅವಶ್ಯಕವಾದಂತಹ ಚಪ್ಪಟೆ, ವೃತ್ತಾಕಾರ, ಅರೆ ವೃತ್ತಾಕಾರ ಮತ್ತು ತ್ರಿಕೋನಾಕಾರ ಹೀಗೆ ನಾನಾ ನಮೂನೆಗಳುಂಟು. ಈ ವಿವಿಧ ನಮೂನೆಗಳುಳ್ಳ ಅರಗಳನ್ನು ಸಂದರ್ಭಾನುಸಾರ ಆಯಾಯ ವಿಗ್ರಹಕ್ಕನುಸಾರವಾಗಿ ಉಪಯೋಗಿಸಬೇಕಾಗುತ್ತದೆ.

ಅದರಂತೆ ಯಾವುದೇ ಲೋಹದ ವಿಗ್ರಹವನ್ನು ಬಹಳ ಸುಂದರವಾಗಿ ಸ್ವಚ್ಛವಾಗಿರಸಬೇಕಾದರೆ ಅದರ ಮೇಲೆ ನೈಟ್ರಿಕ್ ಆಸಿಡ್‌ನ್ನು ಹಾಕಬೇಕು. ಅದು ಮೈ-ಕೈಗೆ ತಗುಲಿದರೆ ಸುಡುವ ಸಂದರ್ಭವುಂಟು ಆದ್ದರಿಂದ ಮರದ ಕಡ್ಡಿಗೊಂದು ಬಟ್ಟೆ ಸುತ್ತಿಕೊಂಡು ಅದರ ಮೂಲಕ ಹಚ್ಚಬೇಕು. ಕೆಲ ನಿಮಿಷದ ನಂತರ ಹುಣಸೇ ಹುಳಿಯನ್ನು ಅದರ ಮೇಲೆ ಹುಯ್ಯಬೇಕು ತಡಮಾಡಬಾರದು. ಆಸಿಡ್‌ನ್ನು ಗಂಟೆಗಟ್ಟಲೇ ಹಚ್ಚಿ ಬಿಟ್ಟರೆ ಅದು ಕಪ್ಪಾಗುವ ಸಾಧ್ಯತೆ ಹೆಚ್ಚು. ಅದಕ್ಕಾಗಿಯೇ ಅದರ ಮೇಲ್ಗಡೆ ಹುಣಸೇ ಹಣ್ಣಿನ ರಸವನ್ನು ಸಿದ್ಧಮಾಡಿಟ್ಟುಕೊಂಡು ವಿಗ್ರಹದ ಮೇಲೆ ಹಾಕುವುದರಿಂದ ಮೂರ್ತಿಗೆ ಹೊಳಪು ಬರಲು ಆರಂಭಿಸುತ್ತದೆ. ಕ್ರಮೇಣ ಶುದ್ಧವಾದ ನೀರಿನಿಂದ ತೊಳೆದ ನಂತರ ಅಂಟುವಾಳ ಕಾಯಿ ಕುಟ್ಟಿ ಪುಡಿ ಮಾಡಿಕೊಂಡು ವಿಗ್ರಹದ ಮೇಲೆ ಹಿತ್ತಾಳೆಯ ತಂತಿಗೊಂಚಲಿನಿಂದ ಚೆನ್ನಾಗಿ ತೊಳೆಯಬೇಕು. ಹೀಗೆ ಅನೇಕ ಬಾರಿ ಮಾಡುವುದರಿಂದ ಮೇಲಿಂದ ಮೇಲೆ ಶುದ್ಧನೀರಿನಿಂದ ತೊಳೆಯುವುದರಿಂದ ವಿಗ್ರಹಕ್ಕೆ ಹೊಳಪು ಬರುತ್ತಾ ಹೋಗುತ್ತದೆ. ಈ ರೀತಿ ಮಾಡುವುದರಿಂದ ಮೂರ್ತಿಯು ಬಹಳ ಸುಂದರವಾಗಿ ಕಾಣುತ್ತದೆ. ಇದು ಮೈಸೂರು ಶೈಲಿ ಲೋಹ ಶಿಲ್ಪಗಳ ವಿಶೇಷವಾದರೆ ಗಾಜರಕೋಟ್ ಲೋಹ ಶಿಲ್ಪಗಳಲ್ಲಿ ಹೊಳಪು ಅಗತ್ಯವಿದ್ದರೆ ಮಾತ್ರ ಮಾಡುತ್ತಾರೆ. ಆದರೆ ಈ ಲೋಹಶಿಲ್ಪಗಳು ಪುರಾತನ ಮೂರ್ತಿಗಳ

ರೂಪದಲ್ಲಿದ್ದರೆ ಗ್ರಾಹಕರು ಹೆಚ್ಚು ಇಷ್ಟಪಡುತ್ತಾರೆ. ಇದರಿಂದ ಇದರ ನಿರ್ಮಾಣವು ಅತ್ಯಂತ ಸರಳವಾಗಿ ಹಾಗೂ ಕಡಿಮೆ ಖರ್ಚಿನಲ್ಲಿ ಜನರಿಗೆ ತಲುಪುತ್ತವೆ.

ಪ್ರಭಾವಳಿ ರಚಿಸುವ ವಿಧಾನ:

ದೇವತಾ ವಿಗ್ರಹಗಳಿಗೆ ಪ್ರಭಾವಳಿಯಿಂದ ಹೆಚ್ಚು ಪ್ರಾಮುಖ್ಯತೆಯು ದೊರೆಯುತ್ತದೆ. ಮೈಸೂರು ಮತ್ತು ಗಾಜರಕೋಟ್ ಎರಡು ಶೈಲಿಗಳಲ್ಲಿಯೂ ಪ್ರಭಾವಳಿ ರಚಿಸುವ ಕ್ರಮ ಬೇರೆ ಬೇರೆಯಾಗಿರುತ್ತದೆ. ವಿಗ್ರಹಗಳನ್ನು ಶಿಲೆಯಲ್ಲಿ ನಿರ್ಮಿಸಿ ಅದರ ಹಿಂಭಾಗದಲ್ಲಿರುವಂತೆ ಪ್ರಭಾವಳಿಯನ್ನು ರಚಿಸುತ್ತಾರೆ. ಅದೇ ರೀತಿಯಾಗಿ ಲೋಹದಲ್ಲಿ ರಚಿತವಾದ ವಿಗ್ರಹಕ್ಕೆ ಪ್ರಭಾವಳಿಯನ್ನು ಪ್ರತ್ಯೇಕವಾಗಿಯೇ ನಿರ್ಮಾಣ ಮಾಡುತ್ತಾರೆ. ಮೈಸೂರು ಶೈಲಿಯಲ್ಲಿ ಪ್ರಭಾವಳಿಯು ಅಳತೆ ಪ್ರಕಾರ ಸಮತಟ್ಟಾಗಿರುವಂತೆ ರಚಿಸಿಕೊಂಡು ಅದರ ಮೇಲ್ಭಾಗದಲ್ಲಿ ಕೀರ್ತಿ ಮುಖ ಮತ್ತು ಯಾಳಿ ಮುಖವನ್ನು ಅಥವಾ ಹಂಸತರಹ ಮೇಣದಲ್ಲಿ ತಯಾರಿಸಿ, ಎರಕ ಹುಯ್ದು ನಂತರ ಅವುಗಳನ್ನು ಜೋಡಿಸಿ, ಬೆಸುಗೆ ಮಾಡಿ ಉಳಿದ ಖಾಲಿ ಜಾಗದಲ್ಲಿ ಮೊಳೆಗಳಿಂದ ಹೂಬಳ್ಳಿಗಳನ್ನು ಕೂಡಿಸುತ್ತಾರೆ. ನಂತರ ಅದು ಪೂರ್ಣಗೊಂಡಾಗ ಪಾಲಿಶ್ ಮಾಡಿ ವಿಗ್ರಹದ ಹಿಂಭಾಗದಲ್ಲಿ ಬೆಸುಗೆ ಮಾಡಿ ನಿಲ್ಲಿಸುತ್ತಾರೆ ಇಲ್ಲವೆ ಲಾಕ್ ಆಗುವ ರೀತಿಯಲ್ಲಿ ರಚಿಸುತ್ತಾರೆ.

ಆದರೆ ಗಾಜರಕೋಟ್ ಶೈಲಿಯಲ್ಲಿ ಮಾಡುವ ಕ್ರಮವೇ ಬೇರೆ ಅಂದರೆ ಪೀಠದ ಕೆಳಗಡೆ ಎರಡು ರಂಧ್ರಗಳನ್ನು ಬಿಟ್ಟು ಮೇಲ್ಗಡೆ ಅಂದರೆ ಪ್ರಭಾವಳಿಯು ಮೂರ್ತಿಗೆ ಅನುಗುಣವಾಗಿ ಮೇಲ್ಗಡೆ ಕೀರ್ತಿಮುಖ, ಅದರ ಬಾಯಿಂದ ಮೇಣದಂತಹ ಹೂಬಳ್ಳಿ, ಮುತ್ತುಗಳು ಮತ್ತು ಎಡ-ಬಲಕ್ಕೆ ಯಾಳಿ ಮುಖವಾಗಲಿ ಅಥವಾ ಹಂಸವನ್ನಾಗಲಿ ಮಾಡಿ ಅದರ ಬಾಯಿಂದ ಮೇಲ್ಗಡೆ ಇರುವ ರೀತಿಯಲ್ಲಿ ಮುಖಕ್ಕೆ ಜೋಡಿಸುತ್ತಾರೆ. ಅಂದರೆ ಎಲ್ಲವನ್ನು ಮೇಣದಲ್ಲಿ ಸಂಪೂರ್ಣವಾಗಿ ತಯಾರಿಸಿಕೊಂಡು ಎರಕಕ್ಕೆ ಸಿದ್ಧಗೊಂಡ ನಂತರ ಪ್ರಭಾವಳಿ ಇರುವಂತಹ ಎಲ್ಲಾ ಹೂಬಳ್ಳಿ ಮತ್ತು ಕೀರ್ತಿಮುಖ ಮತ್ತು ಹಂಸಗಳ ಸಂಪೂರ್ಣ ದೇಹವನ್ನು ಮಾಡುತ್ತಾರೆ. ಬೆಸುಗೆ ಮುಖಾಂತರ ಜೋಡಿಸುವ ಕ್ರಮ ಇಲ್ಲಿ ಇರುವುದಿಲ್ಲ, ಆದರೆ ಕೆಲವು ಲೋಹದ (ತಗಡು)ಹಾಳೆಗಳನ್ನು ಬಳಸಿ ಅವುಗಳ ಮೇಲೆ ಸೀಸದ ಕಡ್ಡಿಯಿಂದ

ರೇಖಾಚಿತ್ರವನ್ನು ನಕಲು ಮಾಡಿ ಉಳಿದ ಭಾಗವನ್ನು ಪ್ರಭಾವಳಿಗೆ ಅನುಗುಣವಾಗಿ ಕತ್ತರಿಸಿ ರೇಖೆ ಹಾಕಿದ ಭಾಗದಿಂದ ಚಾಣ ಅಥವಾ ಉಳಿಗಳನ್ನು ಉಪಯೋಗಿಸಿ ಉಬ್ಬುಗೆತ್ತನೆ, ಇಳಿಗೆತ್ತನೆ ಮೂಲಕ ಚಿತ್ರವನ್ನು ಆಕಾರಕ್ಕೆ ತಕ್ಕಂತೆ ಸುತ್ತಿಗೆಯಿಂದ ಮೊಳೆಗಳಿಂದ ಕಟ್ಟುತ್ತಾ ಉಬ್ಬುಗೆತ್ತನೆಯನ್ನು ಮಾಡಿ ರಚಿಸುತ್ತಾರೆ.

ಲೋಹದ ತಗಡು ಮೃದು ಮತ್ತು ಅತಿ ತೆಳುವಾದಾಗ ಕಬ್ಬಿಣದ ಸುತ್ತಿಗೆಯಿಂದ ಅಥವಾ ಮರದ ಕೋಲನ್ನು ಉಪಯೋಗಿಸಿ ನಿರ್ಧಿಷ್ಟ ಆಕಾರ, ವಿನ್ಯಾಸ ಪಡೆಯಬಹುದು. ಪ್ರಭಾವಳಿಯ ಎತ್ತರ ಮತ್ತು ಅಗಲಗಳು ಜಾಸ್ತಿ ಆಗದಂತೆ ಅದನ್ನು ೩ ಅಥವಾ ೫ ಭಾಗಗಳನ್ನಾಗಿ ಮಾಡಬಹುದು.

ಮೈಸೂರು ಮತ್ತು ಗಾಜರಕೋಟ್ ಶೈಲಿಗಳಲ್ಲಿ ತಂತ್ರಗಾರಿಕೆ ವಿಶೇಷ ಮತ್ತು ಪರಿಪೂರ್ಣ ಎರಕದ ಮೂರ್ತಿ ಮತ್ತು ತಂತ್ರಗಾರಿಕೆಯನ್ನು ಪ್ರಮುಖ್ಯತೆಯನ್ನು ಸರಳವಾಗಿ ಪಡೆದು ಲೋಹಶಿಲ್ಪಗಳು ನಿರ್ಮಾಣವಾಗುತ್ತವೆ.

ಗಾಜರಕೋಟ್ ಶೈಲಿಯಲ್ಲಿ ಪ್ರಥಮ ಹಂತದಲ್ಲಿ ಪರಿಪೂರ್ಣವಾದ ಮೂರ್ತಿ ಅಂದರೆ ವಿರಳವಾದ ಆಭರಣಗಳು ಮತ್ತು ಗೆಜ್ಜೆ, ಕರ್ಣಕುಂಡಲ, ಹೀಗೆ ಎಲ್ಲಾ ರೀತಿಯಲ್ಲಿ ದೇಹದ ಎಲ್ಲಾ ಭಾಗಗಳು ಪರಿಪೂರ್ಣವಾಗಿ ಮಾಡಿರುವುದು ಕಾಣಬಹುದು. ಅದಕ್ಕೆ ತಕ್ಕಂತಹ ಪ್ರಭಾವಳಿ ಕೂಡ ಅಲಂಕಾರಿಕ ನಕ್ಷೆಗಳನ್ನು ಸುಂದರವಾಗಿ ಮಾಡಿಕೊಂಡಿರುತ್ತಾರೆ. ಮೂರ್ತಿಯನ್ನು ಮಾಡಲು ಹೊರಟಾಗ ಯಾವುದೇ ಒಂದು ಶೈಲಿಯನ್ನು ಅನುಕರಿಸಿ ಅದರ ಹಾಗೆ ಮಾಡುವುದಿಲ್ಲ. ಹಲವರು ತಮ್ಮದೇ ಆದ ಒಂದು ಶೈಲಿ ಅಂದರೆ ಜನಪದ ಶೈಲಿಯನ್ನು ಉಪಯೋಗಿಸಿಕೊಂಡು ಮೂರ್ತಿಗಳನ್ನು ನಿರ್ಮಿಸುತ್ತಾರೆ. ಈ ರೀತಿ ಮೇಣದ ಮೂರ್ತಿ ತಯಾರಿಸಲು ಹೆಚ್ಚು ಕಾಲಾವಕಾಶಗಳನ್ನು ಪಡೆದುಕೊಂಡು ಇಂತಹ ಪರಿಪೂರ್ಣ ಮೇಣದ ಮೂರ್ತಿಕೆಲಸನ್ನು ಮಾಡಲು ಮೂರು-ನಾಲ್ಕು ಪರಿಗಳನ್ನು ಬಳಸಿಕೊಂಡಿದ್ದು ಕಾಣುತ್ತೇವೆ. ಇಂತಹ ಮೇಣದ ಮೂರ್ತಿಯನ್ನು ಆಯಾ ಎರಕದ ತಂತ್ರಗಾರಿಕೆಯ ಕ್ರಮದಲ್ಲಿ ಲೋಹವನ್ನು ಎರಕ ಹುಯ್ಯುವಾಗ ಮೊಲ್ಡಿನಿಂದ ಹೊರಬಂದ ಮೂರ್ತಿಯ ಮೇಣದ ಆಕೃತಿಯಂತೆ ಲೋಹದ ಪರಿಪೂರ್ಣ ಮೂರ್ತಿ ನಿರ್ಮಾಣಗೊಳ್ಳುತ್ತದೆ. ಈ ಹಂತದಲ್ಲಿ ಮೊಲ್ಡಿನಿಂದ ಹೊರತೆಗೆದ ಮೂರ್ತಿಗಲ್ಲಿ ಕಂಡುಬರುವ

ಚಾನಲ್, ರನ್ನರ್‌ಗಳನ್ನು ಮೂಲ ಲೋಹದ ಮೂರ್ತಿಗೆ ಧಕ್ಕೆಯಾಗದ ಹಾಗೆ ಚಾಣ, ಸುತ್ತಿಗೆ, ಗರಗಸ ವಿವಿಧ ಫೈಲ್‌ಗಳನ್ನು ಬಳಸಿ, ಬ್ರಶ್‌ಗಳಿಂದ ಉಜ್ಜಿ ಸ್ವಚ್ಛಗೊಳಿಸಿದಾಗ ಎರಕದ ಚಾಪು ಮೂರ್ತಿಯಲ್ಲಿ ಕಂಡುಬರುತ್ತದೆ. ಈ ತಂತ್ರಗಾರಿಕೆಯಲ್ಲಿ ನಿರ್ಮಾಣಗೊಂಡ ಶಿಲ್ಪಗಳಿಗೆ ಎರಕದ ಪ್ರಾಮುಖ್ಯತೆ ಹೊಂದಿದ ಶಿಲ್ಪಗಳು ಎಂದು ಹೇಳಬಹುದು. ಈ ವಿಧಾನದಲ್ಲಿ ಟೊಳ್ಳಾದ ಮೂರ್ತಿಗಳು ಕೂಡ ನಿರ್ಮಾಣಗೊಳ್ಳುತ್ತವೆ.

ಮೈಸೂರು ಶೈಲಿಯಲ್ಲಿ ರಚಿಸಬೇಕಾದ ನಿರ್ದಿಷ್ಟ ಮೂರ್ತಿ ರೂಪವನ್ನು ಸಾಮಾನ್ಯ ರೂಪದಲ್ಲಿ ಮೇಣದಲ್ಲಿ ರಚಿಸಿಕೊಂಡು, ಹೆಚ್ಚು ಸಮಯ ತೆಗೆದುಕೊಳ್ಳದೆ ಮೂಡಿಬಂದ ಮೇಣದ ಮೂರ್ತಿಯನ್ನು ಲೋಹದಿಂದ ಎರಕ ಮಾಡಿದಾಗ ಗಟ್ಟಿಯಾಕಾರದ ಸಾಧಾರಣ ಲೋಹಮೂರ್ತಿಯನ್ನು ಸಿದ್ಧಪಡಿಸಿಕೊಂಡು ಅದರ ಮೇಲೆ ಅಲಂಕಾರಿಕ ನಕ್ಷೆ, ಆಭರಣ, ವಸ್ತ್ರ, ಪ್ರಭಾವಳಿ, ಪೀಠ ಮುಂತಾದವುಗಳನ್ನು ವಿಭಿನ್ನ ವಿನ್ಯಾಸಗಳನ್ನು ಅನೇಕ ರೀತಿಯ ವಿಶೇಷ ಉಪಕರಣಗಳನ್ನು ಬಹಳಷ್ಟು ಬಳಸಿಕೊಂಡು ಸಮಯ ತೆಗೆದುಕೊಂಡು ಹೊಡೆತದ ಲೋಹ ಮೂರ್ತಿಯನ್ನು ನಿರ್ಮಿಸುತ್ತಾರೆ.

ಆದರೆ ಇಲ್ಲಿ ಕಂಡುಬರುವುದೇನೆಂದರೆ ಎರಕದ ಅಂಶಗಳು ಲೋಹದ ಮೂರ್ತಿಯ ಯಾವುದೇ ಭಾಗದಲ್ಲಿ ಕಾಣಸಿಗುವುದಿಲ್ಲ ಅಂದರೆ ಎರಕದ ಪ್ರಾಧಾನ್ಯತೆ ಪಡೆಯದೆ ಹೊಡೆತದ ಲೋಹಶಿಲ್ಪಗಳೆಂದು ಹೇಳಬಹುದು. ಈ ತಂತ್ರಗಾರಿಕೆಯಲ್ಲಿ ನಿರ್ಮಾಣಗೊಂಡ ಮೂರ್ತಿಗಳು ಗಟ್ಟಿ ಆಕಾರದಲ್ಲಿ ಇರುವುದನ್ನು ಗಮನಿಸಬಹುದಾಗಿರುತ್ತದೆ.

ಮೈಸೂರು ಮತ್ತು ಗಾಜರಕೋಟ್ ಎರಡೂ ಶೈಲಿಗಳಲ್ಲಿ ಅವುಗಳ ವಿಧಾನಗಳನ್ನು ಗಮನಿಸಿದಾಗ ತಂತ್ರಗಾರಿಕೆಯ ಆಧಾರದಲ್ಲಿ ತುಲನಾತ್ಮಕವಾಗಿ ನೋಡಿದಾಗ ಮೈಸೂರು ಶೈಲಿಯಲ್ಲಿ ಮೂಡಿಬರುವ ಶಿಲ್ಪಗಳ ಪ್ರಾಮುಖ್ಯತೆಯು ಗಾಜರಕೋಟ್ ಶೈಲಿಯ ಲೋಹಶಿಲ್ಪಗಳ ಪ್ರಾಮುಖ್ಯತೆಗೆ ವಿಭಿನ್ನವಾಗಿ ಕಂಡು ಬರುತ್ತವೆ. ಗಾಜರಕೋಟ್‌ನ ಏಕ ಎರಕದ ಮೂರ್ತಿಗಳು ಮೈಸೂರು ಶೈಲಿಯ ಜೋಡಿಕೆ ಎರಕದ ಶಿಲ್ಪಗಳಿಗಿಂತ ವಿಶೇಷ ವೆನಿಸುತ್ತವೆ. ಗಾಜರಕೋಟ್‌ನ ಟೊಳ್ಳಾಕಾರದ ಮೂರ್ತಿಗಳನ್ನು ಅದೇ ರೀತಿಯಲ್ಲಿ ಮರುಪ್ರತಿ ಮಾಡಲು ಸಾಧ್ಯವಿಲ್ಲ. ಆದರೆ ಮೈಸೂರು ಶೈಲಿಯ ಗಟ್ಟಿಯಾಕಾರದಲ್ಲಿ ಮೂಡಿಬರುವ ಲೋಹ

ಶಿಲ್ಪಗಳನ್ನು ಮರುಪ್ರತಿ ಮಾಡಲು ಸಾಧ್ಯವಿದೆ. ಮರು ಪ್ರತಿಗೆ ಈ ಶೈಲಿಯನ್ನು ಹೆಚ್ಚಾಗಿ ವ್ಯಾಪಾರದ ದೃಷ್ಟಿಯಿಂದ ಎಲ್ಲಾ ಭಾಗಗಳಲ್ಲಿಯೂ ಬಳಸುತ್ತಾರೆ.

ಸಂಪ್ರದಾಯಿಕ ಅನೇಕ ಶಿಲ್ಪಕಲಾ ರಚನಾ ವಿಧಾನಗಳಿಂದ ಹಿಡಿದು ಅದರ ಪೂಜಾ ಪದ್ಧತಿಯವರೆಗೆ ಹತ್ತು ಹಲವು ಆಚಾರ, ವಿಧಿ ವಿಧಾನಗಳು, ನಿಯಮಗಳು ವಿಶೇಷವಾದ ಮಹತ್ವವನ್ನು ಪಡೆದುಕೊಂಡಿದೆ. ಹಾಗಾಗಿ ಪಾರಂಪರಿಕ ಶಿಲ್ಪಕಲೆಯ ಆಧುನಿಕ ಶಿಲ್ಪಕಲೆಗಳಿಗಿಂತ ಭಿನ್ನ ದಾರಿಯಲ್ಲಿ ಸಾಗುತ್ತವೆ. ಶಿಲ್ಪಕಲಾ ಕ್ಷೇತ್ರದಲ್ಲಿ ವಿವಿಧ ಮಾಧ್ಯಮಗಳಿಂದ ಶಿಲ್ಪಕಲಾಕೃತಿಗಳನ್ನು ರಚನೆ ಮಾಡುವುದನ್ನು ನೋಡುತ್ತೇವೆ. ಇಲ್ಲಿ ಆಯಾ ಮಾಧ್ಯಮದಲ್ಲಿ ಶಿಲ್ಪರಚನೆಯ ವಿಧಾನಗಳು, ಬೇರೆ-ಬೇರೆ ಕ್ರಮದಲ್ಲಿಯೇ ಇರುತ್ತವೆ. ಶಿಲೆ ಮತ್ತು ಮರದಿಂದ ಮೂರ್ತಿಗಳನ್ನು ತಯಾರಿಸುವಾಗ ಶಿಲ್ಪ ಕೆತ್ತನೆಯ ಕ್ರಿಯೆ ಪ್ರಧಾನವಾದರೆ, ಲೋಹದಿಂದ ಶಿಲ್ಪ ರಚಿಸುವಾಗ ಎರಕ ಹುಯ್ಯುವುದು ಮತ್ತು ಲೋಹದ ಹಾಳೆಯಿಂದ ಉಬ್ಬೆತ್ತು, ತಗ್ಗಿತ್ತುಗಳಿಂದ ಹಿಡಿದು ಮೂರ್ತಿ ತಯಾರಿಸುವಾಗ ಹಲವಾರು ವಿಧಾನಗಳಿವೆ. ಅದೇ ರೀತಿಯಾಗಿ ಮಣ್ಣಿನಲ್ಲಿ ಶಿಲ್ಪ ರಚನೆಯಲ್ಲಿ ಮೆತ್ತುವ ಕ್ರಿಯೆ ಪ್ರಧಾನವಾದರೆ, ಗಾಜಿನ ಶಿಲ್ಪರಚನೆಯಲ್ಲಿ ಅಂಟಿಸುವ ವಿಧಾನ ಅನುಸರಿಸಲಾಗುತ್ತದೆ.

ಪಾರಾಂಪರಿಕವಾದ ಈ ಸಂಪ್ರದಾಯಿಕ ಶಿಲ್ಪಕಲೆಯ ವಿಶಿಷ್ಟ ಗುಣ-ಧರ್ಮಗಳನ್ನು ಮೈಗೂಡಿಸಿಕೊಂಡಿರುವ ಅನೇಕ ಶಿಲ್ಪಕಲಾವಿದರುಗಳ ಜೀವನ ಮತ್ತು ಕಲಾಕೃತಿಗಳ ಅಧ್ಯಯನದಿಂದ ಪರೋಕ್ಷವಾಗಿ ಸಂಸ್ಕೃತಿಯ ರಕ್ಷಣೆಯ ಜೊತೆಗೆ ಮರೆಯಾಗುತ್ತಿರುವ ಈ ಕಲಾ ಪ್ರಕಾರವನ್ನು ಮತ್ತು ಆ ಶೈಲಿಗಳನ್ನು ಅವುಗಳ ಪ್ರಭಾವ ಪರಿಣಾಮಗಳ ಜೊತೆಯಲ್ಲಿ ಉಪಯುಕ್ತತೆಗಳನ್ನು ಪ್ರಪಂಚಕ್ಕೆ ಪರಿಚಯಿಸಿದಂತಾಗುತ್ತದೆ.

ಬರಗೇರಮ್ಮ :

ಚಿತ್ರದುರ್ಗದ ಹೊಳಲ್ಕೆರೆ ರಸ್ತೆಯ ಬದಿಯಲ್ಲಿ ನಗರದ ಹೊರಭಾಗಕ್ಕೆ ಹೊಂದಿಕೊಂಡಿರುವ ಬರಗೇರಮ್ಮ ದೇವತೆಯು ಪ್ರಸಿದ್ಧವಾದ ದೇವತೆಯಾಗಿದ್ದಾಳೆ. ಮಾರ್ಚ್-ಎಪ್ರಿಲ್ ತಿಂಗಳಿನಲ್ಲಿ

ಬರಗೇರಮ್ಮ ತಂಗಿ ಅಂತರಗಟ್ಟಮ್ಮನ ಜೊತೆಯಲ್ಲಿ ವೃಹತ್ ಜಾತ್ರೆಯಾಗುತ್ತದೆ. ಬರಗೇರಮ್ಮ ಮತ್ತು ಅಂತರಗಟ್ಟಮ್ಮನು ಅಕ್ಕತಂಗಿಯರಕ್ಕಿಂತಲೂ. ಅಂತರಗಟ್ಟಮ್ಮನಿಗೆ ಮಕ್ಕಳಾಗಿದ್ದು ಅಕ್ಕ ಬರಗೇರಮ್ಮ ಬಂಜೆಯಾಗಿದ್ದಳು. ತನ್ನ ಮಕ್ಕಳನ್ನು ಅತೀ ಮುದ್ದು ಮಾಡಿ ತನ್ನತ್ತ ಸೆಳೆದುಕೊಳ್ಳುತ್ತಾಳೆ ಎಂಬ ಭಯ ಆತಂಕಗಳಿಂದ ತನ್ನ ಬಗ್ಗೆ ಅಕ್ಕನು ಅಸೂಯೆಗೊಂಡು ಮಕ್ಕಳನ್ನು ತನ್ನಿಂದ ದೂರ ಮಾಡುತ್ತಾಳೆಂದು ಭ್ರಮಿಸಿ ಅಕ್ಕನು ಮನೆಗೆ ಬಂದಾಗ ಮಕ್ಕಳನ್ನು ಬಚ್ಚಿಟ್ಟು ಮಕ್ಕಳು ಇಲ್ಲವೆಂದು ಹೇಳಿದಾಗ ಬರಗೇರಮ್ಮ ಅಪಮಾನ ಹಾಗೂ ಸಿಟ್ಟಿನಿಂದ ತಂಗಿಗೆ ಮತ್ತು ಮಕ್ಕಳಿಗೆ ಶಾಪವಿಟ್ಟಾಗ ಮಕ್ಕಳು ಬಚ್ಚಿಟ್ಟಿದ್ದ ಸ್ಥಳದಲ್ಲಿ ಕಲ್ಲಾಗಿರುವುದನ್ನು ಕಂಡು ದುಃಖದಿಂದ ಅಕ್ಕನ ಬಳಿ ಬಂದು ಗೋಳು ತೋಡಿಕೊಂಡಾಗ ಬರಗೇರಮ್ಮನು ವರ್ಷಕ್ಕೊಮ್ಮೆ ಜಾತ್ರೆಯ ಸಮಯದಲ್ಲಿ ಬೇಟೆಗೆ ಅವಕಾಶವಿತ್ತಳೆಂದೂ ಅದರಂತೆ ಇಂದಿಗೂ ಜಾತ್ರೆಯ ಸಮಯದಲ್ಲಿ ಮಾತ್ರ ಅಂತರಗಟ್ಟಮ್ಮನ ದೇವಸ್ಥಾನದ ಬಾಗಿಲು ತೆರೆಯುತ್ತದೆ. ಬರಗೇರಮ್ಮನ ದೇವಾಲಯ ನಿತ್ಯ ಪೂಜೆಯಲ್ಲಿರುತ್ತದೆ. ಈ ರೀತಿ ಹೊಂದಾಣಿಕೆಯ ಶಕ್ತ ದೇವತೆಗಳು ಬೇಲೂರು ಅಂತರಗಟ್ಟಮ್ಮ, ಕಬ್ಬಾಳುವಿನ ಕಬ್ಬಾಳಮ್ಮ, ಕೋಡಂಬಳ ಬಿಸಿಲಮ್ಮ ಇವರ ಜನಪದೀಯ ಕಥೆಗಳು ಒಂದೇ ತೆರನಾಗಿ ಇದ್ದು, ಕೆಲವು ದೇವತೆಗಳು ಶಿಷ್ಟಪರಂಪರೆಯಿಂದ ವೈದಿಕ ಸಂಪ್ರದಾಯದ ಕಡೆಗೆ ಪರಿವರ್ತನೆಗೊಂಡಿರುತ್ತವೆ.

ಬರಗೇರಮ್ಮನ ಶಿಲ್ಪವು ಮೂಲವಾಗಿ ಉದ್ಭವವಾಗಿದೆ ಎಂದು ಹೇಳುವ ಇಲ್ಲಿನ ಪೂಜಾರಿಗಳು (ನಾಯಕ ಜನಾಂಗದವರು) ಮೂಲ ಶಿಲ್ಪಕ್ಕೆ ಸಿಮೆಂಟ್ ಮತ್ತು ಗಾರೆಯಿಂದ ಯಾಳೀ ಶಿಲ್ಪವನ್ನು ಹೋಲು ಸಿಂಹ ಮುಖದ ಮುಖವಾಡವನ್ನು ಹಾಗೂ ಪ್ರಭಾವಳಿಯ ಮಾದರಿಯ ಹೂವಿನ ಹಾರ ಮತ್ತು ನವಿಲಿನ ಗರಿಗಳ ಆಕೃತಿಗಳನ್ನು ಇತ್ತೀಚೆಗೆ ರಚನೆ ಮಾಡಿಸಿದ್ದು, ಎನಾಮಲ್ ಬಣ್ಣದಿಂದ ಹಳದಿ, ಹಸಿರು, ಕೆಂಪು ಮತ್ತು ಬಿಳಿ ಬಣ್ಣವನ್ನೂ ಲೇಪಿಸಿರುತ್ತಾರೆ. ಈ ಅಲಂಕಾರಗಳ ಮಧ್ಯಭಾಗದಲ್ಲಿ ಬರಗೇರಮ್ಮನ ದ್ವಿಮಾನ ಶೈಲಿಯ ಕೆತ್ತನೆಯಂತೆ ಕಂಡುಬರುವ ಆಕೃತಿಯಿಂದ ಕೂಡಿದ ಶಿಲೆಯು ಅಸ್ಪಷ್ಟವಾಗಿ ಮುಖಭಾವವನ್ನು ಹೊಂದಿದ್ದು, ಅದಕ್ಕೆ ಕಣ್ಣಿನ ಭಾಗದಲ್ಲಿ, ಮೂಗಿನ ಭಾಗದಲ್ಲಿ ಹಾಗೂ ಕೋರೆಹಲ್ಲುಗಳ ಭಾಗದಲ್ಲಿ ಬೆಳ್ಳಿ/ಪಂಚಲೋಹದಿಂದ ತಯಾರಿಸಿರುವ ಕಣ್ಣುಗಳ, ಮೂಗು ಹಾಗೂ ಕೋರೆಹಲ್ಲುಗಳನ್ನು

ಕ್ರಮಬದ್ಧವಾಗಿ ಅಳವಡಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ಶಿಲಾಮೂರ್ತಿಗೆ ಬೆಳ್ಳಿಲೋಹದ (ಹೆಚ್ಚುವರಿ ಭಾಗಗಳನ್ನು) ಅಳವಡಿಕೆಗಳು ಹಾಗೂ ಬೆಳ್ಳಿಯ ಮೂಗಿನ ನತ್ತುಗಲು ಸ್ತ್ರೀದೇವತೆಯ ಅಲಂಕಾರಕ್ಕೆ ಒಪ್ಪುವ ಹಣೆಯ ಕುಂಕುಮ ಹಾಗೂ ಮುಖಭಾಗಕ್ಕೆ ಲೇಪಿಸಿರುವ ಅರಿಶಿಣವು ಪ್ರಖರತೆಯ ಬಣ್ಣದಿಂದ ಕೂಡಿರುತ್ತದೆ. ದೇವತೆಯ ಮುಖದ ಹಿಂಬದಿಯಲ್ಲಿ ಎಲೆಗಳ ಆಕಾರದಲ್ಲಿ ಕೂಡಿರುವ ಚಿತ್ತಾರವು ಸಿಮೆಂಟಿನಿಂದ ರಚಿಸಿದ್ದು, ಅದರ ಮೇಲೆ ರಚಿಸಿರುವ ಸಿಂಹಮುಖದ ಶಿಲ್ಪದ ಮೇಲೆ ಬೆಳ್ಳಿಯ ಛತ್ತಿಯು ಹಾಗೂ ತ್ರಿಶೂಲವು ಇದ್ದು, ಮೂಲ ಶಿಲ್ಪದಲ್ಲಿಯೇ ಮೂಡಿರುವ ಖಡ್ಗಧಾರಿ ಕಾಳೀರೂಪದ ಕುಳಿತ ಭಂಗಿಯ ಶಿಲ್ಪವು ಬಹಳ ಸೊಗಸಾಗಿ ಕೆತ್ತಲ್ಪಟ್ಟಿದ್ದು, ಭಂಡಾರದ ಲೇಪನದಿಂದ ಸೂಕ್ಷ್ಮ ವಿವರಗಳು ಮಂಕಾಗಿವೆ. ಈ ಬರಗೇರಮ್ಮ ದೇವಿಯಮೂರ್ತಿಯ ಎಡಭಾಗದಲ್ಲಿ ಆಕರ್ಷಕ ವೀರಗಲ್ಲಿನ ಮಾದರಿಯ ಶಿಲ್ಪವಿದ್ದು ಕುದುರೆ ಸವಾರಿಯಲ್ಲಿ ಖಡ್ಗಹಿಡಿದು ಲಗಾಮು ಎಳೆಯುತ್ತಿರುವ ವೀರನ ಜೊತೆಯಲ್ಲಿ ಆತನ ಸತಿಯು ಹಿಂದೆ ಕುಳಿತಿದ್ದು, ಎಡಗಾಲನ್ನು ಎತ್ತಿ ಹೂಂಕರಿಸುತ್ತಿರುವ ಕುದುರೆಯ ಭಂಗಿಯು ಲಕ್ಷಣವಾಗಿದೆ. ಕುದುರೆಯ ಹಿಂದೆ ಮುಂದುಗಡೆ ಸ್ತ್ರೀಯರು ಚಾಮರಗಳಿಂದ ಬೀಸುತ್ತಿದ್ದಾರೆ. ಸುಮಾರು ಒಂದೂವರೆ ಅಡಿ ಎತ್ತರ ಹಾಗೂ ಅಷ್ಟೇ ಅಗಲವಿರುವ ಈ ಶಿಲ್ಪವು ಚಿತ್ರದುರ್ಗದ ಪಾಳೇಗಾರರ ಬಗ್ಗೆ ಮಾಹಿತಿ ನೀಡುವ ಶಿಲ್ಪವಾಗಿದ್ದರೂ ಆಶ್ಚರ್ಯವಿಲ್ಲ. ದೇವಾಲಯದ ಪೂಜಾರಿಗಳು ಈ ಶಿಲ್ಪವನ್ನು ದೇವಿಯ ಸಹಾಯಕ ವೀರಗಾರರು ಎಂದಷ್ಟೇ ವಿವರ ನೀಡಿರುತ್ತಾರೆ.

ಅಲ್ಲಿಯ ಸ್ಪಷ್ಟ ಆಕೃತಿಯ ಹೊರತಾಗಿರುವ ಈ ದೇವಾಲಯದ ಮೂಲ ಮೂರ್ತಿಯು ಕೆತ್ತನೆಯ ಶೈಲಿಯಲ್ಲಿ ಜನಪದ ಶೈಲಿಯೇ ಪ್ರಾಮುಖ್ಯತೆಯನ್ನು ಹೊಂದಿದ್ದು, ಪುರಾತನ ಶಿಲ್ಪವಾಗಿದೆ. ಸಿಮೆಂಟ್ ಮತ್ತು ಗಾರೆಯು ಇತ್ತೀಚೆಗೆ (ಇಪ್ಪತ್ತು ವರ್ಷಗಳು) ರಚನೆಮಾಡಿದ್ದರೂ ಜನಪದವಾಗಿಯೇ ಮೂಡಿಬಂದಿದೆ. ಲೋಹ ಅಳವಡಿಕೆಗಳು ಕೂಡ ಜನಪದ ಶೈಲಿಯಲ್ಲಿಯೇ ಇದ್ದು ಮೂಗು, ಕಣ್ಣುಗಳು, ಕೋರೆಹಲ್ಲುಗಳು ಬಿಡಿ ಬಿಡಿಯಾಗಿ ರಚನೆಯಾಗಿವೆ. ಕುಳಿತ ಭಂಗಿಯ ಶಿಲೆ ಮತ್ತು ಸಿಮೆಂಟಿನ ಮಾಧ್ಯಮದ ಸಿಂಹಗಳು, ನಾಗರ ಕಲ್ಲುಗಳು ಮುಂತಾದ ಶಿಲ್ಪಗಳ ಜೊತೆಯಲ್ಲಿ ಗಾರೆಯಲ್ಲಿನ ಆದಿಶೇಷನ ಹೆಡೆಯಲ್ಲಿನ ಅಮ್ಮನ ಮೂರ್ತಿಯು ಇದೆ. ವಾರ್ಷಿಕ ಜಾತ್ರೆಯ ಅಲ್ಲದೆ ಹಬ್ಬ ಹುಣ್ಣಿಮೆ, ಅಮವಾಸ್ಯೆಗಳಲ್ಲಿ

ವಿಶೇಷ ಪೂಜೆಯು ಈ ಜನಪದ ಶಕ್ತಿದೇವತೆಗೆ ಸಲ್ಲುತ್ತದೆ. ಬಲಿಯಾಚರಣೆಯೂ ದೇವಾಲಯದ ಹೊರಭಾಗದಲ್ಲಿ ಜರುಗುತ್ತದೆ. ಇಲ್ಲಿನ ಜನಪದ ಶೈಲಿಯ ಶಿಲ್ಪಕ್ಕಿಂತ ಬರಗೇರಮ್ಮ ದೇವತೆಯ ಶಕ್ತಿ ಮತ್ತು ಪವಾಡವೇ ಪ್ರಮುಖ. ಮಕ್ಕಳಿಲ್ಲದವರು ಮಕ್ಕಳಾಗಲೀ ಎಂದು, ಮದುವೆಯಾಗದೇ ಇರುವವರು ಶೀಘ್ರ ಮದುವೆಗಾಗಿ, ಕೆಟ್ಟ ಕಾಯಿಲೆಗಳ ನಿವಾರಣೆಗಾಗಿ, ಹರಕೆ, ಪ್ರಮಾಣ ಇತ್ಯಾದಿ ಪವಾಡಗಳು ದೇವತೆಯಲ್ಲಿ ಜರುಗುತ್ತವೆ ಎಂಬ ಗಟ್ಟಿಯಾದ ನಂಬಿಕೆಯೂ ಜನರಲ್ಲಿ ಇದ್ದು, ಈ ಜನಪದ ದೇವತೆಯು ಎಲ್ಲಾ ಜಾತಿಯವರಿಗೆ ಸಲ್ಲುವಳಂತೆ ಇಲ್ಲಿನ ಜನತೆಯ ನಂಬಿಕೆಯಾಗಿದೆ.

ಬರಗೇರಮ್ಮ ದೇವಾಲಯದ ಲೋಹಹಾಳೆಯ ಶಿಲ್ಪಗಳು :

ಶಿಲಾ ಶಿಲ್ಪ ಜನಪದ ಶೈಲಿಯ ಬರಗೇರಮ್ಮ ದೇವಾಲಯದಲ್ಲಿ ಜನಪದ ವೈಶಿಷ್ಟ್ಯತೆಯ ಬಾಗಿಲುಪಟ್ಟಿ ಮತ್ತು ಕಂಬಗಳ ಪಟ್ಟಿಗಳು ಲೋಹ ಹಾಳೆ (ಹಿತ್ತಾಳೆಯ ಹಾಳೆ) ಪಂಚಲೋಹದಲ್ಲಿ ತಯಾರಾದ ಈ ಹಾಳೆಗಳಲ್ಲಿ ಜನಪದ ರೇಖಾ ವಿನ್ಯಾಸದ ಸುಂದರ ಚಿತ್ತಾರಗಳ ಆಕರ್ಷಕ ಉಬ್ಬುಶಿಲ್ಪಗಳು ಧಾರ್ಮಿಕವಾಗಿಯೂ ಮೂಡಿಬಂದಿವೆ.

ಮೂಲತಹಃ ಶಕ್ತಿದೇವತೆಯಾಗಿರುವ ಇಲ್ಲಿನ ಬರಗೇರಮ್ಮನು ಗರ್ಭಗುಡಿಯನ್ನು ಹೊಂದಿದ್ದು, ಗರ್ಭಗುಡಿಯ ಬಾಗಿಲಿನ ಮೇಲೆ ವಿನಾಯಕ ಮೂರ್ತಿಯೂ ಉಬ್ಬುಶಿಲ್ಪ ಶೈಲಿಯಲ್ಲಿ ಉಬ್ಬುಕೆತ್ತನೆಯಿಂದ ಕೆತ್ತಲ್ಪಟ್ಟಿದ್ದು ಸಂಪ್ರದಾಯಿಕ ಶೈಲಿಯಲ್ಲಿದೆ. ಅಕ್ಕ ಪಕ್ಕದಲ್ಲಿ ಅದೇ ಉಬ್ಬುಕೆತ್ತನೆಯ ಬಳ ಮತ್ತು ಹೂವಿನ ದಳಗಳು ಅಚ್ಚುಕಟ್ಟಾಗಿ ಮೂಡಿಬಂದಿವೆ. ಬರ್ಭಗುಡಿಯ ಎಡ ಮತ್ತು ಬಲಭಾಗದ ಬಾಗಿಲು ಪಟ್ಟಿಗೆಗಳಲ್ಲಿ ದ್ವಾರಪಾಲಕರಿಂದ ಕೂಡಿದ್ದು, ವಿಷ್ಣುವಿನ ಬಾಗಿಲು ಕಾಯುವ ಜಯ-ವಿಜಯರಂತೆ ಅದೇ ರೂಪಗಳಲ್ಲಿ ಜನಪದೀಯ ಶೈಲಿಯಲ್ಲಿ ಆಕಾರಗಳನ್ನು ಉಬ್ಬುಕೆತ್ತನೆ ಮಾಡಿರುತ್ತಾರೆ. ಜಯವಿಜಯರ ಶಿಲ್ಪಗಳಿಗೆ ಪಟ್ಟಿಕೆ-ಆಯತಗಳನ್ನು ಮಾಡಿದ್ದು ಇದರ ಮೇಲ್ಭಾಗದಲ್ಲಿ ನವಿಲಿನ ಚಿತ್ತಾಕರ್ಷಕವಾದ ಸರಳ ವಿಜೃಂಭಣೆಯ ಉಬ್ಬುಕೆತ್ತನೆಯನ್ನು ಮಾಡಿರುತ್ತಾರೆ. ಈ ಬಾಗಿಲಿನ ಪಟ್ಟಿಕೆಗಳನ್ನು ಶಿಲಾ ಬಾಗಿಲಿಗೆ ಅಚ್ಚುಕಟ್ಟಾಗಿ ಅಳವಡಿಸಿದ್ದಾರೆ. ಅದರಂತೆಯೇ ಇತರೆ ಎಂಟು ಕಂಬಗಳಿಗೆ ಏರುಮುಖವಾಗಿ ಗಜ(ಕಮಲಹಿಡಿದ ಆನೆ), ಬಳ್ಳಿಯ ಎಲೆ, ನವಿಲು ಹಾಗೂ ಐದು ಹೆಡೆಯ ಹಾವಿನ ಪಟ್ಟಿಕೆಗಳ

ಅಂಕಣಗಳನ್ನು ಹಂತ-ಹಂತವಾಗಿ ಮೂಡಿಸಿ ನಾಲ್ಕು ಬದಿಯಲ್ಲಿಯೂ ಪ್ರತಿಕಂಬಕ್ಕೆ ಉಬ್ಬುಕೆತ್ತನೆಯ ಪಂಚಲೋಹದ ಹಾಳೆಗಳನ್ನು (Sheet Metal) ಕಂಬಗಳ ಆಕಾರಕ್ಕೆ ತಕ್ಕುದಾಗಿ ಅಳವಡಿಸಿರುತ್ತಾರೆ.

ಈ ರೀತಿಯ ಉಬ್ಬುಕೆತ್ತನೆ ಲೋಹ ಹಾಳೆಗಳನ್ನು ಸೌಂದರ್ಯಾತ್ಮಕ ದೃಷ್ಟಿಯಿಂದ ದೇವಾಲಯದ ಆವರಣಗಳಲ್ಲಿ ರಚಿಸಿರುವುದನ್ನು ಜನಪದದಿಂದ ಶಿಷ್ಟಕ್ಕೆ ವರ್ಗಾವಣೆಗೊಂಡಿರುವ ಮತ್ತು ಪರಿವರ್ತನೆಗೊಳ್ಳುತ್ತಿರುವ ಜನಪದರ ದೇವಾಲಯಗಳಲ್ಲಿ ಕಂಡುಬರುವ ಸಾಮಾನ್ಯ ದೃಶ್ಯವಾಗಿವೆ. ಈ ಉಬ್ಬುಕೆತ್ತನೆಗಳನು ಮರ ಮಾಧ್ಯಮದ ಶಿಲ್ಪಗಳು ಹಾಗೂ ಶಿಲಾ ಮಾಧ್ಯಮದ ಶಿಲ್ಪಗಳ ಮೇಲೆ ಕವಚಗಳ ಮಾದರಿಗಳಲ್ಲಿ ಅಳವಡಿಸಿರುತ್ತಾರೆ. ಈ ರೀತಿಯ ಅಳವಡಿಕೆಗೆ ಭಕ್ತರೇ ಹರಕೆ ಹೊತ್ತು ತಮಗೆ ಸಮಾಧಾನ ಸಂತೋಷವಾದ ಸಂದರ್ಭದಲ್ಲಿ ಹರಕೆ ತೀರಿಸಿಕೊಳ್ಳುತ್ತಾರೆ.

ನೇರವಾಗಿ ಮೇಣದಲ್ಲಿ ಮೂರ್ತಿಯನ್ನು ತಯಾರಿಸಬೇಕಾದರೆ ಕಲಾವಿದರು ಒಂದು ಚಿಳಯ ಹಾಳೆಯ ಮೆಲೆ ರೇಖಾ ಚಿತ್ರವನ್ನು ರಚಿಸಿಕೊಳ್ಳುತ್ತಾರೆ. ಈ ರೇಖಾ ಚಿತ್ರವು ತಾಳಮಾನ ಮತ್ತು ಅಳತೆಗಳಲ್ಲಿ ಪ್ರಮಾಣ ಬದ್ಧತೆಗಳುಸಾರವಾಗಿ ಯಥಾರೀತಿಯಲ್ಲಿ ಲೊಹದಲ್ಲಿ ಶಿಲ್ಪವು ಮೂಡಿಬರಬೇಕಾಗಿರುತ್ತದೆ.

ಆರಂಭದಲ್ಲಿ ರೇಖಾ ಚಿತ್ರವನ್ನು ರಚಿಸಿಕೊಳ್ಳುವುದರ ಉದ್ದೇಶವು ಆ ಮೂರ್ತಿ ಶಿಲ್ಪದ ರಚನೆ ಮತ್ತು ಪ್ರಮಾಣಬದ್ಧತೆಗಳಿಗನುಗುಣವಾಗಿ ಮೂಡಿಬರಬೇಕಾಗಿರುತ್ತದೆ. ರೇಖಾ ಚಿತ್ರದ ಸಹಾಯವಿಲ್ಲದೆ ಹೋದರೆ ಮೂರ್ತಿ ಶಿಲ್ಪದ ಪ್ರಮಾಣ ಬದ್ಧತೆಗಳು ಹಾಗೂ ಆಕಾರಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಮೂರ್ತಿಗಳನ್ನು ಬೇಡಿಕೆಗೆ ಅನುಗುಣವಾಗಿ ತಯಾರು ಮಾಡುವುದರಿಂದ ಅದು ಮಾಡಿಸಲು ಬಂದವರ ಮೇಲೆ ಮೂರ್ತಿಯ ಅಳತೆಯು ಅವಲಂಬನೆಯಾಗಿರುತ್ತದೆ.

ಲೋಹ ಎರಕ ವಿಧಾನ :

ತ್ರಿಮಾನ ಕಲಾಕೃತಿಯನ್ನು ಲೋಹದಲ್ಲಿ ನಿರ್ಮಾಣ ಮಾಡುವುದಕ್ಕೆ ಮೂಲವಸ್ತುಗಳು ಮೊದಲು ಒದಗಿಸಿಕೊಳ್ಳುತ್ತಾರ್ತೆ. ಅವುಗಳೆಂದರೆ,

ಲೋಹ ಶಿಲ್ಪಕ್ಕೆ ಬಳಸುವ ವಸ್ತುಗಳು ಪರಿಕರಗಳು:

01. ಶುದ್ಧೀಕರಿಸಿದ ಜೇಡಿಮಣ್ಣು

02. ಉಸುಕು (ಮರಳು)

03. ಸಗಣಿ

04. ಬೂದಿ

05. ಇಟ್ಟಿಗೆ ಪುಡಿ

06. ಹೆಂಚಿನ ಪುಡಿ

07. ಮೇಣ (ವ್ಯಾಕ್ಸ್ ಬಿ)

08. ರಾಳ

09. ಎಣ್ಣೆ (ಕಡಲೆಕಾಯಿ ಎಣ್ಣೆ)

10. ಮೊಳೆಗಳು

11. ಸಣ್ಣತಂತಿ

12. ಕಲ್ಲಿದ್ದಲು

13. ಕಟ್ಟಿಗೆ

14. ಸೀಮೆಎಣ್ಣೆ

15. ತೆಂಗಿನಕಾಯಿ

16. ಸ್ಯಾಂಡ್ ಪೇಪರ್ (ಮರಳಿನ ಕಾಗದ)

ಸಲಕರಣೆಗಳು:

01. ಸುತ್ತಿಗೆಗಳು

02. ಹಿಡಿಕೆಗಳು

03. ಮೂಸೆಗಳು

04. ತೂಕಮಾಡುವ ತಕ್ಕಡಿ

05. ಜರಡಿ

06. ಬಟ್ಟೆ

07. ಬಾಟ್ಲಿ

08. ಏರ್ ಪಂಪ್

09. ಊದುಕೊಳವೆ

10. ರಬ್ಬಿಂಗ್ ಯಂತ್ರ

11. ಕಟಿಂಗ್ ಪ್ಲೈರ್

12. ಹಗ್ಗ

13. ಬ್ಲೋಯರ್ ಲ್ಯಾಂಪ್

14. ಆಕ್ಸ್‌ಲ್ ಬ್ಲೇಡ್ ಆಂಡ್ ಫ್ರೇಮ್

15. ಬಾಣಲಿಗೆ

ಚಾಣ: ಕಂಚು ಅಥವಾ ಇನ್ನು ಯಾವುದೇ ಮಾಧ್ಯಮ ಇರಬಹುದು ಅದನ್ನು ಕಟ್ ಮಾಡಲು ಬಳಸುವ ವಿಧಾನ ಇದು ಚಿಕ್ಕದಿಂದ ಹಿಡಿದು ದೊಡ್ಡ ಚಾಣದವರೆಗೆ ಇರುತ್ತದೆ.

ರಂಫ: ದೊಡ್ಡ-ದೊಡ್ಡ ರನ್ನರ್‌ಗಳನ್ನು ಕತ್ತರಿಸಲು ಬಳಸುವ ವಿಧಾನ

ಗೋಧಿ ಮೊಳೆ: ಕಂಚಿನ ವಿಗ್ರಹವನನು ಮಾಡಬೇಕಾದರೆ ಅಂದರೆ ಕೈಗಳಲ್ಲಿ ಬಳೆಗಳು ಮಾಡುವಾಗ ತಗ್ಗು ಜಾಗದಲ್ಲಿ ಉಪಯೋಗಿಸುತ್ತಾರೆ.

ವಾರರೇಖೆ ಮೊಳೆ: ಗೆರೆಗಳನ್ನು ಹಾಕಬೇಕಾದರೆ ಈ ಮೊಳೆ ಉಪಯೋಗಿಸಲಾಗುತ್ತದೆ.

ಪ್ಯಾರೆ ಮೊಳೆ: ಕೊರಳಲ್ಲಿ ಆಭರಣಗಳನ್ನು ಮಾಡುವಾಗ ಮಣಿ ಕಟ್ಟುವ ಮೊಳೆ

ಮಿಡ್ಡಿ ಮೊಳೆ: ದೇವತೆಗಳ ಮೈಮೇಲೆ ಬಟ್ಟೆ(ವಸ್ತ್ರ)ಮಾಡುವಾಗ ಬಳಸುವ ಮೊಳೆ

ಗುಬ್ಬೆ ಮೊಳೆ: ತಗಡಿನಲ್ಲಿ ವಿಗ್ರಹ ಮಾಡಬೇಕಾದರೆ ಹೊರಗಡೆ ಉಬ್ಬು ಎತ್ತುವ ವಿಧಾನ

ನೇರ ಮೊಳೆ: ನೇರವಾಗಿ ಗೆರೆ ಹಾಕುವಾಗ ಬಳಸುವ ವಿಧಾನ

ಹರ: ವಿಗ್ರಹ ಪಾಲಿಶ್ ಮಾಡುವಾಗ ೦ ನಂತಹ ದೊಡ್ಡ ಹರ ಬೇಕಾಗುತ್ತದೆ. ಪ್ಲಾಟ್, ಕೊಳವೆ, ಚದುರ ಹಾರ, ಆಫ್‌ರೌಂಡರ್, ಮೂರು ಏಣಿ ಹರ

ಸುತ್ತಿಗೆ: ವಿಗ್ರಹ ಮಾಡಬೇಕಾದರೆ ಸುತ್ತಿಗೆ ಅವಶ್ಯಕ ಇದರಲ್ಲಿ ಚಿಕ್ಕದು, ಮಧ್ಯಮ, ದೊಡ್ಡದು ಇರುತ್ತವೆ.

ಮೊಳೆ: ಗುಂಡು ಮೊಳೆ, ನೈಸ್ ಮೊಳೆ, ಒಳ್ಳೆಮಟ್ಟ, ದಪ್ಪ ಮೊಳೆ, ಎರಡು ಮೂತಿ ಮೊಳೆ

ಬ್ರಶ್: ಬ್ರಶ್ ಸಣ್ಣ ತಂತಿಗಳಿಂದ ಅದನ್ನು ವಿಗ್ರಹವನ್ನು ತೊಳೆಯಲು ಬಳಸುತ್ತಾರೆ

ಕೈವಾರ: ವಿಗ್ರಹ ಮಾಡಬೇಕಾದಾಗ ಕೈವಾರದ ಸಹಾಯದಿಂದ ಅಳತೆ ತೆಗೆದುಕೊಳ್ಳಲು ಉಪಯೋಗಿಸುತ್ತಾರೆ.

ಮೇಣದಲ್ಲಿ ಆಕೃತಿಯನ್ನು ತಯಾರಿಸಬೇಕಾದರೆ ಬಳಸುವ ಉಪಕರಣಗಳು:

1. ಮರದ ಉಪಕರಣಗಳು,
2. ತಾಮ್ರದ ಉಪಕರಣಗಳು,
3. ಕಂಚಿನ ಉಪಕರಣಗಳು

ಪಂಚಲೋಹ ಮಾಧ್ಯಮದ ಎರಕದ ಲೋಹಶಿಲ್ಪಕ್ಕೆ ಬೇಕಾದ ಲೋಹಗಳು:

1. ಚಿನ್ನ

2. ಬೆಳ್ಳಿ

3. ಹಿತ್ತಾಳೆ

4. ತಾಮ್ರ

5. ಸೀಸ (ಕಡಿಮೆ ಪ್ರಮಾಣ)

ಹಿತ್ತಾಳೆ ಹಾಗೂ ತಾಮ್ರ ಲೋಹಗಳು ಸಮಪ್ರಮಾಣವಾದರೆ ಸೂಕ್ತ.

ಹಂತ ಎರಡು – ಟೊಳ್ಳು ಕಲಾಕೃತಿಗಳು :

ಲೋಹ ಶಿಲ್ಪವನ್ನು ತಯಾರು ಮಾಡುವುದಕ್ಕೆ ಮೊದಲು ಆ ಶಿಲ್ಪದ ಮೂಲಕೃತಿಯನ್ನು ಜೇಡಿಮಣ್ಣು, ಪ್ಲಾಸ್ಟರ್ ಆಫ್ ಪ್ಯಾರೀಸ್ ಇವುಗಳ ಸಮಪ್ರಮಾಣದೊಂದಿಗೆ ಶಿಲ್ಪವನ್ನು ತಯಾರು ಮಾಡಿಕೊಳ್ಳಬೇಕು. ಸೂಕ್ಷ್ಮ ವಿವರಗಳನ್ನು ಬಿಡಿಸದೇ ಇದ್ದ ಪಕ್ಷದಲ್ಲಿ ಸ್ವಲ್ಪ ಹೆಚ್ಚುವರಿ ಲೋಹ ಆ ಭಾಗದಲ್ಲಿ ಕ್ರೋಢೀಕರಣವಾಗುಂತೆ ಅಂದಾಜು ಮಾಡಿ ಉಬ್ಬಿದ ಭಾಗಗಳು ಉಂಟಾಗುವಂತೆ ಮಾಡಿಕೊಳ್ಳಬೇಕು. ಕಲಾಕೃತಿಯ ಕಚ್ಚಾ ಪ್ರತಿ ಚಿತ್ರದಲ್ಲಿ ತೋರಿಸುವಂತೆ ತಯಾರುಮಾಡಿಕೊಂಡ ನಂತರ ಮರದ ಮೂಲದಿಂದ ತಯಾರುಗೊಂಡ ರಾಳ ಹಾಗೂ ಮೇಣವನ್ನು ಸಮಪ್ರಮಾಣದಲ್ಲಿ ಅಳತೆ(ತೂಕ) ಮಾಡಿ ಬಾಣಲಿಗೆ ಹಾಕಬೇಕು. ಇಲ್ಲಿ ರಾಳ ಮೇಣದ ಅಳತೆ ಬಹಳ ಮುಖ್ಯ. ಯಾಕೆಂದರೆ ಇದರ ಆಧಾರದ ಮೇಲೆ ಲೋಹವನ್ನು ಎರಕಕ್ಕೆ 1 : 10 ರಂತೆ ಅಂದರೆ 1 ಪ್ರಮಾಣ ರಾಳ-ಮೇಣವಾದರೆ 10 ಪ್ರಮಾಣ ಲೋಹ ಬೇಕಾಗುತ್ತದೆ.

ರಾಳ ಮತ್ತು ಮೇಣವನ್ನು ಬಾಣಲಿಗೆ ಹಾಕಿದ ನಂತರ ಕಟ್ಟಿಗೆಯಿಂದ (ಸೌದೆ) ಒಲೆಯನ್ನು ಆರಂಭಿಸಿ, ಸುಮಾರು ಅರ್ಧತಾಸಿನ ಸಮಪ್ರಮಾಣದ ಬೆಂಕಿತಾಪಮಾನ ಮಾಡಿದಾಗ ರಾಳ ಮತ್ತು ಮೇಣ ಮಿಶ್ರಣಗೊಳ್ಳುತ್ತದೆ. ರಾಳ ಮತ್ತು ಮೇಣದ ಮಿಶ್ರಣ ನುಣುಪಾಗಿ ಇರಲು ಕಡಲೇಕಾಯಿ ಎಣ್ಣೆಯನ್ನು ಬಳಸಬಹುದಾಗಿದೆ. ಇವುಗಳ ಮಿಶ್ರಣದಿಂದ ತಯಾರಾದ ಮೇಣ ಮಿಶ್ರಣವನ್ನು ಶಾವಿಗೆ ಕರೆಯಲು ಬಲಸುವ ರೀತಿಯ ಒತ್ತಣಿಗೆಯಿಂದ ಮೇಣವು ಬಿಡಿ ಬಿಡಿ ದಾರಗಳಂತೆ ಅಥವಾ ಪಟ್ಟಕೆಗಳಂತೆಯ ಆಕಾರಕ್ಕೆ ಬರುವಂತೆ ಒತ್ತಣಿಗೆಯಿಂದ ಒತ್ತಿಕೊಂಡು ನಂತರ ಅದನ್ನು ಸ್ವಲ್ಪ ಒಣಗಿದ ನಂತರ ಬಳಸಲು

ಅನುಕೂಲಕರವಾದ ರೀತಿಯಲ್ಲಿ ತಯಾರು ಮಾಡಿಕೊಳ್ಳುವುದು. ಕೆಲ ಸಂದರ್ಭದಲ್ಲಿ ಮೇಣ ಮಿಶ್ರಣವನ್ನು ಬಟ್ಟೆ ಅಥವಾ ಜರಡಿಯ ಸಹಾಯದಿಂದ ಶೋಧಿಸಿಕೊಳ್ಳವುವು ಸೂಕ್ತವಾಗುತ್ತದೆ. ಬಿಡಿ ಮೇಣವನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಪಟ್ಟಿಕೆಗಳಿಗೂ ಡುರಿದು ಅಗಲವಾದ ಸಮತಟ್ಟಾದ ತಗಡಿನ ಹಾಳೆಗಳ ರೂಪದಲ್ಲಿಯೂ ಶೇಖರಿಸಬಹುದು.

ಹೀಗೆ ಶೇಖರಿಸಿಕೊಂಡ ಮೇಣವನ್ನು ಕಚ್ಚಾ ಶಿಲ್ಪದ ಮೇಲೆ ಉದ್ದೇಶಿಸಿರುವ ಶಿಲ್ಪದ ಆಕೃತಿಯನ್ನು ಸ್ಪಷ್ಟವಾಗಿ ಮೂಡುವಂತೆ ರಚನೆಮಾಡುವುದು, ಮೇಣವು ಆಕಸ್ಮಿಕ ಗಟ್ಟಿಯಾಗುತ್ತಿದ್ದರೆ ಉರಿಯುವ ದೀಪದ ಸಹಾಯದಿಂದ ಕಾಯಿಸಿದಾಗ ಅದು ಮತ್ತೆ ನುಣುಪಾಗುವುದು. ಆಗ ಅಗತ್ಯಕ್ಕೆ ತಕ್ಕ ರೀತಿಯಲ್ಲಿ ಬಳಸುವುದು ಅತೀ ಸೂಕ್ಷ್ಮ ಅಥವಾ ಎರಕದಲ್ಲಿ ತೊಂದರೆಗೊಳಗಾಗುವಂತಹ ವಿವರಗಳನ್ನು ರಚನೆ ಮಾಡದೆ ಅಂತಿಮ ಹಂತದಲ್ಲಿ ಉಳಿಪೆಟ್ಟಿನಿಂದ ಪೂರ್ಣಗೊಳಿಸುವುದಕ್ಕೆ ಆಲೋಚಿಸಿಕೊಂಡೇ ಮುಂಜಾಗ್ರತೆ ವಹಿಸಬೇಕಾಗುತ್ತದೆ. ಉದಾ : ಆಭರಣಗಳ ಸೂಕ್ಷ್ಮ ರಚನೆಗಳು, ಕೈಬೆರಳುಗಳು ಮುಂತಾದೆಡೆಗಳಲ್ಲಿ ಎಚ್ಚರ ವಹಿಸುವುದು ಮುಖ್ಯ.

ಮೇಣದ ಪದರದ ಕೆಲಸ ಪೂರ್ಣಗೊಂಡ ನಂತರ ಮೇಣ ಮತ್ತು ಮೂಲ ಕಚ್ಚಾ ಕಲಾಕೃತಿಯ ಪದರಕ್ಕೆ ತಾಕುವಂತೆ ಮೊಳೆಗಳನ್ನು ಸುತ್ತಿಗೆಯಿಂದ ಹೊಡೆದು ಅಳವಡಿಸಿಕೊಳ್ಳಬೇಕು. ಆಗ ಮೇಣವನ್ನು ಹೊರತೆಗೆಯುವ ಸಂದರ್ಭದಲ್ಲಿ ಮೇಣ ಕರಗಿ ಮೇಣದ ಮೇಲೆ ಹಾಡುವ ಹೊರ ಪದರ ಮತ್ತು ಮೇಣದ ಒಳಗಿನ ಮೂಲ ಕಚ್ಚಾ ಶಿಲ್ಪದ ಪದರ ಮಧ್ಯೆ ಲೋಹ ರಸ ಶೇಖರಣೆಗೊಳ್ಳಲು ಅಂತರವನ್ನು ಕಾಯ್ದುಕೊಳ್ಳುವುದಕ್ಕೆ ಈ ಮೊಳೆಗಳು ಸಹಾಯ ಮಾಡುತ್ತದೆ. ಆದರೆ ಈ ಮೊಳೆಗಳು ಸಣ್ಣದಾಗಿರಬೇಕು. ಇಲ್ಲವೆ ತಂತಿಯ ತುಂಡುಗಳನ್ನು ಮೊಳೆಗಳಂತೆ ಬಳಸುತ್ತಾರೆ.

ಮೇಣದ ಕಲಾಕೃತಿಗೆ ಮೊಳೆಗಳನ್ನು ಅಳವಡಿಸಿದ ತರುವಾಯ ಮೇಣದ ಮೇಲೆ ಕೋರ್ ಅಂದರೆ ಸಗಣಿ, ಬೂದಿ ಅವಶ್ಯಕವಿದ್ದಲ್ಲಿ ಬಟೆಯಲ್ಲಿ ಸೋಸಿದ ಮಣ್ಣನ್ನು ಸೂಕ್ಷ್ಮ ಸ್ವಚ್ಛತೆಯ ನಂತರ ಸ್ವಲ್ಪ ನೀರಿನ ಮಿಶ್ರಣದೊಂದಿಗೆ ಮೇಣದ ಮೇಲೆ ಹದವಾಗಿ ಮೆತ್ತಬೇಕಾಗುತ್ತದೆ. ಈ ಒಂದು ಪದರವು ಇಡೀ

ಕಲಾಕೃತಿಯ ಪೂರ್ಣ ಹೊರಮೈಗೆ ಮೆತ್ತದಂತೆ ಮುಂಚೆ ಕಲಾಕೃತಿಯ ಸೂಕ್ಷ್ಮ ರಚನೆಗಳಿಲ್ಲದ ಕಡೆ ಚಾನಲ್ (ಎರಕ ಹೊಯ್ಯುವ ಕೊಳವೆಗಳು) ಗಳನ್ನು ರಚಿಸಿಕೊಳ್ಳಬೇಕು. ಎರಡು ಚಾನಲ್‌ಗಳನ್ನು ಒಂದು ಒಳಹರಿವಿಗೆ ಮತ್ತೊಂದು ಹೊರಹರಿವಿಗೆ ತಕ್ಕಂತೆ ರಚನೆಮಾಡಿರಬೇಕು. ಆ ಚಾನೆಲ್‌ಗಳನ್ನು ಮೇಣದ ಮುಖಾಂತರ ಮಾಡಿ ನಂತರ ಕೋರ್‌ನ ಮೊದಲ ಪದರ ಮೆತ್ತಬೇಕಾಗುತ್ತದೆ. ಇದೇ ರೀತಿಯ ಕೋರ್‌ನ ಮಿಶ್ರಣವನ್ನು ಮೊದಲ ಪದರವು ನೆರಳಿನಲ್ಲಿ ಒಣಗಿದ ನಂತರ ಎರಡನೇ ಪದರವನ್ನು ಮೆತ್ತಬೇಕಾಗುತ್ತದೆ. ಎರಡನೇ ಪದರವು ಒಣಗಿದ ನಂತರ ಮೂರನೆಯ ಪದರವನ್ನು ಜೇಡಿಮಣ್ಣು, ಪ್ಲಾಸ್ಟರ್, ಹುತ್ತದಮಣ್ಣು ಅಥವಾ ಸೋಸಿದ ಹೆಂಚಿನ ಪುಡಿಯು ಅಥವಾ ಇಟ್ಟಿಗೆ ಪುಡಿಯನ್ನುಸಮಪ್ರಮಾಣದಲ್ಲಿ ಬೆರೆಸಿ ಕಡಿಮೆ ನೀರನ್ನು ಬಳಸಿ ಮೂರನೆಯ ಪದರವನ್ನು ಮೆತ್ತುತ್ತಾರೆ. ಮೂರನೆಯ ಪದರ ಒಣಗಿದ ನಂತರ ನಾಲ್ಕನೆಯ ಪದರವನ್ನು ಅದೇ ರೀತಿಯಾಗಿ ಹಾಕಿ ಒಣಗಲು ಬಿಟ್ಟು ನಂತರ ಕೋರ್ ಹೊರಮೈಮೇಲೆ ತಂತಿಯನ್ನು ಸುತ್ತುವರೆದಂತೆ ಬಿಗಿದು ಕಲಾಕೃತಿಯ ಕೋರ್‌ನ್ನು ಚೆನ್ನಾಗಿ ಬಿಸಿಲಲ್ಲಿ ಸುಮಾರು 4-5 ದಿನಗಳ ಕಾಲ ಒಣಗಿಸಿದ ನಂತರ (ಕೆಲ ಸಂದರ್ಭಗಳಲ್ಲಿ 10-15 ದಿನಗಳ ಓಣಗಲು ಬೇಕಾಗುತ್ತದೆ.) ಜೋಪಾನವಾಗಿ ಅದನ್ನು 'ಬಿಸ್ಕೆಟಿಂಗ್' ಅಂದರೆ ಮೇಣ ಹೊರ ಹಾಕುವಂತೆ ಮಾಡಲು ಹೆಚ್ಚಿನ ತಾಪ ಬರುವಂತೆ ಮಾಡಿ ಉರುವಲು ಒಲೆಯ ಮೇಲೆ ಕಬ್ಬಿಣದ ಸರಳುಗಳನ್ನು ಜೋಡಿಸಿ ಅದರ ಮೇಲೆ ಕಲಾಕೃತಿಯ ಕೋರ್ ಉಂಡೆಯನ್ನು ಇರಿಸಿ ಸುತ್ತಲೂ ಬೆಂಕಿಯನ್ನು ಹಾಯಿಸಿದಾಗ, ಮೊದಲೇ ರಚಿಸಿದ್ದ ಕೊಳವೆಗಳಿಂದ ಮೇಣವು ಹೊರಬರುತ್ತದೆ ಮತ್ತು ಆವಿಯಾಗಿ ಹೋಗುತ್ತದೆ. ಆಗ ಮೂಲ ಕೋರ್ ಮತ್ತು ಮೇಲ್ಪದರದ ಕೋರ್‌ನ ಮಧ್ಯದಲ್ಲಿನ ಮೇಣವು ಕರಗಿ ಮೇಣದ ಸ್ಥಳವು ಲೋಹದ ರಸ ಅವಕಾಶ ಪಡೆಯಲು ಅಂತರ ಉಳಿದುಕೊಳ್ಳುತ್ತದೆ.

ಹೀಗೆ ಬಿಸಿಯಾಗಿ ಮೇಣ ರಹಿತ ಕೋರ್ ಉಂಡೆಗೆ ಅಳವಡಿಸಿ ಚಾನೆಲ್‌ಗಳನ್ನು ಸರಿಪಡಿಸಿಕೊಂಡು ಮಣ್ಣಿನ ಪ್ರದೇಶದಲ್ಲಿ ಕಾಲು ಭಾಗ ಹೂತುಹಾಕಿ ಲೋಹ ಸುರಿದಾಗ ಸಿಡಿಯದೇ ಅಥವಾ ಅಲುಗಾಡದೆ ಇರುವ ಹಾಗೆ ಭದ್ರವಾಗಿರಬೇಕು.

ಈ ಪ್ರಕ್ರಿಯೆಗಳು ಆರಂಭಗೊಳ್ಳುತ್ತಿದ್ದಂತೆ ಲೋಹಗಳ ಮಿಶ್ರಣ ಪಂಚಲೋಹಗಳನ್ನು, ಹಿತ್ತಾಳೆ, ತಾಮ್ರ, ತವರ, ಬೆಳ್ಳಿ, ಚಿನ್ನದ ಲೋಹಗಳನ್ನು ಪಂಚಲೋಹ ತಯಾರಿಕೆ ಮಾತ್ರ (ಇಲ್ಲಿ ಬೆಳ್ಳಿ, ಚಿನ್ನ, ಹೆಸರಿಗಷ್ಟೇ ಅತೀ ಸ್ವಲ್ಪ ಬೆರಸುತ್ತಾರೆ. ತವರ 5% ಆಗಿರುತ್ತದೆ. ಹಿತ್ತಾಳೆ, ತಾಮ್ರ 60%-40% ಪ್ರಮಾಣದಲ್ಲಿದ್ದರೆ ಒಳಿತು) ಬಳಸುತ್ತಾರೆ. ಇಲ್ಲವಾದರೆ ತಾಮ್ರ, ಹಿತ್ತಾಳೆ, ಸೀಸವನ್ನು ಲೋಹದ ಶಿಲ್ಪಕ್ಕೆ ಬಳಸುತ್ತಾರೆ. ಇವುಗಳ ಮಿಶ್ರಣವನನ್ನು ಮೇಣದ 1 : 10 ಪ್ರಮಾಣಕ್ಕೆ ತಕ್ಕಂತೆ ದೊಡ್ಡ ಮೂಸೆಯಲ್ಲಿ ಕಲ್ಲಿದ್ದಲು ಒಲೆಯಿಂದ ಕಾಯಿಸಿ, ನಂತರ ಸಣ್ಣ ಮೂಸೆಗಳಿಂದ ಹಿಡಿಕೆಯ ಸಹಾಯದೊಂದಿಗೆ ಮೇಣ ಹೊರಹಾಕಿರುವ ಕೋರ್ ಉಂಡೆಗಳಿಗೆ ಮಾಡಿರುವ ಚಾನೆಲ್‌ಗಳಿಗೆ ಜಾಗರೂಕತೆಯಿಂದ ಸುರಿದಾಗ ಒಂದರಿಂದ ಒಳಹೋದ ಲೋಹ ರಸ ಮತ್ತೊಂದು ಚಾನೆಲ್‌ನಲ್ಲಿ ಹೊರಬರುತ್ತದೆ. ಆಗ ಲೋಹದ ರಸ ಕೋರ್‌ಗಳ ಮಧ್ಯೆ ಉಂಟಾಗಿದ್ದ ಸ್ಥಳಾವಕಾಶವನ್ನು ತುಂಬಿ ಹೊರಬಂದಿರುತ್ತದೆ ಎಂಬುದನ್ನು ತಿಳಿಯುತ್ತಾರೆ.

ಕೋರ್ ಉಂಡೆ ಒಡೆಯುವುದು:

ಎರಕ ಹೋಯ್ದ ನಂತರ ಕೋರ್ ಉಂಡೆಗಳು ತಣ್ಣಗಾಗುವವರೆಗೆ ಕಾಯ್ದುಯ ನಂತರ ಕೋರ್‌ಗೆ ಬಿಗಿದಿದ್ದ ತಂತಿಯನ್ನು ತೆಗೆದು ಕೋರ್‌ನ್ನು ಬಿಡಿಸಿದಾಗ ಲೋಹ ಶಿಲ್ಪವು ಅನಾವರಣಗೊಳ್ಳುತ್ತದೆ.

ಅನಾವರಣಗೊಂಡ ಲೋಹಶಿಲ್ಪದ ಮೇಲ್ಭಾಗದಲ್ಲಿ ಉಳಿಯುವ ಮೊಳೆಗಳನ್ನು ಉಳಿಗಳ ಸಹಾಯದಿಂದ ಸ್ವಚ್ಛಗೊಳಿಸಿ ನಂತರ ಅದರ ಮೇಲ್ಮೈಯನ್ನು ಸ್ಯಾಂಡ್ ಪೇಪರ್/ ಮರಳುಕಾಗದದಿಂದ ಬ್ಲಫ್ ಯಂತ್ರದಿಂದ ಶುಚಿಗೊಳಿಸಿ ಸೂಕ್ಷ್ಮ ವಿವರಗಳನ್ನು ಹಾಗೂ ಹೆಚ್ಚುವರಿ ಲೋಹದ ಭಾಗಗಳನ್ನು ತೆಗೆಯಲು ಮರದ ಹಲಗೆಯ ಮೇಲೆ ಅರಗನ್ನು ಹಾಕಿ ಅದರ ಮೇಲೆ ಮಾಡಿ ಉಳಿಯಿಂದ ಅವಶ್ಯಕ ಭಾಗಗಳನ್ನು ಅಳವಡಿಸುತ್ತಾರೆ. ಅನಾವಶ್ಯಕ ಭಾಗಗಳನ್ನು ಹೊರತೆಗೆಯುತ್ತಾರೆ.

ಹೀಗೆ ಹಂತಹಂತಗಳಲ್ಲಿ ರಚನೆಯಾದ ಲೋಹಶಿಲ್ಪವು ಮೂಲ ಶಲ್ಪಕ್ಕೆ ಅಥವಾ ಉದ್ದೇಶಿತ ಶಿಲ್ಪಕ್ಕೆ ತಲುಪಬೇಕಾದರೆ ಇಲ್ಲಿ ಶಿಲ್ಪರಚನೆಯ ಮಹತ್ವದಷ್ಟೇ ಅಥವಾ ಅದಕ್ಕೂ ಹೆಚ್ಚು ಎರಕ ತಂತ್ರಗಾರಿಕೆ ಅವಶ್ಯಕ. ಈ ತಂತ್ರಗಾರಿಕೆಯು ಜನಪದರಲ್ಲಿ ಪರಂಪರಾಗನುಗತವಾಗಿ ಬಂದಿದ್ದರೂ ಇದರಿಂದ ಇವರ

ಮೂಲ ಉದ್ಯೋಗ ದೂರವಾಗಿಯೇ ಇರುತ್ತದೆ. ಜನಪದ ಶಿಲ್ಪಕಾರರು ಅವಶ್ಯಕತೆ ಇದ್ದಾಗ ಮಾತ್ರ ಈ ತಂತ್ರಗಾರಿಕೆಯನ್ನು ಮಾಡುತ್ತಾರೆ. ಆದರೆ ಇತ್ತೀಚೆಗೆ ಈ ತಂತ್ರಗಾರಿಕೆಯು ತರಬೇತಿ ಪಡೆದ ಎಲ್ಲರೂ ಮಾಡುವುದನ್ನು ಕಾಣುತ್ತೇವೆ.

ಈ ಲೋಹ ಎರಕ ತಯಾರಿಕಾ ಮಾದರಿ ಒಂದಾದರೆ ಇನ್ನೊಂದು **ಲಾಸ್ಟ್ ವ್ಯಾಕ್ಸ್ ಪ್ರೊಸೆಸ್** ಅಂದರೆ (ಸಾಲಿಡ್ ಮೆಥೆಡ್) ಪೂರ್ಣಲೋಹಶಿಲ್ಪ. ಇದರಲ್ಲಿ ಟೊಳ್ಳು ಇರುವುದಿಲ್ಲ. ಈ ಮಾದರಿಯ ಲೋಹ ಎರಕದ ಸಂದರ್ಭದಲ್ಲಿ ಮೂಲ ಕಲಾಕೃತಿಯನ್ನು ಪೂರ್ಣವಾಗಿ ಮೇಣ ಮತ್ತು ರಾಳ ಮಿಶ್ರಣದಲ್ಲಿಯೇ ರಚನೆಮಾಡಿಕೊಂಡು ಕೋರ್ ಕಟ್ಟುವಾಗ ಮೊಳೆಗಳನ್ನು ಒಡೆಯದೆಯೆ ಯೊದಲ ಪದರ ಎರಡನೆಯ ಪದರ, ಮೂರನೆಯ ಪದರ, ನಾಲ್ಕನೆಯ ಪದರಗಳನ್ನು ಹಂತಹಂತವಾಗಿ ಮೊದಲಿನ ಮಾದರಿಯಂತೆಯೆ ರಚನೆ ಮಾಡಿ ತಂತಿಯನ್ನು ಬಿಗಿದು, ಎರಡು ಚಾನೆಲ್‌ಗಳನ್ನು ಮಾಡಿ, ಮೇಣ ಹೊರಹಾಕಿದ ನಂತರ ಒಂದು ಚಾನೆಲ್ಲನ್ನು ಮುಚ್ಚಿ, ಒಂದನ್ನು ಉಳಿಸಿಕೊಂಡು ಮರಳು ತುಂಬಿದ ಪೆಟ್ಟಿಗೆಯಲ್ಲಿ ಮರಳಿನ ಮಧ್ಯದಲ್ಲಿ ಕೋರ್ ಉಂಡೆ ಇರಿಸಿ ಎರಕವನ್ನು ಮಾಡುತ್ತಾರೆ. ಉಳಿದಂತೆ ಟೊಳ್ಳು ಎರಕದ ಮಾದರಿಯಲ್ಲೇ ಮುಂದುವರೆಸಿ ಶಿಲ್ಪವನ್ನು ರಚಿಸುತ್ತಾರೆ. ನೈಟ್ರಿಕ್ ಆಮ್ಲವನ್ನು ಬಳಸಿ ಶಿಲ್ಪವನ್ನು ಬ್ರಷ್ ಮಾಡಿ(ಮೆಟಲ್ ಬ್ರಷ್) ಸ್ವಚ್ಛಗೊಳಿಸಿ ಸೂಕ್ಷ್ಮ ಆಭರಣ ಕೆತ್ತನೆಯನ್ನು ಮಾಡುತ್ತಾರೆ. ಅಂಗಾಂಗಗಳು ಶಿಲ್ಪದಿಂದ ಹೊರ ಚಾಚಿದ್ದರೆ ಅವುಗಳನ್ನು ಪ್ರತ್ಯೇಕವಾಗಿ ಎರಕ ಹೋಯ್ದು ನಂತರ ವೆಲ್ಡಿಂಗ್ ಮುಖಾಂತರ ಜೋಡಣೆ ಮಾಡುತ್ತಾರೆ. ಜನಪದ ಶಿಲ್ಪಗಳು ಕಿರಿವಾಗಿರುವುದರಿಂದ ವೆಲ್ಡಿಂಗ್ ಪ್ರಮೇಯ ಕಡಿಮೆ.

ಲೋಹ ಕಾಯಿಸುವಾಗ ಅಲ್ಯುಮಿನಿಯಂ ಬಳಸಿದರೆ ಲೋಹವು ಸ್ವಚ್ಛವಾಗಿರುತ್ತದೆ. ಅಥವಾ ಉಪ್ಪನ್ನು ಬೆರೆಸಿದರೆ ಲೋಹದಲ್ಲಿ ಕಲ್ಮಶವು ಕಾಯಿಸುವಾಗ ಹೊರ ಬರುತ್ತದೆ.

ಈ ಎರಡೂ ವಿಧಾನಗಳನ್ನು ಹೊರತುಪಡಿಸಿದ ಮತ್ತೊಂದು ವಿಧಾನ ಡೋಕ್ರಾ ಮಾದರಿ.

ಡೋಕ್ರಾ ಲೋಹದ ಎರಕ :

ಡೋಕ್ರಾ ಮಾದರಿಯು ಉತ್ತರ ಭಾರತದಲ್ಲಿ ಜನಪದರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕಾಲಾನಂತರದಲ್ಲಿ ವಲಸೆ ಬದುಕಿನ ಪ್ರಭಾವದಿಂದ ಅಲೆಮಾರಿಗಳ ಮುಖಾಂತರ ದಕ್ಷಿಣ ಕರ್ನಾಟಕದ ಹರಪನಹಳ್ಳಿ, ದಾವಣಗೆರೆ, ಬೆಂಗಳೂರು, ಕರ್ನಾಟಕದ ಆಂದ್ರ ಗಡಿಭಾಗಗಳಲ್ಲಿಯೂ ಕಾಣಬಹುದಾಗಿದೆ.

ಈ ಡೋಕ್ರಾ ಮಾದರಿಯಲ್ಲಿಯೂ ಲೋಹದ ಬೆಂಕಿ ಪ್ರಮಾಣ ಅಷ್ಟೇ ಇದ್ದರೂ ಇಲ್ಲಿ ಚಿನ್ನ, ಬೆಳ್ಳಿಯನ್ನು ಬಳಸುವುದಿಲ್ಲ. ಸೂಕ್ಷ್ಮ ಕೆತ್ತನೆಯ ಕಡೆ ರಸ್ತೆಗೆ ಬಳಸುವ ಟಾರ್‌ನ್ನು ಬಳಸಿ ಡೋಕ್ರಾ ಶೈಲಿಯಲ್ಲಿ ಕಡಿಮೆ ಗಾತ್ರದ ಶಿಲ್ಪಗಳನ್ನು ತಯಾರಿಸುವುದರಿಂದ ಇವುಗಳ ಶೈಲಿಗಳು ಬಹಳ ವಿಶಿಷ್ಟವಾಗಿರುತ್ತವೆ. ನೈಜ ಜನಪದ ಲೋಹ ಶೈಲಿಯು ಈ ಮಾದರಿಯಿಂದಲೇ ಆರಂಭಗೊಂಡಿರುತ್ತದೆ.

ದ್ವಿಮಾನ ಶೈಲಿಯ ಏಕಲೋಹ ಎರಕ ಅಥವಾ (ಸ್ಯಾಂಡ್ ಕಾಸ್ಟಿಂಗ್) ಮರಳು ಲೋಹ ಎರಕ ಮಾದರಿ:

ಲೋಹವನ್ನು ನೇರವಾಗಿ ಮೂಸೆಗಳಲ್ಲಿ ಕರಗಿಸಿ, ಉದ್ದೇಶಿತ ಶಿಲ್ಪದ ತಯಾರಿಕೆಗೆ ಅದೇ ರೀತಿಯ ಶಿಲ್ಪದ ಮಾದರಿ ಲೋಹದಲ್ಲಿ ತಯಾರಿಸಿಕೊಂಡು ಅದರ ಪ್ರತಿಮಾಡುವಿಕೆಯಲ್ಲಿ ಅದರ ಅಚ್ಚನ್ನು ಬಳಸಿ ಮರಳಿನ ಮೇಲೆ ಮುದ್ರೆ ಮಾಡಿ ಲೋಹದ ರಸವನ್ನು ಜಾಣ್ಮೆಯಿಂದ ಸುರಿದು ದ್ವಿಮಾನ ಶಿಲ್ಪವನ್ನು ತಯಾರಿಸುವುದೇ ಅಚ್ಚುಲೋಹಶಿಲ್ಪ ಅಥವಾ ಮರಳಚ್ಚು ಲೋಹ ಎರಕದ ಶಿಲ್ಪ ಎಂದು ಕರೆಯುತ್ತಾರೆ.

ಈ ಮಾದರಿಯ ಎರಕಕ್ಕೆ ಒಂದೇ ಲೋಹವನ್ನು ಬಳಸುತ್ತಾರೆ. ಮಿಶ್ರಣದ ಅವಶ್ಯಕತೆ ಕಡಿಮೆ. ಇದನ್ನು ಹೆಚ್ಚಾಗಿ ಅಲೆಮಾರಿಗಳು ಈ ಕಸುಬನ್ನು ಹೆಚ್ಚಾಗಿ ತಮ್ಮ ಹೊಟ್ಟೆಪಾಡಿಗಾಗಿ ಹಳ್ಳಿ ಹಳ್ಳಿ, ಪಟ್ಟಣಗಳಲ್ಲಿ ಸುತ್ತಿ ಅಲೆದಾಡಿ ಮಾಡುತ್ತಿರುತ್ತಾರೆ. ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ ಇವುಗಳನ್ನೇ ಹೆಚ್ಚಾಗಿ ಇವರು ಎರಕ ಹುಯ್ಯಲು ಬಳಸುತ್ತಾರೆ.

ಎರಕ ಮಾಡಬೇಕಾದ ವಿಗ್ರಹ, ಬೊಂಬೆ, ಶಿಲ್ಪ ಅಥವಾ ಅಡುಗೆ ಮಾಡಲು ಬಳಸುವ ಸೌದೆಗಳ ಮೂಲ ಪ್ರತಿಗಳ ಸಹಾಯದಿಂದ ಅಗತ್ಯವಾದ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಗ್ರಾಮೀಣರಿಗೆ ಕೈಗೆಟುಕು ರೀತಿಯಲ್ಲಿ ತಯಾರು ಮಾಡಿಕೊಡುತ್ತಾರೆ.

ಮೈಸೂರು ಶೈಲಿಗಳ ಸೂರ್ಯ, ಚಂದ್ರ, ನಕ್ಷತ್ರ, ದೇವರ ಮುಖವಾಡಗಳು, ಪ್ರಾಣಿಗಳ ಶಿಲ್ಪಗಳು, ಪಕ್ಷಿಗಳ ಶಿಲ್ಪಗಳು, ಚಿತ್ತಾರದ ವಿನ್ಯಾಸಗಳು ಮುಂತಾದ ಮೂಲ ಜನಪದದ ಶಿಲ್ಪಗಳನ್ನು ಈ ವಿಧಾನದಲ್ಲಿ ಕಾಣಬಹುದಾಗಿದೆ.

ಗಾಳಿ ಒತ್ತುವ ಒಂದು (ಏರ್ ಬ್ಲೋಯರ್) ತಾಂತ್ರಿಕ ಒಲೆಯನ್ನು ಅಥವಾ ತಿರುಗಣಿಯ ಮುಖಾಂತರ ಗಾಳಿ ಬರಿಸುವ ಯಂತ್ರ ಇದ್ದಿಲು, ಮೂಸೆ, ಹಿಡಿಕೆ, ಉಳಿ, ಸುತ್ತಿಗೆ, ಕತ್ತರಿಣಿ, ಲೋಹದ ರಸ ರೆಕ ಹೊಯ್ಯಲು ಸೋಸಿದ ಮರಳಿನ ಪೆಟ್ಟಿಗೆ ಇವುಗಲನ್ನು ಮಾತ್ರ ತಮ್ಮ ಎರಕ ವಿಧಾನಕ್ಕೆ ಬಳಸುವ ಇವರ ಸಾಧನಗಳು ಬಹಳ ಕಡಿಮೆ. ಒಂದು ರೀತಿಯಲ್ಲಿ ಸಂಚಾರಿ ಎರಕ ಎನ್ನಲೂ ಅಡ್ಡಿಯಿಲ್ಲ.

ಅತೀ ಕಡಿಮೆ ಸಮಯದಲ್ಲಿ ಶಿಲ್ಪಗಳ ಪ್ರತಿ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿರುವ ಈ ಮಾದರಿಯ ವಿಧಾನ ವಿಸ್ಮಯವೇ ಹೌದು. ಇದರಿಂದ ಜನಪದರ ಸರಳ ವ್ಯವಸ್ಥೆಯು ಇದರಲ್ಲಿ ಅಡಗಿದ್ದು, ಉಳಿದ ಎರಕ ಮಾದರಿಗಳಗಿಂತ ವಿಭಿನ್ನವಾಗಿದೆ. ಜನಪ್ರೀಯವೂ ಆಗಿದೆ.

ಅಧ್ಯಾಯ:–5

ಸಮಾರೋಪ

ಅಧ್ಯಾಯ:-೫

ಸಮಾರೋಪ

ಸಂಪ್ರಾಯಿಕ ಶಿಲ್ಪವು ಸಮಾಜ-ಸಂಸ್ಕೃತಿಗೆ ಸೇರಿದ ಎಲ್ಲರಿಗೂ ಯಾವ ರೀತಿಯ ಕಲ್ಪನೆಯಲ್ಲಿ, ಆಲೋಚನೆಯಲ್ಲಿ ಸ್ಥಾನವನ್ನು ಪಡೆದಿದೆ ಎಂಬುದನ್ನು ಸಮಗ್ರ ಅಭ್ಯಾಸ ಮಾರ್ಗವನ್ನು ಅನುಸರಿಸಿ, ಮಾನವ, ತನ್ನ ದೈಹಿಕ ಮತ್ತು ಬೌದ್ಧಿಕ, ಪ್ರಾಕೃತಿಕದ ವಿಕಾಸ ಆದಂದಿನಿಂದ ತನ್ನದೆನ್ನುವ ಸಂಸ್ಕೃತಿಯನ್ನು ಹಂತ ಹಂತವಾಗಿ ಭಿನ್ನವಾದ ಅಭಿವೃದ್ಧಿಯನ್ನು ತಲುಪಿದ್ದಾನೆ. ತನ್ನಲ್ಲಿಯ ಬುದ್ಧಿವಂತಿಕೆಯನ್ನು ಕುಶಲಗಾರಿಕೆಯನ್ನು ಕಲೆಯ ಮುಖಾಂತರ ಮುಂದಿನ ಪೀಳಿಗೆಗೆ, ಸಮಾಜಕ್ಕೆ ನೀಡಿರುವ ಸಂಪನ್ಮೂಲಗಳನ್ನು ವರ್ಣನಾತ್ಮಕ ದೃಷ್ಟಿಯಲ್ಲಿ ಅಭ್ಯಸಿಸಿ, ತುಲನಾತ್ಮಕ ವಿಶ್ಲೇಷಣೆಯನ್ನು ಗುರುತಿಸುವುದು ಅವಶ್ಯವಾಗಿದೆ. ಜನಪದ ಸಂಸ್ಕೃತಿಯನ್ನು ಒಳಗೊಂಡ ಉಪಸಂಸ್ಕೃತಿಗಳ ಅಧ್ಯಯನವು ತೀರಾ ಪ್ರಸ್ತುತವಾದದ್ದಾಗಿದೆ.

ಕರ್ನಾಟಕದಲ್ಲಿ ಕಲಾಪ್ರಕಾರಗಳು ಶ್ರೀಮಂತಿಕೆಯ ಕಾರಣದಿಂದ ಅವು ಇಂದಿಗೂ ಜನಮಾನಸಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ.

ಜಾನಪದ ಶಿಲ್ಪಗಳು :

ಗ್ರಾಮದೇವತೆಗಳ (ಶಿಲ್ಪಗಳನ್ನು) ವಿಗ್ರಹಗಳನ್ನು ಮಾಡುವಾಗ, ಶಿಲ್ಪಿಯು ಸ್ನಾನಮಾಡಿ ಮಡಿಯಿಂದ ರಚಿಸುತ್ತಿರುವಾಗ ದೇವತೆಯ ಹೆಸರನ್ನು ಜಪಿಸುತ್ತ ವಿಗ್ರಹವನ್ನು ಏಕಾಂಗಿಯಾಗಿ ಏಕಾಂತ ಸ್ಥಳದಲ್ಲಿ ಕುಳಿತು ರಚಿಸುತ್ತಿದ್ದರೆಂದೂ, ಆ ದೇವತೆಯ ವಿಗ್ರಹಪೂರ್ತಿಗೊಳ್ಳುವವರೆಗೂ ವಿಗ್ರಹದ ಮುಖವನ್ನು ಬಟ್ಟೆಯಿಂದ ಮುಚ್ಚಿಡುತ್ತಿದ್ದು, ಪೂರ್ತಿಗೊಂಡ ವಿಗ್ರಹವನ್ನು ಗರ್ಭಗುಡಿಯಲ್ಲಿ ಕೂಡ್ರಿಸಿದ ನಂತರ ಮುಖಕ್ಕೆ ಇದ್ದ ಬಟ್ಟೆಯನ್ನು ಬಿಚ್ಚಿ, ಪೂರ್ತಿಗೊಂಡ ವಿಗ್ರಹವನ್ನು ತೋರಿಸುತ್ತಿದ್ದರೆಂದು ತಿಳಿದುಬರುತ್ತದೆ. ಒಂದು ವೇಳೆ ಶಿಲ್ಪಿಯು ಮೈಲಿಗೆಯಾದರೆ, ಏಕಾಂತ ಸ್ಥಳದಲ್ಲಿ ಗುಪ್ತವಾಗಿ ರಚಿಸದೇ

ಇದ್ದ ವಿಗ್ರಹಗಳು ಎಷ್ಟು ಸುಂದರವಾಗಿದ್ದೂ ಪೂಜ್ಯಯೋಗ್ಯವಲ್ಲವೆಂದೂ ಹಾಗೆ ರಚನೆಗೊಂಡ ವಿಗ್ರಹದಿಂದ ಶಿಲ್ಪಿಗೆ ಇಲ್ಲವೇ ಗ್ರಾಮ ಜನರಿಗೆ ಅಪಾಯವೆಂಬ ನಂಬಿಕೆಗಳೂ ಇದ್ದುವೆಂದು ತಿಳಿದುಬರುತ್ತದೆ.

ದೇವಾಲಯಗಳಲ್ಲಿ ಮೂಲ (ಶಿಲ್ಪ) ವಿಗ್ರಹಗಳಿಗೆ ಜನರ ಕೆಟ್ಟ ದೃಷ್ಟಿ ತಾಗಬಾರದೆಂದು ಹಲವಾರು ಶಿಲ್ಪಗಳನ್ನು ರಚಿಸುತ್ತಿದ್ದರು. ಇವುಗಳಲ್ಲಿ ಪ್ರಾಣಿ, ಪಕ್ಷಿ, ಹೂವು, ಎಲೆ, ಬಳ್ಳಿ, ಮಿಥುನ ಮುಂತಾದವುಗಳನ್ನು ಕೊರೆಯುತ್ತಿದ್ದರು. ಮಗುವಿಗೆ ದೃಷ್ಟಿತಾಗಬಾರದೆಂದು ಕೆನ್ನೆಗೆ ಕಪ್ಪು ಚುಕ್ಕೆಯನ್ನು ಇಡುವಂತೆ ಶಿಲ್ಪಿಯು ಇಂತಹ ವಿಧಾನವನ್ನು ಅನುಸರಿಸಬೇಕೆಂಬ ನಂಬಿಕೆಗಳಿವೆ.

ಹಳೆಯ ದೈವಗಳಃನ್ನು ಶಿಲ್ಪಗಳಲ್ಲಿ ಮೂಡಿಸುವಾಗ ವಿಚಿತ್ರವಾದ ಕಲ್ಪನೆಗಳು ಕಂಡುಬರುತ್ತವೆ. ತಾಯ್ತನದ ಹಿರಿಮೆಯನ್ನು ಹೇಳುವಾಗ ಹೆಣ್ಣು ಮೂರ್ತಿಗೆ ವಿಶಾಲವಾದ ವಕ್ಷಸ್ಥಲ, ಉತ್ಪ್ರೇಕ್ಷಿತ ಸ್ತನಗಳು, ದೊಡ್ಡದಾದ ನಡು, ಕಣ್ಣಿಗೆ ಕಾಣುವಂತಹ ಯೋನಿ ಪ್ರದೇಶ ಇವನ್ನು ಅಳವಡಿಸುತ್ತಿದ್ದರು.

ಪ್ರತಿಮೆಗಿಂತಲೂ ಮುಖ್ಯವಾದುದು ಧ್ಯಾನ ಶ್ಲೋಕವೆಂದು ಶಿಲ್ಪ ಶಾಸ್ತ್ರದಲ್ಲಿದೆ. ದೇವತೆಗಳಿಗೆ ಸಂಬಂಧಿಸಿದಂತೆ ಶ್ಲೋಕಗಳು ಇರುವವು. ಇವುಗಳಲ್ಲಿ ದೇವತೆಯ ರೂಪದ ನಿರ್ದೇಶನವಿರುತ್ತದೆ. ಭಂಗಿಯ ಆಯುಧಗಳ ವಿವರವೂ ಇರುತ್ತದೆ. ಈ ಧ್ಯಾನ ಶ್ಲೋಕ ಶಿಲ್ಪಿಗಳು ಮುಖ್ಯ ಭಕ್ತನಿಗೂ ಮುಖ್ಯ. ಶಿಲ್ಪಿಗೆ ಪ್ರತಿಮಾಲಕ್ಷಣದ ಶಿಕ್ಷಣವೂ ಅಗತ್ಯವೆಂದು ಪರಿಗಣಿಸುತ್ತಾರೆ. ಆದರೆ ಕೆಲವೊಂದು ಶಿಲ್ಪಿಗಳಿಗೆ ಮಾಡಿಸುತ್ತಾರೆ. ಶಿಲ್ಪಿಗೆ ಇವು ನಿರ್ದೇಶಕ ಸೂತ್ರಗಳಿದ್ದಂತೆ. ಧ್ಯಾನಶ್ಲೋಕದಲ್ಲಿ ಬರುವ ಮೂರ್ತಿಯ ವರ್ಣನೆ, ಪೂಜೆಯಿಂದ ಒದಗುವ ತಾತ್ವಿಕ ಪ್ರಯೋಜನ, ಫಲ, ಇವೆಲ್ಲವನ್ನು ಶಿಲ್ಪಿ ನೆನಪಿನಲ್ಲಿರಿಸಿಕೊಳ್ಳಬೇಕು.

ಶಿಲ್ಪಿಯು ತಾನು ನಿರ್ಮಿಸುತ್ತಿರುವ ಮೂರ್ತಿಗೆ ಸಂಭಂಧಿಸಿದ ಧ್ಯಾನಶ್ಲೋಕವನ್ನು ಪಠಿಸುತ್ತಿದ್ದಂತೆಯೇ ಅವನ ಮನಸ್ಸಿನಲ್ಲಿ ದೇವತಾಮೂರ್ತಿ ಕ್ರಮ ಕ್ರಮವಾಗಿ ಮೈದಳೆಯುತ್ತದೆ. ಧ್ಯಾನದಿಂದಲೇ ಈ ರೂಪವನ್ನು ಶಿಲ್ಪಿಗಳು ಕಾಣುತ್ತಾರೆ. (ಧ್ಯಾನೇನೈವ-ಪಶ್ಯಂತಿ ತದ್ರುಪಂ) ಹೀಗೆ ಶಿಲ್ಪಿಯು ತನ್ನಲ್ಲಿ ಸ್ಫುಟವಾಗಿ ಕಂಡ ಆಕಾರವನ್ನೇ ಮರದಲ್ಲೋ ಶಿಲೆಯಲ್ಲೊ ಕಡಿಯುತ್ತಾನೆ. ಮನಸ್ಸಿನಲ್ಲಿ

ಧ್ಯಾನದಿಂದಾಗಿ ಮೈದಳೆದ ಪ್ರತಿಮೆಯನ್ನು ಹೊರ ಹೊಮ್ಮಿಸುವುದಷ್ಟೇ ಶಿಲ್ಪಿಯ ಕೆಲಸವಾಗಿದೆ. "ಸ್ಕಂದಪುರಾಣ" ಪ್ರತಿಷ್ಠಾ ಖಂಡದಲ್ಲಿ ಶಿವನು ಪಾರ್ವತಿಗೆ ಹೀಗೆ ಹೇಳುವನು.

'ಶಿಲ್ಪಿಯೋಳಗೆ ಲಿಂಗ ಅಡಗಿದೆ, ಲಿಂಗದೊಳಗೆ ಶಿಲ್ಪ ಅಡಗಿದ್ದಾನೆ. ಇಬ್ಬರಿಗು ಯಾವ ಭೇಧವೂ ಇರದು. ಶಿಲ್ಪಿತಾನೇ ದೇವತಾಮೂರ್ತಿಯಾದರೆ, ಮಾತ್ರ ದೇವತಾ ಮೂರ್ತಿಯನ್ನು ಮಾಡುವುದು ಸಾಧ್ಯ'.

"ಕಶ್ಯಪ" ಶಿಲ್ಪದಲ್ಲಿ ಹೀಗೆ ಹೇಳಿರುವನು,

"ಮೂರ್ತಿಶಿಲ್ಪಕ್ಕೆ ಪೂರ್ವಸಿದ್ಧತೆಯಾಗಿ ದೇವಶಿಲ್ಪ ಮತ್ತು ಭಾವಶಿಲ್ಪಗಳಿರಬೇಕು, ಹೀಗಿಲ್ಲವಾದರೆ ಶಿಲ್ಪಿಯು ಕೈಗೊಂಡ ಕೆಲಸ ಊರ್ಜಿತವಾಗದು, ಅನುಭವದಿಂದಲೂ ಪರಿಶ್ರಮದಿಂದಲೂ ಜಾಣತನದಿಂದಲೂ ಪ್ರತಿಮೆ ಲಕ್ಷಣವಾಗಿ ಮುಗಿದರೂ ಅದರಲ್ಲಿ ಕಳೆಕೊಡಲಾರದು".

ಶಿಲ್ಪ ಮತ್ತು ಶೈಲಿ :

ಶಿಲೆಯಲ್ಲಿ ಆಕಾರವನ್ನು ಕಂಡರಿಸುವಾಗ ಮಾಡುವುದಕ್ಕಿಂತ ಬಿಡಿಸುವುದು, ಕಡೆಯುವುದು ಮುಖ್ಯವಾಗಿರುತ್ತದೆ. ಶಿಲ್ಪಿಯು ಶಿಲೆಯಲ್ಲಿ ಆಕಾರವೊಂದನ್ನು ಕಂಡು ಆಕಾರವನ್ನು ಸೆರೆಯಿಂದ ಬಿಡಿಸುವನು. ಅಂದರೆ ಅನಗತ್ಯ ಭಾಗಗಳನ್ನು ತೆಗೆದು ಹಾಕಿದರೆ ಶಿಲ್ಪಕೃತಿ ಆಯಿತು ಎಂದರ್ಥ.

ಕಲೆಯು ಇತಿಹಾಸವನ್ನು ಅವಲೋಕಿಸಿದಾಗ "ಶೈಲಿ ಪ್ರಮುಖ ಪಾತ್ರ ವಹಿಸುತ್ತದೆ. ಶಿಲ್ಪಿಯು ಆಂತರಿಕ ಭಾವಾವೇಶ ಹಾಗೂ ಆಕಾಲದ ಆ ಪ್ರಾಂತದ ಪ್ರವೃತ್ತಿಯನ್ನು ಸಹ ಇದರಿಂದ ಗುರುತಿಸಬಹುದಾಗಿದೆ.

ಅನೇಕ ಜನಪದ ಕಲಾಪ್ರಕಾರಗಳಲ್ಲಿ ಈ ಮೈಸೂರು ಲೋಹ ಶಿಲ್ಪಗಳು ಸೀಮಿತ ವ್ಯಾಪ್ತಿಯಿಂದ ಕೂಡಿದುದಾಗಿದೆ ಎಂದೆನಿಸಿತ್ತು. ಆಳವಾಗಿ ಅಧ್ಯಯನ ಮಾಡುತ್ತಾ ಸಾಗಿದಂತೆ ಕಂಡು ಅದರ ವಿಶಾಲತೆಯು ಅಚ್ಚರಿಯನ್ನುಂಟುಮಾಡಿತು.

ನಾಡಿನ ಶಿಲ್ಪ ಸಂಸ್ಕೃತಿಗೆ ನೀಡಿದ ಅಪಾರ ಕೊಡುಗೆಗಳಲ್ಲಿ ಜನಪದರ ಪಾತ್ರ ಸಣ್ಣದಿಲ್ಲ. ನಮ್ಮ ಸಂಸ್ಕೃತಿಯ ಸೌರಭಕ್ಕೆ ಮೂಲ, ಜನಪದ ಶಿಲ್ಪಿಗಳೆಂಬ ಆಶಯದ ಹಿನ್ನಲೆ ಅವರುಗಳ ಕೃತಿ ಮೌಲ್ಯಗಳನ್ನು ಪ್ರಪಂಚಕ್ಕೆ ತಿಳಿಯಪಡಿಸುವ ಆಶಯದಲ್ಲಿ ಕರ್ನಾಟಕ ಶಿಲ್ಪಕಲ ಅಕಾಡೆಮಿಯ ಫೆಲೋಷಿಪ್ ಯೋಜನೆಗೆ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಶಿಲ್ಪಕಲಾ ಸಾಂಸ್ಕೃತಿಕ ಲೋಕದ ಕಲಾ ಬದುಕಿನ ಮೊದಲ ಹೆಜ್ಜೆಯ ಗುರುತುಗಳಲ್ಲಿ ಜನಪದ ಶಿಲ್ಪಕಾರರ ಹಾದಿಯು ಕೂಡ ಮುಖ್ಯವಾಗಿದೆಯೆಂಬುದನ್ನು ಸಮರ್ಥಿಸುತ್ತ, ಗಾಜರಕೋಟ್ ಲೋಹ ಶಿಲ್ಪಕಲಾವಿದರ ವಯಕ್ತಿಕ, ವ್ಯಕ್ತಿಗತ ಅಧ್ಯಯನಕ್ಕೆ ಅವಕಾಶ ನೀಡದೆ ಅಲ್ಲಿಯ ಸಾಂಸ್ಕೃತಿಕ, ಧಾರ್ಮಿಕ ಪರಿಸ್ಥಿತಿಗಳ ಆಧಾರದಲ್ಲಿ ಪ್ರಸ್ತುತ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಕ್ಷೇತ್ರಕಾರ್ಯದುದ್ದಕ್ಕೂ ಸಾವಿರಾರು ಛಾಯಚಿತ್ರಗಳನ್ನು ಸಂಗ್ರಹಿಸಲಾಗಿದ್ದರೂ, ಅಕಾಡೆಮಿಯ ನಿಯಮಾನುಸಾರ ಪುಟಗಳ ಸೀಮಿತಕ್ಕೆ ಒಳಪಟ್ಟು ಇಲ್ಲ ನೀಡಲಾಗಿದೆ. ಮುದ್ರಣ ಸಂದರ್ಭದಲ್ಲಿ ಸೂಚಿಸಿದಲ್ಲಿ ಅವುಗಳ ಮುದ್ರಣಕ್ಕೂ ಸಹಕರಿಸಲಾಗುವುದು.

ಈ ವಿಶಾಲ ಕ್ಷೇತ್ರಕಾರ್ಯವನ್ನು ಅನುಸರಿಸಿಕೊಂಡು ರಚಿಸಿರುವ ಪ್ರಸ್ತುತ ಪ್ರಬಂಧವನ್ನು ಐದು ಅಧ್ಯಾಯಗಳನ್ನಾಗಿ ವಿಂಗಡಿಕೊಂಡು ನಿರೂಪಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತಾಗಿ ಕೆಲವು ಸಾಮಾನ್ಯವಾಗಿ ಆಯಾ ಪ್ರದೇಶಕ್ಕೆ ಸೀಮಿತ ಹಾಗೂ ವಿಶಿಷ್ಟವೆನಿಸುವಂತೆ ಕಂಡುಬರುತ್ತವೆ. ಅವು ಆಯಾ ಪ್ರದೇಶದ ಜನಾಂಗಿಕ ಧಾರ್ಮಿಕ ಹಿನ್ನೆಲೆಯನ್ನು, ಭೌಗೋಳಿಕ ಪರಿಸರವನ್ನು ಅವಲಂಬಿಸಿ ರೂಪು ಪಡೆದಂತೆ ತೋರುತ್ತದೆ. ಹೀಗೆ ಮೈಸೂರು ಶೈಲಿ ಶಿಲ್ಪಕಲೆಯ ಅಧ್ಯಯನದ ವಿಧಾನ, ಸ್ವರೂಪ, ವ್ಯಾಪ್ತಿ

ಮತ್ತು ಉದ್ದೇಶಗಳನ್ನು ಅರಸರ ಸಾಂಸ್ಕೃತಿಕ ಪರಿಚಯದೊಂದಿಗೆ ಈ ಮೊದಲನೆಯ ಅಧ್ಯಾಯ ಒಳಗೊಂಡಿದೆ.

ಜನಪದ ಶಿಲ್ಪಕಲೆಗಳ 'ಉಗಮ ಮತ್ತು ವಿಕಾಸಗಳನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ. ಕಲೆಯ ರೂಪನಿಷ್ಪತ್ತಿ, ಕಲೆಯನ್ನು ಅರ್ಥೈಸುವಿಕೆ. ಪ್ರಾಚೀನ ಕಾಲದಲ್ಲಿ ಕಲೆ ಮತ್ತು ವಿದ್ಯೆಗಳು ಸಮಾನಾರ್ಥದಲ್ಲಿ ಬಳಕೆಗೊಂಡ ಬಗೆ, ಅರವತ್ನಾಲ್ಕು ಕಲೆಗಳು, ಅವುಗಳಲ್ಲಿ ಚಿತ್ರಕಲೆ, ಶಿಲ್ಪಕಲೆ, ಲಲಿತಕಲೆ ಮತ್ತು ಕುಶಲ ಕಲೆಗಳ ಅರ್ಥ ಸ್ವರೂಪ, ಲಲಿತ ಕಲೆಗಳಲ್ಲಿ ಒಂದಾದ ಶಿಲ್ಪಕಲೆ – ಅದು ಸರ್ವ ಕಲೆಗಳಿಗೆ ಆಧಾರಭೂತವಾದ ಮತ್ತು ಶ್ರೇಷ್ಠವಾದ ಕಲೆ ಎಂಬುದರ ಕುರಿತಾಗಿರುವ ಪ್ರಾಚೀನ ಉಲ್ಲೇಖಗಳ ವಿವೇಚನೆಯನ್ನು' ಮಾಡಿ ಅಧ್ಯಯನ ಮಾಡಲಾಗಿದೆ. ಶಿಷ್ಟಪದ ಶಿಲ್ಪಕಲೆ ಮತ್ತು ಜನಪದ ಶಿಲ್ಪಕಲೆಯ ಸ್ವರೂಪ, ಲಕ್ಷಣ, ಇವುಗಳ ಪರಿಸ್ಪರ ಸಂಬಂಧ ವಿವರಣೆಯೊಂದಿಗೆ ಗಾಜರಕೋಟ್ ಶಿಲ್ಪಕಲೆಯ ಮುಂದುವರೆದ ರೂಪವಾಗಿ ಶಿಷ್ಟಪದ ಶಿಲ್ಪಕಲೆಯ ಬೆಳವಣಿಗೆ ಹಾಗೂ ಶಿಷ್ಟ ಶಿಲ್ಪಕಲೆಯ ಸುಧಾರಿತ, ನೂತನ ಶೈಲಿಗಳಿಗೆ ಹೇಗೆ ಸಂಪ್ರದಾಯಿಕ ಶೈಲಿ ಶಿಲ್ಪ ಮೂಲವೋ ಹಾಗೆಯೇ ಜನಪದ ಶಿಲ್ಪಕಲೆಗೆ ಗಾಜರಕೋಟ್ ಶಿಲ್ಪ ಶೈಲಿಯೂ ಮೂಲವೆಂಬುದನ್ನು ಮೊದಲನೆ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಮೈಸೂರು ರಾಜಮನೆತನದ **ಇತಿಹಾಸವನ್ನು ಆರಂಭದಿಂದ ಹೇಳುತ್ತ,** ಪ್ರಸ್ತುತ ಅಧ್ಯಯನದಲ್ಲಿ ಮಾಡಿಕೊಂಡ ವರ್ಗೀಕರಣವನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮೈಸೂರು ಅರಮನೆ ಮತ್ತು ಕೋಟೆಗಳ ನಿರ್ಮಾಣದ ಶೈಲಿ ಮತ್ತು ಅವುಗಳ ವಿಧಾನ, ಹಂತ ಹಂತದ ವಿವರಣೆಗಳೊಂದಿಗೆ ಮಾಧ್ಯಮದ ವೈಶಿಷ್ಟ್ಯ ಹಾಗೂ ಸಂಪ್ರದಾಯಿಕ ಎರಕ ಮತ್ತು ಇತರೆ ಎರಕದ ಶೈಲಿಗಳ ಬಗ್ಗೆ ಮೂರ್ತಿ ನಿರ್ಮಾಣದ ವೈವಿಧ್ಯತೆಗಳ ಚರ್ಚಿಸಲಾಗಿದೆ.

ಈ ಅಧ್ಯಾಯವು ಗಾಜರಕೋಟ್ ಲೋಹ ಶೈಲಿ ಶಿಲ್ಪಗಳ ಒಟ್ಟಾರೆ ಅಧ್ಯಯನದಲ್ಲಿ ಪ್ರಮುಖ ಅಧ್ಯಾಯವಾಗಿದ್ದು, ಗಾಜರಕೋಟ್ ಕೇಂದ್ರಿತವಾದ ಶಿಲ್ಪಕಲಾವಿದರ ಪ್ರಾಮುಖ್ಯತೆಗೆ ಒತ್ತನ್ನು ಇಲ್ಲಿ ನೀಡಲಾಗಿದೆ.

ನಾಲ್ಕನೆಯ ಅಧ್ಯಾಯವು: ಮೈಸೂರು ಒಡೆಯರ ಕಾಲದಲ್ಲಿ ದೇವಾಲಯಗಳು ಮತ್ತು ಶಿಲ್ಪಗಳು ಶಿಲ್ಪಗಳಲ್ಲಿ ಧಾರ್ಮಿಕ ಶಿಲ್ಪಗಳನ್ನು ಕುರಿತಾದುದಾಗಿದ್ದು, ಧಾರ್ಮಿಕ ಹಿನ್ನೆಲೆಯ ದೈವೀ ಪರಿಕಲ್ಪನೆಯಲ್ಲಿ ಮತ್ತು ಆರಾಧನಾ ಸಂದರ್ಭಗಳಲ್ಲಿ ಜನಪದ ಗಾಜರಕೋಟ್ ಲೋಹ ಶಿಲ್ಪಕಲೆ ಬೆಳೆದು ಬಂದಂತಹುದರ ಬಗೆಗೆ ವಿವೇಚನೆ ಇಲ್ಲಿದೆ. ಜನಪದರು ದೇವರ ಬಗೆಗೆ ಮಾಡಿದ ಆಚರಣೆಗಳು, ಆರಾಧನೆಗಳು, ಸಂಪ್ರದಾಯಗಳು ಲೋಹ ಶಿಲ್ಪಗಳಿಗೆ ಪ್ರೇರಕವಾಗಿವೆ. ಒಂದು ರೀತಿಯಲ್ಲಿ ಶರಣ ಸಂಸ್ಕಾರಕ್ಕೆ ಮೂಲ ಸ್ವರೂಪಗಳನ್ನು ಈ ಲೋಹ ಶಿಲ್ಪಗಳು ಕೊಡುಗೆಯಾಗಿ ನೀಡಿರುವುದಕ್ಕೆ ಸಾಕ್ಷಿಗಳು ಇಲ್ಲಿವೆ. ದೇವರ ವಿಗ್ರಹಗಳು, ಮೂರ್ತಿಗಳು, ಪ್ರಭಾವಳಿಗಳು, ದೇವಾಲಯ, ಮಠ–ಮಾನ್ಯಗಳು, ಅರಮನೆ, ಗುರುಮನೆಗಳಲ್ಲಿ ಬಳಕೆಯಾದಂತಹ ಪೂಜಾ ಸಾಮಗ್ರಿಗಳು, ನಂದಿಕೋಲುಗಳು, ನಂದಿಕುಣಿತ ಪರಿಕರಗಳು, ಅಲಂಕಾರಿಕ ಆಭರಣಗಳು, ಶಿವಶರಣರ ವಿಗ್ರಹಗಳು, ಮೈಸೂರು ಶೈಲಿಯಲ್ಲಿ ಧರ್ಮ ಮೂಲವಾಗಿ ರಚನೆಗೊಂಡಿರುವಂತಹುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಐದನೆಯ ಅಧ್ಯಾಯವು ಸಮಾರೋಪ ಆಗಿದ್ದು, ಐದು ಅಧ್ಯಾಯಗಳಲ್ಲಿನ ಫಲಿತಗಳನ್ನು ಶಿಲ್ಪಗಳಲ್ಲಿ ಸೌಂದರ್ಯಾತ್ಮಕ ಶಿಲ್ಪಗಳು ಮೂಲಕ ಸೌಂದರ್ಯಮೂಲ ಅಭಿವ್ಯಕ್ತಿಯ ಸಾಧನವಾಗಿ ಶಿಲ್ಪ ಶೈಲಿಯಾದ ಈ ಮೈಸೂರು ಶೈಲಿ ಶಿಲ್ಪಕಲೆ ಬಂದುದನ್ನು ವಿವರಿಸುತ್ತಾ, ಇದರಲ್ಲಿ ಪ್ರಯೋಜನಮೂಲ ಮತ್ತು ಮನರಂಜನಮೂಲ ಶಿಲ್ಪಗಳೆಂಬ ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಪ್ರಯೋಜನಮೂಲ ಲೋಹ ಶಿಲ್ಪಗಳು ಗೋಡೆಯ ಮೇಲೆ ತೂಗು ಹಾಕುವ ಶಿಲ್ಪಗಳು, ಗೃಹಾಲಂಕರಣದ ಶಿಲ್ಪವಿನ್ಯಾಸಗಳು, ಗೊಂಬೆಗಳು, ಅಡಿಕೆ ಕತ್ತರಿಗಳು, ಕಪಾಟುಗಳ ವಿನ್ಯಾಸಗಳು ಇತ್ಯಾದಿಗಳನ್ನು ಇಲ್ಲಿ ಐದನೆ ಅಧ್ಯಾಯಕ್ಕೆ ಒಳಪಡಿಸಲಾಗಿದೆ.

ವೃತ್ತಿಯಾಗಿ ಬೆಳೆಸಿಕೊಂಡು ಬಂದ ಕಲಾಕಾರರು ಮೈಸೂರು ಶೈಲಿ ಶಿಲ್ಪಕಲೆಯನ್ನು ಸಾಂಪ್ರದಾಯಿಕ ಶಿಲ್ಪಕಲೆಯ ಪ್ರಕಾರದಲ್ಲಿ ಮತ್ತು ಇವುಗಳಿಂದ ಪ್ರೇರಣೆಗೊಂಡು ಸುಧಾರಿತ ಲೋಹ ಶಿಲ್ಪ

ಶೈಲಿಗಳ ಉಗಮಕ್ಕೆ ವಿಜಯನಗರದ ನಂತರದ ಶೈಲಿಯ ಕೊಡುಗೆ ಹಾಗೂ ಸಮಕಾಲೀನ ಶಿಲ್ಪಕಲಾವಿದರು ಬೆಳೆಸುತ್ತಿರುವ ಪರಿಯನ್ನು, ಇಂದಿನ ಯುವ ಪೀಳಿಗೆಯವರು ಇದರ ಪ್ರಭಾವಕ್ಕೆ ಒಳಗಾಗಿರುವ ಬಗೆಯನ್ನು ವೃತ್ತಿನಿರ್ರತರ ಸಾಧಕ ಭಾಧಕಗಳನ್ನು, ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಲಾಗಿದ್ದು, ಸಂಕ್ಷಿಪ್ತ ಸಮಾಲೋಚನೆ ಹಾಗೂ ಪ್ರಸ್ತು ಅಧ್ಯಯನದಿಂದ ಹೊರಬಂದ ಪ್ರಮುಖ ಸಂಗತಿಗಳ ಸಮೀಕ್ಷೆಯೂ ಐದನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಪ್ರಸ್ತುತ ಪ್ರಬಂಧದ ಅಧ್ಯಯನಕ್ಕಾಗಿ, ಕರ್ನಾಟಕದ ಹಳೆ ಮೈಸೂರು ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಕ್ಷೇತ್ರಕಾರ್ಯವನ್ನು ನಡೆಸಲಾಗಿದೆ.್ಲ ಗಾಜರಕೋಟ್ ಲೋಹ ಶಿಲ್ಪಗಳ ಸಂಗ್ರಹ ಮತ್ತು ಸಂಪ್ರದಾಯಿಕ ಲೋಹ ಎರಕದ ಇತರೆ ಶೈಲಿ ಶಿಲ್ಪಗಳ ತಯಾರಿಕೆಯ ಬಗ್ಗೆ ಅಧ್ಯಯನ ನಡೆಸಲಾಗಿದೆ.

ಅಧ್ಯಯನಕ್ಕೆ ಬಳಸಿಕೊಂಡ ಛಾಯಾಚಿತ್ರಗಳು, ಪ್ರಶ್ನಾವಳಿಗಳು, ನಕ್ಷೆಗಳು, ಗ್ರಂಥಋಣವನ್ನು ಲಗತ್ತಿಸಿಲಾಗಿದೆ.

ಅನುಬಂಧಗಳು:

ಅ) ಪ್ರಶ್ನಾವಳಿ

ಮೈಸೂರು ಶೈಲಿ ಶಿಲ್ಪಕಲಾವಿದರಿಗೆ ಪ್ರಶ್ನಾವಳಿ :-

1. ಮೈಸೂರು ಶೈಲಿ ಶಿಲ್ಪಗಳನ್ನು ತಯಾರು ಮಾಡುವುದನ್ನು ಪ್ರಾರಂಭಿಸಿದ್ದು ಯಾವಾಗ ?

2. ಮೈಸೂರು ಶೈಲಿ ಶಿಲ್ಪಗಳನ್ನು ತಯಾರಿಸುವ ವಿಧಾನವನ್ನು ಯಾರಿಂದ ಕಲಿತಿರಿ ?

3. ಮೈಸೂರು ಶೈಲಿ ಯಾವ ಯಾವ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ತಯಾರಿಸುತ್ತೀರಿ ?

4. ಇದುವರೆವಿಗೆ ತಯಾರಿಸಿದ ಶಿಲ್ಪಗಳೆಷ್ಟು ಅಥವಾ ಸಂಪ್ರದಾಯಿಕ ಶಿಲ್ಪಗಳೆಷ್ಟು ?

5. ಬೇಡಿಕೆಯಿಂದ ತಯಾರಿಸಿದ ಶಿಲ್ಪಗಳೆಷ್ಟು? ನಿಮ್ಮದೇ ಅಭಿಪ್ರಾಯದಿಂದ ರಚಿಸಿದ ಶಿಲ್ಪಗಳೆಷ್ಟು?

6. ಮೈಸೂರು ಶೈಲಿ ಶಿಲ್ಪ ತಯಾರಿಸಲು ಕಚ್ಚಾ ಸಾಮಗ್ರಿಗಳನ್ನು ಎಲ್ಲಿಂದ ಪಡೆಯುತ್ತೀರಿ ?

7. ಮೈಸೂರು ಶೈಲಿ ಶಿಲ್ಪಗಳ ತಯಾರಿಕೆಯನ್ನು ಆಯಾ ವಿವಿಧ ಮಾಧ್ಯಮದಂತೆ ವಿವರಿಸಿ ?

8. ಲೋಹ ಶಿಲ್ಪದ ಕಚ್ಚಾ ಸಾಮಗ್ರಿಗೆ ತಗಲುವ ಅಂದಾಜು ವೆಚ್ಚ ಎಷ್ಟು ? ಒಂದ ಶಿಲ್ಪಕ್ಕೆ ಆಧರಿಸಿ?

9. ಒಂದು ಲೋಹ ಶಿಲ್ಪವನ್ನು ಮಾರಾಟ ಮಾಡಿದಲ್ಲಿ ಗಳಿಸುವ ನಿವ್ವಳ ಲಾಭವೆಷ್ಟು ?

10. ಈ ಮೈಸೂರು ಶೈಲಿ ಲೋಹ ಶಿಲ್ಪಗಳನ್ನು ತಯಾರಿಸಲು ಯಾವ ಯಾವ ರೀತಿ ಶೈಲಿಗಳನ್ನು ಜನರು ಅಪೇಕ್ಷಿಸುತ್ತಾರೆ.

11. ಮೈಸೂರು ಶೈಲಿ ಶಿಲ್ಪಗಳನ್ನು ತಯಾರಿಸಲು ನೀವೇ ಸ್ವಂತ ಕುಲುಮೆ ಹೊಂದಿದಿರಿಯೇ? ಇಲ್ಲವಾದಲ್ಲಿ ಎಲ್ಲಿಂದ ಎರಕ ಹೊರಕ ಹೊಯ್ಯಿಸುವಿರಿ ?

12. ಮೈಸೂರು ಶೈಲಿ ಶಿಲ್ಪಗಳನ್ನು ಅವುಗಳಿಗೆ ತಕ್ಕಂತೆ ವಾಸ್ತು ಧರ್ಮವನ್ನು ಪಾಲಿಸುತ್ತೀರಿಯೇ ? ಇದು ಅವಶ್ಯಕವೇ ?

13. ಧಾರ್ಮಿಕತೆಯ ಲೋಹ ಶಿಲ್ಪಗಳಿಗೆ ಸೌಂದರ್ಯದ ಪ್ರಾಮುಖ್ಯತೆ ಎಷ್ಟರ ಮಟ್ಟಿಗೆ ಪ್ರಾಮುಖ್ಯತೆ ನೀಡುತ್ತೀರಿ ?

14. ಮೈಸೂರು ಶೈಲಿ ಶಿಲ್ಪಗಳನ್ನು ತಯಾರಿಸಿರುವ ನಿಮಗೆ ಇದುವರೆವಿಗೂ ಸಂದಿರುವ ಪ್ರಾಶಸ್ತಿಗಳು ಮತ್ತು ಬಹುಮಾನಗಳಾವುವು ? ಅವುಗಳಿಂದ ನಿಮಗೆ ತೃಪ್ತಿ ಇದೆಯೇ ?

15. ಇದುವರೆಗೂ ನೀವು ತಯಾರಿಸಿರುವ ಶಿಲ್ಪಗಳು ಎಲ್ಲೆಲ್ಲಿ ಸಂಗ್ರಹಗೊಂಡಿವೆ ?

16. ಎಷ್ಟು ದೂರದಿಂದ ಬೇಡಿಕೆಯ ಜನ ಬರುತ್ತಾರೆ ?

17. ಶಿಲ್ಪಗಳ ತಯಾರಿಕೆಯ ಮೂಲಗಳಿಂದ ಸಿಗುವ ವಾರ್ಷಿಕ ಆದಾಯವೇನು ?

18. ಶಿಲ್ಪಗಳ ತಯಾರಿಕೆ ಹೊರತುಪಡಿಸಿ ಬೇರೆ ಉದ್ಯೋಗಗಳನ್ನು ಮಾಡುತ್ತೀರಿಯೆ ?

19. ಶಿಲ್ಪಗಳ ತಯಾರಿಕೆಯಲ್ಲಿ ಮಹಿಳೆಯರ ಪಾತ್ರವೇನು ?

20. ಮೈಸೂರು ಶೈಲಿ ಶಿಲ್ಪ ತಯಾರಿಕೆಯಲ್ಲಿ ತೊಡಗಿರುವ ಕುಟುಂಬ ಸದಸ್ಯರೆಷ್ಟು ?

21. ಮೈಸೂರು ಶಿಲ್ಪಗಳಲ್ಲಿ ತಯಾರಿಸಿರುವ ಸಣ್ಣ ಮತ್ತು ದೊಡ್ಡ ಶಿಲ್ಪಗಳ ಪರಿಮಾಣವೇನು ?

22. ಶಿಲ್ಪ ತಯಾರಿಕೆಯ ಬಗೆಗೆ ನೀವು ಅಭ್ಯಸಿಸಿರುವ ಪುಸ್ತಕಗಳು, ಗ್ರಂಥಗಳು ಯಾವುವು ? ನೀವು ಯಾವ ರೀತಿಯ ಪುಸ್ತಕಗಳನ್ನು ರಚಿಸಿರುವಿರಿ ?

23. ಮುಖ್ಯ ಶಿಲ್ಪಿಯ ಹೆಸರು ಇತರೆ ಶಿಲ್ಪಿಗಳು ಜೊತೆಯಲ್ಲಿ ಕೆಸಲ ಮಾಡುವವರು.

24. ನಿಮ್ಮ ಹೆಸರಿಗೆ ವಿಶೇಷ ಅರ್ಥವೇನಾದರೂ ಇದೆಯೇ ? ಅಡ್ಡ ಹೆಸರು.

25. ನಿಮಗೆ ಕುಲದೇವರ ಹೆಸರಿಡಲಾಗಿದೆಯೇ ? ನಿಮ್ಮ ಕುಲದೇವರು ಯಾರು ?

26. ನೀವು ಹುಟ್ಟಿದ ಗ್ರಾಮ, ತಾಲೂಕು, ಜಿಲ್ಲೆ, ರಾಜ್ಯದ ಹೆಸರೇನು ? ನಿಮ್ಮ ಹುಟ್ಟಿದ ತಾರೀಖು ಯಾವುದು 27. ನಿಮಗೆ ಆ ತಾರೀಖು ಗೊತ್ತಿಲ್ಲದಿದ್ದರೆ, ನಿಮ್ಮ ವಯಸ್ಸೆಷ್ಟು ?

28. ಈಗ ನೀವು ವಾಸಿಸುತ್ತಿರುವ ಗ್ರಾಮದ ಹೆಸರೇನು ? ಅದು ನಿಮ್ಮ ಹುಟ್ಟಿದೂರಾಗದಿದ್ದರೆ, ನೀವು ಯಾವ ತಾಲ್ಲೂಕು, ಜಿಲ್ಲೆ, ಅಥವಾ ರಾಜ್ಯಕ್ಕೆ ಸೇರಿದವರು ?

29. ನಿಮ್ಮ ವಿದ್ಯಾಭ್ಯಾಸವೇನು ? ನೀವು ಓದಿದ ಕೊನೆಯ ತರಗತಿ ಯಾವುದು ?

30. ನೀವು ಮನೆಯಲ್ಲಿ ಯಾವ ಭಾಷೆ ಮಾತಾಡುವಿರಿ?

31. ನಿಮ್ಮ ಧರ್ಮ ಯಾವುದು ?

32. ನಿಮ್ಮ ಕುಟುಂಬದಲ್ಲಿ ನಿಮ್ಮನ್ನೇ ಅವಲಂಬಿಸಿರುವವರು ಎಷ್ಟು ಜನ ?

ಅ) ಮಕ್ಕಳು ?

ಆ) ಗಂಡಸರು ?

ಇ) ಹೆಂಗಸರು ?

ಈ) ವಯಸ್ಕರು ?

33. ನಿಮ್ಮ ಕುಟುಂಬದ ಮಾಮೂಲಿ ಕಸುಬು ಯಾವುದು ? ಶಿಲ್ಪಕೆತ್ತುವುದೇ ನಿಮ್ಮ ಕಸುಬಾಗಿದ್ದರೆ, ಅದು ಎಷ್ಟು ತಲೆಮಾರುಗಳಿಂದ ಬಂದಿದೆ. ಮತ್ತು ಅದೇ ನಿಮ್ಮ ಕುಟುಂಬ್ಕೆ ಅಧಾರವಾಗಿರುವ ಏಕೈಕ ಮೂಲವಾಗಿರುವುದೇ ?

34. ಈಗ ನೀವು ಶಿಲ್ಪ ಕೆತ್ತನೆ ಮಾಡುತ್ತಿಲ್ಲವಾದರೆ ಕೊನೆಯ ಬಾರಿ ಕೆತ್ತನೆ ಮಾಡಿದುದು ಯಾವಾಗ ? ಕೆತ್ತನೆ ನಿಲ್ಲಿಸಿದ್ದು ಯಾಕೆ ?

35. ನೀವು ನಿರತರಾಗಿರುವ ಇತರ ವೃತ್ತಿಗಳಿವೆಯೇ ? ಶಿಲ್ಪಕಲಾವಿದರಾಗಿ ನಿಮ್ಮ ಆದಾಯಕ್ಕೆ ಇವು ಪೂರಕವಾಗಿರುವುದು ಅಗತ್ಯವೇ ?

36. ನಿಮ್ಮ ಕುಟುಂಬದ ಇತರರಿಗೆ ಶಿಲ್ಪಕೆತ್ತನೆಯ ತರಬೇತಿ ನೀಡುತ್ತಿರುವಿರಾ ? ನೀವು ತರಬೇತಿ ನೀಡುತ್ತಿರುವವರಲ್ಲಿ ಅತ್ಯಂತ ಕಿರಿಯರ ವಯಸ್ಸೆಷ್ಟು ? ತರಬೇತಿ ನೀಡುತ್ತಿಲ್ಲವಾದರೆ ಯಾಕೆ ? ಕಾರಣವೇನು?

37. ನಿಮ್ಮ ಶಿಲ್ಪ ಕೇಂದ್ರದಲ್ಲಿ ಎಷ್ಟು ಜನ ಶಿಲ್ಪಕಾರರಿದ್ದಾರೆ ?

38. ಮಹಿಳೆಯರು ಎಷ್ಟು ಮಂದಿ ?

39. ಎಷ್ಟು ಜನ ಸಂಪ್ರದಾಯಿಕ ಶಿಲ್ಪಕೆತ್ತನೆಯ ಪರಿಣಿತಿ ಪಡೆದಿದ್ದಾರೆ ?

40. ಎಷ್ಟು ಜನ ಸ್ವತಂತ್ರವಾಗಿ ಶಿಲ್ಪವನ್ನು ಪೂರ್ಣವಾಗಿ ಕೆತ್ತುತ್ತಾರೆ ?

41. ಎಷ್ಟು ಜನ ಸ್ವತಂತ್ರವಾಗಿ ರೇಖಾ ಚಿತ್ರವನ್ನು ಬಿಡಿಸುತ್ತಾರೆ ?

42. ಕಲಾಕೃತಿಯ ರೇಖಾ ಚಿತ್ರವನ್ನು ಹೇಗೆ ಆಯ್ಕೆ ಮಾಡುತ್ತೀರಿ ?

43. ರೇಖಾ ಚಿತ್ರವನ್ನು ಸೂತ್ರ ಅಥವಾ ಶ್ಲೋಕಗಳನ್ನು ವಿಶ್ವಕರ್ಮ ಪೂರ್ವಿಕರು ಸೃಷ್ಟಿಸಿರುವ ಅಥವಾ

44. ಕೆತ್ತಿರುವ ಶಿಲ್ಪಗಳೆಷ್ಟು ? ಯಾವ ಯಾವ ಮಾಧ್ಯಮಗಳು ? ಸಂಪ್ರದಾಯಿಕ ಶಿಲ್ಪಗಳೆಷ್ಟು ? ಅಳತೆ / ಮಾಧ್ಯಮ / ಸಂಗ್ರಹ / ಬೆಲೆ / ಸಮಯ ಪಡೆದದು ಯಾವಾಗ ? ಜನಪದ ಶಿಲ್ಪಗಳೆಷ್ಟು ? ರಥಗಳೆಷ್ಟು ? ಗುಡಿ / ದೇವಾಲಯಗಳೆಷ್ಟು ?

45. ನೀವು ಸೃಷ್ಟಿಸಿರುವ ಅಥವಾ ಕೆತ್ತಿರುವ ಶಿಲ್ಪಗಳೆಷ್ಟು ? ಸಂಪ್ರದಾಯಿಕ ಶಿಲ್ಪಗಳೆಷ್ಟು ? ಜನಪದ ಶಿಲ್ಪಗಳೆಷ್ಟು ? ರಥಗಳೆಷ್ಟು ? ಗುಡಿ/ ದೇವಾಲಯಗಳೆಷ್ಟು ?

46. ನಿಮಗೆ ಶಿಲ್ಪ ಕೆತ್ತನೆಯೇ ಪ್ರಮುಖ ಉದ್ಯೋಗವೇ ? ಬೇರೆ ಉಪ ಉದ್ಯೋಗಗಳಿವೆಯೇ ? ವಾರ್ಷಿಕ ಒಟ್ಟು ಆದಾಯವೆಷ್ಟು ?

47. ನಿಮ್ಮ ಮುಂದಿನ ಪೀಳಿಗೆ ಈ ಶಿಲ್ಪ ಕೆತ್ತನೆಯಲ್ಲಿ ತೊಡಗಿರುವರೇ ? ಇಲ್ಲವಾದರೆ ಯಾಕೆ ? ತರಬೇತಿ ಕೊರತೆಯೇ ? ಆದಾಯ ಕೊರತೆಯೇ ? ಬೇಡಿಕೆ ಇಲ್ಲವೇ ? ಕಚ್ಚಾ ಸಾಮಗ್ರಿ ಕೊರತೆಯೇ ?

48. ನಿಮ್ಮ ಮುಂದಿನ ಪೀಳಿಗೆ ಯಾವ ಶಿಲ್ಪ ಕೆತ್ತನೆಯಲ್ಲಿ ತೊಡಗಿದ್ದಾನೆ ? ಜನಪದ ಶಿಲ್ಪ ತಯಾರಿಸುವರೇ ? ಸಂಪ್ರದಾಯ ಶಿಲ್ಪ ತಯಾರಿಸುವರೇ ? ಸಮಕಾಲೀನ ಶಿಲ್ಪ ತಯಾರಿಸುವರೇ ?

49. ಮೈಸೂರು ಶೈಲಿ ಶಿಲ್ಪ ಕೆತ್ತನೆಯಲ್ಲಿಯೇ ತೊಡಗಿರಲು ಕಾರಣವೇನು ? ಬೇರೆ ಕಸಬು ತಿಳಿದಿಲ್ಲವೆ ? ಶಿಕ್ಷಣದ ಕೊರತೆಯೇ ಪರಂಪರೆಯನ್ನು ಉಳಿಸಿಕೊಳ್ಳುವ ವಿಶ್ವಾಸವೇ ?

50. ಪ್ರಸ್ತುತ ಸಂದರ್ಭದಲ್ಲಿ ಯಾವ ಮಾದ್ಯಮದ / ಶೈಲಿ ಶಿಲ್ಪಗಳಿಗೆ ಬೇಡಿಕೆ ಇದೆ ?

51. ಕೊಳ್ಳುಗರ ವ್ಯಾಪಾರೀತನಕ್ಕೆ ಹೊಂದಿಕೊಂಡಿದ್ದೀರಿಯೇ ?

52. ಕರಕುಶಲ / ಯಂತ್ರ ಸಿದ್ಧಿ ಶಿಲ್ಪಗಳು ನಿಮ್ಮ ಮೇಲೆ ಯಾವ ರೀತಿ ಪ್ರಭಾವ ಬೀರಿವೆ ?

53. ನೀವು ತಯಾರಿಸು ಸಂಪ್ರದಾಯಿಕ ಶಿಲ್ಪಗಳ ಮೇಲೆ ಜನಪದ ಶೈಲಿಯ ಪ್ರಭಾವವಿದೆಯೇ ? ಅದು ಹೇಗೆ ? ಏಕೆ ? ಅವಶ್ಯಕತೆಯಿದೆಯೇ ?

54. ನೀವು ತಯಾರಿಸು ಜನಪದ ಶೈಲಿಯ ಶಿಲ್ಪಗಳ ಮೇಲೆ ಸಂಪ್ರದಾಯಿಕ ಶಿಲ್ಪಗಳ ಶೈಲಿ ಪ್ರಭಾವವಿದೆಯೇ ? ಅದು ಹೇಗೆ ? ಯಾಕೆ ? ಅವಶ್ಯಕತೆ ಇದೆಯೇ ?

೫೫. ಮೈಸೂರು ಶೈಲಿ ಶೈಲಿಗಳ ಮಿಶ್ರಣ ಅಥವಾ ಬಳಕೆ ನಿಮ್ಮ ಇಚ್ಛೆಯೇ ? ಏಕೆ ? ಅಥವಾ ಗ್ರಾಹಕರು ಬೇಡಿಕೆಯೇ ? ಕಾಲಕ್ರಮೇಣ ಬೆಳವಣಿಗೆಯ ಕ್ರಮವೇ ವಸ್ತು ವಿಷಯದ ಮೇಲಿನ ಒಡಂಬಡಿಕೆಯೇ ?

56. ಮೈಸೂರು ಶೈಲಿ ಪುನಾರಾವರ್ತನೆಯ ಕೆತ್ತನೆಯ ಶಿಲ್ಪಗಳು ಯಾವ ಶೈಲಿಗಳಲ್ಲಿ ಸಾಧ್ಯ ? ಸಂಪ್ರದಾಯ ಶೈಲಿ ಅನುಕೂಲವೇ ? ಜನಪದ ಶಿಲ್ಪ ಶೈಲಿಗಳಲ್ಲಿ ಅನುಕೂಲವೇ ? ಯಾವ ಯಾವ ಮಾಧ್ಯಮಗಳಲ್ಲಿ ಸಾಧ್ಯ ?

57. ಮೈಸೂರು ಶೈಲಿ ಸಂಪ್ರದಾಯ ಶೈಲಿ ಶಿಲ್ಪಗಳನ್ನು ಹೊತರುಪಡಿಸಿ ಬೇರೆ ಶೈಲಿಯ ಶಿಲ್ಪಗಳನ್ನು ತಯಾರಿಸುವಿರಿ ? ಇಲ್ಲವಾದರೆ ಯಾಕೆ ? ಕಟ್ಟುಪಾಡುಗಳವೆಯೇ ? ಅಥವಾ ತರಬೇತಿ ಕೊರತೆಯೇ ?

58. ಧಾರ್ಮಿಕ ಶೈಲಿ ಶಿಲ್ಪಗಳನ್ನು ರಚಿಸುತ್ತೀರಿಯೇ ? ದೇವರ ಮೂರ್ತಿ ಯಾವುವು ? ದೇವತಾ ಮೂರ್ತಿಗಳಾವುವು ? ವಾಹನಗಳು ಯಾವುವು ? ಇತರೆ ಪ್ರಾಣಿ ಪಕ್ಷಿಗಳು ?

59. ಸೌಂದರ್ಯ ಮೂಲದ ಶೈಲಿ ಶಿಲ್ಪಗಳನ್ನು ರಚಿಸುತ್ತೀರಿಯೇ ? ಪುರುಷ ಮೂರ್ತಿಗಳಾವುವು ? ಸ್ತ್ರೀ ಮೂರ್ತಿಗಳಾವುವು ? ಪ್ರಾಣಿ ಪಕ್ಷಿ ಇತರೆ ಗಳಾವುವು ? ಇವುಗಳನ್ನು ಪ್ರತಿಷ್ಠಾಪಿಸುವುದಕ್ಕೆ ಸೂಚಿತ ಯೋಗ್ಯ ಸ್ಥಳಗಳಾವುವು ?

60. ಮೈಸೂರು ಶೈಲಿ ಶೈಲಿ ಶಿಲ್ಪಗಳನ್ನು ಹೊರತುಪಡಿಸಿ ಬೇರೆ ಶೈಲಿಯ ಶಿಲ್ಪಗಳನ್ನು ತಯಾರಿಸುವಿರೇ ? ಇಲ್ಲವಾದರೆ ಏಕೆ ? ಕಟ್ಟುಪಾಡು, ನಿಯಮಗಳವಿಯೇ ? ಅಥವಾ ನಿಷೀದ್ಧವೇ ? ತರಬೇತಿ ಕೊರತೆಯೇ ? ಬೇಡಿಕೆಯಿಲ್ಲವೇ ? ಧಾರ್ಮಿಕ ಶೈಲಿ ಜನಪದ ಶಿಲ್ಪಗಳನ್ನು ರಚಿಸುತ್ತೀರಿಯೇ ? ದೇವರ ಮೂರ್ತಿಗಳಾವುವು ? ದೇವತಾ ಮೂರ್ತಿಗಳಾವುವು ? ವಾಹನಗಳು ಯಾವುವು ? ಇತರೆ ಪ್ರಾಣಿ, ಪಕ್ಷಿಗಳು ಯಾವುವು ?

61. ಮೈಸೂರು ಶೈಲಿ ಶೈಲಿ ಶಿಲ್ಪಗಳಲ್ಲಿ ಮಾಂಸಹಾರಿ / ರಕ್ತ ಬಯಸುವ ಸಸ್ಯಹಾರಿ / ಶಾಂತಸ್ವಭಾವ ದೇವತಾ ಮೂರ್ತಿಗಳನ್ನು ವಿನಂತಿಸಲಾಗಿದೆಯೇ ? ನೀವು ಯಾವ ರೀತಿಯ ದೇವರುಗಳ ಶಿಲ್ಪಗಳನ್ನು ಕೆತ್ತುವಿರಿ ? ಇದರಲ್ಲಿ ನಿರ್ಭಂಧವೇನಾದರೂ ಇದೆಯೇ ? ಬಳಸುವ ಮಾಧ್ಯಮಗಳಲ್ಲಿ ಏನಾದರೂ ವ್ಯತ್ಯಾಸವಿದೆಯೇ ? ಯಾಕೆ ?

62. ಮೈಸೂರು ಶೈಲಿ ಶಿಲ್ಪಗಳ ನಿರ್ಮಾಣ ಈ ಹಿಂದೆ ಮತ್ತು ಇಂದಿಗೆ ವ್ಯತ್ಯಾಸ / ಏರುಪೇರು ಕಂಡಿದೆಯೇ ? ಕಂಡಿದ್ದರೆ ಕಾರಣಗಳೇನು ? ಮಾಧ್ಯಮಗಳ ಕೊರತೆ ಇದೆಯೇ ? ಶಿಲ್ಪಕಾರರ ಕೊರತೆ ಇದೆಯೇ ? ಅಥವಾ ಬೇಡಿಕೆಯ ಕೊರತೆಯೇ ?

63. ಸಂಪ್ರದಾಯಿಕ / ಜನಪದ ಶಿಲ್ಪಗಳ ನಿಮಾಣದಲ್ಲಿ ಪರಿವರ್ತನೆಯಾಗಿದೆಯೇ ? ಇದು ಒಳಿತೇ ? ಅದು ಹೇಗೆ ?

64. ಬಣ್ಣಗಳ ಬಳಕೆಯನ್ನು ಜನಪದ / ಸಂಪ್ರದಾಯಿಕ ಶಿಲ್ಪಗಳಲ್ಲಿ ತಯಾರಿಕೆಯಲ್ಲಿ ಬಳಸುತ್ತೀರಿಯೇ ? ಯಾವ ಯಾವ ಮಾಧ್ಯಮಗಳಲ್ಲಿ ಬಣ್ಣಗಳನ್ನು ಬಳಸುತ್ತೀರಿ ?

65. ಬಳಸುವ ಬಣ್ಣಗಳ ತಯಾರಿಕೆಯನ್ನು ಸ್ವಂತ ಶಿಲ್ಪಗಳೇ ಮಾಡುತ್ತೀರಿಯೇ ? ಅಥವಾ ಯಾರು ತಯಾರಿಸುತ್ತಾರೆ ? ಯಾವ ರೀತಿ ಬಣ್ಣಗಳು ತಯಾರಾಗುತ್ತವೆ ? ಅವುಗಳ ಮೂಲ ಯಾವುವು ?

66. ಶಿಲ್ಪಗಳ ರಚನೆಯಲ್ಲಿ ಅರಗು / ಅಂಟುಗಳನ್ನು ಬಳಸುತ್ತೀರಿಯೇ ? ಯಾವ ಮಾಧ್ಯಮಗಳಲ್ಲಿ ಇವುಗಳ ಬಳಕೆಯಾಗುತ್ತದೆ ? ಅವುಗಳ ತಯಾರಿಕೆಯ ಕ್ರಮ ಹೇಗೆ ?

ಅನುಬಂಧಗಳು

ಅ) ಛಾಯಾಚಿತ್ರಗಳ ಹೆಸರುಗಳು

"ಕರ್ನಾಟಕದ ಶಿಲ್ಪಕಲಾ ಪರಂಪರೆಗೆ" ಮೈಸೂರು ರಾಜಮನೆತನದ ಕೊಡುಗೆ" – ಚಿತ್ರಗಳು

ಚಿತ್ರ 104ರಿಂದ 122 : ಶ್ರೀ ತಿನೇಶ್ವರ ದೇವಾಲಯ ವಿವಿಧ ಪಾರ್ಶ್ವಗಳು

ಚಿತ್ರ 123 ರಿಂದ 132 : ಶ್ರೀ ಗಾಯತ್ರಿ ದೇವಾಲಯ ವಿವಿಧ ಪಾರ್ಶ್ವಗಳು

ಚಿತ್ರ 133ರಿಂದ 156 : ಶ್ರೀ ಶ್ವೇತ ವರಾಹ ಸ್ವಾಮಿ ದೇವಾಲಯದ ವಿವಿಧ ಪಾರ್ಶ್ವಗಳು

ಚಿತ್ರ 157ರಿಂದ 179 : ಖಿಲ್ಲೆ ವೆಂಕಟರಮಣ ದೇವಾಲಯ

ಚಿತ್ರ 180,181 : ಗಡಿಯಾರ ಮಂಟಪಗಳು

ಚಿತ್ರ 182 : ದೊಡ್ಡ ಗಡಿಯಾರ

ಚಿತ್ರ 183 ರಿಂದ 201 : ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯದ ಗೋಪುರ, ಗಾರೆ ಶಿಲ್ಪಗಳು ಮತ್ತು ಅಷ್ಟದೇವತೆಗಳು

ಚಿತ್ರ 202 : ಶ್ರೀ ಚಾಮುಂಡೇಶ್ವರಿ ಅಮ್ಮನವರ ಮೆರವಣಿಗೆ ಮೂರ್ತಿ

ಚಿತ್ರ 203 : ಗ್ರಾಮ ದೇವತೆ ಮಾರಮ್ಮನ ಲೋಹ ಮೂರ್ತಿ

ಚಿತ್ರ 204 : ಸಿಂಹ ರಥವೇರಿ ಮೆರವಣಿಗೆ ಹೊರಟ ಶ್ರೀ ಚಾಮುಂಡೇಶ್ವರಿ ವಿಗ್ರಹ

ಚಿತ್ರ 205 : ಗಜ ರಥವೇರಿ ಮೆರವಣಿಗೆ ಹೊರಟ ಶ್ರೀ ಚಾಮುಂಡೇಶ್ವರಿ ವಿಗ್ರಹ

ಚಿತ್ರ 206 : ಕುದುರೆವಾಹನ

ಚಿತ್ರ 207ರಿಂದ 213 : ಕಾಷ್ಟ ಶಿಲ್ಪಗಳನ್ನು ಅಲಂಕರಿಸಿರುವ ರಥ

ಚಿತ್ರ 214ರಿಂದ 217, 220 : ಚಾಮುಂಡಿ ಬೆಟ್ಟದ ಶಿಲಾ ನಂದಿ

ಚಿತ್ರ 218 : ಚಾಮುಂಡಿ ಬೆಟ್ಟದ ದೇವಾಲಯ

ಚಿತ್ರ 219 : ಚಾಮುಂಡಿ ದೇವಾಲಯದ ಮುಖ್ಯ ಪ್ರವೇಶ ದ್ವಾರ

ಚಿತ್ರ 221 : ಮಹಿಷಾಸುರ– ಚಾಮುಂಡಿ ಬೆಟ್ಟ

ಚಿತ್ರ 222 : ನಂಜನಗೂಡು ನಕ್ಷೆ,

ಚಿತ್ರ 223ರಿಂದ 229 : ನಂಜುಂಡೇಶ್ವರ ದೇವಾಲಯ ಗೋಪುರ ಹಾಗೂ ಗಾರೆಶಿಲ್ಪಗಳು

ಚಿತ್ರ 230, 231 : ಕಲ್ಲಿನ ಮಂಟಪ, ನಂಜನಗೂಡು

ಚಿತ್ರ 232 : ನಂಜುಂಡೇಶ್ವರ ದೇವಾಲಯ ಮುಖ್ಯ ಗೋಪುರ

ಚಿತ್ರ 233 : ವಿಶ್ರಾಂತಿ ಕೊಠಡಿಗಳು

ಚಿತ್ರ 234ರಿಂದ 238 : ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯ, ವಿಗ್ರಹ ಮತ್ತು ಆವರಣ

ಚಿತ್ರ 239ರಿಂದ 248 : ರಾಜವಂಶಸ್ಥರ ರುದ್ರಭೂಮಿ ಮಂಟಪಗಳು


ಚಿತ್ರ 249ರಿಂದ 252 : ಶ್ರೀ ಪ್ರಸನ್ನ ಕೃಷ್ಣದೇವಾಲಯ

ಚಿತ್ರ 253ರಿಂದ270 : ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯ





2



3



4



5



6



7



8



9



10




11



12



13




14




15



16



17



18



19



20



21



22



23




24



25



26



27



28



29



30



31



32



33




34



35




36



37



38



39



40



41



42




43



44



45




46




47



48



49



50



51



52


53


54



55


56


57


58


59


60


61


62


63


64




65




66



67



68



69



70



71



72



73



74



75




76



77




78




79



80



81



82



83



84




85




86




87



88




89



90



91




92



93



94



95



96



97



98



99



100



101



102




103



104



105




106



107



108




109



110



111



112



113



114



115



116



117




118



119



120



121



122


123


124


125


126


127



129


128


130


131


132



133


134


135


136


137


138


139


140


141



142



143



144



145




146



147



148



149




150



151



152



153



154



155



156




157



158



159



160



161



162



163



164




165



166



167



168



169



170



171



172



173



174



175



176



177



178



179



180



181




182




183



184



185



186




187



188




189




190



191



192



193



194



195



196



197



198



199



200



201



202



203



204



205




206



207




208



209



210



211



212



213




214



215



216



217



218




219



220



221



222



223




224



225



226



227



228



229



230



231



232



233



234



235



236



237




238



239



240



241



242



243



244



245



246



247



248



249




250



251



252




253



254



255



256



257



258



259



260




261



262



263



264



265



266



267



268



269



270

ಅನುಬಂಧಗಳು

ಇ) ಗ್ರಂಥಋಣ

ಗ್ರಂಥಋಣ:

1.ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ: ಡಾ. ದೇವರ ಕೊಂಡಾರೆಡ್ಡಿ: ಕನ್ನಡ ಸಾಹಿತ್ಯ ಪರಿಷತ್ತು: ಬೆಂಗಳೂರು

2.ಹರದನಹಳ್ಳಿ ದರ್ಶನ ; ಹರದನಹಳ್ಳಿ ನಂಜುಂಡಸ್ವಾಮಿ, ಕುವೆಂಪು ಅಭಿಮಾನಿಗಳ ಬಳಗ, ಹರದನಹಳ್ಳಿ, ಚಾಮರಾಜನಗರ ಜಿಲ್ಲೆ.

೩. ಆದಿಮಾನವ ಇರ್ವಿಂಗ್ ಮತ್ತು
ಆನಂದನಿಲಯ ಪ್ರಕಾಶನ — **ಹನ್ನಾಗೋಲ್ಡ್‌ಮನ್**
(ಮೂ.ಲೇ)
ಬೆಂಗಳೂರು– ೫೬೦೦೧೮, ೨೦೦೮ — **ಕೊರಟಿ ಶ್ರೀನಿವಾಸರಾವ್**
(ಕ.ಅ)

೪. ಇತಿಹಾಸ ಪೂರ್ವಕಾಲದ ಅಥವಾ — **ಡಾ. ಅ. ಸುಂದರ**
ಕರ್ನಾಟಕದ ಪ್ರಾಗೈತಿಹಾಸ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೧೯೭೧

೫. ಕರ್ನಾಟಕದ ಕಲಾದರ್ಶನ — **(ಸಂ.) ಎಂ. ಎಚ್. ಕೃಷ್ಣಯ್ಯ**
ನವಕರ್ನಾಟಕ ಪ್ರಕಾಶನ,
ಬೆಂಗಳೂರು. ೨೦೧೦

೬. ಕಲಾ ಪ್ರಪಂಚ ಡಾ. ಶಿವರಾಂ ಕಾರಂತ
ಎನ್.ಬಿ.ಎಸ್. ಪಬ್ಲಿಕೇಷನ್ ಡಿಸ್ಟ್ರಿಬ್ಯೂಟರ್ಸ್,
ಬೆಂಗಳೂರು. ೨೦೦೮

೭. ಕಲಾ ಚರಿತ್ರೆ ಎನ್. ಮರಿಶಾಮಾಚಾರ್ಯ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಬೆಂಗಳೂರು . ೨೦೦೨

೮. ಚಿತ್ರಕಲಾ ಪ್ರಪಂಚ — **(ಪ್ರ.ಸಂ) ಪಿ. ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೨೦೦೮

೯. ಚಿತ್ರಕಲೆ ಮತ್ತು ಸಂವಹನ — **ಜೆ. ಮಲ್ಲಿಕಾರ್ಜುನ**
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೧೯೯೬

೧೦. ದ್ರಶ್ಯಾನುಭವ ಪಂಚಾಳ — **ಡಾ. ಮೋಹನರಾವ್ ಬಿ.**
ಅನ್ನಪೂರ್ಣ ಪ್ರಕಾಶನ,
ನಂದಗಾಂವ. ೨೦೧೦

೧೧. ಪ್ರಾಗೈತಿಹಾಸ ಕಾಲದ ಕಲೆ — **ಡಾ. ಅ.ಸುಂದರ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೧೨. ಭಾರತೀಯ ಚಿತ್ರಕಲೆ (ಲೇ) — **ಸಿ. ಶಿವರಾಮಮೂರ್ತಿ**
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ — **(ಅನು) ಪಿ.ಆರ್.ತಿಪ್ಪೇಸ್ವಾಮಿ**
ಬೆಂಗಳೂರು, ೧೯೯೮

೧೩. ಭಾರತೀಯ ಬಹುಮುಖಿ ಸಂಸ್ಕೃತಿ — **ಚಟ್ಟೋಪದ್ಯಾಯ**
ನವ ಕರ್ನಾಟಕ ಪ್ರಕಾಶನ
ಬೆಂಗಳೂರು, ೨೦೧೧

೧೪. ಮಾನವ ಮತ್ತು ಸಾಂಸ್ಕೃತಿಕ ಪಲ್ಲಟಗಳು — **(ಸಂ) ಡಾ. ತಾರಿಹಳ್ಳಿ ಹನುಮಂತಪ್ಪ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ೨೦೧೨

೧೫. ಸೌಂದರ್ಯ ಶಾಸ್ತ್ರ — **(ಅನು) ಡಾ. ಕಾಶಿನಾಥ ಅಂಬಲಗೆ**
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೨೦೦೮

೧೬. ಸಂಶೋಧನೆ. — **ಡಾ. ಎಂ. ಚಿದಾನಂದ ಮೂರ್ತಿ**
ಡಿ.ವಿ.ಕೆ ಮೂರ್ತಿ ಪ್ರಕಾಶನ,
ಮೈಸೂರು, ೨೦೧೧

17. Arts and the Man — **Irwin Edman**
A Mentor Book,
The New American
Library, New York, 1949

18. Art Experience — **M. Hiriyanna**
Kavyalaya Publications,
Mysore, 1954

19. Chitralakshana A. K. Kumaraswamy
Sir Asutosh Memorial Volume,
Patna, 1927

20.ಮೈಸೂರು ದರ್ಶನ: ಮಾರ್ಗದರ್ಶಿ: ಅರಮನೆ ಮಂಡಳಿ, ಮೈಸೂರು

21.ಕರ್ನಾಟಕದ ದೇವಾಲಯಗಳು: ಅಂದಾನಯ್ಯ ಕಲ್ಲಿಮಠ, ಬೆಂಗಳೂರು

22.ಕಲಾ ಸ್ವರೂಪ ಮತ್ತು ಪ್ರಚಾರ ಕಲೆ ಪ್ರಕಟಣೆ: ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆ, ಗುಲ್ಬರ್ಗ.

23.ಸಂಶೋಧನ ಸ್ವರೂಪ: ಲೇಖಕ: ಡಾ.ಬಿ.ವ್ಹಿ. ಶಿರೂರ, ಪ್ರ: ಅನ್ನಪೂರ್ಣ ಪ್ರಕಾಶನ. ಹುಬ್ಬಳ್ಳಿ

24.ಕರ್ನಾಟಕದಲ್ಲಿ ಅನ್ವಯಕಲೆ ಐತಿಹಾಸಿಕ ದೃಷ್ಟಿಕೋನ: ಲೇಖಕ: ಮತ್ತು ಪ್ರಕಟಣೆ: ಡಾ. ಲಕ್ಷ್ಮಣ ಸಿಂಗ್ ರಾಥೋಡ್,

25.ಮಾಧ್ಯಮ – ಉಧ್ಯಮ ಲೇಖಕರು: ಡಾ.ಬಿ.ಕೆ.ರವಿ ಮತ್ತು ಸತ್ಯಪ್ರಕಾಶ್ ಎಂ.ಆರ್, ಪ್ರಕಾಶಕರು: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

26.ತಲೆ ಬರಹ ಪತ್ರಿಕೆ ಹಣೆ ಬರಹ: ಲೇಖಕರು: ವಿಶ್ವೇಶ್ವರ ಭಟ್, ಪ್ರಕಾಶಕರು: ಅಂಕಿತ ಪುಸ್ತಕ. ಬೆಂಗಳೂರು

27.ಶಿಲ್ಪಕಲಾ ಪ್ರಪಂಚ, ಕನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

28. ಇತಿಹಾಸ ದರ್ಶನ, ಎಂ.ಜಿ. ನಾಗರಾಜ್ ಮತ್ತು ಡಾ. ಪಿ.ವಿ. ಕೃಷ್ಣಮೂರ್ತಿ, ಕರ್ನಾಟಕ ಇತಿಹಾಸ ಅಕಾಡೆಮಿ.

